ಶನಿವಾರ, ಅಕ್ಟೋಬರ್ 23, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪವಿತ್ರ ಸ್ನಾನ

ಅಮೃತಸರದಲ್ಲಿ ಶುಕ್ರವಾರ ಗುರುರಾಮ್‌ದಾಸ್ ಅವರ ಜನ್ಮದಿನೋತ್ಸವ ಆಚರಣೆ ಅಂಗವಾಗಿ ಸಿಖ್ ಭಕ್ತರೊಬ್ಬರು ಸ್ವರ್ಣ ಮಂದಿರದ ಸರೋವರದಲ್ಲಿ ಪವಿತ್ರ ಸ್ನಾನ ಮಾಡಿದರು



ಶನಿವಾರ, ಅಕ್ಟೋಬರ್ 23, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಂದೂಕು ತರಬೇತಿ

ಜಮ್ಮು ಮತ್ತು ಕಾಶ್ಮೀರದ ರಜೌರಿಯಲ್ಲಿ ಶುಕ್ರವಾರ ಸೇನೆಯು ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಲಾಮ್ ಹಳ್ಳಿಯ ಗ್ರಾಮ ರಕ್ಷಣಾ ಸಮಿತಿಯ ಸದಸ್ಯೆಯೊಬ್ಬರು ಬಂದೂಕು ತರಬೇತಿ ಪಡೆಯುತ್ತಿರುವ ದೃಶ್ಯ



ಶನಿವಾರ, ಅಕ್ಟೋಬರ್ 23, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 294 | ಪುಟ 32

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ

ಪರಸ್ಪರ ಒಪ್ಪಿ ವಿಚ್ಛೇದನ ಪಡೆದ ಬಳಿಕವೂ ಮಕ್ಕಳಿಗಾಗಿ ಪೋಷಕರು ಆಗಾಗ ಭೇಟಿ ಮಾಡುವುದು ಇತ್ತೀಚಿನ ಟ್ರೆಂಡ್. ಇದು ಮಕ್ಕಳ ಮಾನಸಿಕ ಹಿತಾಸಕ್ತಿ ಹಾಗೂ ಸಾಮಾಜಿಕ ದೃಷ್ಟಿಯಿಂದಲೂ ಉತ್ತಮವಾದುದು.



ಚರ್ಚೆ ಎಲ್‌ಐಸಿ ಐಪಿಒದಿಂದ ಸಂಸ್ಥೆ, ಪಾಲಿಸಿದಾರರಿಗೆ ಅನುಕೂಲವೇ? 7

ಕಡತ ವಿಲೇವಾರಿಗಾಗಿ ₹300 ಕೋಟಿ ಆಮಿಷ 10

ಉಪಗ್ರಹ: ಭಾರತ ಬಳಿ 33! 4

ಸೆನ್ಸೆಕ್ಸ್	ನಿಫ್ಟಿ	₹/$
60,821 ▼	18,114 ▼	74.90 ▼

ಇಂದಿನಿಂದ ಚುಟುಕು ಕ್ರಿಕೆಟ್ ಹಬ್ಬ

ದುಬೈ: ಭಾರತದ ಆತಿಥ್ಯದಲ್ಲಿ ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೂಪರ್ 12ರ ಹಂತದ ಪಂದ್ಯಗಳು ಶನಿವಾರದಿಂದ ನಡೆಯಲಿವೆ. ಯುಎಇ ಮತ್ತು ಒಮನ್‌ನಲ್ಲಿ ಟೂರ್ನಿ ನಡೆಯುತ್ತಿದ್ದು ಪ್ರಾಥಮಿಕ ಹಂತ ಶುಕ್ರವಾರ ಮುಕ್ತಾಯಗೊಂಡಿದೆ. ನವೆಂಬರ್ 14ರವರೆಗೆ ಒಂದು ಡಜನ್ ತಂಡಗಳು ಪ್ರಶಸ್ತಿಗಾಗಿ ಪೈಪೋಟಿ ನಡೆಸಲಿವೆ. ಶನಿವಾರ ಆಸ್ಟ್ರೇಲಿಯಾ–ದಕ್ಷಿಣ ಆಫ್ರಿಕಾ; ವೆಸ್ಟ್ ಇಂಡೀಸ್–ಇಂಗ್ಲೆಂಡ್ ಮುಖಾಮುಖಿಯಾಗಲಿವೆ. 13

ಚಿನಕುರಳಿ

ಪ್ರಕಾಶ್ ಶೆಟ್ಟಿ



'ನಮ್ಮ ಶಾಲೆ ನಮ್ಮ ಕೊಡುಗೆ' ಹೊಸ ಕಾರ್ಯಕ್ರಮ

5 ಸಾವಿರ ಶಿಕ್ಷಕರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಶಾಲೆಗಳಲ್ಲಿ ಸುಮಾರು 20 ಸಾವಿರ ಶಿಕ್ಷಕರ ಕೊರತೆ ಇದೆ. ಇದನ್ನು ನೀಗಿಸಲು ಶೀಘ್ರವೇ 5 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ತೀರ್ಮಾನಿಸಲಾಗಿದೆ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದರು.

ನಗರದ ಜೆ.ಪಿ.ನಗರ 1ನೇ ಹಂತದಲ್ಲಿ ನಿರ್ಮಿಸಲಾಗಿರುವ ಸಾರಕ್ಕಿ ಅಬ್ಬಯ್ಯ ರೆಡ್ಡಿ ಸ್ಮಾರಕ ಸರ್ಕಾರಿ ಶಾಲೆಯ ನೂತನ ಕಟ್ಟಡ ಉದ್ಘಾಟಿಸಿ ಶುಕ್ರವಾರ ಮಾತನಾಡಿದರು.

'ಕೋವಿಡ್‌ನಿಂದಾಗಿ ಕಳೆದ ಒಂದೂವರೆ ವರ್ಷದಿಂದ ಶಿಕ್ಷಕರ ಹುದ್ದೆಗೆ ಹೊಸದಾಗಿ ನೇಮಕಾತಿ ನಡೆಸಲು ಆಗಿರಲಿಲ್ಲ. ಈ ಹಿಂದೆ 10 ಸಾವಿರ ಶಿಕ್ಷಕರ ಹುದ್ದೆಗೆ ನೇಮಕಾತಿ ಆದೇಶ ಹೊರಡಿಸಲಾಗಿತ್ತು. ಆಗ 3,800 ಮಂದಿಯಷ್ಟೇ ಅರ್ಹತೆ ಗಳಿಸಿದ್ದರು. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇಲ್ಲ. 6ರಿಂದ 8ನೇ ತರಗತಿಗೆ ಶಿಕ್ಷಕರ ಕೊರತೆ ಕಾಡುತ್ತಿದೆ. ಪ್ರಾಥಮಿಕ ಶಾಲೆ ಶಿಕ್ಷಕರಿಗೆ ಬಡ್ತಿ ನೀಡಿ ಈ ಸಮಸ್ಯೆ ಬಗೆಹರಿಸಲು ಚಿಂತನೆ ನಡೆಸಲಾಗಿದೆ' ಎಂದರು.

'ಕೋವಿಡ್‌ನಿಂದ ಶಿಕ್ಷಣ ಕ್ಷೇತ್ರಕ್ಕೂ ಸಂಕಷ್ಟ ಎದುರಾಗಿದೆ. ಅದರಿಂದ ಹೊರಬರಲು 'ನಮ್ಮ ಶಾಲೆ ನಮ್ಮ ಕೊಡುಗೆ' ಎಂಬ ವಿಶೇಷ ಕಾರ್ಯಕ್ರಮ ಜಾರಿಗೊಳಿಸಲು ಮುಂದಾಗಿದ್ದೇವೆ. ಇದಕ್ಕಾಗಿ ಹೊಸ ಆ್ಯಪ್ ಕೂಡ ಪರಿಚಯಿಸಲಿದ್ದೇವೆ' ಎಂದು ಹೇಳಿದರು.

'ಶಿಕ್ಷಣವು ಕೇವಲ ಸರ್ಕಾರಕ್ಕೆ ಸಂಬಂಧಿಸಿದ ವಿಷಯವಲ್ಲ. ಇದರಲ್ಲಿ ಸಾರ್ವಜನಿಕರ ಪಾಲ್ಗೊಳ್ಳುವಿಕೆಯೂ ಬಹಳ ಮುಖ್ಯ. ಸರ್ಕಾರದ ಜೊತೆ ಅವರೂ ಕೈಜೋಡಿಸಿದರೆ ಗುಣಮಟ್ಟದ ಶಿಕ್ಷಣ ನೀಡುವುದಕ್ಕೆ ಸಾಧ್ಯ. ಕೆಲ ಸ್ವಯಂ ಸೇವಾ ಸಂಸ್ಥೆಗಳು (ಎನ್‌ಜಿಒ) ಹಾಗೂ ಐಟಿ ಉದ್ಯೋಗಿಗಳು ಸರ್ಕಾರಿ ಶಾಲೆಗಳ ಏಳಿಗೆಗೆ ಶ್ರಮಿಸುತ್ತಿರುವುದು ಶ್ಲಾಘನೀಯ' ಎಂದು ತಿಳಿಸಿದರು.

'ಕೋವಿಡ್ ಬಳಿಕ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಹೆಚ್ಚುತ್ತಿದೆ. ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣವನ್ನೂ ನೀಡಲಾಗುತ್ತಿದೆ. ನಾವು ಮಾಡುತ್ತಿರುವ ಕಾರ್ಯವನ್ನು ಬಿಂಬಿಸಿಕೊಳ್ಳುವಲ್ಲಿ ನಾವು ಹಿಂದೆ ಬೀಳುತ್ತಿದ್ದೇವೆ. ಸರ್ಕಾರಿ ಶಾಲೆಗಳಲ್ಲಿ ಕಲಿತವರು ಯುಪಿಎಸ್‌ಸಿ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಾಧನೆ ತೋರುತ್ತಿದ್ದಾರೆ. 'ಎಲ್‌ಕೆಜಿ ಹಾಗೂ ಯುಕೆಜಿ ಆರಂಭಿಸುವ ಯೋಚನೆಯೂ ಇದೆ. 1 ರಿಂದ 5ನೇ ತರಗತಿಗಳ ಯಶಸ್ಸನ್ನು ಆಧರಿಸಿ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಸರ್ಕಾರದಿಂದಲೇ ಟಿಇಟಿ ತರಬೇತಿ'



'ಗುಣಮಟ್ಟದ ಶಿಕ್ಷಕರ ನೇಮಕಾತಿಗೆ ಅನುವಾಗಲಿ ಎಂಬ ಉದ್ದೇಶದಿಂದ ಸರ್ಕಾರದಿಂದಲೇ ಟಿಇಟಿ ಹಾಗೂ ಸಿಇಟಿ ತರಬೇತಿ ನೀಡುವ ಯೋಜನೆ ಸಿದ್ಧಪಡಿಸಲಾಗಿದ್ದು, ಇದನ್ನು ಶೀಘ್ರವೇ ಜಾರಿಗೊಳಿಸಲಾಗುತ್ತದೆ' ಎಂದು ಸಚಿವ ನಾಗೇಶ್ ತಿಳಿಸಿದರು.

'ಪ್ರತಿ ತಾಲ್ಲೂಕು ಹಾಗೂ ಹೋಬಳಿ ಮಟ್ಟದಲ್ಲಿ ತಲಾ ಒಂದು ಮಾದರಿ ಶಾಲೆಗಳನ್ನು ನಿರ್ಮಿಸುವ ಗುರಿ ಇದೆ. 1 ರಿಂದ 5ನೇ ತರಗತಿ ಆರಂಭಕ್ಕೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ. ಮಕ್ಕಳನ್ನು ಶಾಲೆಗೆ ಕಳುಹಿಸಲು ಪೋಷಕರೇ ಆಸಕ್ತಿ ತೋರುತ್ತಿದ್ದಾರೆ. ಗ್ರಾಮೀಣ ಭಾಗದ ಶಾಲೆಗಳಲ್ಲಿ ಹಾಜರಾತಿ ಪ್ರಮಾಣ ಉತ್ತಮವಾಗಿದೆ' ಎಂದರು. 'ವಿವಿಧ ಕಾರಣಗಳಿಂದಾಗಿ ಅನೇಕ ಮಕ್ಕಳು ಶಾಲೆಗಳಿಂದ ಹೊರಗುಳಿದಿದ್ದಾರೆ. ಗ್ರಾಮೀಣಾಭಿವೃದ್ಧಿ ಇಲಾಖೆಯ ನೆರವಿನೊಂದಿಗೆ ಮನೆ ಮನೆಗೆ ಹೋಗಿ ಮಕ್ಕಳನ್ನು ಕರೆತರುವ ಕೆಲಸ ಮಾಡಲಾಗುತ್ತಿದೆ. ಇನ್ನೊಂದು ತಿಂಗಳಲ್ಲಿ ಅವರೆಲ್ಲಾ ತರಗತಿಗಳಿಗೆ ಹಾಜರಾಗುವಂತೆ ಮಾಡುವುದು ನಮ್ಮ ಗುರಿ' ಎಂದು ಹೇಳಿದರು.

ಗೋ ಹತ್ಯೆ, ಲವ್ ಜಿಹಾದ್‌ಗೆ ವಿಶ್ವ ಹಿಂದೂ ಪರಿಷತ್ ಎಚ್ಚರಿಕೆ

'ಕತ್ತಿ ಹಿಡಿದರೆ ಶವ ಹೂಳಲೂ ಜಾಗ ಸಿಗದು'

ಪ್ರಜಾವಾಣಿ ವಾರ್ತೆ

ತುಮಕೂರು: 'ಹಿಂದೂಗಳ ಮೇಲೆ ನಡೆಯುವ ಹಲ್ಲೆಗೆ ನಾವು ಪ್ರತಿಕ್ರಿಯೆ ಕೊಡಲು ಕತ್ತಿ ಹಿಡಿದರೆ ನಿಮಗೆ ಶವ ಹೂಳಲೂ ಜಾಗ ಸಿಗುವುದಿಲ್ಲ' ಎಂದು ವಿಶ್ವ ಹಿಂದೂ ಪರಿಷತ್‌ನ ರಾಜ್ಯ ಘಟಕದ ಸಂಚಾಲಕ ಬಸವರಾಜ್ ಎಚ್ಚರಿಕೆ ನೀಡಿದರು.

ಬಜರಂಗದಳ ಕಾರ್ಯಕರ್ತರ ಮೇಲೆ ನಡೆದ ಹಲ್ಲೆ ಖಂಡಿಸಿ ಶುಕ್ರವಾರ ಕರೆ ನೀಡಿದ್ದ ತುಮಕೂರು ನಗರ ಬಂದ್ ಸಮಯದಲ್ಲಿ ಏರ್ಪಡಿಸಿದ್ದ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು.

'ಹಿಂದೂಗಳ ಮೇಲೆ ಹಲ್ಲೆ, ಗೂಂಡಾಗಿರಿ ಮಾಡಿದರೆ, ಗೋ ಹತ್ಯೆ, ಲವ್ ಜಿಹಾದ್ ನಡೆಸಿದರೆ ಸುಮ್ಮನೆ ಬಿಡುವುದಿಲ್ಲ. ನಾವು ಬಹುಸಂಖ್ಯಾತರು, ನಮ್ಮೊಂದಿಗೆ ಬದುಕಬೇಕಾದರೆ ಸರಿಯಾಗಿ ಇರಬೇಕು. ನಾವು ಹೇಳಿದಂತೆ ಕೇಳಬೇಕು. ಇನ್ನು ಮುಂದೆ ನಿಮ್ಮ ಆಟ ನಡೆಯುವುದಿಲ್ಲ. ಕಾನೂನು ಕೈಗೆ ತೆಗೆದುಕೊಂಡರೆ ತಕ್ಕ ಶಾಸ್ತಿ ಮಾಡುತ್ತೇವೆ' ಎಂದು ಗುಡುಗಿದರು.

'ಹಿಂದೂ ಹೆಣ್ಣು ಮಕ್ಕಳ ಮೇಲೆ ಕಣ್ಣು ಹಾಕಿದರೆ ನಿಮಗೆ ಉಳಿಗಾಲವಿಲ್ಲ. ಕಣ್ಣೆತ್ತಿ ನೋಡಿದರೆ ಸುಮ್ಮನೆ ಬಿಡುವುದಿಲ್ಲ. ನಿಮ್ಮ ಹೆಣ್ಣು ಮಕ್ಕಳು ಉಳಿಯುವುದಿಲ್ಲ. ಈ ವೇದಿಕೆಯಿಂದಲೇ ಎಚ್ಚರಿಕೆ ನೀಡುತ್ತಿದ್ದೇವೆ' ಎಂದು ಹೇಳಿದರು.

ಹಿಂದೂ ಜಾಗರಣ ವೇದಿಕೆ ರಾಜ್ಯ ಕಾರ್ಯದರ್ಶಿ ಉಲ್ಲಾಸ್, 'ಧರ್ಮ ರಕ್ಷಣೆ ಮಾಡಲು ಹಿಂಸೆ ಅನಿವಾರ್ಯವಾಗಿದೆ. ಜಿಹಾದಿ ಭಯೋತ್ಪಾದಕರಿಗೆ ಒಳ್ಳೆಯ ಮಾತಿನಲ್ಲಿ ಹೇಳಿದರೆ ಅರ್ಥವಾಗುವುದಿಲ್ಲ. ಕ್ರಿಯೆಗೆ ಪ್ರತಿಕ್ರಿಯೆ ಕೊಡುತ್ತೇವೆ. ತಕ್ಕ ಪ್ರತಿಕ್ರಿಯೆ ಕೊಡಲು ಯುವಪಡೆ ಕಟ್ಟಲಾಗುವುದು. ರಾಷ್ಟ್ರ ರಕ್ಷಣೆಗಾಗಿ ರಸ್ತೆಗೆ ಇಳಿಯುವ ಪರಿಸ್ಥಿತಿ ನಿರ್ಮಾಣವಾಗಿದೆ' ಎಂದರು.

'ಎಸ್‌ಡಿಪಿಐ, ಪಿಎಫ್‌ಐ ಸಂಘಟನೆಗಳು ಹಿಂದೂಗಳ ಮೇಲೆ ದೌರ್ಜನ್ಯ ಮುಂದುವರಿಸಿವೆ. ಪಿಎಫ್‌ಐ ಕಾರ್ಯಕರ್ತರ ಮೇಲಿದ್ದ ಕ್ರಿಮಿನಲ್ ಪ್ರಕರಣಗಳನ್ನು ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ವಾಪಸ್ ಪಡೆದ ನಂತರ ಹಿಂದೂಗಳ ಹತ್ಯೆ ನಿರಂತರವಾಗಿ ನಡೆಯುತ್ತಿದೆ' ಎಂದು ಆರೋಪಿಸಿದರು.

ಬಜರಂಗದಳ ದಕ್ಷಿಣ ಪ್ರಾಂತ ಸಂಚಾಲಕ ಸುನೀಲ್, 'ಹಿಂದೂಗಳನ್ನು ಮುಟ್ಟಿದರೆ ಪಾಕಿಸ್ತಾನಕ್ಕೆ ಹೋಗಬೇಕಾಗುತ್ತದೆ. ಭಾರತೀಯರಾಗಿ ಬದುಕಿ. ಇಲ್ಲವಾದರೆ ತಕ್ಕ ಶಾಸ್ತಿ ಮಾಡಲಾಗುವುದು. ನಮ್ಮವರ ಮೇಲೆ ಹಲ್ಲೆ ಮಾಡಿದರೆ ಸುಮ್ಮನಿರುವುದಿಲ್ಲ. ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ಕೊಡಲಾಗುವುದು' ಎಂದು ಹೇಳಿದರು.

ವಿಶ್ವ ಹಿಂದೂ ಪರಿಷತ್‌ನ ಜಿಲ್ಲಾ ಘಟಕದ ಸಂಚಾಲಕ ಜಿ.ಕೆ.ಶ್ರೀನಿವಾಸ್, ಸಂಘಟನೆ ಪ್ರಮುಖರಾದ ನಾಗೇಂದ್ರ ಪ್ರಸಾದ್, ಗೌರಿಶಂಕರ್, ಶಾಸಕ ಜ್ಯೋತಿಗಣೇಶ್ ಉಪಸ್ಥಿತರಿದ್ದರು.

ಇನ್ನೊಂದು ಸುದ್ದಿ 4

ರಸ್ತೆ ಗುಂಡಿ ಸಮಸ್ಯೆ: ಎಎಪಿಯಿಂದ ಸಹಾಯವಾಣಿ

ಬೆಂಗಳೂರು: 'ನಗರದಲ್ಲಿನ ಕಳಪೆ ರಸ್ತೆ ಕಾಮಗಾರಿಗಳ ಬಗ್ಗೆ ಜಾಗೃತಿ ಮೂಡಿಸಲು ಹಾಗೂ ರಸ್ತೆ ಗುಂಡಿಗಳ ನಿರ್ಮೂಲನೆಗೆ ಆಮ್ ಆದ್ಮಿ ಪಕ್ಷವು (ಎಎಪಿ) ವಾಟ್ಸ್‌ಆ್ಯಪ್ ಸಹಾಯವಾಣಿ ಹಾಗೂ ಕಾರ್ಯಪಡೆ ಆರಂಭಿಸಿದೆ' ಎಂದು ಎಎಪಿ ಮುಖಂಡ ಜಗದೀಶ್ ಕೆ.ಎನ್.ಮಹಾದೇವ್ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಗರದಲ್ಲಿ ಕಳಪೆ ರಸ್ತೆ ಕಾಮಗಾರಿ ಹಾಗೂ ಅಪಾಯಕಾರಿ ಗುಂಡಿಗಳು ಕಂಡುಬಂದರೆ, ನಮ್ಮ ಸಹಾಯವಾಣಿಗೆ 95133 19676ಗೆ ಸಂದೇಶ ಕಳುಹಿಸಬಹುದು. ಸಂಬಂಧಪಟ್ಟವರ ವಿರುದ್ಧ ಕಾನೂನು ಹೋರಾಟ ನಡೆಸಲಿದೆ' ಎಂದರು.

ಪಕ್ಷದ ಬೆಂಗಳೂರು ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ,'ಇದು ಮತ್ತೊಂದು ಹಂತದ ಹೋರಾಟ' ಎಂದರು.

ರಾತ್ರಿಯಿಡೀ ವರುಣನ ಅಬ್ಬರ • ರಸ್ತೆಯಲ್ಲಿ ಹೊಳೆಯಂತೆ ಹರಿದ ನೀರು

ಗುಡುಗು– ಸಿಡಿಲು ಸಹಿತ ಜೋರು ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಶುಕ್ರವಾರ ರಾತ್ರಿ ಗುಡುಗು–ಸಿಡಿಲು ಸಹಿತ ಜೋರು ಮಳೆ ಸುರಿಯಿತು. ಪ್ರಮುಖ ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿಯಿತು.

ನಗರದಲ್ಲಿ ಕೆಲ ದಿನಗಳ ಕಾಲ ಜೋರಾಗಿ ಸುರಿದಿದ್ದ ಮಳೆ, ಎರಡು ದಿನ ಬಿಡುವು ನೀಡಿತ್ತು. ಶುಕ್ರವಾರ ಬೆಳಿಗ್ಗೆಯಿಂದ ಸಂಜೆಯವರೆಗೂ ಬಿಸಿಲು ಸಹ ಇತ್ತು. ಸಂಜೆ ನಂತರ, ಹಲವೆಡೆ ಮೋಡ ಮುಸುಕಿದ ವಾತಾವರಣ ಕಾಣಿಸಿಕೊಂಡಿತು.

ರಾತ್ರಿ 9.30 ಗಂಟೆ ಬಳಿಕ ಹಲವಡೆ ಜಿಟಿ ಜಿಟಿಯಾಗಿ ಮಳೆ ಶುರುವಾಯಿತು. ಗುಡುಗು– ಸಿಡಿಲಿನ ಅಬ್ಬರವೂ ಜೋರಾಗಿತ್ತು.

ರಾಜಾಜಿನಗರ, ವಿಜಯನಗರ, ಮಲ್ಲೇಶ್ವರ, ಬಸವೇಶ್ವರನಗರ, ಮಹಾಲಕ್ಷ್ಮಿ ಬಡಾವಣೆ, ಯಶವಂತಪುರ, ಪೀಣ್ಯ, ಹಲಸೂರು, ಈಜಿಪುರ, ದೊಮ್ಮಲೂರು, ಬೆಳ್ಳಂದೂರು, ಕೋರಮಂಗಲ, ಮಡಿವಾಳ, ಬನಶಂಕರಿ, ಬಸವನಗುಡಿ, ಹೆಬ್ಬಾಳ, ಆರ್.ಟಿ.ನಗರ, ಸಂಜಯನಗರ ಹಾಗೂ ಸುತ್ತಮುತ್ತ ಮಳೆ ಅಬ್ಬರ ಹೆಚ್ಚಿತ್ತು.





ನಗರದಲ್ಲಿ ಶುಕ್ರವಾರ ರಾತ್ರಿ ಸುರಿದ ಮಳೆಯಿಂದಾಗಿ ಮಲ್ಲೇಶ್ವರದ ಸಂಪಿಗೆರಸ್ತೆಯಲ್ಲಿ ನೀರು ಹರಿಯಿತು (ಎಡಚಿತ್ರ), ರಾತ್ರಿ ಮಳೆ ಸುರಿಯುತ್ತಿದ್ದ ವೇಳೆ ರೇಸ್‌ಕೋರ್ಸ್ ರಸ್ತೆಯ ಪಕ್ಕದಲ್ಲಿ ವಾಹನಗಳನ್ನು ನಿಲ್ಲಿಸಿದ್ದ ಜನ, ಬಸ್ ತಂಗುದಾಣದಲ್ಲಿ ಆಶ್ರಯ ಪಡೆದಿದ್ದರು

ಅಶೋಕ ನಗರ, ಎಂ.ಜಿ.ರಸ್ತೆ, ಶಿವಾಜಿನಗರ, ಶಾಂತಿನಗರ, ಮೆಜೆಸ್ಟಿಕ್, ಗಾಂಧಿನಗರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲೂ ಜೋರು ಮಳೆ ಆಯಿತು. ನಗರದ ಬಹುತೇಕ ಕಡೆ ತಡರಾತ್ರಿಯವರೆಗೂ ಮಳೆ ಮುಂದುವರಿದಿತ್ತು.

ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿ ಧಾರಾಕಾರವಾಗಿ ನೀರು ಹರಿಯಿತು. ಅದರಲ್ಲೇ ವಾಹನಗಳು ಸಂಚರಿಸಿದವು. ಗುಂಡಿಗಳು ಬಿದ್ದು, ಅದರಲ್ಲೇ ನೀರು ನಿಂತಿದ್ದರಿಂದ ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಯಿತು.

ದಟ್ಟಣೆಯೂ ಕಂಡುಬಂತು. ಶಿವಾನಂದ ವೃತ್ತದ ಕೆಳ ಸೇತುವೆ, ಓಕಳಿಪುರ ಕೆಳ ಸೇತುವೆಗಳಲ್ಲಿ ಹೆಚ್ಚಿನ ನೀರು ಹರಿಯಿತು.

ಕೆಲಸ ಮುಗಿಸಿ ಮನೆಗೆ ಹೊರಟಿದ್ದ ಜನ, ದ್ವಿಚಕ್ರ ವಾಹನಗಳನ್ನು ರಸ್ತೆ ಪಕ್ಕದಲ್ಲಿ ನಿಲ್ಲಿಸಿ ಸುರಕ್ಷಿತ ಸ್ಥಳಗಳಲ್ಲಿ ಆಶ್ರಯ ಪಡೆದಿದ್ದರು. ಬಸ್ ತಂಗುದಾಣ, ರಸ್ತೆಯ ಅಕ್ಕ-ಪಕ್ಕದ ಅಂಗಡಿಗಳ ಸೂರಿನಲ್ಲಿ ಜನಗಳು ನಿಂತಿದ್ದ ದೃಶ್ಯಗಳು ಕಂಡವು.

ಪ್ರಮುಖ ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿಯಿತು. ಅದರಲ್ಲೇ ಸಂಚರಿಸಲು ಹೋಗಿ ಕೆಲ ವಾಹನಗಳು ಉರುಳಿಬಿದ್ದವು. ಕೆಲ ವಾಹನಗಳು ಕೆಟ್ಟು ನಿಂತಿದ್ದವು.

'ನಗರದ ಬಹುತೇಕ ಕಡೆ ಉತ್ತಮವಾಗಿ ಮಳೆ ಆಗುತ್ತಿದೆ. ರಸ್ತೆಯಲ್ಲಿ ನೀರು ಹರಿಯುತ್ತಿದ್ದ ಹಾಗೂ ರಸ್ತೆಯಲ್ಲಿ ನೀರು ನಿಂತು ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾದ ಬಗ್ಗೆ ದೂರುಗಳು ಬಂದಿವೆ. ಅಲ್ಲಲ್ಲ ಸಿಬ್ಬಂದಿ ನೀರು ತೆರವು ಮಾಡುವ ಕೆಲಸ ಮಾಡುತ್ತಿದ್ದಾರೆ. ನಸುಕಿನವರೆಗೂ ಮತ್ತಷ್ಟು ದೂರುಗಳು ಬರಬಹುದು' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

'ನಾಡಗೀತೆಯ ಧಾಟಿ ನಿರ್ಣಯ ಆಗಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಡಗೀತೆಗೆ ಯಾವ ರಾಗ ಸಂಯೋಜನೆಯ ಧಾಟಿಯನ್ನು ಅಳವಡಿಸಿಕೊಳ್ಳಬೇಕು ಎಂಬ ಬಗ್ಗೆ ಸರ್ಕಾರ ಇನ್ನೂ ನಿರ್ಧಾರ ತೆಗೆದುಕೊಂಡಿಲ್ಲ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಸ್ಪಷ್ಟಪಡಿಸಿದರು.

ಈ ಸಂಬಂಧ ಯಾವುದೇ ಸುತ್ತೋಲೆಯನ್ನೂ ಹೊರಡಿಸಿಲ್ಲ. ಯಾರಾದರೂ ನಿರ್ದಿಷ್ಟವಾದ ರಾಗ ಸಂಯೋಜನೆಯಲ್ಲೇ ನಾಡಗೀತೆ ಹಾಡಬೇಕು ಎಂದು ಪ್ರಚಾರ ಮಾಡುತ್ತಿದ್ದರೆ, ಅದನ್ನು ನಂಬಬಾರದು ಎಂದು ಅವರು 'ಪ್ರಜಾವಾಣಿ'ಗೆ ಹೇಳಿದರು.

ಸರ್ಕಾರ ರಚಿಸಿದ್ದ ಸಮಿತಿ ಈಗಾಗಲೇ ವರದಿ ನೀಡಿದ್ದು, ಅದನ್ನು ಮುಖ್ಯಮಂತ್ರಿಯವರಿಗೆ ಸಲ್ಲಿಸಿದ್ದೇವೆ. ಚುನಾವಣೆ ಮುಗಿದ ನಂತರ ಅವರು ಅಂತಿಮ ತೀರ್ಮಾನ ಪ್ರಕಟಿಸಲಿದ್ದಾರೆ ಎಂದೂ ತಿಳಿಸಿದರು.

ಅ.28ರಂದು ಸರ್ಕಾರ ಹಮ್ಮಿಕೊಂಡಿರುವ ಕನ್ನಡ ಗೀತೆ ಗಾಯನದಲ್ಲಿ ಅಧಿಕೃತವಾಗಿ ಕುವೆಂಪು ಅವರ 'ಬಾರಿಸು ಕನ್ನಡ ಡಿಂಡಿಮವ', ನಿಸಾರ್ ಅಹಮದ್ ಅವರ 'ಜೋಗದ ಸಿರಿ ಬೆಳಕಿನಲ್ಲಿ', ಡಾ.ರಾಜ್ ಹಾಡಿರುವ 'ಹುಟ್ಟಿದರೆ ಕನ್ನಡನಾಡಿನಲ್ಲಿ ಹುಟ್ಟಬೇಕು' ಹಾಡಬೇಕು. ಈ ಕಾರ್ಯಕ್ರಮಕ್ಕಾಗಿ ಒಂದು ವೇಳೆ ನಾಡಗೀತೆ ಹಾಡುವ ಹಾಗಿದ್ದರೆ, ಯಾವುದೇ ಧಾಟಿಯಲ್ಲೂ ಹಾಡಬಹುದು. ನಿರ್ದಿಷ್ಟ ಧಾಟಿಯಲ್ಲಿ ಹಾಡಬೇಕು ಎಂದು ಒತ್ತಡ ಹೇರುವಂತಿಲ್ಲ. ಆದರೆ, ನಾಡಗೀತೆ ಬಗ್ಗೆ ಮುಖ್ಯಮಂತ್ರಿ ಅವರು ಅಂತಿಮ ತೀರ್ಮಾನ ತೆಗೆದುಕೊಂಡ ಮೇಲೆ ಅದೇ ಧಾಟಿಯಲ್ಲಿ ಹಾಡಬೇಕಾಗುತ್ತದೆ ಎಂದು ಸುನಿಲ್ ಕುಮಾರ್ ಹೇಳಿದರು.

'ಮೈಸೂರು ಅನಂತಸ್ವಾಮಿ ಅವರು ರಾಗ ಸಂಯೋಜಿಸಿರುವ ಧಾಟಿಯನ್ನೇ ನಾಡಗೀತೆಗೆ ಅಳವಡಿಸಿಕೊಳ್ಳಲು ತಜ್ಞರ ಸಮಿತಿ ಈಗಾಗಲೇ ಶಿಫಾರಸ್ಸು ಮಾಡಿದೆ. ಆದರೆ, ಇದನ್ನು ವಿರೋಧಿಸುತ್ತಿರುವ ಗುಂಪು ಸಿ.ಅಶ್ವತ್ಥ್ ಸಂಯೋಜಿಸಿರುವ ಧಾಟಿಗೆ ಸರ್ಕಾರ ಒಪ್ಪಿಗೆ ನೀಡಿದೆ ಎಂದು ವಿವಿಧ ಶಾಲೆಗಳಿಗೆ ತಿಳಿಸಿ, ಅದೇ ಪ್ರಕಾರ ರಾಗ ಸಂಯೋಜಿಸಬೇಕು ಎಂಬ ಒತ್ತಡ ಹೇರುತ್ತಿದೆ' ಎಂದು ಮೂಲಗಳು ತಿಳಿಸಿವೆ.

ತಗ್ಗಿದ್ದ ಮಳೆ: ಇಂದು ಅಬ್ಬರಿಸುವ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು:'ತಮಿಳುನಾಡಿನ ಕರಾವಳಿ ಪ್ರದೇಶದಲ್ಲಿ ಉಂಟಾಗಿದ್ದ ಮೇಲ್ಮೈ ಸುಳಿಗಾಳಿ ದೂರ ಸರಿದಿರುವುದರಿಂದ ಬೆಂಗಳೂರು ನಗರ ಭಾಗದಲ್ಲಿ ಎರಡು ದಿನಗಳಿಂದ ಮಳೆ ತಗ್ಗಿದೆ' ಎಂದು ಹವಾಮಾನ ಇಲಾಖೆ ತಿಳಿಸಿದೆ.

'ಕಳೆದ ವಾರ ತಮಿಳುನಾಡಿನ ಕರಾವಳಿಯಲ್ಲಿ ಮೇಲ್ಮೈ ಸುಳಿಗಾಳಿ ಸಂಭವಿಸಿದ್ದರಿಂದ ಬೆಂಗಳೂರು ಹಾಗೂ ಸುತ್ತಮುತ್ತಲ ಜಿಲ್ಲೆಗಳಲ್ಲಿ ಭಾರಿ ಮಳೆ ನಿರೀಕ್ಷಿಸಲಾಗಿತ್ತು.

ಸೂಚನೆಯಂತೆ ಬೆಂಗಳೂರಿಗೆ 'ಯೆಲ್ಲೊ ಅಲರ್ಟ್' ಕೂಡ ಘೋಷಿಸಲಾಗಿತ್ತು. ಆದರೆ, ಮೇಲ್ಮೈ ಸುಳಿಗಾಳಿ ತಮಿಳುನಾಡು ಕರಾವಳಿಯಿಂದ ದೂರ ಸರಿದಿದೆ. ಹಾಗಾಗಿ, ಬೆಂಗಳೂರಿನಲ್ಲಿ ಎರಡು ದಿನಗಳಿಂದ ಮಳೆ ದಿಢೀರ್ ತಗ್ಗಿದೆ' ಎಂದು ಹವಾಮಾನ ತಜ್ಞ ಸದಾನಂದ ಅಡಿಗ ತಿಳಿಸಿದರು.

'ಈಗ ವಾಯುಭಾರ ಕುಸಿತದ ವಿಸ್ತೃತ ಭಾಗ ಮುಂದುವರಿದಿರುವುದರಿಂದ ಬೆಂಗಳೂರಿನಲ್ಲಿ ಶನಿವಾರ (ಅ.23) ಮತ್ತೆ ಭಾರಿ ಮಳೆಯಾಗುವ ಮುನ್ಸೂಚನೆಗಳು ಕಂಡು ಬಂದಿವೆ. ಭಾನುವಾರದಿಂದ ಮಳೆ ಪ್ರಮಾಣ ಮತ್ತೆ ಕಡಿಮೆಯಾಗುವ ಸಾಧ್ಯತೆಗಳೂ ಇವೆ' ಎಂದು ವಿವರಿಸಿದರು.

'ಯೆಲ್ಲೊ ಅಲರ್ಟ್': 'ಗುಡುಗು, ಸಿಡಿಲು ಸಹಿತ ಮಳೆಯಾಗುವ ಮುನ್ಸೂಚನೆ ಇರುವುದರಿಂದ ಬೆಂಗಳೂರಿನಲ್ಲಿ ಶನಿವಾರ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಹವಾಮಾನ ವೈಪರೀತ್ಯದಿಂದ ಮಳೆ ಏರುಪೇರಾಗಬಹುದು' ಎಂದೂ ಹೇಳಿದರು.

13 ಜಿಲ್ಲೆಗಳಲ್ಲಿ ಮಳೆಯಾಗುವ ಮುನ್ಸೂಚನೆ

ರಾಜ್ಯದ ದಕ್ಷಿಣ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ಅ.23 ಮತ್ತು 24ರಂದು ಗುಡುಗು, ಸಿಡಿಲು ಸಹಿತ ಭಾರಿ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಮುಂಗಾರು ಮಾರುತಗಳ ಪ್ರಭಾವ ತಗ್ಗ ಲಿದ್ದು, ಅ.26ರಿಂದ ಹಿಂಗಾರು ಪ್ರವೇಶಿಸುವ ಲಕ್ಷಣಗಳು ಕಂಡುಬಂದಿವೆ. ಆದರೆ, ದಕ್ಷಿಣ ಒಳನಾಡಿನಲ್ಲಿ ಮುಂದಿನ ಎರಡು ದಿನ ಮಳೆಯಾಗುವ ಸಾಧ್ಯತೆಗಳು ಹೆಚ್ಚಾಗಿವೆ ಎಂದು ಇಲಾಖೆ ಮಾಹಿತಿ ನೀಡಿದೆ.

ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಾಮರಾಜನಗರ, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಗಳು ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಕರಾವಳಿ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಹೆಚ್ಚಾಗಿ ಇರಲಿದ್ದು, ಕೆಲವೆಡೆ ಸಾಧಾರಣ ಮಳೆಯಾಗಬಹುದು. ರಾಜ್ಯದ ಉಳಿದ ಜಿಲ್ಲೆಗಳಲ್ಲಿ 26 ರವರೆಗೆ ಮಳೆ ತಗ್ಗುವ ಸೂಚನೆಗಳಿವೆ ಎಂದೂ ಹೇಳಿದೆ.

ಜೈನಾಪುರ, ಮೀನಾಗೆ 'ವಿ.ಕೃ. ಗೋಕಾಕ್ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ



ಮೀನಾ



ಜೈನಾಪುರ

ಬೆಂಗಳೂರು: ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್ ನೀಡುವ 2021ನೇ ಸಾಲಿನ 'ವಿ.ಕೃ. ಗೋಕಾಕ್ ಪ್ರಶಸ್ತಿ'ಗೆ ಸಾಹಿತಿ ಎಸ್.ಎ. ಜೈನಾಪುರ ಮತ್ತು ರಾಜ್ಯಶಾಸ್ತ್ರಜ್ಞೆ ಮೀನಾ ದೇಶಪಾಂಡೆ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಮತ್ತು ಫಲಕವನ್ನು ಒಳಗೊಂಡಿದೆ. ಟ್ರಸ್ಟ್‌ನ ಅಧ್ಯಕ್ಷ ವೈ.ಎನ್. ಗಂಗಾಧರ ಶೆಟ್ಟಿ, ಕಾರ್ಯದರ್ಶಿ ಅನಿಲ್ ಗೋಕಾಕ್, ಸಹಕಾರಿ ಧುರೀಣ ಬಿ.ಎಸ್. ವಿಶ್ವನಾಥ್, ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಮತ್ತು ಅಭಿನವ ಪ್ರಕಾಶನದ ನ. ರವಿಕುಮಾರ್ ಅವರನ್ನು ಒಳಗೊಂಡ ಸಮಿತಿಯು ಈ ಪ್ರಶಸ್ತಿಗೆ ಸಾಧಕರನ್ನು ಆಯ್ಕೆ ಮಾಡಿದೆ.

ಇದೇ 30ರಂದು ಬೆಳಿಗ್ಗೆ 11.30ಕ್ಕೆ ಇಲ್ಲಿನ ಭಾರತೀಯ ವಿದ್ಯಾಭವನದ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ. ಸಾಹಿತಿಗಳಾದ ಹಂ.ಪ. ನಾಗರಾಜಯ್ಯ ಹಾಗೂ ಕಮಲಾ ಹಂಪನಾ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	120.05	8,097	6,720
ಹಾರಂಗಿ	2,859	2,858.13	888	1,200
ಕಬಿನಿ	2,284	2,281.4	3,000	2,000
ಹೇಮಾವತಿ	2,922	2,910.75	2,247	4,331
ಲಿಂಗನಮಕ್ಕಿ	1,819	1,815.25	2971	-
ಸೂಪಾ (ಮೀ)	564	556.70	646	5,534
ಮಾಣಿ	594.36	587.20	231	-
ತುಂಗಭದ್ರಾ	1,633	1,632.91	7,768	11,476
ಮಲಪ್ರಭಾ	2,079.50	2,079.50	694	694
ಘಟಪ್ರಭಾ	2,175	2,175	906	906
ಭದ್ರಾ	186	186	4,474	4,474
ಆಲಮಟ್ಟಿ (ಮೀ)	519.60	519.60	11,256	11,256
ನಾರಾಯಣಪುರ (ಮೀ)	492.25	492.21	9,300	9,200

* ನೆಲಮಟ್ಟದಿಂದ

ಬಾಹ್ಯಾಕಾಶ, ಐ.ಟಿಯಲ್ಲಿ ಚೀನಾದ್ದೇ ಪ್ರಾಬಲ್ಯ: ರಕ್ಷಣಾ ಕಾರ್ಯದರ್ಶಿ

ಉಪಗ್ರಹ: ಭಾರತ ಬಳಿ 33!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಹ್ಯಾಕಾಶ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಚೀನಾ ಪ್ರಾಬಲ್ಯ ಸಾಧಿಸಿದೆ. ಅದು ಈಗ ಜಾಗತಿಕ ಮಟ್ಟದ ಪ್ರಬಲ ಶಕ್ತಿಯಾಗಿ ಬೆಳೆದು ನಿಂತಿದ್ದು, ಚೀನಾವನ್ನು ನಿರ್ಲಕ್ಷಿಸಲಾಗದು ಎಂದು ರಕ್ಷಣಾ ಇಲಾಖೆ ಕಾರ್ಯದರ್ಶಿ ಅಜಯ್ ಕುಮಾರ್ ಹೇಳಿದರು.

1971ರಲ್ಲಿ ಪಾಕಿಸ್ತಾನದ ವಿರುದ್ಧದ ಯುದ್ಧದಲ್ಲಿ ಭಾರತೀಯ ಸೇನೆಯು ಸಾಧಿಸಿದ ಗೆಲುವಿನ ಸುವರ್ಣ ಮಹೋತ್ಸವದ ಸ್ಮರಣೆಗಾಗಿ ಜಕ್ಕೂರು ವಾಯುನೆಲೆಯಲ್ಲಿ ಶುಕ್ರವಾರ ಆರಂಭವಾದ ಮೂರು ದಿನಗಳ 'ಸ್ವರ್ಣಿಮ ವಿಜಯ ವರ್ಷ' ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಚೀನಾ ಈಗ ಪ್ರಾದೇಶಿಕ ಶಕ್ತಿಯಾಗಿ ಉಳಿದಿಲ್ಲ. ಅದು ಈಗ ಜಗತ್ತಿನ ಒಂದು ಪ್ರಬಲ ಶಕ್ತಿಯಾಗಿದೆ. ಚೀನಾದ ಬಳಿ 281 ಉಪಗ್ರಹಗಳಿವೆ. ಅತಿಹೆಚ್ಚು ಉಪಗ್ರಹಗಳನ್ನು ಹೊಂದಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಅದು ಎರಡನೇ ಸ್ಥಾನ ಪಡೆದಿದೆ. ರಷ್ಯಾದ ಬಳಿ 64 ಉಪಗ್ರಹಗಳಿದ್ದರೆ, ಭಾರತದ ಬಳಿ 33 ಮಾತ್ರ ಇವೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ಪಾರಮ್ಯ ಸಾಧಿಸಿರುವ ನೆರೆಯ ರಾಷ್ಟ್ರವು, ಅದನ್ನು ಬಳಸಿಕೊಂಡು ಜಗತ್ತಿನ ಹಲವು ರಾಷ್ಟ್ರಗಳ ಮೇಲೆ ಹಿಡಿತ ಸಾಧಿಸುತ್ತಿದೆ ಎಂದರು.

ಏಕೀಕೃತ ಕಮಾಂಡ್‌ಗಳನ್ನು ರಚಿಸಿಕೊಂಡಿರುವ ಚೀನಾ, 2035ರೊಳಗೆ ತನ್ನ ಸೇನೆಯನ್ನು ಆಧುನೀಕರಣಗೊಳಿಸುವ ಪ್ರಕ್ರಿಯೆ ಆರಂಭಿಸಿದೆ. 2049ರೊಳಗೆ ಜಾಗತಿಕ ಮಿಲಿಟರಿ ಶಕ್ತಿಯನ್ನಾಗಿ ಪರಿವರ್ತಿಸುವ ಗುರಿಯೊಂದಿಗೆ ಕೆಲಸ ಮಾಡುತ್ತಿದೆ. ಕ್ಷಿಪಣಿ ತಂತ್ರಜ್ಞಾನದಲ್ಲಿ ಮತ್ತಷ್ಟು ಮುನ್ನಡೆ ಸಾಧಿಸಿದೆ. ಬಾಹ್ಯಾಕಾಶ, ಸೈಬರ್ ಸೇರಿದಂತೆ ತಂತ್ರಜ್ಞಾನ ಆಧಾರಿತ ಯುದ್ಧತಂತ್ರ ರೂಪಿಸುವುದಕ್ಕಾಗಿಯೇ ಪ್ರತ್ಯೇಕ ಕಮಾಂಡ್ ರಚಿಸಿದೆ. 120 ರಾಷ್ಟ್ರಗಳಿಗೆ ಮಾಹಿತಿ ತಂತ್ರಜ್ಞಾನ ಸೇವೆ ನೀಡುತ್ತಿರುವ ಚೀನಾ, ಅದರ ಮೂಲಕವೇ ಜಗತ್ತಿನ ಹಲವು ದೇಶಗಳ ಮೇಲೆ ಹಿಡಿತ ಸಾಧಿಸಲು ಹೊರಟಿದೆ ಎಂದು ಹೇಳಿದರು.

> ಸೈಬರ್ ದಾಳಿ ದೇಶದ ಮುಂದಿರುವ ದೊಡ್ಡ ಸವಾಲು. ಯಾವುದೇ ಕ್ಷೇತ್ರದ ಮೇಲೆ ಸೈಬರ್ ದಾಳಿ ನಡೆದರೂ ಅದನ್ನು ಎದುರಿಸಲು ಸೇನೆಯಲ್ಲಿ ಪ್ರತ್ಯೇಕ ಕಮಾಂಡ್ ರಚಿಸಲಾಗಿದೆ
> **ಜನರಲ್ ಬಿಪಿನ್ ರಾವತ್**
> ರಕ್ಷಣಾ ಪಡೆಗಳ ಮುಖ್ಯಸ್ಥ

ದಕ್ಷಿಣ ಚೀನಾ ಸಮುದ್ರದ ಮೇಲೆ ಪೂರ್ಣ ಹಿಡಿತ ಸಾಧಿಸಲು ಚೀನಾ ಪ್ರಯತ್ನಿಸುತ್ತಿದೆ. ಅಲ್ಲಿ ನಿರಂತರವಾಗಿ ಆ ರಾಷ್ಟ್ರದ ಚಟುವಟಿಕೆಗಳು ಹೆಚ್ಚಾಗಿವೆ. ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆಯುತ್ತಿರುವ ಭಯೋತ್ಪಾದಕ ಚಟುವಟಿಕೆಗಳಿಗೆ ಹೊರಗಿನ ಕುಮ್ಮಕ್ಕು ಹೆಚ್ಚುತ್ತಿದೆ. ಅಫ್ಗಾನಿಸ್ತಾನದಲ್ಲಿ ನಡೆಯುತ್ತಿರುವ ಬೆಳವಣಿಗೆಗಳೂ ಮುಂದೊಂದು ದಿನ ತಲೆನೋವಾಗಿ ಕಾಡಬಹುದು ಎಂದು ಅಜಯ್ ಕುಮಾರ್ ಆತಂಕ ವ್ಯಕ್ತಪಡಿಸಿದರು.

ಸೇನಾ ಶಕ್ತಿಯ ಆಧುನೀಕರಣ ವೇಗವಾಗಿ ನಡೆಯುತ್ತಿದೆ. ವಾಯುಪಡೆಯ ಆಧುನೀಕರಣಕ್ಕಾಗಿ ಐದು ವರ್ಷಗಳ ಅವಧಿಯಲ್ಲಿ ₹ 2.5ಲಕ್ಷ ಕೋಟಿ ವ್ಯಯಿಸಲಾಗಿದೆ. 1,000 ನವೋದ್ಯಮಗಳು ಸೇನೆಗೆ ತಾಂತ್ರಿಕ ನೆರವು ನೀಡಲು ಸಜ್ಜಾಗಿವೆ. ಬಾಹ್ಯಾಕಾಶ, ಸೈಬರ್, ಮಾನವರಹಿತ ಯುದ್ಧ ತಂತ್ರಗಳ ಅಭಿವೃದ್ಧಿ ಹಾಗೂ ಬಳಕೆಗೆ ಭಾರತವೂ ಸಜ್ಜಾಗುತ್ತಿದೆ ಎಂದರು.

ಕಂದಾಯ ಸಚಿವ ಆರ್. ಅಶೋಕ, ಏರ್ ಚೀಫ್ ಮಾರ್ಷಲ್ ವಿ.ಆರ್. ಚೌಧರಿ, ವಾಯುಪಡೆಯ ಬೆಂಗಳೂರು ತರಬೇತಿ ಕೇಂದ್ರದ ಮುಖ್ಯಸ್ಥ ಏರ್ ಮಾರ್ಷಲ್ ಮಾನವೇಂದ್ರ ಸಿಂಗ್ ಉಪಸ್ಥಿತರಿದ್ದರು.



ಜಕ್ಕೂರು ವಾಯುನೆಲೆಯಲ್ಲಿ ಶುಕ್ರವಾರ ಆರಂಭವಾದ 'ಸ್ವರ್ಣಿಮ ವಿಜಯ ವರ್ಷ' ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಿದ್ದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ರಕ್ಷಣಾ ಪಡೆಗಳ ಮುಖ್ಯಸ್ಥ ಬಿಪಿನ್ ರಾವತ್ ಸ್ಮರಣಿಕೆ ನೀಡಿದರು

'ಏಕೀಕೃತ ಕಮಾಂಡ್ ರಚನೆಗೆ ಮತ್ತಷ್ಟು ವೇಗ'

ಬೆಂಗಳೂರು: ಸೇನೆಯ ಮೂರೂ ಪಡೆಗಳ ನಡುವೆ ಸಮನ್ವಯ ಮತ್ತು ಸಂಪರ್ಕ ವೃದ್ಧಿಸಿ, ಸಂಘಟಿತ ರೂಪದಲ್ಲಿ ಹೋರಾಟಕ್ಕೆ ಅಣಿಗೊಳಿಸುವ ಏಕೀಕೃತ ಕಮಾಂಡ್ (ಥಿಯೇಟರ್ ಕಮಾಂಡ್) ರಚಿಸುವ ಪ್ರಕ್ರಿಯೆ ನಿರ್ಣಾಯಕ ಹಂತ ತಲುಪಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದರು.

'ಸ್ವರ್ಣಿಮ ವಿಜಯ ವರ್ಷ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, '1971ರ ಯುದ್ಧದಲ್ಲಿ ಸೇನೆಯ ಮೂರೂ ಪಡೆಗಳು ಸಂಘಟಿತವಾಗಿ ಹೋರಾಟ ಮಾಡಿದ್ದರಿಂದ ಗೆಲುವು ಸಾಧ್ಯವಾಯಿತು. ಅದು ಸಂಘಟಿತ ಹೋರಾಟಕ್ಕೆ ಒಂದು ಮಾದರಿ. ಸೇನಾಪಡೆಗಳ ಎಲ್ಲ ಸ್ತರದಲ್ಲೂ ಈ ಬಗೆಯ ಸಮನ್ವಯದ ವ್ಯವಸ್ಥೆ ಜಾರಿಗೊಳಿಸಲಾಗುವುದು' ಎಂದರು.


ಏಕೀಕೃತ ಕಮಾಂಡ್ ಕುರಿತು ವಿವರಿಸಿದ ರಕ್ಷಣಾ ಪಡೆಗಳ ಮುಖ್ಯಸ್ಥ ಜನರಲ್ ಬಿಪಿನ್ ರಾವತ್, 'ಅಮೆರಿಕ, ರಷ್ಯಾ, ಚೀನಾ ಸೇರಿದಂತೆ ಕೆಲವು ರಾಷ್ಟ್ರಗಳು ಈಗಾಗಲೇ ಏಕೀಕೃತ ಕಮಾಂಡ್ ಹೊಂದಿವೆ. ಹಲವು ರಾಷ್ಟ್ರಗಳಲ್ಲಿರುವ ಅತ್ಯುತ್ತಮ ಮಾದರಿಗಳನ್ನು ಅಧ್ಯಯನ ಮಾಡಿದ ಬಳಿಕ ಏಕೀಕೃತ ಕಮಾಂಡ್ ರಚನೆಗೆ ಪ್ರಕ್ರಿಯೆ ಆರಂಭಿಸಲಾಗಿದೆ. ಸೇನೆಯ ಮೂರೂ ಪಡೆಗಳಲ್ಲಿ ಹಲವು ಸ್ತರಗಳಲ್ಲಿ ಒಪ್ಪಿಗೆ ಪಡೆದ ಬಳಿಕವೇ ಅಂತಿಮಗೊಳಿಸಲಾಗುವುದು' ಎಂದರು.

ತುಮಕೂರು ನಗರ ಸಂಪೂರ್ಣ ಬಂದ್

ಪ್ರಜಾವಾಣಿ ವಾರ್ತೆ

ತುಮಕೂರು: ಬಜರಂಗದಳ ಕಾರ್ಯಕರ್ತರ ಮೇಲಿನ ಹಲ್ಲೆ ಖಂಡಿಸಿ ಶುಕ್ರವಾರ ತುಮಕೂರು ನಗರ ಬಂದ್‌ಗೆ ಕರೆ ನೀಡಲಾಗಿತ್ತು. ನಗರದಲ್ಲಿ ಸಂಪೂರ್ಣ ಬಂದ್ ಆಚರಿಸಲಾಯಿತು.

ವಿಶ್ವ ಹಿಂದೂ ಪರಿಷತ್, ಬಜರಂಗದಳ ಹಾಗೂ ಬಿಜೆಪಿ ಜಂಟಿಯಾಗಿ ಬಂದ್‌ಗೆ ಕರೆ ನೀಡಿದ್ದವು. ಅಂಗಡಿ, ಮುಂಗಟ್ಟುಗಳು, ಹೋಟೆಲ್, ಚಿತ್ರ ಮಂದಿರಗಳು ಮುಚ್ಚಿದ್ದವು. ವಾಣಿಜ್ಯ ವಹಿವಾಟು ಸಂಪೂರ್ಣ ಬಂದ್ ಮಾಡಲಾಗಿತ್ತು. ಕೆಎಸ್‌ಆರ್‌ಟಿಸಿ, ಖಾಸಗಿ, ಆಟೊಗಳು ಎಂದಿನಂತೆ ಸಂಚರಿಸಿದವು.



ತುಮಕೂರು ಬಿ.ಎಚ್‌.ರಸ್ತೆಯ ಗುಬ್ಬಿ ಗೇಟ್ ಸಮೀಪ ವಾಹನ ಸಂಚಾರ ವಿರಳವಾಗಿತ್ತು

ನಗರದ ಟೌನ್‌ಹಾಲ್ ವೃತ್ತದಲ್ಲಿ ವಿಶ್ವ ಹಿಂದೂ ಪರಿಷತ್, ಬಜರಂಗದಳ ಮುಖಂಡರು, ಕಾರ್ಯಕರ್ತರು ಬಹಿರಂಗ ಸಭೆ ನಡೆಸಿದರು. ಹಿಂದೂಗಳ ಮೇಲಿನ ಹಲ್ಲೆಯನ್ನು ತೀವ್ರವಾಗಿ ಖಂಡಿಸಿದರು. ಮತ್ತೆ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸುವಂತೆ ಪೊಲೀಸ್ ಅಧಿಕಾರಿಗಳನ್ನು ಒತ್ತಾಯಿಸಿದರು.

ನಂತರ ಟೌನ್‌ಹಾಲ್ ವೃತ್ತದಿಂದ ಚರ್ಚ್ ವೃತ್ತದ ವರೆಗೆ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿ ವೈ.ಎಸ್.ಪಾಟೀಲ ಅವರಿಗೆ ಮನವಿ ಸಲ್ಲಿಸಿದರು.

ಬೈಕ್ ವ್ಹೀಲಿಂಗ್ ಮಾಡದಂತೆ ಅನ್ಯ ಕೋಮಿನ ಯುವಕರಿಗೆ ಬುದ್ಧಿ ಹೇಳಿದ ಬಜರಂಗದಳ ಕಾರ್ಯಕರ್ತರ ಮೇಲೆ ಆ ಯುವಕರು ಹಲ್ಲೆ ನಡೆಸಿದ್ದರು. ತುಮಕೂರಿನ ಗುಬ್ಬಿಗೇಟ್ ರಸ್ತೆಯಲ್ಲಿ ಮಂಗಳವಾರ ಸಂಜೆ ಘಟನೆ ನಡೆದಿತ್ತು.

ಪಿ.ಜಿ ಪಾಸಾಗುವ ಮೊದಲೇ ಕೆ–ಸೆಟ್ ಪಾಸಾಗಿದ್ದರೂ ಅವಕಾಶ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಸ್ನಾತಕೋತ್ತರ ಪದವಿ (ಪಿ.ಜಿ) ಪಾಸಾಗುವ ಮೊದಲೇ ಕೆ–ಸೆಟ್ (ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ) ಪಾಸಾಗಿದ್ದರೆ, ಅಂಥವರು ಸದ್ಯ ಅರ್ಜಿ ಆಹ್ವಾನಿಸಿರುವ 1,242 ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತಿಲ್ಲ ಎಂಬ ವಿಷಯ ಗಮನಕ್ಕೆ ಬರುತ್ತಿದ್ದಂತೆ ಎಚ್ಚೆತ್ತುಕೊಂಡಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ), ಆನ್‌ಲೈನ್ ಅರ್ಜಿಯಲ್ಲಿ ಮಾರ್ಪಾಡು ಮಾಡಿದೆ.

ಅರ್ಜಿ ಸಲ್ಲಿಸಲು ಸಾಧ್ಯವಾಗದ ಬಗ್ಗೆ 'ಪ್ರಜಾವಾಣಿ' ಶುಕ್ರವಾರ (ಅ. 22) ವಿಶೇಷ ವರದಿ ಪ್ರಕಟಿಸಿತ್ತು. ಆ ಬೆನ್ನಲ್ಲೆ, ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ, ಈ ಸಮಸ್ಯೆಯನ್ನು ಪರಿಹರಿಸಿರುವ ಬಗ್ಗೆ ಖಚಿತಪಡಿಸಿದ್ದಾರೆ.

'ಸ್ನಾತಕೋತ್ತರ ಓದುತ್ತಿರುವಾಗಲೇ ಕೆ–ಸೆಟ್ ಬರೆಯಲು ಅವಕಾಶವಿದೆ ಎಂಬ ಬಗ್ಗೆ ಅರ್ಜಿಯನ್ನು ವಿನ್ಯಾಸಗೊಳಿಸುವ ಸಂದರ್ಭದಲ್ಲಿ ಗಮನಕ್ಕೆ ಬಂದಿರಲಿಲ್ಲ. ಮೊದಲು ಪದವಿ, ಸ್ನಾತಕೋತ್ತರ ಪದವಿ, ನಂತರ ಪಿಎಚ್‌.ಡಿ ಬಳಿಕ ಅರ್ಹತಾ ಪರೀಕ್ಷೆಗಳಾದ ಕೆ–ಸೆಟ್, ನೆಟ್ ಎಂದುಕೊಂಡಿದ್ದೆವು. ಅಲ್ಲದೆ, ಯಾವುದೇ ವಂಚನೆಗೆ ಅವಕಾಶ ಆಗಬಾರದು ಎಂಬ ಕಾರಣಕ್ಕೆ ಇಡೀ ಅರ್ಜಿಯನ್ನು ವಿನ್ಯಾಸಗೊಳಿಸಿದ್ದೆವು' ಎಂದು ಅವರು ತಿಳಿಸಿದರು.

'ಈ ಹಿಂದೆ ನಡೆದ ಸಹಾಯಕ ಪ್ರಾಧ್ಯಾಪಕ ಹುದ್ದೆಯ ನೇಮಕಾತಿ ವೇಳೆ ಅರ್ಹತಾ ಪರೀಕ್ಷೆ ಪಾಸಾದ ಬಗ್ಗೆ ನಕಲಿ ಪ್ರಮಾಣಪತ್ರ ಸಲ್ಲಿಸಿದ್ದು ಗಮನಕ್ಕೆ ಬಂದಿತ್ತು. ಈ ಬಾರಿ ಆ ರೀತಿ ಆಗಬಾರದು ಎಂಬ ಕಾರಣಕ್ಕೆ ಅರ್ಜಿ ನಮೂನೆಯನ್ನು ವ್ಯವಸ್ಥಿತವಾಗಿ ಸಿದ್ಧಪಡಿಸಲಾಗಿದೆ. ಆದರೆ, ಪಿಜಿ ಓದುತ್ತಿರುವಾಗಲೇ ಕೆ–ಸೆಟ್ ಬರೆಯಲು ಅವಕಾಶ ಇರುವ ಬಗ್ಗೆ ಮಾಹಿತಿ ಗೊತ್ತಾಗುತ್ತಿದ್ದಂತೆ ಅರ್ಜಿ ನಮೂನೆಯನ್ನು ಬದಲಿಸಿ ಎಲ್ಲ ಗೊಂದಲಗಳನ್ನು ಸರಿಪಡಿಸಿದ್ದೇವೆ. ಈ ಬಗ್ಗೆ, ನಮ್ಮ (ಕೆಇಎ) ವೆಬ್‌ಸೈಟ್‌ನಲ್ಲೂ ಮಾಹಿತಿ ನೀಡಿದ್ದೇವೆ. ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು' ಎಂದೂ ರಮ್ಯಾ ವಿವರಿಸಿದರು.

ಎಲ್ಲ ಹುದ್ದೆಗಳಿಗೆ ಅರ್ಜಿ

'ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳು 371 (ಜೆ) ಮೀಸಲಾತಿ ಅಡಿ ಮೀಸಲಿಟ್ಟ ಹುದ್ದೆಗಳ ಜೊತೆಗೆ ಎಲ್ಲ 1,242 ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೂ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ' ಎಂದು ರಮ್ಯಾ ತಿಳಿಸಿದರು.

'ಒಟ್ಟು ಹುದ್ದೆಗಳಲ್ಲಿ 158 ಹುದ್ದೆಗಳನ್ನು 371(ಜೆ) ಅಡಿ ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ಮೀಸಲಿಡಲಾಗಿದೆ. 'ಹೈಕ (ಎಚ್‌ಕೆ) ಪ್ರದೇಶದ ಅಡಿಯಲ್ಲಿ ಮೀಸಲಾತಿ ಕೋರುತ್ತಿದ್ದೀರಾ' ಎಂದು ಮತ್ತು 'ಎಚ್‌ಕೆ ಆದ್ಯತೆ' ಎಂದು ಅರ್ಜಿಯಲ್ಲಿ ನಮೂದಿಸಿದರೆ ಮತ್ತು ಒಂದೊಮ್ಮೆ ಎರಡೂ ವೃಂದಗಳಲ್ಲಿ (ಎಚ್‌ಕೆ ಮೀಸಲಾತಿ ಮತ್ತು ಇತರ ವೃಂದದಡಿ) ಆಯ್ಕೆಯಾದವರೆ 'ಆದ್ಯತೆ' ಎಂದು ನಮೂದಿಸಿದ ಪ್ರಕಾರ ಹುದ್ದೆ ಆಯ್ಕೆ ಮಾಡಿಕೊಳ್ಳಬೇಕು' ಎಂದೂ ಅವರು ತಿಳಿಸಿದರು.

ಹೊನ್ನಾಳಿ: 15 ಮನೆಗಳಿಗೆ ಹಾನಿ

ಹೊನ್ನಾಳಿ : ತಾಲ್ಲೂಕಿನಾದ್ಯಂತ ಗುರುವಾರ ರಾತ್ರಿ ಭಾರಿ ಮಳೆಯಾಗಿದ್ದು, ಒಟ್ಟು 362 .2 ಮಿಲಿ ಮೀಟರ್ ನಷ್ಟು ದಾಖಲೆ ಮಳೆಯಾಗಿದೆ. ತಾಲ್ಲೂಕಿನಾದ್ಯಂತ ಗುರುವಾರ ರಾತ್ರಿ ಸುರಿದ ಭಾರೀ ಮಳೆಗೆ ಒಟ್ಟು 14 ಮನೆಗಳಿಗೆ ಹಾನಿಯಾಗಿದ್ದು, ಒಂದು ಮನೆಗೆ ತೀವ್ರಹಾನಿಯಾಗಿದೆ ಎಂದು ತಹಶೀಲ್ದಾರ್ ಬಸವನಗೌಡ ಕೋಟೂರ ಹೇಳಿದರು.

ಶುಕ್ರವಾರ ಪತ್ರಿಕೆಗೆ ಅವರು ಮಾಹಿತಿ ನೀಡಿದರು. ಬೆನಕನಹಳ್ಳಿ ಗ್ರಾಮದ ಹಳದಪ್ಪ ನರಸಿಂಹಪ್ಪ ಎಂಬುವವರ ಮನೆಗೆ ತೀವ್ರಹಾನಿಯಾಗಿದೆ. ಅದರ ಅಂದಾಜು ನಷ್ಟ ₹2,50,000 ಎಂದು ಹೇಳಲಾಗಿದೆ. ಹೊನ್ನಾಳಿಯಲ್ಲಿ 2 ಮನೆಗಳು, ಸುಂಕದಕಟ್ಟೆಯಲ್ಲಿ 2 ಮನೆಗಳು, ಎಚ್.ಜಿ. ಹಳ್ಳಿ, ಬಿದರಗಡ್ಡೆ, ದೊಡ್ಡೇರಹಳ್ಳಿಯಲ್ಲಿ ತಲಾ ಒಂದು ಮನೆ ಹಾನಿಯಾಗಿದೆ. ತಾಲ್ಲೂಕಿನ ಅರಬಗಟ್ಟೆಯಲ್ಲಿ ಒಟ್ಟು 5 ಮನೆಗಳಿಗೆ ಭಾಗಶ: ಹಾನಿಗೊಳಗಾಗಿದೆ ಎಂದರು.

ಕಾಫಿನಾಡಿನ ವಿವಿಧೆಡೆ ಮಳೆ: (ಹಾಸನ ವರದಿ): ಜಿಲ್ಲೆಯ ವಿವಿಧೆಡೆ ಗುರುವಾರ ರಾತ್ರಿ ಧಾರಾಕಾರ ಮಳೆಯಾಗಿದೆ. ಚನ್ನರಾಯಪಟ್ಟಣ ತಾಲ್ಲೂಕಿನ ಬಳದರೆ ಗ್ರಾಮದಲ್ಲಿಮೂರು ಮನೆಗಳ ಗೋಡೆ ಕುಸಿದು ಬಿದ್ದಿದೆ. ಚಿಕ್ಕಮಗಳೂರು ನಗರ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಶುಕ್ರವಾರ ಮಳೆಯಾಗಿದೆ. ಗಿರಿಶ್ರೇಣಿಯ ಕವಿಕಲ್ ಗಂಡಿ ಸನಿಹ ರಸ್ತೆ ಬದಿಯ ರಕ್ಷಣಾ ಗೋಡೆ ಕುಸಿದಿದೆ.

ಸುಧೀರ್ ಘಾಟೆ ನಿಧನ



ಸುಧೀರ್ ಘಾಟೆ

ಮಂಗಳೂರು : ಇಲ್ಲಿನ 'ಮ್ಯಾಗ್ನಮ್ ಇಂಟರ್ ಗ್ರಾಫಿಕ್ಸ್' ಜಾಹೀರಾತು ಸಂಸ್ಥೆಯ ಮಾಲೀಕರಾಗಿದ್ದ ಸುಧೀರ್ ಘಾಟೆ (64) ಅಲ್ಪಕಾಲದ ಅನಾರೋಗ್ಯದಿಂದ ಶುಕ್ರವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

ಆರ್‌ಎಸ್‌ಎಸ್ ಲೆಕ್ಕ ಪರಿಶೋಧಕರ ಕಚೇರಿಯಲ್ಲಿ ವೃತ್ತಿ ಜೀವನ ಆರಂಭಿಸಿ, 1992ರಲ್ಲಿ ಜಾಹೀರಾತು ಸಂಸ್ಥೆಯನ್ನು ಕಟ್ಟಿದರು. ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿರುವ ಈ ಸಂಸ್ಥೆಯು ಸಾವಿರಾರು ಜನರಿಗೆ ಉದ್ಯೋಗ ನೀಡಿದೆ.

ವಿಧಾನಸಭೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಬಿಜೆಪಿ ಯುವ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ, ಸುಧೀರ್ ಘಾಟೆ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದರು.

ಚಿತ್ರಾವಳಿ



ನಗರದ ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ನಿರ್ಮಾಣವಾಗಿರುವ ಕಲ್ಯಾಣ್ ಸಿಲ್ಕ್‌ನ ನೂತನ ಮಾರಾಟ ಮಳಿಗೆಯನ್ನು ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಶುಕ್ರವಾರ ಉದ್ಘಾಟಿಸಿದರು. ಕಲ್ಯಾಣ್ ಸಿಲ್ಕ್‌ನ ಅಧ್ಯಕ್ಷ ಟಿ.ಎಸ್ ಪಟ್ಟಾಭಿರಾಮನ್, ಕಾರ್ಯನಿರ್ವಾಹಕ ನಿರ್ದೇಶಕ ಪ್ರಕಾಶ್ ಪಟ್ಟಾಭಿರಾಮನ್, ಮಹೇಶ್ ಪಟ್ಟಾಭಿರಾಮನ್, ಹೈಪರ್ ಮಾರ್ಕೆಟ್‌ನ ಕಾರ್ಯನಿರ್ವಾಹಕ ನಿರ್ದೇಶಕಿ ವರ್ಧಿನಿ ಪ್ರಕಾಶ್, ಮಧುಮತಿ ಮಹೇಶ್, ಕೆಎಂಪಿಯ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಪರಮೇಶ್ವರನ್ ಹಾಗೂ ಸೆಂಟರ್ ಫಾರ್ ಡಿಸೈನ್ ಎಕ್ಸಲೆನ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಮಿಲಿಂದ್ ನಲ್ಕರ್ ಇದ್ದಾರೆ



ಶಿವಾಜಿನಗರದ ಶ್ರೀರಾಮುಲ ಸನ್ನಿಧಿ ರಸ್ತೆಯ (ನಾರಾಯಣ ಪಿಳ್ಳೈ ರಸ್ತೆ) ಬಳಿ ಆರಂಭವಾಗಿರುವ ರಾಮ್‌ರಾಜ್ ಕಾಟನ್ ನೂತನ ಮಳಿಗೆಯನ್ನು ಯಜಮಾನ್ ಧರ್ಮಕರ್ತ ಗಾಡಿ ಪಿ.ಶ್ರೀನಿವಾಸ್ಲು ಶುಕ್ರವಾರ ಉದ್ಘಾಟಿಸಿದರು. ಸಂಸ್ಥೆಯ ಕರ್ನಾಟಕ ವಿಭಾಗದ ಮುಖ್ಯಸ್ಥ ಜಿ.ರಾಜೇಶ್, ಪ್ರಾದೇಶಿಕ ವ್ಯವಸ್ಥಾಪಕ ಜೀವನ್ ಕುಮಾರ್, ಮಾರುಕಟ್ಟೆ ವಿಭಾಗದ ವ್ಯವಸ್ಥಾಪಕ ಎಂ.ಸತೀಶ್ ಇದ್ದಾರೆ

– ಪ್ರಜಾವಾಣಿ ಚಿತ್ರ

ಕಾವೇರಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ತಂದೊಡ್ಡಿದ ಸಮಸ್ಯೆ– ವಾಹನ ಸವಾರರ ಪರದಾಟ

ಕೆಂಗೇರಿ ಉಪನಗರ–ಉಲ್ಲಾಳು ಸಂಚಾರ ದುಸ್ತರ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಒಂದು ಬದಿಯಲ್ಲಿ ಪೈಪ್‌ಲೈನ್ ಕಾಮಗಾರಿ, ಇನ್ನೊಂದು ಬದಿಯಲ್ಲಿ ಗುಂಡಿಮಯ ರಸ್ತೆ, ಮಂಡಿ ಎತ್ತರದ ಗುಂಡಿಗಳಲ್ಲಿ ಬಿದ್ದು- ಎದ್ದು ಪ್ರಯಾಣಿಸುವ ವಾಹನ ಸವಾರರು...

ಕೆಂಗೇರಿ ಉಪನಗರದಿಂದ ಉಲ್ಲಾಳು, ಉಲ್ಲಾಳು ಉಪನಗರ ಮಾರ್ಗಗಳಲ್ಲಿ ಮುದ್ದಯ್ಯನಪಾಳ್ಯಕ್ಕೆ ಸಂಪರ್ಕ ಕಲ್ಪಿಸುವ 100 ಅಡಿ ರಸ್ತೆಯ ದುಸ್ಥಿತಿ ಇದು.

ಕಾವೇರಿ ಕುಡಿಯುವ ನೀರು ಸರಬರಾಜು 4ನೇ ಹಂತದ ಯೋಜನೆಯಡಿ ನೈಸ್ ರಸ್ತೆ ಜಂಕ್ಷನ್ ಸಮೀಪದ ಹೊಸ ಬೈರೋಹಳ್ಳಿ ಬಳಿ ನಿರ್ಮಾಣ ಆಗಲಿರುವ 25 ಲಕ್ಷ ಲೀಟರ್ ಸಾಮರ್ಥ್ಯದ ಜಲಸಂಗ್ರಹ ಕೇಂದ್ರದಿಂದ ಯಲಹಂಕ ತನಕ 65 ಕಿಲೋ ಮೀಟರ್ ಉದ್ದದ ಪೈಪ್ ಅಳವಡಿಕೆ ಕಾಮಗಾರಿ ನಡೆಯುತ್ತಿದೆ.

ಕೊಮ್ಮಘಟ್ಟ ರಸ್ತೆಯ ಡಾ.ಶಿವಕುಮಾರ ಸ್ವಾಮೀಜಿ ವೃತ್ತದಿಂದ ಮುದ್ದಯ್ಯನ-ಪಾಳ್ಯ ತನಕದ 6 ಕಿಲೋ ಮೀಟರ್ ಉದ್ದದ ನಾಲ್ಕು ಪಥಗಳ ರಸ್ತೆಯಲ್ಲಿ ಒಂದು ಬದಿಯಲ್ಲಿ ಪೈಪ್ ಅಳವಡಿಕೆ ಮಾಡಲಾಗುತ್ತಿದೆ. ಈ ಕಾಮಗಾರಿಗಾಗಿ ಒಂದು ಭಾಗದ ರಸ್ತೆಯನ್ನು ಬಂದ್ ಮಾಡಿ ವರ್ಷವೇ ಕಳೆದಿದೆ. ಪೈಪ್ ಅಳವಡಿಕೆ ಕಾಮಗಾರಿ ಹಲವೆಡೆ ಮುಗಿದಿದ್ದು, ಕೆಲವೆಡೆ ಇನ್ನೂ ಬಾಕಿ ಇದೆ.

ಮಾರುತಿನಗರ ಮತ್ತು ಸೊಣ್ಣೇನಹಳ್ಳಿ ವೃತ್ತದಲ್ಲಿ ವಾಹನ ಸಂಚಾರವೇ ದುಸ್ತರವಾಗಿದೆ. ಒಂದು ಬದಿಯಲ್ಲಿ ಕಾಮಗಾರಿಗೆ ಬಂದ್ ಮಾಡಿದ್ದರೆ, ಇನ್ನೊಂದು ಬದಿಯಲ್ಲಿ ಹೊಂಡ ಬಿದ್ದಿದೆ. ಕೆಸರುಗದ್ದೆಯಂತಾಗಿರುವ ರಸ್ತೆಯಲ್ಲೇ ವಾಹನಗಳು ಸಂಚರಿಸಬೇಕಿದೆ.

ಈ ವೃತ್ತವನ್ನು ಹಾದು ಹೋಗುವುದು ವಾಹನ ಸವಾರರಿಗೆ ಸವಾಲಿನ ಕೆಲಸ. ಅದರಲ್ಲೂ ದ್ವಿಚಕ್ರ ವಾಹನ ಸವಾರರ ಪಾಡಂತೂ ಹೇಳತೀರದು. ಮಳೆಯಲ್ಲಿ ರಸ್ತೆಯಲ್ಲೇ ನಿಲ್ಲುವ ನೀರಿನಲ್ಲಿ ಗುಂಡಿಗಳು ಕಾಣಿಸಿದರೆ ಅದರೊಳಗೆ ಬಿದ್ದು ಎದ್ದು ಹೋಗುವುದು ಸಾಮಾನ್ಯವಾಗಿದೆ. ಕೈಕಾಲು ಮುರಿದುಕೊಂಡು ಬೈಕ್ ಸವಾರರು ಆಸ್ಪತ್ರೆ ಸೇರುತ್ತಿದ್ದಾರೆ.

'ಪೈಪ್‌ಲೈನ್ ಅಳವಡಿಕೆ ಪೂರ್ಣಗೊಂಡಿರುವ ಕಡೆಯೂ ಮಣ್ಣು ಮುಚ್ಚುವ ಕೆಲಸವನ್ನು ಸರಿಯಾಗಿ ಮಾಡಿಲ್ಲ. ಜೋರು ಮಳೆಯಲ್ಲಿ ಮುಚ್ಚಿರುವ ಮಣ್ಣು ಕೂಡ ಕೊಚ್ಚಿ ಹೋಗಿದೆ. ಈ ರೀತಿಯ ಮಂಡಿಯುದ್ದದ ಗುಂಡಿಗಳು ಅಪಘಾತಕ್ಕೆ ಆಹ್ವಾನ ನೀಡುತ್ತಿವೆ' ಎಂದು ಸ್ಥಳೀಯರು ಹೇಳುತ್ತಾರೆ.

'ರಾತ್ರಿ ವೇಳೆಯಂತೂ ದಿನಕ್ಕೆ ಒಬ್ಬರಾದರೂ ಈ ರಸ್ತೆಯಲ್ಲಿ ಬಿದ್ದು ಗಾಯಗೊಳ್ಳುತ್ತಿದ್ದಾರೆ. ರಸ್ತೆ ಇಷ್ಟೊಂದು ಹದಗೆಟ್ಟಿರುವುದನ್ನು ನೋಡಿದರೂ ಅಧಿಕಾರಿಗಳು ಮತ್ತು ರಾಜಕಾರಣಿಗಳು ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸುತ್ತಾರೆ.





ಸೊಣ್ಣೇನಹಳ್ಳಿ ಜಂಕ್ಷನ್‌ನಲ್ಲಿ ಕೆಸರುಗದ್ದೆಯಾಗಿರುವ ರಸ್ತೆಯಲ್ಲಿ ವಾಹನಗಳು ಸಂಚರಿಸುತ್ತಿರುವುದು (ಎಡ ಚಿತ್ರ) ಉಲ್ಲಾಳು ಬಳಿ ಪೈಪ್‌ಲೈನ್ ಕಾಮಗಾರಿ ನಡೆಯುತ್ತಿದೆ

–ಪ್ರಜಾವಾಣಿ ಚಿತ್ರಗಳು/ಅನೂಪ್ ರಾಘ ಟಿ.

ಪ್ರಜಾವಾಣಿ ವಿಶೇಷ

ಹಲವು ಬಡಾವಣೆಗಳ ಸಂಪರ್ಕ ಕೊಂಡಿ

ನೈಸ್ ರಸ್ತೆಗೆ ಪರ್ಯಾಯವಾಗಿ ಇರುವ ಈ ರಸ್ತೆ, ಕೆಂಗೇರಿ ಉಪನಗರದಿಂದ ಮಾಗಡಿ ರಸ್ತೆಗೆ ಸಂಪರ್ಕ ಕೊಂಡಿ.

ಕೆಂಗೇರಿ ಉಪನಗರ, ಮಾರುತಿನಗರ, ರಾಮಸಂದ್ರ, ದೊಡ್ಡಬಸ್ತಿ, ಚಿಕ್ಕಬಸ್ತಿ, ಉಲ್ಲಾಳು ಉಪನಗರ, ವಿಶ್ವೇಶ್ವರಯ್ಯ ಬಡಾವಣೆ, ಕೆಂಪೇಗೌಡ ಬಡಾವಣೆ ನಾಗರಿಕರು ನಾಗರಬಾವಿ, ಸುಮ್ಮನಹಳ್ಳಿ, ಹಾರೋಹಳ್ಳಿ ಸಂಪರ್ಕಕ್ಕೆ ಇರುವ ಪ್ರಮುಖ ರಸ್ತೆ ಇದು. ಮುಖ್ಯ ರಸ್ತೆಯೇ ಹದಗೆಟ್ಟಿರುವುದು ಈ ಭಾಗದ ಜನರ ಸಂಚಾರಕ್ಕೆ ತೊಂದರೆಯಾಗಿದೆ.


ಪೈಪ್‌ಲೈನ್ ಕಾಮಗಾರಿ ಮುಗಿದಿರುವ ಭಾಗದಲ್ಲದರೂ ರಸ್ತೆ ದುರಸ್ತಿಪಡಿಸಿದರೆ ಜನರಿಗೆ ಅನುಕೂಲ ಆಗಲಿದೆ. ಅದನ್ನೂ ಮಾಡುತ್ತಿಲ್ಲ ಎಂದು ವಾಹನ ಸವಾರರು ಬೇಸರ ವ್ಯಕ್ತಪಡಿಸುತ್ತಾರೆ.



ಪೈಪ್‌ಲೈನ್ ಅಳವಡಿಕೆ ಕಾಮಗಾರಿ 15 ದಿನಗಳಲ್ಲಿ ಪೂರ್ಣಗೊಳ್ಳಲಿದೆ. ಬಳಿಕ ರಸ್ತೆ ಮರು ನಿರ್ಮಾಣ ಕಾಮಗಾರಿ ಆರಂಭವಾಗಿದೆ

ಎಸ್.ಟಿ. ಸೋಮಶೇಖರ್

ಸಹಕಾರ ಸಚಿವ



ಪೈಪ್‌ಲೈನ್ ಕಾಮಗಾರಿ ಮುಗಿದಿರುವ ಕಡೆಯೂ ರಸ್ತೆ ಸರಿಪಡಿಸಿಲ್ಲ. ದಿನವೂ ಬೀಳುವ ಜನರನ್ನು ಎತ್ತಿ ಆಸ್ಪತ್ರೆಗೆ ಕಳಿಸುವುದೇ ನಮ್ಮ ಕೆಲಸವಾಗಿದೆ. ಅಧಿಕಾರಿಗಳಿಗೆ ಸಮಸ್ಯೆ ಕಾಣಿಸುತ್ತಿಲ್ಲವೇ

ಮಲ್ಲಯ್ಯ, ಕೊಡವ ಸಮಾಜ ವೃತ್ತ



ಈ ರಸ್ತೆಯಲ್ಲೇ ಅಧಿಕಾರಿಗಳು-ರಾಜಕಾರಣಿಗಳು ಸಂಚರಿಸುತ್ತಾರೆ. ಸಮಸ್ಯೆ ಪರಿಹಾರಕ್ಕೆ ಯಾರೊಬ್ಬರೂ ತಲೆಕೆಡಿಸಿಕೊಂಡಿಲ್ಲ. ಜನ ಮಾತ್ರ ತೊಂದರೆ ಅನುಭವಿಸುತ್ತಿದ್ದಾರೆ

ಕೃಷ್ಣೇಗೌಡ, ರಾಮಸಂದ್ರ ನಿವಾಸಿ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

https://bit.ly/3C9EBew

'ಸೂಪರ್–30' ಎಂಜಿನಿಯರಿಂಗ್ ಕಾಲೇಜು ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪ್ರತಿ ಜಿಲ್ಲೆಯಲ್ಲೂ ಉತ್ಕೃಷ್ಟ ಗುಣಮಟ್ಟದ ತಲಾ ಒಂದು ಮಾದರಿ ಎಂಜಿನಿಯರಿಂಗ್ ಕಾಲೇಜನ್ನು ಅಭಿವೃದ್ಧಿಪಡಿಸಲು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕರಿಸಿದ್ದಪ್ಪ ಅವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್.ಅಶ್ವತ್ಥನಾರಾಯಣ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

'ಶೈಕ್ಷಣಿಕವಾಗಿ ಸಾಧಾರಣ ಸಾಧನೆ ಮಾಡುತ್ತಿರುವ ಕಾಲೇಜುಗಳನ್ನು ಮಾತ್ರ ಸೂಪರ್–30' ಎಂಜಿನಿಯರಿಂಗ್ ಕಾಲೇಜು ಎನ್ನುವ ಈ ಪರಿಕಲ್ಪನೆಯ ಯೋಜನೆಯಡಿ ಆಯ್ಕೆ ಮಾಡಿಕೊಳ್ಳಲಾಗುವುದು. ಅದರಲ್ಲೂ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಿಗೆ ಆದ್ಯತೆ ನೀಡಲಾಗುವುದು. ಸರ್ಕಾರಿ ಕಾಲೇಜುಗಳು ಇಲ್ಲದ ಕಡೆಗಳಲ್ಲಿ ಖಾಸಗಿ ಕಾಲೇಜುಗಳನ್ನು ಆರಿಸಿಕೊಳ್ಳಲಾಗುವುದು. ಬೆಂಗಳೂರಿನಲ್ಲಿರುವ ಎಂಜಿನಿಯರಿಂಗ್ ಕಾಲೇಜುಗಳನ್ನು ಇದಕ್ಕೆ ಪರಿಗಣಿಸುವುದಿಲ್ಲ ಎಂದು ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಇಂದಿರಾನಗರ ರಸ್ತೆ ಅವ್ಯವಸ್ಥೆ: ಆಕ್ರೋಶ

ಬಿಬಿಎಂಪಿ ರಸ್ತೆ ದುರಸ್ತಿ ಮಾಡುವುದಾದರೂ ಯಾವಾಗ: ನಾಗರಿಕರ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾನಗರದ 100 ಅಡಿ ರಸ್ತೆ ಸಂಪೂರ್ಣ ಹದಗೆಟ್ಟಿರುವ ಬಗ್ಗೆ ನಾಗರಿಕರು ಸಾಮಾಜಿಕ ಜಾಲತಾಣ 'ಕೂ'ನಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಂದಿರಾನಗರ 100 ಅಡಿ ರಸ್ತೆಯು ಬೆಂಗಳೂರಿನ ಹಳೆ ವಿಮಾನ ನಿಲ್ದಾಣ ರಸ್ತೆ ಮತ್ತು ಹಳೆ ಮದ್ರಾಸ್ ರಸ್ತೆಗಳನ್ನು ಸಂಪರ್ಕಿಸುತ್ತದೆ. ಇದು ನಗರದ ಪ್ರಮುಖ ರಸ್ತೆಯಾಗಿದ್ದರೂ ದುರಸ್ತಿಗೆ ಕ್ರಮಕೈಗೊಂಡಿಲ್ಲ. ರಸ್ತೆಯು ಗುಂಡಿಗಳಿಂದ ಕೂಡಿದ್ದು, ಸಂಚರಿಸುವುದು ದುಸ್ತರವಾಗಿದೆ. ಈ ರಸ್ತೆಯಲ್ಲಿ ಕಚೇರಿಗೆ ಹೋಗುವುದೆಂದರೆ ನರಕಯಾತನೆ ಎಂದು ನಾಗರಿಕರು ಕಿಡಿಕಾರಿದ್ದಾರೆ.

'ಐ.ಟಿ ಕಂಪನಿಗಳೇ ಸಾಲು ಸಾಲು ಚಕ್ಕಳ ಮಕ್ಕಳ ಹಾಕಿ ಕೂತಂತಿರುವ ಇಂದಿರಾನಗರದ ರೋಡು ಮೈಕೈ ತೂತು ಮಾಡಿಕೊಂಡು ಸೊರಗಿ ಸತ್ತು ಹೋಗಿದೆ. ಅದರ ಅವಸ್ಥೆ ನೋಡಿದರೆ ಆ ರೋಡಿಗೆ ಜನ್ಮವಿತ್ತವರ ಮುಖ ನೋಡ್ಬೇಕಲ್ಲ ಅನ್ನುತ್ತೆ. ಅದನ್ನ ಏನಾದ್ರು ಮಾಡ್ರಿ ರೀ ಶ್ರೀಮಾನ್ ಬೆಂಗಳೂರನವ್ರೆ! ಪಾಪ ಕೆಂಪೇಗೌಡ್ರು!' ಎಂದು ಸುನಿಲ್ ಎನ್ನುವವರು 'ಕೂ' ಮಾಡಿದ್ದಾರೆ.

'ಕಷ್ಟಕಷ್ಟ. ಬೆಂಗಳೂರಿನ ಇಂದಿರಾನಗರದ 100 ಅಡಿ ವರ್ತುಲ ರಸ್ತೆಯಲ್ಲಿ ಪ್ರಯಾಣ ದೇವರಿಗೂ ಬೇಡ. ಬಿಬಿಎಂಪಿ ರಸ್ತೆ ರಿಪೇರಿ ಮಾಡೋದಾದ್ರೂ ಯಾವಾಗ?' ಎಂದು ಗಣೇಶ್ ಎನ್ನುವವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಇಂದಿರಾ ನಗರದ 100 ಅಡಿ ವರ್ತುಲ ರಸ್ತೆಯಲ್ಲಿ ಸಾಗುವುದು ಜೀವ ಪಣಕ್ಕಿಟ್ಟು ನಡೆಸುವ ಯಾವುದೇ ಸಾಹಸಮಯ ಪ್ರದರ್ಶನ ನೀಡುವ ಸ್ಟಂಟ್‌ಗಳಿಗೆ ಹೋಲಿಸಿದರೆ ಅದಕ್ಕಿಂತ ಕಡಿಮೆ ಅನುಭವವನ್ನಂತೂ ನೀಡಲಾರದು. ನೀವೂ ಈ ಮಾರ್ಗದಲ್ಲಿ ಸಂಚರಿಸಿದ್ದರೆ ನಿಮ್ಮ ಅನಿಸಿಕೆ ಏನು' ಎಂದು ನರೇಶ್ ಅಭಿಪ್ರಾಯ ಹಂಚಿಕೊಳ್ಳುವಂತೆ ಕೇಳಿದ್ದಾರೆ.

'ಕೊರೊನಾ ವೈರಸ್ ಕಾರಣಕ್ಕೆ ಜನರು ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಈಗ ರಸ್ತೆ ಗುಂಡಿಗಳಿಂದ ಜನರು ಗಗನಯಾತ್ರಿಗಳ ಉಡುಪು ಧರಿಸುವ ಪರಿಸ್ಥಿತಿ ಸೃಷ್ಟಿಯಾಗಿದ್ದು, ಚಂದ್ರನ ಅಂಗಳದಲ್ಲಿ ನಡೆದಾಡುವಂತೆ ಹೆಜ್ಜೆ ಹಾಕಬೇಕಾಗಿದೆ' ಎಂದು ಪ್ರದೀಪ್ ಎನ್ನುವವರು 'ಕೂ' ಮಾಡಿದ್ದಾರೆ.



ಇಂದಿರಾನಗರ ರಸ್ತೆ ದುಃಸ್ಥಿತಿ ಕುರಿತು ನರೇಶ್ ಕುಮಾರ್ ಅವರು 'ಕೂ'ನಲ್ಲಿ ಹಂಚಿಕೊಂಡ ಚಿತ್ರ

ಶೈಲಾ ನಾಗರಾಜ್‌ಗೆ 'ಇಂದಿರಾರತ್ನ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘ ಕೊಡ ಮಾಡುವ 'ಇಂದಿರಾ ರತ್ನ ಪ್ರಶಸ್ತಿ'ಗೆ ಲೇಖಕಿ ಬಿ.ಸಿ. ಶೈಲಾ ನಾಗರಾಜ್ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ₹5 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ನ.2ರಂದು ಬೆಳಿಗ್ಗೆ 10.30ಕ್ಕೆ ತುಮಕೂರಿನ ಕನ್ನಡ ಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಲೇಖಕಿ ಕೆ.ಆರ್. ಸಂಧ್ಯಾ ರೆಡ್ಡಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಸಂಘದ ಅಧ್ಯಕ್ಷೆ ವನಮಾಲಾ ಸಂಪನ್ನಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಡಗದ್ದೆ ಪಕ್ಷಿಧಾಮ ಘೋಷಣೆಗೆ ಸಿ.ಎಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ರಾಷ್ಟ್ರೀಯ ಹೆದ್ದಾರಿ–169ರ ಪಕ್ಕದಲ್ಲಿ ತುಂಗಾ ನದಿಯ ನಡುವೆ ಇರುವ ಮಂಡಗದ್ದೆ ಪಕ್ಷಿಧಾಮವನ್ನು ಅಧಿಕೃತ ಪಕ್ಷಿಧಾಮ ಎಂದು ಘೋಷಿಸಿ ಅಧಿಸೂಚನೆ ಹೊರಡಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರವಾಸೋದ್ಯಮ ಇಲಾಖೆಗೆ ಸೂಚನೆ ನೀಡಿದ್ದಾರೆ.

ತೀರ್ಥಹಳ್ಳಿ ಕ್ಷೇತ್ರದ ಶಾಸಕರೂ ಆಗಿರುವ ಗೃಹ ಸಚಿವ ಆರಗ ಜ್ಞಾನೇಂದ್ರ, ಮಂಡಗದ್ದೆ ಪಕ್ಷಿಧಾಮವನ್ನು ಪ್ರವಾಸೋದ್ಯಮದ ಹಿತದೃಷ್ಟಿಯಿಂದ ಅಧಿಕೃತ ಪಕ್ಷಿಧಾಮ ಎಂದು ಘೋಷಿಸುವಂತೆ ಕೋರಿ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದರು.

ಪ್ರವಾಸೋದ್ಯಮ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಶುಕ್ರವಾರ ಪತ್ರ ಬರೆದಿರುವ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ಮಂಡಗದ್ದೆ ಪಕ್ಷಿಧಾಮಕ್ಕೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಲು ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ.

25ರಂದು ಪ್ರತಿಭಟನಾ ಮೆರವಣಿಗೆ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಫಲಾನುಭವಿಗಳಿಗೆ ಯಾವುದೇ ಹಣ ವಿನಿಯೋಗ ಮಾಡುತ್ತಿಲ್ಲ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಧ್ಯಕ್ಷ ಎನ್.ಮೂರ್ತಿ ಆರೋಪಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇಲಾಖೆಯ ಧೋರಣೆ ಖಂಡಿಸಿ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅ.25ರಂದು ಬೆಳಿಗ್ಗೆ 11 ಗಂಟೆಗೆ ಮೈಸೂರು ಬ್ಯಾಂಕ್ ವೃತ್ತದಿಂದ ಮುಖ್ಯಮಂತ್ರಿ ನಿವಾಸದವರೆಗೆ ತಮಟೆ, ಡೊಳ್ಳುಗಳೊಂದಿಗೆ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದರು.

ಇಂದಿನಿಂದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಇದೇ 23 ರಿಂದ 27ರವರೆಗೆ ಬೆಳಿಗ್ಗೆ 10ರಿಂದ ಸಂಜೆ 5 ರವರೆಗೆ ನಗರದ ವಿವಿಧ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಅ.23: ಜಿ.ಬಿ.ಪಾಳ್ಯ, ಸಿಂಗಸಂದ್ರ, ಮೈಕೊ ಲೇಔಟ್, ಎಚ್‌ಎಸ್ ಆರ್ ಲೇಔಟ್‌ನ 7ನೇ ಸೆಕ್ಟರ್.

ಅ.25: ಸಿಂಡಿಕೇಟ್ ಬ್ಯಾಂಕ್ ಲೇಔಟ್, ಅಂದ್ರಹಳ್ಳಿ ಮುಖ್ಯರಸ್ತೆ, ಭುವನೇಶ್ವರಿ ನಗರ, ದೊಡ್ಡಬಸ್ತಿ, ಆರ್.ಆರ್. ಲೇಔಟ್, ಉಪಾಧ್ಯಾಯ ಲೇಔಟ್, ಮಲ್ಲತ್ತಹಳ್ಳಿ, ನ್ಯೂ ಟಿಂಬರ್ ಯಾರ್ಡ್ ಲೇಔಟ್, ಗಂಗೊಂಡನಹಳ್ಳಿ ಮುಖ್ಯ ರಸ್ತೆ, ವಿಜಯನಗರ, ಹೊಸಹಳ್ಳಿ, ಹಂಪಿನಗರ, ಮಾರೇನಹಳ್ಳಿ, ಎಂ.ಸಿ. ಲೇಔಟ್, ಗೋವಿಂದರಾಜನಗರ, ಚಂದ್ರಾ ಲೇಔಟ್, ಅಗ್ರಹಾರ ದಾಸರಹಳ್ಳಿ, ಕಾಮಾಕ್ಷಿಪಾಳ್ಯ, ಆರ್.ಎಚ್.ಸಿ.ಎಸ್.ಲೇಔಟ್, ಅನ್ನಪೂರ್ಣೇಶ್ವರಿ ನಗರ, ಹೆಲ್ತ್ ಲೇಔಟ್, ಡಿ ಗ್ರೂಪ್ ಲೇಔಟ್, ಬೆಂಚಕಲ್ಲುಪಾಳ್ಯ, ನರಸಾಪುರ, ಮುದ್ದಿನಪಾಳ್ಯ ಮುಖ್ಯ ರಸ್ತೆ, ಗೌರಮ್ಮ ಲೇಔಟ್ ಹಾಗೂ ಸುತ್ತಲಿನ ಪ್ರದೇಶ. ಪರಂಗಿ ಪಾಳ್ಯ, ಗಾರ್ಡನ್ ಲೇಔಟ್, ಎಚ್‌ಎಸ್‌ಆರ್ ಲೇಔಟ್, ನಾರಾಯಣ ನಗರದ ಎರಡನೇ ಬ್ಲಾಕ್, ಆರಾಧನಾ ಲೇಔಟ್, ರಾಘವೇಂದ್ರ ಬಡಾವಣೆ, ಎಲೆಕ್ಟ್ರಾನಿಕ್ ಸಿಟಿ, ಕೋನಪ್ಪನ ಅಗ್ರಹಾರ, ದೊಡ್ಡತೋಗೂರು, ಕೊತ್ತನೂರು, ಗೌರವ ನಗರ.

ಅ.26: ನಾರಾಯಣ ನಗರ ಎರಡನೇ ಬ್ಲಾಕ್, ಸನ್ ಸಿಟಿ ಲೇಔಟ್, ಎಲೆಕ್ಟ್ರಾನಿಕ್ ಸಿಟಿ, ಕೋನಪ್ಪನ ಅಗ್ರಹಾರ, ದೊಡ್ಡತೋಗೂರು.

ಅ.27: ನಾರಾಯಣ ನಗರ ಎರಡನೇ ಬ್ಲಾಕ್, ಸನ್‌ಸಿಟಿ ಬ್ಲಾಕ್ ಸುತ್ತಲಿನ ಪ್ರದೇಶ.

'ಹದಗೆಟ್ಟ ರಸ್ತೆ: ಜಲಮಂಡಳಿ ಪಾತ್ರವಿಲ್ಲ'

ಬೆಂಗಳೂರು: ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಕುವೆಂಪು ನಗರ ವಾರ್ಡ್ ವ್ಯಾಪ್ತಿಯ ವೈಷ್ಣವಿ ಬಡಾವಣೆಯ ರಸ್ತೆಯಲ್ಲಿ ಗುಂಡಿಗಳು ನಿರ್ಮಾಣವಾಗಿ ಹದಗೆಟ್ಟಿರುವುದರಲ್ಲಿ ತಮ್ಮ ಸಂಸ್ಥೆಯ ಯಾವುದೇ ಪಾತ್ರವಿಲ್ಲ ಎಂದು ಜಲಮಂಡಳಿ ಸ್ಪಷ್ಟಪಡಿಸಿದೆ.

ಕಾವೇರಿ ಪೈಪ್‌ಲೈನ್, ಒಳಚರಂಡಿ ಹಾಗೂ ಬೆಸ್ಕಾಂ ನೆಲದಡಿ ಕೇಬಲ್ ಅಳವಡಿಕೆಗಾಗಿ ವೈಷ್ಣವಿ ಬಡಾವಣೆಯ ರಸ್ತೆಗಳನ್ನು ಅಗೆದು, ಕಾಮಗಾರಿ ಪೂರ್ಣಗೊಂಡ ನಂತರ ಸರಿಯಾಗಿ ಮುಚ್ಚದ ಕಾರಣ ಗುಂಡಿಗಳು ಬಿದ್ದು, ಸಾರ್ವಜನಿಕರು ಸಮಸ್ಯೆ ಎದುರಿಸುತ್ತಿರುವ ಕುರಿತು 'ಪ್ರಜಾವಾಣಿ'ಯಲ್ಲಿ ವರದಿ ಪ್ರಕಟವಾಗಿತ್ತು.

ಈ ಸಂಬಂಧ ಪ್ರತಿಕ್ರಿಯಿಸಿರುವ ಜಲಮಂಡಳಿ,'ವೈಷ್ಣವಿ ಬಡಾವಣೆಯಲ್ಲಿ ಸ್ಥಳ ಪರಿಶೀಲನೆ ನಡೆಸಲಾಗಿದ್ದು, ಗುತ್ತಿಗೆದಾರರೂ ಟೆಂಡರ್ ನಿಯಮದ ಪ್ರಕಾರ ಕಾಮಗಾರಿ ಪೂರ್ಣಗೊಳಿಸಿದ್ದಾರೆ. ಸದರಿ ಕಾಮಗಾರಿಯ ದೋಷಗಳ ಹೊಣೆಗಾರಿಕೆ ಅವಧಿ (ಡಿಎಲ್‌ಪಿ) ಮುಕ್ತಾಯವಾಗಿದೆ' ಎಂದು ಜಲಮಂಡಳಿ ತಿಳಿಸಿದೆ.

ಯುವ ನೀತಿ: ಬಾಲಸುಬ್ರಹ್ಮಣ್ಯಂ ನೇತೃತ್ವದ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಯುವ ನೀತಿ– 2021' ರೂಪಿಸಲು ತಜ್ಞರ ಸಮಿತಿಯನ್ನು ರಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.


ಸ್ವಾಮಿ ವಿವೇಕಾನಂದ ಯುವ ಚಳವಳಿ ಸಂಸ್ಥಾಪಕ ಡಾ.ಆರ್.ಬಾಲಸುಬ್ರಹ್ಮಣ್ಯಂ ನೇತೃತ್ವದಲ್ಲಿ 13 ಸದಸ್ಯರ ನೂತನ ಸಮಿತಿ ರಚಿಸಲಾಗಿದೆ. ತಜ್ಞರ ಸಮಿತಿಯು ರಾಜ್ಯಾದ್ಯಂತ ಸಮಗ್ರ ಅಧ್ಯಯನ ನಡೆಸಿ, ಅಭಿಪ್ರಾಯ ಸಂಗ್ರಹಿಸಿ ಎರಡು ತಿಂಗಳೊಳಗೆ ವರದಿ ನೀಡುವಂತೆ ಆದೇಶದಲ್ಲಿ ಸೂಚಿಸಲಾಗಿದೆ.

2012 ರಲ್ಲಿ ಕರ್ನಾಟಕ ರಾಜ್ಯ ಯುವ ನೀತಿ ರೂಪಿಸಲಾಗಿತ್ತು. ಈಗ ಬದಲಾದ ಕಾಲಕ್ಕೆ ಅನುಗುಣವಾಗಿ ಹೊಸ ಯುವ ನೀತಿ ರೂಪಿಸುವುದು ಅವಶ್ಯಕತೆ ಇದೆ. ಆದ್ದರಿಂದ ತಜ್ಞರ ಸಮಿತಿ ರಚಿಸಲಾಗಿದ್ದು, ಇದರಿಂದ ಯುವ ಜನತೆ ತಮ್ಮ ಉತ್ತಮ ಜೀವನವನ್ನು ಕಟ್ಟಿಕೊಳ್ಳಲು ಅನುಕೂಲವಾಗುವ ನಿಟ್ಟಿನಲ್ಲಿ ಸಮಗ್ರ ಮತ್ತು ಕೌಶಲ್ಯಭರಿತ ನೀತಿಯನ್ನು ರೂಪಿಸಲಾಗುವುದು ಎಂದು ಯುವ ಜನ ಸಬಲೀಕರಣ ಸಚಿವ ನಾರಾಯಣಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಯುವ ಸಮುದಾಯ ಡ್ರಗ್ಸ್ ಸೇರಿದಂತೆ ವಿವಿಧ ದುಶ್ಚಟಗಳಿಗೆ ಬಲಿಯಾಗುತ್ತಿದೆ. ಯುವಕರು ದಾರಿ ತಪ್ಪದಂತೆ ಮುನ್ನೆಚ್ಚರಿಕೆ ತೆಗೆದುಕೊಳ್ಳುವುದು, ತಂತ್ರಜ್ಞಾನ ಮತ್ತು ಆವಿಷ್ಕಾರಗಳ ಬಗ್ಗೆ ಆದ್ಯತೆ ನೀಡುವುದು, ಯುವ ಸಂಘಟನೆಗಳ ಮೂಲಕ ಕ್ರೀಡೆಗೆ ಒತ್ತು ನೀಡುವುದು, ಯುವ ಜನತೆಯಲ್ಲಿ ನಾಯಕತ್ವ ಗುಣವನ್ನು ಬೆಳೆಸುವುದು ಸೇರಿದಂತೆ ಯುವ ಜನತೆಗೆ ಅನುಕೂಲವಾಗುವಂತೆ ನೀತಿ ರೂಪಿಸಲಾಗುವುದು ಎಂದು ಹೇಳಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿವಿಧ ಯೋಜನೆಗಳ ಮೂಲಕ ಯುವ ಸಮುದಾಯಕ್ಕೆ ಕೋಟ್ಯಂತರ ಹಣವನ್ನು ಖರ್ಚು ಮಾಡುತ್ತಿದೆ. ಈ ಯೋಜನೆಗಳು ಯುವ ಜನತೆಗೆ ಸರಿಯಾದ ರೀತಿಯಲ್ಲಿ ತಲುಪಲು ಹೊಸ ಯುವ ನೀತಿ ರೂಪಿಸುವುದರಿಂದ ಅನುಕೂಲವಾಗಲಿದೆ ಎಂದು ನಾರಾಯಣಗೌಡ ತಿಳಿಸಿದ್ದಾರೆ.

ನಗರದಲ್ಲಿ ಇಂದು



ಖ್ಯಾತ ವ್ಯಂಗ್ಯಚಿತ್ರಕಾರ ಆರ್.ಕೆ.ಲಕ್ಷ್ಮಣ್ ಜನ್ಮ ಶತಮಾನೋತ್ಸವದ ಅಂಗವಾಗಿ 'ಆರ್. ಕೆ.ಲಕ್ಷ್ಮಣ್@100' ವ್ಯಂಗ್ಯಚಿತ್ರಗಳ ಪ್ರದರ್ಶನ: ಆಯೋಜನೆ-ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆ, ಸ್ಥಳ-ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿ, ಟ್ರಿನಿಟಿ ವೃತ್ತ, ಬೆಳಿಗ್ಗೆ 10ರಿಂದ ಸಂಜೆ 5 (ನ.16ರವರೆಗೆ)




'ಹಸ್ಬೆಂಡ್–360' ನಾಟಕ ಪ್ರದರ್ಶನ: ರಚನೆ–ನಾಗವೇಣಿ ರಂಗನ್, ನಿರ್ದೇಶನ–ಅರ್ಚನಾ ಶ್ಯಾಮ್ ಮತ್ತು ವಿಜಯ್ ಜೋಯಿಸ್, ಆಯೋಜನೆ–ಅಂತರಂಗ, ಸ್ಥಳ–ಅಶ್ವತ್ಥ್ ಕಲಾಭವನ, ಎನ್.ಆರ್.ಕಾಲೊನಿ, ಸಂಜೆ 7

ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಕೆಆರ್‌ಐಡಿಎಲ್) ಎಂಜಿನಿಯರ್‌ಗಳಿಗೆ ತಾಂತ್ರಿಕ ತರಬೇತಿ ಕಾರ್ಯಕ್ರಮ: ಉದ್ಘಾಟನೆ–ಕೆಆರ್‌ಐಡಿಎಲ್ ಅಧ್ಯಕ್ಷ ಎಂ.ರುದ್ರೇಶ್, ಅತಿಥಿಗಳು–ಗಂಗಾಧರ ಸ್ವಾಮಿ, ಎಚ್.ಆರ್.ಮಹದೇವಸ್ವಾಮಿ, ಆಯೋಜನೆ–ಕೆಆರ್‌ಐಡಿಎಲ್, ಸ್ಥಳ–ಸಮ್ಮೇಳನ ಸಭಾಂಗಣ, ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಅಕಾಡೆಮಿ, ವಿಷ್ಣುವರ್ಧನ ರಸ್ತೆ, ಬೆಳಿಗ್ಗೆ 10

ಕಿತ್ತೂರು ರಾಣಿ ಚೆನ್ನಮ್ಮ ಜಯಂತ್ಯುತ್ಸವ: ಸಾನ್ನಿಧ್ಯ–ಜಯಬಸವ ಮೃತ್ಯುಂಜಯ ಸ್ವಾಮೀಜಿ, ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಲಾರ್ಪಣೆ–ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್, ಅಧ್ಯಕ್ಷತೆ–ಶಾಸಕ ಉದಯ್ ಬಿ.ಗರುಡಾಚಾರ್, ಅತಿಥಿಗಳು–ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್ ಮತ್ತು ರಾಜೀವ್ ಚಂದ್ರಶೇಖರ್, ಆಯೋಜನೆ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ನಯನ ಸಭಾಂಗಣ, ರವೀಂದ್ರ ಕಲಾಕ್ಷೇತ್ರ ಆವರಣ, ಬೆಳಿಗ್ಗೆ 11

ಪುಟ್ಟಯ್ಯ ಅವರ 'ಕಿಲಾರಿ ರಸ್ತೆ ಆಂಜನೇಯ', ಕಿಂಶುಖ ಈಶ್ವರಿ ಪ್ರಸಾದ್ ಅವರ 'ಕೂನಿಕೆರೆ ಆಂಜನೇಯ' ಪುಸ್ತಕಗಳ ಬಿಡುಗಡೆ: ಪ್ರೊ.ಶಿವರಾಮಯ್ಯ, ಅಧ್ಯಕ್ಷತೆ–ಮೀರಾಸಾಬಿಹಳ್ಳಿ ಶಿವಣ್ಣ, ಅತಿಥಿ–ವೂಡೇ ಪಿ.ಕೃಷ್ಣ, ಸಿ.ವಿ.ಜಿ.ಚಂದ್ರು, ಆಯೋಜನೆ–ಪಟೇಲ್ ಪ್ರಕಾಶನ ಮತ್ತು ಸಿವಿಜಿ ಪ್ರಕಾಶನ, ಸ್ಥಳ–ಸಮ್ಮೇಳನ ಸಭಾಂಗಣ, ಶೇಷಾದ್ರಿಪುರ ಕಾಲೇಜು, ಸಂಜೆ 4

ಜಿ.ಕೆ.ಗೋವಿಂದರಾವ್ ಅವರಿಗೆ ನುಡಿನಮನ: ಭಾಗವಹಿಸುವವರು–ಟಿ.ಎನ್. ಸೀತಾರಾಂ, ಜಿ.ರಾಮಕೃಷ್ಣ, ಲಕ್ಷ್ಮೀ ಚಂದ್ರಶೇಖರ್, ಅಗ್ರಹಾರ ಕೃಷ್ಣಮೂರ್ತಿ, ಶ್ರೀನಿವಾಸ ಜಿ.ಕಪ್ಪಣ್ಣ, ವಿಮಲಾ, ಆಯೋಜನೆ–ಸಮುದಾಯ ಬೆಂಗಳೂರು, ಸ್ಥಳ–ಜ್ಯೋತಿಬಸು ಭವನ, ಬಸವನಗುಡಿ, ಸಂಜೆ 4.30



ಟಿ.ಎನ್. ಸೀತಾರಾಂ

ಭರತನಾಟ್ಯ ರಂಗಪ್ರವೇಶ: ಭವಾನಿ ಗಂಗಾಧರ್, ಕೌಶಿಕ್ ಗಂಗಾಧರ್ ಮತ್ತು ರಿಷಭ್, ಅತಿಥಿಗಳು–ಎಂ.ಸೂರ್ಯಪ್ರಸಾದ್, ಪ್ರವೀಣ್ ಕುಮಾರ್, ಅಜಯ್ ವಾರಿಯರ್, ವಿದ್ವಾನ್ ಬೆಂಗಳೂರು ವಿ. ಪ್ರವೀಣ್, ಆಯೋಜನೆ–ಶಿವಪ್ರಿಯ ನೃತ್ಯ ಶಾಲೆ, ಸ್ಥಳ–ಚೌಡಯ್ಯ ಮೆಮೊರಿಯಲ್ ಹಾಲ್, ವೈಯಾಲಿಕಾವಲ್, ಸಂಜೆ 6

ಆರೋಗ್ಯ ತಪಾಸಣಾ ಶಿಬಿರ: ಆಯೋಜನೆ–ಮಲ್ಲೇಶ್ವರ ಆಯುರ್ವೇದ ಮತ್ತು ಆರ್ಗ್ಯಾನಿಕ್ ಭವನ ಮತ್ತು ಝುಂಡು ಆಯುರ್ವೇದ ಔಷಧ ಕಂಪನಿ, ಸ್ಥಳ–8ನೇ ಅಡ್ಡರಸ್ತೆ, ಮಲ್ಲೇಶ್ವರ (ಬೆಳಿಗ್ಗೆ 10ರಿಂದ ಮಧ್ಯಾಹ್ನ 2)

ಬೆಂಗಳೂರು ನಿರ್ಮಾತೃ ರಾಜಾ ಕೆಂಪೇಗೌಡ

ಕಾದಂಬರಿ ಬಿಡುಗಡೆ: ಮನು ಬಳಿಗಾರ್, ಉದ್ಘಾಟನೆ–ಎನ್.ಆರ್.ರಮೇಶ್, ಅತಿಥಿಗಳು–ರಾ.ನಂ.ಚಂದ್ರಶೇಖರ್, ಚ.ಶ್ರೀನಿವಾಸ, ಆಯೋಜನೆ–ಶ್ರೀನಿವಾಸ ಪ್ರಕಾಶನ, ಸ್ಥಳ–ಗಾಂಧಿ ಸಾಹಿತ್ಯ ಸಂಘ, ಮಲ್ಲೇಶ್ವರ, ಸಂಜೆ 5.30

'ಮೇಕರ್ಸ್ ಆಫ್ ಮಾಡರ್ನ್ ದಲಿತ್ ಹಿಸ್ಟರಿ' ಪುಸ್ತಕ ಬಿಡುಗಡೆ ಮತ್ತು ಚರ್ಚೆ: ಅತಿಥಿಗಳು–ನಿವೃತ್ತ ನ್ಯಾಯಮೂರ್ತಿ ಎಲ್.ನಾರಾಯಣಸ್ವಾಮಿ, ಆರ್‌ಎಸ್‌ಎಸ್‌ನ ಕ್ಷೇತ್ರೀಯ ಕಾರ್ಯವಾಹ ಎನ್. ತಿಪ್ಪೇಸ್ವಾಮಿ, ಬಿಜೆಪಿ ರಾಷ್ಟ್ರೀಯ ವಕ್ತಾರ ಗುರು ಪ್ರಕಾಶ್ ಪಾಸ್ವಾನ್, ಸ್ಥಳ–ಸಭಾಂಗಣ, ಆಯೋಜನೆ–ಮಂಥನ ಬೆಂಗಳೂರು, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 6

'ಬಹುಮುಖಿ ಅಮೆರಿಕ' ಪುಸ್ತಕ ಬಿಡುಗಡೆ: ಮಲ್ಲೇಪುರಂ ಜಿ.ವೆಂಕಟೇಶ್, ಭಾಗವಹಿಸುವವರು–ಹಿ.ಚಿ.ಬೋರಲಿಂಗಯ್ಯ, ವೇಮಗಲ್ ನಾರಾಯಣಸ್ವಾಮಿ, ಸಿರಿಗಂಧ ವಿ.ಶ್ರೀನಿವಾಸಮೂರ್ತಿ, ಬಿ.ಎಸ್. ವಿದ್ಯಾರಣ್ಯ, ಆಯೋಜನೆ–ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಪ್ರತಿಷ್ಠಾನ, ಚಾರುಮತಿ ಪ್ರಕಾಶನ, ಸ್ಥಳ–ನಯನ ಸಭಾಂಗಣ, ಸಂಜೆ 6.30

'ಸೋರ್ಡಿಡ್' ಇಂಗ್ಲಿಷ್ ನಾಟಕ ಪ್ರದರ್ಶನ: ಚಿತ್ರಕಥೆ ಮತ್ತು ನಿರ್ದೇಶನ–ವಿ.ಬಾಲಕೃಷ್ಣನ್, ಆಯೋಜನೆ–ರಂಗಭೂಮಿ ನಿಶಾ, ಸ್ಥಳ–ರಂಗಶಂಕರ, ಮಧ್ಯಾಹ್ನ 3.30 ಮತ್ತು ಸಂಜೆ 7

ತಂದೆ, ಮಹಿಳೆಯನ್ನು ಕೊಂದ ಪುತ್ರ

ಮೈಸೂರು: ಇಲ್ಲಿನ ಕೆ.ಜಿ.ಕೊಪ್ಪಲು ನಿವಾಸಿ ಸಾಗರ್ ಎಂಬಾತ ತನ್ನ ತಂದೆ ಶಿವಪ್ರಕಾಶ್ (56) ಹಾಗೂ ಅವರ ಸ್ನೇಹಿತೆ ಲತಾ (49) ಅವರನ್ನು ಬುಧವಾರ ರಾತ್ರಿ ಕೊಲೆ ಮಾಡಿ ಪರಾರಿಯಾಗಿದ್ದಾನೆ. ಅಕ್ರಮ ಸಂಬಂಧವೇ ಈ ಘಟನೆಗೆ ಕಾರಣ ಎನ್ನಲಾಗಿದೆ.

'ಶಿವಪ್ರಕಾಶ್ ಅವರು ಗುರುವಾರ ರಾತ್ರಿ ಸ್ನೇಹಿತೆ ಲತಾ ಅವರ ಮನೆಯಲ್ಲಿದ್ದಾಗ ಆರೋಪಿಯು ಒಳನುಗ್ಗಿ ಮಚ್ಚಿನಿಂದ ಮನಬಂದಂತೆ ಹಲ್ಲೆ ನಡೆಸಿದ. ತಡೆಯಲು ಬಂದ ಲತಾ ಅವರ ಕುತ್ತಿಗೆಗೂ ಮಚ್ಚಿನಿಂದ ಹೊಡೆದ. ಇಬ್ಬರೂ ಸ್ಥಳದಲ್ಲೇ ಮೃತಪಟ್ಟರು. ಮಹಿಳೆಯ ಪುತ್ರ ನಾಗಾರ್ಜುನ ಅವರ ಮೇಲೂ ಹಲ್ಲೆ ನಡೆಸಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

₹ 60 ಲಕ್ಷ ಮೌಲ್ಯದ ಮಾದಕ ವಸ್ತು ಜಪ್ತಿ–ಇಬ್ಬರ ಸೆರೆ

'ಡೆಲಿವರಿ ಬಾಯ್' ಸೋಗು: ಡ್ರಗ್ಸ್ ಸಾಗಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಹಾರ ಪೂರೈಕೆ ಆ್ಯಪ್‌ಗಳ 'ಡೆಲಿವರಿ ಬಾಯ್' ಸೋಗಿನಲ್ಲಿ ಡ್ರಗ್ಸ್ ಸರಬರಾಜು ಮಾಡುತ್ತಿದ್ದ ಜಾಲವನ್ನು ಸಿಸಿಬಿ ಪೊಲೀಸರು ಭೇದಿಸಿದ್ದು, ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

'ಜಾರ್ಖಂಡ್‌ನ ರವಿ ಹಾಗೂ ರವಿಪ್ರಕಾಶ್ ದಾಸ್ ಬಂಧಿತರು. ಅವರಿಂದ ₹ 60 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ. ಸಾಬೂನು, ಫೋಟೊ ಚೌಕಟ್ಟು, ಶುಭಾಶಯ ಪತ್ರ, ಪುಸ್ತಕ, ಹುಟ್ಟುಹಬ್ಬದ ಉಡುಗೊರೆ ಹಾಗೂ ಇತರೆ ವಸ್ತುಗಳಲ್ಲಿ ಮಾದಕ ಪದಾರ್ಥ ಬಚ್ಚಿಟ್ಟು ಗ್ರಾಹಕರಿಗೆ ನೀಡಲಾಗುತ್ತಿತ್ತು. ಇದರ ಮೂಲಕ ಆರೋಪಿಗಳು, ತಿಂಗಳಿಗೆ ಲಕ್ಷಾಂತರ ರೂಪಾಯಿ ಸಂಪಾದಿಸುತ್ತಿದ್ದರು' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಹೇಳಿದರು.

'ತಂತ್ರಜ್ಞಾನ ಬಳಕೆಯಲ್ಲಿ ಪರಿಣಿತರಾಗಿದ್ದ ಆರೋಪಿಗಳು, 'ಡಾರ್ಕ್‌ನೆಟ್' ಮೂಲಕ ವಿದೇಶದಲ್ಲಿರುವ ಡ್ರಗ್ಸ್ ಪೆಡ್ಲರ್‌ಗಳನ್ನು ಸಂಪರ್ಕಿಸುತ್ತಿದ್ದರು.



ಡ್ರಗ್ಸ್ ಬಚ್ಚಿಡಲಾಗಿದ್ದ ಉಡುಗೊರೆ ಪೊಟ್ಟಣಗಳು

ಆನ್‌ಲೈನ್‌ನಲ್ಲಿ 'ಬಿಟ್ ಕಾಯಿನ್' ಮೂಲಕ ಹಣ ಪಾವತಿಸುತ್ತಿದ್ದ ಆರೋಪಿಗಳು, ಪೆಡ್ಲರ್‌ಗಳಿಂದ ಡ್ರಗ್ಸ್ ತರಿಸಿಕೊಳ್ಳುತ್ತಿದ್ದರು. ಈ ಜಾಲ ಬೆಂಗಳೂರು ಮಾತ್ರವಲ್ಲದೇ ಹೊರ ರಾಜ್ಯಗಳಲ್ಲೂ ಸಕ್ರಿಯವಾಗಿರುವ ಮಾಹಿತಿ ಇದೆ' ಎಂದೂ ತಿಳಿಸಿದರು.

'ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಖಾಸಗಿ ಕಂಪನಿ ಉದ್ಯೋಗಿಗಳು ಹಾಗೂ ಇತರರು ಆರೋಪಿಗಳ ಗ್ರಾಹಕರಾಗಿದ್ದರು. ಪೊಲೀಸರಿಗೆ ಸುಳಿವು ಸಿಗದಂತೆ ಆರೋಪಿಗಳು, ತಮ್ಮದೇ ಜಾಲ ರೂಪಿಸಿಕೊಂಡು ಡ್ರಗ್ಸ್ ಪೂರೈಸುತ್ತಿದ್ದರು' ಎಂದೂ ಹೇಳಿದರು.

ಡೆಲಿವರಿ ಬಾಯ್ ಸಮವಸ್ತ್ರ; 'ಸ್ವಿಗ್ಗಿ, ಡೊನ್ಜೊ ಹಾಗೂ ಇತರೆ ಆ್ಯಪ್‌ಗಳ ಮೂಲಕ ಸಾವಿರಾರು ಡೆಲಿವರಿ ಬಾಯ್‌ಗಳು ಗ್ರಾಹಕರ ಮನೆಗೆ ಆಹಾರ ಪೂರೈಸುತ್ತಿದ್ದಾರೆ. ಬಹುಪಾಲು ಡೆಲಿವರಿ ಬಾಯ್‌ಗಳನ್ನು ಪೊಲೀಸರು ಹೆಚ್ಚು ತಪಾಸಣೆ ನಡೆಸುವುದಿಲ್ಲ. ಇದನ್ನೇ ಬಂಡವಾಳ ಮಾಡಿಕೊಂಡು ಆರೋಪಿಗಳು, ಡೆಲಿವರಿ ಬಾಯ್‌ಗಳ ಸೋಗಿನಲ್ಲಿ ಡ್ರಗ್ಸ್ ಮಾರುತ್ತಿದ್ದರು' ಎಂದೂ ಕಮಲ್ ಪಂತ್ ವಿವರಿಸಿದರು.

'ಡೆಲಿವರಿ ಬಾಯ್‌ಗಳ ಸಮವಸ್ತ್ರ ಧರಿಸುತ್ತಿದ್ದ ಆರೋಪಿಗಳು, ಕಂಪನಿ ಬ್ಯಾಗ್ ಜೊತೆಯಲ್ಲೇ ದ್ವಿಚಕ್ರ ವಾಹನದಲ್ಲಿ ಸುತ್ತಾಡುತ್ತಿದ್ದರು. ಈ ಮೂಲಕವೇ ಗ್ರಾಹಕರ ಮನೆ ಬಾಗಿಲಿಗೆ ನಿತ್ಯವೂ ಡ್ರಗ್ಸ್ ಪೂರೈಸುತ್ತಿದ್ದರು' ಎಂದೂ ಹೇಳಿದರು.

ಆ್ಯಪ್ ಮೂಲಕವೇ ಆರ್ಡರ್: 'ಬಂಧಿತ ಆರೋಪಿಗಳಾದ ರವಿ ಹಾಗೂ ರವಿಪ್ರಕಾಶ್, ದೆಹಲಿಯಲ್ಲಿರುವ ಪ್ರಮುಖ ಆರೋಪಿ ಸೂಚನೆಯಂತೆ ಕೆಲಸ ಮಾಡುತ್ತಿದ್ದರು. ಡ್ರಗ್ಸ್ ಆರ್ಡರ್ ಪಡೆಯಲೆಂದೇ ಪ್ರಮುಖ ಆರೋಪಿ, ಮೂರು ಆ್ಯಪ್‌ಗಳನ್ನು ಅಭಿವೃದ್ಧಿಪಡಿಸಿದ್ದ. ಇಂಥ ಆ್ಯಪ್‌ಗಳನ್ನು ಇನ್‌ಸ್ಟಾಲ್ ಮಾಡಿಕೊಳ್ಳುತ್ತಿದ್ದ ಗ್ರಾಹಕರು, ಅದರ ಮೂಲಕವೇ ಡ್ರಗ್ಸ್ ಖರೀದಿಗೆ ಆರ್ಡರ್ ನೀಡುತ್ತಿದ್ದರು' ಎಂದೂ ಕಮಲ್ ಪಂತ್ ತಿಳಿಸಿದರು.

'ಪೇಯಿಂಗ್ ಗೆಸ್ಟ್ ಕಟ್ಟಡದ ಮೇಲೆ ದಾಳಿ'

'ಬೆಳ್ಳಂದೂರು ಬಳಿಯ ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿ ನೆಲೆಸಿದ್ದ ಆರೋಪಿಗಳು, ತಮ್ಮ ಕೊಠಡಿಯಲ್ಲೇ ಡ್ರಗ್ಸ್ ಸಂಗ್ರಹಿಸಿಕೊಂಡಿದ್ದರು. ಜಾಲದ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆ ಸಿಸಿಬಿ ಅಧಿಕಾರಿಗಳ ತಂಡ, ಕಾರ್ಯಾಚರಣೆಗೆ ಇಳಿದಿತ್ತು. ಆರೋಪಿಗಳ ಕೊಠಡಿ ಮೇಲೆ ದಾಳಿ ಮಾಡಿತ್ತು' ಎಂದು ಸಿಸಿಬಿ ಜಂಟಿ ಕಮಿಷನರ್ ಸಂದೀಪ್ ಪಾಟೀಲ ವಿವರಿಸಿದರು.

'300 ಎಂಡಿಎಂಎ ಮಾತ್ರೆಗಳು, 100 ಎಲ್‌ಎಸ್‌ಡಿ ಕಾಗದ ಚೂರುಗಳು, 350 ಗ್ರಾಂ ಚರಸ್ ಹಾಗೂ 1 ಕೆ.ಜಿ 500 ಗ್ರಾಂ ಹೈಡ್ರೊ ಗಾಂಜಾವನ್ನು ಆರೋಪಿಗಳಿಂದ ಜಪ್ತಿ ಮಾಡಲಾಗಿದೆ. ಉಡುಗೊರೆ ಬಾಕ್ಸ್‌ಗಳು, ಸ್ವಿಗ್ಗಿ ಹಾಗೂ ಡನ್ಜೊ ಕಂಪನಿ ಡೆಲಿವರಿ ಬಾಯ್‌ಗಳ ಸಮವಸ್ತ್ರಗಳೂ ಆರೋಪಿಗಳ ಕೊಠಡಿಯಲ್ಲಿ ಸಿಕ್ಕಿವೆ' ಎಂದೂ ತಿಳಿಸಿದರು.

ಸುದ್ದಿ 2 ನಿಮಿಷ

ಪೊಲೀಸರ ಜನಸಂಪರ್ಕ ಸಭೆ ಇಂದು

ಬೆಂಗಳೂರು: ಜನರ ಸಮಸ್ಯೆ ಆಲಿಸಲು ನಗರದ ಪೊಲೀಸರು ಇಂದು (ಅ. 23) ಹಲವೆಡೆ 'ಮಾಸಿಕ ಜನಸಂಪರ್ಕ' ಸಭೆ ಆಯೋಜಿಸಿದ್ದಾರೆ.

ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಸಭೆ ನಡೆಯಲಿದೆ. ಪೊಲೀಸ್ ಇಲಾಖೆಗೆ ಸಂಬಂಧಪಟ್ಟ ಯಾವುದೇ ಸಮಸ್ಯೆಗಳು ಇದ್ದರೆ ಸಾರ್ವಜನಿಕರು ಸಭೆಯಲ್ಲಿ ಪ್ರಸ್ತಾಪಿಸಬಹುದು.

ವೈಯಾಲಿಕಾವಲ್ ಠಾಣೆಯಲ್ಲಿ ಕಮಿಷನರ್ ಕಮಲ್ ಪಂತ್, ಎಲೆಕ್ಟ್ರಾನಿಕ್ ಸಿಟಿ ಠಾಣೆಯಲ್ಲಿ ಹೆಚ್ಚುವರಿ ಪೊಲೀಸ್ ಕಮಿಷನರ್ ಎಸ್.ಮುರುಗನ್, ಸಂಜಯನಗರ ಠಾಣೆಯಲ್ಲಿ ಹೆಚ್ಚುವರಿ ಪೊಲೀಸ್ ಕಮಿಷನರ್ ಸೌಮೇಂದು ಮುಖರ್ಜಿ, ಚಾಮರಾಜಪೇಟೆಯ ಸಿಸಿಬಿ ಕಚೇರಿಯಲ್ಲಿ ಜಂಟಿ ಕಮಿಷನರ್ ಸಂದೀಪ್ ಪಾಟೀಲ ಹಾಗೂ ಹೆಣ್ಣೂರು ಠಾಣೆಯಲ್ಲಿ ಡಿಸಿಪಿ ಶರಣಪ್ಪ ನೇತೃತ್ವದಲ್ಲಿ ಸಭೆ ನಡೆಯಲಿದೆ.

'ಜನರ ಸಮಸ್ಯೆ ಇತ್ಯರ್ಥಪಡಿಸಿ ಜನಸ್ನೇಹಿ ಪೊಲೀಸ್ ವ್ಯವಸ್ಥೆ ರೂಪಿಸಲು ಮಾಸಿಕ ಜನಸಂಪರ್ಕ ಸಭೆ ಆಯೋಜಿಸಲಾಗಿದೆ. ಎಲ್ಲ ಡಿಸಿಪಿ, ಎಸಿಪಿ ಹಾಗೂ ಇನ್‌ಸ್ಪೆಕ್ಟರ್‌ಗಳು ಸಭೆಯಲ್ಲಿ ಹಾಜರಿರಲಿದ್ದಾರೆ' ಎಂದು ಕಮಲ್ ಪಂತ್ ತಿಳಿಸಿದ್ದಾರೆ.

'ಪರ್ವ' ನಾಟಕ: ಟಿಕೆಟ್‌ಗಳೆಲ್ಲ ಬಿಕರಿ



ಬೆಂಗಳೂರು: ಮೈಸೂರು ರಂಗಾಯಣ ಪ್ರಸ್ತುತಪಡಿಸುತ್ತಿರುವ 'ಪರ್ವ' ನಾಟಕವು ಇದೇ ಶನಿವಾರ ಮತ್ತು ಭಾನುವಾರ ಇಲ್ಲಿನ ರವೀಂದ್ರ ಕಲಾಕ್ಷೇತ್ರದಲ್ಲಿ ಬೆಳಿಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಪ್ರದರ್ಶನ ಕಾಣಲಿದ್ದು, ನಾಟಕದ ಎಲ್ಲ ಟಿಕೆಟ್‌ಗಳು ಬಿಕರಿ ಆಗಿವೆ.

ಸಾಹಿತಿ ಎಸ್.ಎಲ್. ಭೈರಪ್ಪ ಅವರ ಕಾದಂಬರಿ ಆಧರಿಸಿದ ಈ ನಾಟಕವನ್ನು ರಂಗಕರ್ಮಿ ಪ್ರಕಾಶ್ ಬೆಳವಾಡಿ ನಿರ್ದೇಶಿಸಿದ್ದಾರೆ. 8 ಗಂಟೆಗಳ ಈ ನಾಟಕದಲ್ಲಿ ಮಧ್ಯಾಹ್ನ ಊಟಕ್ಕೆ ಅರ್ಧಗಂಟೆ ಹಾಗೂ ತಲಾ 10 ನಿಮಿಷಗಳ ಮೂರು ಚಹಾ ವಿರಾಮ ನೀಡಲಾಗುತ್ತಿದೆ.

₹500 ಹಾಗೂ ₹250 ಟಿಕೆಟ್ ದರ ನಿಗದಿ ಪಡಿಸಿ, ಟಿಕೆಟ್‌ಗಳನ್ನು ರವೀಂದ್ರ ಕಲಾಕ್ಷೇತ್ರದ ಕೌಂಟರ್ ಹಾಗೂ ಆನ್‌ಲೈನ್ ಕೊಂಡಿ www.rangayana.orgನಲ್ಲಿ ಪಡೆಯಲು ಅವಕಾಶ ನೀಡಲಾಗಿತ್ತು.

'ಭೈರಪ್ಪ ಅವರ ಕಾದಂಬರಿಯ ದೊಡ್ಡದಾದ ಬಳಗವಿದೆ. ಮೈಸೂರಿನಲ್ಲಿ ಈ ನಾಟಕದ ಪ್ರದರ್ಶನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ನಿರೀಕ್ಷೆಯಂತೆ ಇಲ್ಲಿಯೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಸಿನಿಮಾದ ಟಿಕೆಟ್‌ಗಳನ್ನು ಖರೀದಿ ಮಾಡಿದಂತೆ ನಾಟಕದ ಟಿಕೆಟ್‌ಗಳನ್ನು ಖರೀದಿಸಿರುವುದು ಸಂತಸದ ಸಂಗತಿ. ಜನರ ಈ ಸ್ಪಂದನೆ ಹೊಸ ಭರವಸೆ ಮೂಡಿಸಿದೆ. ಈ ನಾಟಕ ಪ್ರದರ್ಶನದಿಂದ ಕಲಾಕ್ಷೇತ್ರಕ್ಕೂ ಹೊಸ ಕಳೆ ಬರಲಿದೆ' ಎಂದು ಮೈಸೂರು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ತಿಳಿಸಿದರು.

ರಸ್ತೆ ವಿಭಜಕಕ್ಕೆ ಗುದ್ದಿದ್ದ ಕಾರು: ಇಬ್ಬರಿಗೆ ಗಾಯ

ಬೆಂಗಳೂರು: ಹೊಸೂರು ರಸ್ತೆಯ ಸೇಂಟ್ ಜಾನ್ಸ್ ಆಸ್ಪತ್ರೆ ವೃತ್ತದಲ್ಲಿ ರಸ್ತೆ ವಿಭಜಕಕ್ಕೆ ಕಾರು ಗುದ್ದಿ ಉರುಳಿಬಿದ್ದಿದ್ದು, ಇಬ್ಬರು ಪ್ರಯಾಣಿಕರು ಗಾಯಗೊಂಡಿದ್ದಾರೆ.

'ಗುರುವಾರ ತಡರಾತ್ರಿ ಅಪಘಾತ ಸಂಭವಿಸಿದೆ. ಕಾರಿನಲ್ಲಿದ್ದ ಎರಡು ಏರ್‌ಬ್ಯಾಗ್‌ಗಳು ತೆರೆದುಕೊಂಡಿದ್ದರಿಂದ ಇಬ್ಬರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಮಡಿವಾಳ ಸಂಚಾರ ಠಾಣೆ ಪೊಲೀಸರು ಹೇಳಿದರು. 'ಪ್ರಕರಣ ದಾಖಲಿಸಿಕೊಂಡು ಕಾರು ಜಪ್ತಿ ಮಾಡಲಾಗಿದೆ. ಚಾಲಕನನ್ನು ವಿಚಾರಣೆ ನಡೆಸಬೇಕಿದೆ' ಎಂದೂ ಹೇಳಿದರು.

'ಸಿಎಎ ಪ್ರತಿಭಟನೆ: ಪೊಲೀಸರ ತಪ್ಪಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೌರತ್ವ ತಿದ್ದುಪಡಿ ಕಾಯ್ದೆ(ಸಿಎಎ) ವಿರುದ್ಧದ ಪ್ರತಿಭಟನೆ ವೇಳೆ ಮಂಗಳೂರಿನಲ್ಲಿ ನಡೆದ ಹಿಂಸಾಚಾರ ಮತ್ತು ಗುಂಡಿನ ದಾಳಿಯಲ್ಲಿ ಪೊಲೀಸರ ತಪ್ಪಿಲ್ಲ ಎಂಬ ಮ್ಯಾಜಿಸ್ಟೀರಿಯಲ್ ವಿಚಾರಣಾ ವರದಿಯನ್ನು ಒಪ್ಪಿಕೊಳ್ಳಲಾಗಿದೆ' ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿದೆ.

2019ರ ಡಿಸೆಂಬರ್ 19ರಂದು ನಡೆದಿದ್ದ ಹಿಂಸಾಚಾರದಲ್ಲಿ ಪೊಲೀಸರ ಗುಂಡಿನ ದಾಳಿಗೆ ಇಬ್ಬರು ಮೃತಪಟ್ಟಿದ್ದರು. ಪ್ರಕರಣದ ಬಗ್ಗೆ ಮ್ಯಾಜಿಸ್ಟೀರಿಯಲ್ ತನಿಖೆಗೆ ಸರ್ಕಾರ ಆದೇಶಿಸಿತ್ತು.

ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ಪೀಠಕ್ಕೆ ಈ ಬಗ್ಗೆ ವಿವರ ಸಲ್ಲಿಸಿದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಧ್ಯಾನ್ ಚಿನ್ನಪ್ಪ, 'ಈ ವರದಿಯನ್ನು ರಾಜ್ಯ ಸರ್ಕಾರ ಒಪ್ಪಿಕೊಂಡಿದೆ. ಪೊಲೀಸ್ ಸಿಬ್ಬಂದಿ ವಿರುದ್ಧದ ಆರೋಪಗಳನ್ನು ಕೂಡ ವಿಚಾರಣೆ ಮಾಡಲಾಗಿದೆ' ಎಂದು ಹೇಳಿದರು.

ಜುಲೈ 26ರ ವಿಚಾರಣೆ ವೇಳೆ ಈ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಪೀಠಕ್ಕೆ ಸಲ್ಲಿಸಿದ್ದ ಸರ್ಕಾರ, ಈ ವಿಷಯದಲ್ಲಿ ನಿರ್ಧಾರ ತೆಗೆದುಕೊಳ್ಳಲು ಸಮಯಾವಕಾಶ ಕೋರಿತ್ತು.

ಅರ್ಜಿದಾರರ ಪರ ಹಾಜರಿದ್ದ ವಕೀಲ ಪ್ರೊ. ರವಿವರ್ಮ ಕುಮಾರ್, 'ಪೊಲೀಸರ ವಿರುದ್ಧ ಕನಿಷ್ಠ 10 ದೂರುಗಳು ಸಲ್ಲಿಕೆಯಾಗಿವೆ. ಅವುಗಳಲ್ಲಿ ಒಂದನ್ನೂ ತನಿಖೆ ಮಾಡಿಲ್ಲ. ಹೈಕೋರ್ಟ್ ಸೂಚಿಸಿದ್ದರೂ, ಎಫ್‌ಐಆರ್ ದಾಖಲಿಸಿಲ್ಲ' ಎಂದು ಹೇಳಿದರು.

ನ್ಯಾಯಾಲಯ ನೀಡಿದ ಆದೇಶಗಳನ್ನು ಪಾಲಿಸಿರುವ ಬಗ್ಗೆ ಅನುಸರಣಾ ವರದಿ ಒಳಗೊಂಡ ಪ್ರಮಾಣ ಪತ್ರ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಪೀಠ ನಿರ್ದೇಶನ ನೀಡಿತು.

ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡ ರಚನೆ ಮಾಡಲು ನಿರ್ದೇಶನ ನೀಡುವಂತೆ ಕೋರಿ ಇತ್ತೀಚೆಗೆ ನಿಧನರಾದ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಮತ್ತು ಮಂಗಳೂರಿನ ಮಾಜಿ ಮೇಯರ್ ಕೆ. ಅಶ್ರಫ್ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಸ್ಥಳೀಯ ಪೊಲೀಸರು ಪಕ್ಷಪಾತ ಮಾಡಿದ್ದಾರೆ ಎಂದು ಆರೋಪಿಸಿದ್ದರು.

ಸಿಎಎ ವಿರುದ್ಧ ಪ್ರತಿಭಟನೆ ನಡೆಸುವ ನಿರೀಕ್ಷೆಯಲ್ಲಿ 2019ರ ಡಿಸೆಂಬರ್ 19 ರಂದು ಮಂಗಳೂರಿನಲ್ಲಿ ಸಿಆರ್‌ಪಿಸಿ ಸೆಕ್ಷನ್ 144 ಅಡಿಯಲ್ಲಿ ನಿಷೇಧಾಜ್ಞೆಯನ್ನು ಪೊಲೀಸರು ಜಾರಿಗೊಳಿಸಿದ್ದರು. ಅಂದು ನಡೆದ ಗುಂಡಿನ ದಾಳಿಯಲ್ಲಿ ಜಲೀಲ್ ಮತ್ತು ನೌಸೀನ್ ಎಂಬುವವರು ಮೃತಪಟ್ಟಿದ್ದರು.

ಜ್ಯೇಷ್ಠತೆ ಮೀರಿ ಬಿಲ್ ಪಾವತಿ: ಎಸಿಬಿಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಜ್ಯೇಷ್ಠತೆ ಮೀರಿ ಕಾಮಗಾರಿಗಳ ಬಿಲ್ ಪಾವತಿ ಮಾಡಿರುವ ಬಗ್ಗೆ ತನಿಖೆ ನಡೆಸುವಂತೆ ಒತ್ತಾಯಿಸಿ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ಎ.ಎಸ್. ನರಸಿಂಹಮೂರ್ತಿ ದೂರು ನೀಡಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ರಸ್ತೆ, ಮೇಲ್ಸೇತುವೆ, ವಿದ್ಯುತ್, ಕಸ ನಿರ್ವಹಣೆ, ಮೂಲ ಸೌಕರ್ಯ ಕಾಮಗಾರಿಗಳನ್ನು ಹಲವು ಗುತ್ತಿಗೆದಾರರು ನಿರ್ವಹಿಸಿದ್ದಾರೆ. 'ಬಿಲ್ ಪಾವತಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಜ್ಯೇಷ್ಠತೆ ಆಧಾರದಲ್ಲಿ ಬಿಡುಗಡೆ ಮಾಡಬೇಕಿದೆ. ಆದರೆ, ಬಿಬಿಎಂಪಿ ವಿಶೇಷ ಆಯುಕ್ತರು (ಹಣಕಾಸು) ನಿಯಮಗಳನ್ನು ಗಾಳಿಗೆ ತೂರಿದ್ದಾರೆ' ಎಂದು ಅವರು ದೂರಿದ್ದಾರೆ.

'ಎನ್‌ಸಿಸಿ ಲಿಮಿಟೆಡ್ ಸಂಸ್ಥೆಯ ₹28.61 ಕೋಟಿ ಬಿಲ್ ಅನ್ನು ತಡ ಮಾಡದೆ ಮತ್ತು ಉನ್ನತಾಧಿಕಾರಿಯ ಅನುಮೋದನೆ ಪಡೆಯದೆಯೇ ಪಾವತಿಸಿದ್ದಾರೆ. ಇದರಿಂದ ಇತರ ಗುತ್ತಿಗೆದಾರರಿಗೆ ಅನನುಕೂಲವಾಗಿದೆ. ಬಿಲ್ ಪಾವತಿಯ ಅಕ್ರಮದ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ಎಚ್‌ಎಸ್‌ಆರ್ ಬಡಾವಣೆಯಲ್ಲಿ ಕ್ಷುಲ್ಲಕ ಕಾರಣಕ್ಕೆ ಗಲಾಟೆ

ಮದ್ಯದ ಬಾಟಲಿಯಿಂದ ಹಲ್ಲೆ: ಉದ್ಯಮಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಸ್‌ಆರ್ ಬಡಾವಣೆ ಮೂರನೇ ಹಂತದಲ್ಲಿರುವ 'ಶಿಫ್ಟ್' ಬಾರ್ ಆ್ಯಂಡ್ ರೆಸ್ಟೋರೆಂಟ್‌ನಲ್ಲಿ ಕ್ಷುಲ್ಲಕ ಕಾರಣಕ್ಕಾಗಿ ಎರಡು ಗುಂಪುಗಳ ನಡುವೆ ಗಲಾಟೆ ನಡೆದಿದ್ದು, ಈ ಸಂಬಂಧ ಕೇರಳದ ಉದ್ಯಮಿ ಸೇರಿ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

'ಅ. 20ರಂದು ರಾತ್ರಿ ನಡೆದಿರುವ ಘಟನೆ ಕುರಿತು ಬೇಗೂರಿನ ಕೆ. ಸೂರ್ಯಕಾಂತ್ ದೂರು ನೀಡಿದ್ದಾರೆ. ಅದರನ್ವಯ ಉದ್ಯಮಿ ರಾಹುಲ್ ರಾಜ್ ಹಾಗೂ ಸ್ನೇಹಿತರಾದ ಯುವರಾಜ್, ಗಣೇಶ್‌ನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರಿಯಲ್ ಎಸ್ಟೇಟ್ ಉದ್ಯಮಿಯಾಗಿರುವ ದೂರುದಾರ ಸೂರ್ಯಕಾಂತ್, ಸ್ನೇಹಿತರ ಜತೆಗೂಡಿ ಊಟ ಮಾಡಲೆಂದು ಬಾರ್ ಆ್ಯಂಡ್ ರೆಸ್ಟೋರೆಂಟ್‌ಗೆ ಹೋಗಿದ್ದರು. ಆರೋಪಿಗಳು ಸಹ ತಮ್ಮ ಸ್ನೇಹಿತರೊಬ್ಬರ ಹುಟ್ಟುಹಬ್ಬ ಆಚರಿಸಲೆಂದು ಅಲ್ಲಿಗೆ ಬಂದಿದ್ದರು. ಪರಸ್ಪರ ಗುರಾಯಿಸಿದ್ದ ಕಾರಣಕ್ಕೆ ಶುರುವಾದ ಮಾತಿನ ಚಕಮಕಿ ಹಲ್ಲೆಯಲ್ಲಿ ಅಂತ್ಯ ಕಂಡಿತ್ತು.'

'ರಾತ್ರಿ 10.30ರ ಸುಮಾರಿಗೆ ಸೂರ್ಯಕಾಂತ್ ಅವರ ಸ್ನೇಹಿತರೊಬ್ಬರು ಮೂತ್ರ ವಿಸರ್ಜನೆಗೆಂದು ಶೌಚಾಲಯಕ್ಕೆ ತೆರಳಿದ್ದರು. ಅದಾಗಿ ಐದು ನಿಮಿಷಕ್ಕೆ ಸೂರ್ಯಕಾಂತ್ ಸಹ ಶೌಚಾಲಯಕ್ಕೆ ಹೋಗಿದ್ದರು.'

'ಶೌಚಾಲಯ ಬಳಿ ಸೂರ್ಯಕಾಂತ್ ಅವರನ್ನು ತಡೆದಿದ್ದ ಆರೋಪಿಗಳು, ಪುನಃ ಜಗಳ ತೆಗೆದು ಮಲಯಾಳ ಭಾಷೆಯಲ್ಲಿ ಬೈದಿದ್ದರು. 'ಏಕೆ ಬೈಯುತ್ತಿದ್ದೀರಾ' ಎಂಬುದಾಗಿ ದೂರುದಾರ ಕೇಳಿದ್ದಕ್ಕೆ ಗಲಾಟೆ ವಿಕೋಪಕ್ಕೆ ಹೋಗಿತ್ತು' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಬಾಟಲಿಗಳಿಂದ ಹೊಡೆದು ರಕ್ತಗಾಯ: 'ತಮ್ಮನ್ನು ಪ್ರಶ್ನಿಸಿದ್ದಕ್ಕೆ ಸಿಟ್ಟಾದ ಆರೋಪಿಗಳು, ಮದ್ಯದ ಬಾಟಲ್‌ಗಳಿಂದ ದೂರುದಾರರ ಮೇಲೆ ಹಲ್ಲೆ ಮಾಡಿದ್ದರು. ಕುತ್ತಿಗೆ, ಎಡ ಭುಜ ಹಾಗೂ ಎಡ ಕೈಗೆ ಬಾಟಲಿಯಿಂದ ಹೊಡೆದಿದ್ದರು ಎಂಬುದು ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹಲ್ಲೆಯಿಂದಾಗಿ ಸೂರ್ಯಕಾಂತ್ ತೀವ್ರವಾಗಿ ಗಾಯಗೊಂಡಿದ್ದರು. ಸ್ನೇಹಿತರು ಹಾಗೂ ಇತರರು, ಸೂರ್ಯಕಾಂತ್ ಅವರನ್ನು ಆಸ್ಪತ್ರೆಗೆ ಕರೆದು ದಾಖಲಿಸಿದ್ದರು' ಎಂದೂ ಮೂಲಗಳು ವಿವರಿಸಿವೆ.

'ವೈದ್ಯರು ನೀಡಿದ್ದ ಮಾಹಿತಿ ಆಧರಿಸಿ ಆಸ್ಪತ್ರೆಗೆ ಹೋಗಿ ಗಾಯಾಳುವಿನ ಹೇಳಿಕೆ ಪಡೆಯಲಾಯಿತು. ಅಕ್ರಮವಾಗಿ ಗುಂಪು ಸೇರಿದ್ದ (ಐಪಿಸಿ 149), ಹಲ್ಲೆ (ಐಪಿಸಿ 323), ಬಾಟಲಿಯಿಂದ ಹಲ್ಲೆ (ಐಪಿಸಿ 324), ಅಕ್ರಮವಾಗಿ ತಡೆದ (ಐಪಿಸಿ 341), ಉದ್ದೇಶಪೂರ್ವಕವಾಗಿ ಶಾಂತಿ ಕದಡಿದ (ಐಪಿಸಿ 504) ಹಾಗೂ ಜೀವ ಬೆದರಿಕೆ (ಐಪಿಸಿ 506) ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದೂ ಹೇಳಿವೆ.

'ಬಾರ್ ಆ್ಯಂಡ್ ರೆಸ್ಟೋರೆಂಟ್ ವಿರುದ್ಧ ಪ್ರಕರಣ'

'ಕೊರೊನಾ ಸೋಂಕು ತಡೆಗಾಗಿ ನಗರದಲ್ಲಿ ರಾತ್ರಿ ಕರ್ಫ್ಯೂ ಜಾರಿಯಲ್ಲಿದೆ. ಅಷ್ಟಾದರೂ, ರಾತ್ರಿ 10.30ರವರೆಗೂ ಬಾರ್ ಆ್ಯಂಡ್ ರೆಸ್ಟೋರೆಂಟ್ ತೆರೆದಿತ್ತು. ಇದರ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಅಬಕಾರಿ ನಿಯಮಗಳನ್ನೂ ಬಾರ್ ಆ್ಯಂಡ್ ರೆಸ್ಟೋರೆಂಟ್ ಉಲ್ಲಂಘಿಸಿದೆ. ಅದರ ವಿರುದ್ಧ ಕ್ರಮ ಕೈಗೊಳ್ಳುವಂತೆ ಅಬಕಾರಿ ಇಲಾಖೆ ಅಧಿಕಾರಿಗಳಿಗೂ ಪತ್ರ ಬರೆಯಲಾಗಿದೆ' ಎಂದೂ ತಿಳಿಸಿದರು.

ಅಪರಾಧ ಸುದ್ದಿ

'ಶಿಳ್ಳೆ' ನೆಪದಲ್ಲಿ ಗಲಾಟೆ

'ವೈಷಮ್ಯ ಬೆಳೆದಿದ್ದರಿಂದ ಹಲ್ಲೆ ಮಾಡಲು ಆರೋಪಿಗಳು ಕಾಯುತ್ತಿದ್ದರು. ಕುಡಿದ ಮತ್ತಿನಲ್ಲಿದ್ದ ಆರೋಪಿಗಳು, ಶೌಚಾಲಯಕ್ಕೆ ಬಂದ ಸೂರ್ಯಕಾಂತ್ ಜೊತೆ ಶಿಳ್ಳೆ ವಿಚಾರಕ್ಕಾಗಿ ಜಗಳ ತೆಗೆದು ಹಲ್ಲೆ ಮಾಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಘಟನೆ ಬಗ್ಗೆ ಹೇಳಿಕೆ ನೀಡಿರುವ ಆರೋಪಿಗಳು, 'ನಮ್ಮ ಜೊತೆಗೆ ಬಂದಿದ್ದ ಸ್ನೇಹಿತೆಯನ್ನು ಸೂರ್ಯಕಾಂತ್ ಹಾಗೂ ಅವರ ಸ್ನೇಹಿತರು, ಚುಡಾಯಿಸಿದ್ದರು. ಅದನ್ನು ಪ್ರಶ್ನಿಸಿದ್ದಕ್ಕೆ ಹರಿಹಾಯ್ದರು. ಅದಕ್ಕೆ ಅವರ ಮೇಲೆ ಹಲ್ಲೆ ಮಾಡಿದೆವು' ಎಂಬುದಾಗಿ ಹೇಳಿಕೆ ನೀಡಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಗೃಹಿಣಿ ಆತ್ಮಹತ್ಯೆ: ಸಂಬಂಧಿಕರ ಪ್ರತಿಭಟನೆ

ಬೆಂಗಳೂರು: ಗಿರಿನಗರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ನಿತ್ಯಶ್ರೀ ಎಂಬುವರು ನೇಣು ಹಾಕಿಕೊಂಡು ಶುಕ್ರವಾರ ಆತ್ಮಹತ್ಯೆ ಮಾಡಿಕೊಂಡಿದ್ದು, ಅವರ ಮೃತದೇಹ ಸಾಗಿಸದಂತೆ ತಡೆದು ಸಂಬಂಧಿಕರು ಕೆಲ ಹೊತ್ತು ಪ್ರತಿಭಟನೆ ನಡೆಸಿದರು.

'ಪಾಂಡವಪುರದ ನಿತ್ಯಶ್ರೀ ಅವರನ್ನು ನಗರದ ನಿವಾಸಿ ರಾಜೇಶ್ ಎಂಬಾತನೊಂದಿಗೆ 2019ರಲ್ಲಿ ಮದುವೆ ಮಾಡಿಕೊಡಲಾಗಿತ್ತು. ದಂಪತಿಗೆ ಒಂದು ವರ್ಷದ ಮಗು ಇದೆ. ಪತಿ, ಅತ್ತೆ- ಮಾವ ಜೊತೆ ನಿತ್ಯಶ್ರೀ ದ್ವಾರಕನಗರದಲ್ಲಿ ವಾಸವಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದಂಪತಿ ನಡುವೆ ಆಗಾಗ ಜಗಳ ನಡೆಯುತ್ತಿತ್ತು. ಕಿರುಕುಳದಿಂದ ನಿತ್ಯಶ್ರೀ ಮಾನಸಿಕ ಹಾಗೂ ದೈಹಿಕವಾಗಿ ನೊಂದಿದ್ದರು. ಅವರು ಮನೆಯಲ್ಲೇ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದೂ ತಿಳಿಸಿವೆ.

ಕೊಲೆ ಆರೋಪ: ಸಾವಿನ ಸುದ್ದಿ ತಿಳಿದ ನಿತ್ಯಶ್ರೀ ಅವರ ಸಂಬಂಧಿಕರು ಪಾಂಡವಪುರದಿಂದ ದ್ವಾರಕನಗರದ ಮನೆಗೆ ಬಂದಿದ್ದರು. 'ಇದು ಕೊಲೆ. ಪತಿ ಹಾಗೂ ಆತನ ತಂದೆ–ತಾಯಿಯೇ ಸಂಚು ರೂಪಿಸಿ ಕೊಲೆ ಮಾಡಿದ್ದಾರೆ. ಅವರನ್ನು ಬಂಧಿಸಿ ಶಿಕ್ಷಿಸಬೇಕು' ಎಂದು ಆಗ್ರಹಿಸಿದರು. ಮೃತದೇಹವನ್ನು ಆಸ್ಪತ್ರೆಗೆ ಸಾಗಿಸದಂತೆ ತಡೆದ ಸಂಬಂಧಿಕರು, ಮನೆ ಎದುರೇ ಕುಳಿತು ಕೆಲ ಹೊತ್ತು ಪ್ರತಿಭಟನೆ ನಡೆಸಿದರು.

ಸ್ಥಳಕ್ಕೆ ಬಂದ ಪೊಲೀಸ್ ಅಧಿಕಾರಿಗಳು, 'ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಬೇಕು. ಕರ್ತವ್ಯಕ್ಕೆ ಸಹಕರಿಸಿ. ನಿಮ್ಮ ದೂರು ನೀಡಿ, ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು. ಪತಿ ರಾಜೇಶ್‌ನನ್ನೂ ವಶಕ್ಕೆ ಪಡೆದರು. ಬಳಿಕವೇ ಸಂಬಂಧಿಕರು ಪ್ರತಿಭಟನೆ ಕೈಬಿಟ್ಟರು. ಗೃಹಿಣಿಯ ಮೃತದೇಹವನ್ನು ಕಿಮ್ಸ್ ಆಸ್ಪತ್ರೆಗೆ ಸಾಗಿಸಲಾಯಿತು.

ಉದ್ಯೋಗದ ಆಮಿಷ: ₹ 10 ಲಕ್ಷ ವಂಚಿಸಿದ್ದ 6 ಮಂದಿ ಸೆರೆ

ಹೊಸಕೋಟೆ: ಸರ್ಕಾರಿ ಉದ್ಯೋಗ ಕೊಡಿಸುವುದಾಗಿ ನಂಬಿಸಿ ₹ 10 ಲಕ್ಷ ಪಡೆದು ವಂಚಿಸಿದ್ದ ಆರು ಮಂದಿ ಆರೋಪಿಗಳನ್ನು ಹೊಸಕೋಟೆ ಪೊಲೀಸರು ಬಂಧಿಸಿದ್ದಾರೆ.

ಬಳ್ಳಾರಿ ಮೂಲದ ಎಚ್.ವಿ. ಅಜಯ್ ಕುಮಾರ್(41), ಬೆಂಗಳೂರಿನ ಬಿದರಹಳ್ಳಿ ಹೋಬಳಿ ಆವಲಹಳ್ಳಿಯ ಜ್ಞಾನಮೂರ್ತಿ(42), ಮಾಲೂರು ತಾಲ್ಲೂಕಿನ ಮಾಸ್ತಿಯ ಬಿ.ಕೆ. ರವೀಂದ್ರ (36), ಬೈರಸಂದ್ರ ಗ್ರಾಮದ ಮುರುಗೇಶ್ (27), ಕುಡಿಯನೂರು ಗ್ರಾಮದ ಜಿ. ಮುನಿರಾಜು (33) ಹಾಗೂ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಮೂಲದ ಆರ್. ಕುಮಾರಸ್ವಾಮಿ (38) ಬಂಧಿತರು.

ಆರೋಪಿಗಳಿಂದ ₹ 7.14 ಲಕ್ಷ ನಗದು, ಎರಡು ಕಾರು, 2 ವಾಕಿಟಾಕಿ, ಒಂದು ಲಾಟಿ, ಒಂದು ಮಿಲ್ಟ್ರಿ ಟೋಪಿ ಹಾಗೂ 6 ಮೊಬೈಲ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಯಲಹಂಕ ಅಗ್ರಹಾರದಲ್ಲಿ ಆರೋಪಿಗಳು ವಾಸಿಸುತ್ತಿದ್ದರು. ಪ್ರಮುಖ ಆರೋಪಿ ಶಿವಕುಮಾರ್ ಪರಾರಿಯಾಗಿದ್ದಾನೆ.

ಆಹಾರ ಇಲಾಖೆ ಜಾಗೃತ ದಳದ ಕಾರ್ಯಾಚರಣೆ

ಪಡಿತರ ಕಳ್ಳಸಾಗಣೆ: ನಾಲ್ಕು ಲಾರಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಬೆಲೆ ಅಂಗಡಿಗಳಿಗೆ ಪೂರೈಕೆಯಾಗಬೇಕಿದ್ದ ಪಡಿತರ ಅಕ್ಕಿ, ರಾಗಿಯನ್ನು ಮಾರ್ಗ ಮಧ್ಯದಲ್ಲೇ ವಾಹನ ಬದಲಿಸಿ ಕಾಳಸಂತೆಗೆ ಸಾಗಿಸಲು ಯತ್ನಿಸುತ್ತಿದ್ದ ಪ್ರಕರಣ ಪತ್ತೆಹಚ್ಚಿರುವ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ರಾಜ್ಯಮಟ್ಟದ ಜಾಗೃತ ದಳ, ನಾಲ್ಕು ಲಾರಿ, 50 ಚೀಲ ಅಕ್ಕಿ ಹಾಗೂ 300 ಕ್ವಿಂಟಲ್ ರಾಗಿಯನ್ನು ವಶಪಡಿಸಿಕೊಂಡಿದೆ.

ನಗರದ ಯಲಚೇನಹಳ್ಳಿ ಮೆಟ್ರೊ ರೈಲು ನಿಲ್ದಾಣಕ್ಕೆ ಸಮೀಪದಲ್ಲಿರುವ ದೊಡ್ಡಮನೆ ಕೈಗಾರಿಕಾ ಪ್ರದೇಶದಲ್ಲಿ ಪಡಿತರ ಸಾಗಣೆ ಲಾರಿಗಳಿಂದ ಬೇರೆ ವಾಹನಗಳಿಗೆ ಪಡಿತರ ಧಾನ್ಯ ತುಂಬಿಸುತ್ತಿದ್ದರು. ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿದ ಜಾಗೃತ ದಳದ ಮುಖ್ಯಸ್ಥ ಡಾ.ಕೆ. ರಾಮೇಶ್ವರಪ್ಪ ನೇತೃತ್ವದ ತಂಡ, ನಾಲ್ಕು ಲಾರಿ ಹಾಗೂ ಆಹಾರ ಧಾನ್ಯಗಳನ್ನು ವಶಪಡಿಸಿಕೊಂಡಿದೆ.




ಯಲಚೇನಹಳ್ಳಿ ಬಳಿ ಶುಕ್ರವಾರ ವಶಪಡಿಸಿಕೊಂಡ ಪಡಿತರ ಧಾನ್ಯ ತುಂಬಿದ ಲಾರಿಗಳೊಂದಿಗೆ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ರಾಜ್ಯಮಟ್ಟದ ಜಾಗೃತ ದಳದ ಮುಖ್ಯಸ್ಥ ಡಾ.ರಾಮೇಶ್ವರಪ್ಪ ಮತ್ತು ತಂಡ

'ನ್ಯಾಯಬೆಲೆ ಅಂಗಡಿಗಳಿಗೆ ತಲುಪಬೇಕಿದ್ದ ಪಡಿತರ ಧಾನ್ಯವನ್ನು ಶ್ರೀನಿವಾಸ್ ಎಂಬುವವರು ಪ್ರದೀಪ್ ಕುಮಾರ್ ಮತ್ತು ನಯಾಜ್ ಎಂಬುವವರಿಗೆ ಮಾರಾಟ ಮಾಡಿರುವುದು ಕಂಡುಬಂದಿದೆ. ಈ ಇಬ್ಬರೂ ಪಡಿತರ ಅಕ್ಕಿ ಮತ್ತು ರಾಗಿಯನ್ನು ಕಾಳಸಂತೆಗೆ ಸಾಗಿಸಲು ಯತ್ನಿಸುತ್ತಿದ್ದಾಗ ವಶಕ್ಕೆ ಪಡೆಯಲಾಗಿದೆ' ಎಂದು ಆಹಾರ ಇಲಾಖೆ ಮೂಲಗಳು ತಿಳಿಸಿವೆ.

ವಶಪಡಿಸಿಕೊಳ್ಳಲಾದ ಲಾರಿಗಳು ಶಬ್ಬೀರ್ ಅಹಮ್ಮದ್, ಯತೀಶ್ ಕುಮಾರ್, ಚಾಂದ್ ಪಾಷ ಮತ್ತು ಲಕ್ಷ್ಮೀನರಸಿಂಹಯ್ಯ ಎಂಬುವವರಿಗೆ ಸೇರಿದವು. ಪಡಿತರ ಧಾನ್ಯಗಳ ಮಾದರಿ ಸಂಗ್ರಹಿಸಲಾಗಿದೆ. ಎಲ್ಲರ ವಿರುದ್ಧವೂ ಅಗತ್ಯ ವಸ್ತುಗಳ ಕಾಯ್ದೆ ಹಾಗೂ ಪಡಿತರ ನಿರ್ವಹಣೆ ಆದೇಶಗಳ ಅಡಿಯಲ್ಲಿ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಬ್ಬರ ವಿರುದ್ಧ ಎಫ್‌ಐಆರ್: ಪಡಿತರ ಧಾನ್ಯ ಕಳ್ಳಸಾಗಣೆಯ ಮತ್ತೊಂದು ಪ್ರಕರಣ ಮಾಗಡಿ ರಸ್ತೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಗುರುವಾರ ಪತ್ತೆಯಾಗಿದ್ದು, ಮೌಲಾ ಮತ್ತು ನಯಾಜ್ ಎಂಬುವವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಮಾಗಡಿ ರಸ್ತೆ ಪೊಲೀಸ್ ಠಾಣೆ ವ್ಯಾಪ್ತಿಯ ಸ್ಥಳವೊಂದರಲ್ಲಿ ಪಡಿತರ ಧಾನ್ಯಗಳ ಚೀಲವನ್ನು ಬೇರೆ ವಾಹನಕ್ಕೆ ತುಂಬಿಸಿ ಸಾಗಿಸುತ್ತಿರುವ ಕುರಿತು ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ತೆರಳಿದ್ದ ಪೊಲೀಸರು ಲಾರಿ ಸಮೇತ ಪಡಿತರ ಧಾನ್ಯ ವಶಕ್ಕೆ ಪಡೆದಿದ್ದರು. ಇಬ್ಬರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಸುಭಾಷಿತ

ಹಡಗು ದಡದಲ್ಲಿ ಯಾವಾಗಲೂ ಸುರಕ್ಷಿತವಾಗಿಯೇ ಇರುತ್ತದೆ. ಆದರೆ, ಅದನ್ನು ನಿರ್ಮಿಸಿದ ಉದ್ದೇಶ ಅದಾಗಿರುವುದಿಲ್ಲ.

-ಆಲ್ಬರ್ಟ್ ಐನ್‌ಸ್ಟೀನ್

ಕೋವಿಡ್ ಲಸಿಕೆ: ಅರ್ಧ ಹಾದಿ ಇನ್ನೂ ಕ್ರಮಿಸಿಲ್ಲ ಎಂಬ ಎಚ್ಚರ ಅಗತ್ಯ

ಒಂದೂವರೆ ವರ್ಷದಿಂದ ಜಗತ್ತನ್ನು ಇನ್ನಿಲ್ಲದಂತೆ ಕಾಡಿದ ಕೋವಿಡ್–19 ಸಾಂಕ್ರಾಮಿಕ ವಿರುದ್ಧದ ಲಸಿಕೆ ಅಭಿಯಾನದಲ್ಲಿ ಭಾರತ ಗುರುವಾರ ಮಹತ್ವದ ಘಟ್ಟವೊಂದನ್ನು ದಾಟಿ ಸಂಭ್ರಮಿಸಿದೆ. ಕೋವಿಡ್ ವಿರುದ್ಧದ ಲಸಿಕೆಯ ನೂರು ಕೋಟಿ ಡೋಸ್‌ಗಳನ್ನು ಜನರಿಗೆ ಹಾಕಲಾಗಿದೆ. ರೋಗ ಬಂದ ನಂತರ ಚಿಕಿತ್ಸೆಗೆ ಒಡ್ಡಿಕೊಳ್ಳುವುದಕ್ಕಿಂತ ರೋಗ ಬಾರದಂತೆ ತಡೆಯುವುದೇ ಉತ್ತಮ ಎಂಬುದು ಎಲ್ಲರೂ ಒಪ್ಪತಕ್ಕ ಮಾತು. ಕೋವಿಡ್–19 ಸಾಂಕ್ರಾಮಿಕದ ಸಂದರ್ಭದಲ್ಲಿ ಈ ಮಾತು ಹೆಚ್ಚಿನ ಜನರಿಗೆ ಮನದಟ್ಟಾಗಿದೆ. ಸೋಂಕು ತಡೆಯುವುದಕ್ಕೆ ಲಸಿಕೆ ಹಾಕಿಸಿಕೊಳ್ಳುವುದು ಅತ್ಯುತ್ತಮ ಅಸ್ತ್ರ. ಕೋವಿಡ್ ವಿಚಾರದಲ್ಲಿಯೂ ಅದು ನಿಜ. ಹಾಗಾಗಿಯೇ, ನೂರು ಕೋಟಿ ಡೋಸ್ ಲಸಿಕೆ ನೀಡಿರುವುದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದಂತೆ 'ಐತಿಹಾಸಿಕ'. ಕೋವಿಡ್‌ನಿಂದಾಗಿ ಜಗತ್ತು ಅಯೋಮಯವಾಗಿದ್ದಾಗ ವಿಜ್ಞಾನ ಜಗತ್ತು ಲಸಿಕೆ ಅಭಿವೃದ್ಧಿಗಾಗಿ ಕಣ್ಣು ನೆಟ್ಟು ಕುಳಿತಿತ್ತು. ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ (ಐಸಿಎಂಆರ್) ಮತ್ತು ಹೈದರಾಬಾದ್‌ನ ಭಾರತ್ ಬಯೋಟೆಕ್ ಜತೆಯಾಗಿ ಅತ್ಯಂತ ತ್ವರಿತವಾಗಿ ಕೋವ್ಯಾಕ್ಸಿನ್ ಲಸಿಕೆಯನ್ನು ಅಭಿವೃದ್ಧಿಪಡಿಸಿದ್ದು ಸಣ್ಣ ಸಾಧನೆ ಏನಲ್ಲ. ಈ ಲಸಿಕೆ ಅಭಿವೃದ್ಧಿ ಆಗದೇ ಇದ್ದಿದ್ದರೆ ಜಗತ್ತು ಕಂಡ ಅತ್ಯಂತ ದೊಡ್ಡ ಸಾಂಕ್ರಾಮಿಕಕ್ಕೆ ತನ್ನದೇ ಲಸಿಕೆ ಇಲ್ಲದೆ ಭಾರತವು ಒದ್ದಾಡುವ ಸ್ಥಿತಿ ಉಂಟಾಗುತ್ತಿತ್ತು. ಲಸಿಕೆ ಅಭಿಯಾನದಲ್ಲಿ ಭಾರತದ ಈಗಿನ ಮೈಲಿಗಲ್ಲಿಗೆ ವಿಜ್ಞಾನ ಮತ್ತು ಉದ್ಯಮದ ನಡುವಣ ಸಹಯೋಗ ನೀಡಿದ ಕೊಡುಗೆ ಸಣ್ಣದೇನಲ್ಲ. ಕೋವಿಶೀಲ್ಡ್ ಲಸಿಕೆ ಅಭಿವೃದ್ಧಿಪಡಿಸಿದ ಬ್ರಿಟನ್‌ನ ಆಸ್ಟ್ರಾಜೆನೆಕಾ ಕಂಪನಿಯ ಜತೆಗೆ ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ, ಲಸಿಕೆ ಅಭಿವೃದ್ಧಿಯ ಮೊದಲೇ ಮಾಡಿಕೊಂಡಿದ್ದ ಒಪ್ಪಂದವೇ ಲಸಿಕೆ ಅಭಿಯಾನದಲ್ಲಿ ಭಾರತದ ಯಶಸ್ಸಿಗೆ ಬಹುಮುಖ್ಯ ಕಾರಣ. ಏಕೆಂದರೆ, ಭಾರತದಲ್ಲಿ ನೀಡಲಾದ ಲಸಿಕೆಯಲ್ಲಿ ಶೇ 80ರಷ್ಟಕ್ಕೂ ಹೆಚ್ಚನ್ನು ಸೀರಂ ಸಂಸ್ಥೆಯು ಪೂರೈಸಿದೆ. ಲಸಿಕೆ ಅಭಿಯಾನದಲ್ಲಿ ಭಾಗಿಯಾದ ಆರೋಗ್ಯ ಕಾರ್ಯಕರ್ತರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಗೂ ದೇಶದ ಜನರ ಪಾತ್ರವು ಕಡಿಮೆ ಏನಲ್ಲ.



ಈ ಶತಮಾನದ ಅತ್ಯಂತ ಭೀಕರ ಸಾಂಕ್ರಾಮಿಕದಿಂದ ಜನರನ್ನು ರಕ್ಷಿಸುವುದನ್ನೇ ಮುಖ್ಯ ಧ್ಯೇಯವಾಗಿ ಇರಿಸಿಕೊಂಡು ಸರ್ಕಾರ ಕೆಲಸ ಮಾಡಬೇಕು

ಯಾವುದೇ ಯಶಸ್ಸು ಮೈಮರೆವಿಗೆ ಕಾರಣವಾಗುವುದು ಸಹಜ. ಆದರೆ, ಭಾರತವು ಇಂದು ಮೈಮರೆಯುವಂತಹ ಸ್ಥಿತಿ ಇಲ್ಲ. ಬಹುದೊಡ್ಡ ಸಾಧನೆ ಮಾಡಿದ್ದೇವೆ ಎಂದು ಬೆನ್ನು ತಟ್ಟಿಕೊಳ್ಳುವಂತೆಯೂ ಇಲ್ಲ. ನೆರೆಯ ಚೀನಾ ದೇಶವು ಲಸಿಕೆಯ 223.87 ಕೋಟಿ ಡೋಸ್‌ಗಳನ್ನು ಜನರಿಗೆ ಹಾಕಿಸಿದೆ. ಆ ದೇಶದಲ್ಲಿ ಪ್ರತೀ ನೂರು ಜನರಿಗೆ ಹಾಕಲಾದ ಲಸಿಕೆ ಪ್ರಮಾಣವು 152 ಡೋಸ್‌ಗೂ ಹೆಚ್ಚು. ಭಾರತದಲ್ಲಿ ಈ ಪ್ರಮಾಣವು 71.5 ಮಾತ್ರ. ದೇಶದ 18 ವರ್ಷಕ್ಕಿಂತ ಮೇಲಿನ ಶೇ 31ರಷ್ಟು ಜನರಿಗೆ ಮಾತ್ರ ಲಸಿಕೆಯ ಎರಡೂ ಡೋಸ್ ನೀಡಲಾಗಿದೆ. ಉಳಿದವರಿಗೆ ಎರಡನೇ ಡೋಸ್ ನೀಡಲು ಇನ್ನೂ ಸಾಧ್ಯವಾಗಿಲ್ಲ. ಎರಡೂ ಡೋಸ್ ಲಸಿಕೆ ಹಾಕಿದರೆ ಮಾತ್ರ ಕೋವಿಡ್‌ನಿಂದ ಪೂರ್ಣ ರಕ್ಷಣೆ ದೊರೆಯುತ್ತದೆ ಎಂದು ಇತ್ತೀಚೆಗೆ ನಡೆದ ಅಧ್ಯಯನಗಳು ಹೇಳಿವೆ. ಮಕ್ಕಳನ್ನೂ ಸೇರಿಸಿದರೆ ಭಾರತದ ಜನಸಂಖ್ಯೆ 136 ಕೋಟಿಗೂ ಹೆಚ್ಚು. ನಮಗೆ ಲಸಿಕೆಯ 272 ಕೋಟಿ ಡೋಸ್‌ಗಳು ಬೇಕಾಗಿವೆ. ಈಗಿನ ವೇಗದಲ್ಲಿ ಲಸಿಕೆ ಅಭಿಯಾನವು ನಡೆದರೆ ಎಲ್ಲರಿಗೂ ಎರಡು ಡೋಸ್ ಲಸಿಕೆ ಹಾಕಿಸಲು 479 ದಿನಗಳು ಬೇಕು. ಕೋವಿಡ್ ಹರಡುವಿಕೆಯ ವೇಗ ಮತ್ತು ಅದು ಉಂಟುಮಾಡಬಲ್ಲ ಅನಾಹುತವನ್ನು ಗಣನೆಗೆ ತೆಗೆದುಕೊಂಡರೆ ಲಸಿಕೆ ಅಭಿಯಾನದಲ್ಲಿ ಭಾರತವು ಹಿಂದುಳಿದಿದೆ ಎಂದೇ ವಿಷಾದದಿಂದ ಹೇಳಬೇಕಾಗುತ್ತದೆ.

ದೇಶದ ವಿವಿಧ ಭಾಗಗಳಲ್ಲಿ ಶಾಲೆ–ಕಾಲೇಜುಗಳು ಆರಂಭವಾಗಿವೆ. ಮಕ್ಕಳು ಶಾಲೆಗೆ ಹೋಗಲು ಆರಂಭಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಮಕ್ಕಳಿಗೂ ಲಸಿಕೆ ಹಾಕಿಸಿ ಕೋವಿಡ್‌ನಿಂದ ರಕ್ಷಣೆ ಒದಗಿಸಬೇಕಾದ ಗುರುತರ ಹೊಣೆಗಾರಿಕೆ ಇದೆ. ಮಕ್ಕಳಿಗೆ ತುರ್ತು ಸಂದರ್ಭದಲ್ಲಿ ಬಳಸುವುದಕ್ಕಾಗಿ ಝೈಕೋವ್–ಡಿ ಮತ್ತು ಕೋವ್ಯಾಕ್ಸಿನ್‌ಗೆ ಅನುಮೋದನೆ ದೊರೆತಿದೆ. ಲಸಿಕೆ ಹಾಕಿಸಬೇಕಾದ ಮಕ್ಕಳ ಸಂಖ್ಯೆ ಸುಮಾರು 44 ಕೋಟಿ ಎಂದು ಗುರುತಿಸಲಾಗಿದೆ. ಈ ಮಕ್ಕಳಿಗೆ ಲಸಿಕೆ ಹಾಕಿಸುವಿಕೆಗೆ ನಿರ್ದಿಷ್ಟವಾದ ಯೋಜನೆಯನ್ನು ರೂಪಿಸಲಾಗಿಲ್ಲ. ದೇಶೀಯವಾಗಿ ಅಭಿವೃದ್ಧಿಪಡಿಸಲಾದ ಕೋವ್ಯಾಕ್ಸಿನ್‌ಗೆ ವಿಶ್ವ ಆರೋಗ್ಯ ಸಂಸ್ಥೆ ಮತ್ತು ಅಂತರರಾಷ್ಟ್ರೀಯ ಸಮುದಾಯದ ಮಾನ್ಯತೆ ಇನ್ನೂ ದೊರೆತಿಲ್ಲ. ಈ ಲಸಿಕೆ ಹಾಕಿಸಿಕೊಂಡವರು ವಿದೇಶಕ್ಕೆ ಮುಕ್ತವಾಗಿ ಹೋಗುವುದಕ್ಕೆ ಅವಕಾಶ ಇಲ್ಲ. ಕೋವ್ಯಾಕ್ಸಿನ್‌ಗೆ ಬೇಗ ಮಾನ್ಯತೆ ದೊರಕಿಸುವುದಕ್ಕಾಗಿ ಕೇಂದ್ರ ಸರ್ಕಾರದ ಕಡೆಯಿಂದ ಹೆಚ್ಚಿನ ಮುತುವರ್ಜಿ ಕಂಡುಬಂದಿಲ್ಲ. ದೇಶದ ಮುಂದೆ ಸವಾಲುಗಳು ಇನ್ನೂ ಹಲವಿವೆ. ವಿವಿಧ ರೂಪಾಂತರಗಳಿಗೆ ಲಸಿಕೆ ಪರಿಣಾಮಕಾರಿಯೇ ಎಂಬ ಅಧ್ಯಯನಗಳೂ ವ್ಯಾಪಕವಾಗಿ ನಡೆಯಬೇಕಿದೆ. ಈಗ ಹಾಕಲಾಗುತ್ತಿರುವ ಲಸಿಕೆಗಳು ಎಷ್ಟು ಕಾಲ ಪರಿಣಾಮಕಾರಿ ಎಂಬುದೂ ಸ್ಪಷ್ಟವಿಲ್ಲ. ಒಂದು ವೇಳೆ ನಿರ್ದಿಷ್ಟ ಅವಧಿಯ ನಂತರ ರೋಗನಿರೋಧಕ ಶಕ್ತಿ ಕುಗ್ಗುತ್ತದೆ ಎಂದಾದರೆ, ಮೂರನೇ ಡೋಸ್ ಬೇಕಾಗುತ್ತದೆ. ಈ ಬಗ್ಗೆಯೂ ಸ್ಪಷ್ಟತೆ ಇಲ್ಲ. ಹಾಗಾಗಿ, ಲಸಿಕೆಯ ನೂರು ಕೋಟಿ ಡೋಸ್‌ನ ಸಂಭ್ರಮದ ನಡುವೆಯೂ ಅತ್ಯಂತ ಎಚ್ಚರದಲ್ಲಿ ಸರ್ಕಾರ ಮತ್ತು ಜನರು ಇರಬೇಕು. ಈ ಶತಮಾನದ ಅತ್ಯಂತ ಭೀಕರ ಸಾಂಕ್ರಾಮಿಕದಿಂದ ಜನರನ್ನು ರಕ್ಷಿಸುವುದನ್ನೇ ಮುಖ್ಯ ಧ್ಯೇಯವಾಗಿ ಇರಿಸಿಕೊಂಡು ಸರ್ಕಾರವು ಕೆಲಸ ಮಾಡಬೇಕು. ಕೋವಿಡ್ ವಿರುದ್ಧದ ಹೋರಾಟದಲ್ಲಿ ಅರ್ಧ ಹಾದಿಯನ್ನೂ ಕ್ರಮಿಸಿಲ್ಲ ಎಂಬುದು ಗಮನದಲ್ಲಿ ಇರಬೇಕು.

ದಿನದ ಟ್ವೀಟ್


ದುರದೃಷ್ಟಕರ ನಡೆ



ಲಖಿಂಪುರ– ಖೇರಿಯಲ್ಲಿ ಕಾರಿನಡಿಗೆ ಸಿಲುಕಿ ರೈತರು ಮೃತಪಟ್ಟ ಘಟನೆ ಬಳಿಕ ಹತ್ಯೆಯಾದ ಬಿಜೆಪಿ ಬೆಂಬಲಿಗರ ಕುಟುಂಬದವರನ್ನು ಭೇಟಿ ಮಾಡಿದ್ದಕ್ಕಾಗಿ ಯೋಗೇಂದ್ರ ಯಾದವ್ ಅವರನ್ನು ಸಂಯುಕ್ತ ಕಿಸಾನ್ ಮೋರ್ಚಾ ಅಮಾನತುಗೊಳಿಸಿರುವುದು ಅತ್ಯಂತ ದುರದೃಷ್ಟಕರ. ಯಾದವ್ ಅವರ ಮಾನವೀಯ ನಡೆಯನ್ನು ಅಹಿಂಸೆ ಮತ್ತು ಗಾಂಧಿ ಪ್ರಿಯರೆಲ್ಲರೂ ಪ್ರಶಂಸಿಸಬೇಕು.

ಪ್ರಶಾಂತ್ ಭೂಷಣ್, ಸುಪ್ರೀಂ ಕೋರ್ಟ್ ವಕೀಲ

ಕಿಡಿನುಡಿ



ಇನ್ನೂ 50 ವರ್ಷ ಕಾಂಗ್ರೆಸ್‌ನವರಿಗೆ ಅಡ್ರೆಸ್ ಇರುವುದಿಲ್ಲ. ಕಾಂಗ್ರೆಸ್ ಮುಖಂಡರು ತಮ್ಮ ಮೊಮ್ಮಕ್ಕಳಿಗೆ 'ನಾವಂತೂ ಮುಳುಗಿ ಹೋಗಿದ್ದೇವೆ. ನೀವಾದರೂ ಬಿಜೆಪಿಗೆ ಸೇರಿಕೊಳ್ಳಿ' ಎಂದು ಸಲಹೆ ನೀಡಬೇಕಾಗುತ್ತದೆ.

ಬಿ.ಎಸ್.ಯಡಿಯೂರಪ್ಪ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಬುಧವಾರ, 23-10-1996

• ಕಣ್ಮನ ಸೆಳೆದ ಜಂಬೂ ಸವಾರಿ

ಮೈಸೂರು, ಅ. 22– ಹತ್ತು ದಿನಗಳ ಮೈಸೂರು ದಸರಾದ ಶೃಂಗ ಕಾರ್ಯಕ್ರಮವಾದ ವಿಶ್ವವಿಖ್ಯಾತ ಜಂಬೂ ಸವಾರಿ ಇಂದು ಅತ್ಯಂತ ಆಕರ್ಷಕವಾಗಿ ನಡೆದು ಲಕ್ಷಾಂತರ ಜನರ ಮನಸ್ಸನ್ನು ಸೂರೆಗೊಂಡಿತು.

ಎಂಟುನೂರ ಐವತ್ತು ಕೆ.ಜಿ. ಚಿನ್ನದ ಅಂಬಾರಿಯಲ್ಲಿ ಶೃಂಗಾರಗೊಂಡಿದ್ದ ಚಾಮುಂಡೇಶ್ವರಿಯನ್ನು ಹೊತ್ತ 60 ವರ್ಷದ ವೃದ್ಧ ದ್ರೋಣ ಗಾಂಭೀರ್ಯದಿಂದ ಅರಮನೆಯ ಆವರಣದಲ್ಲಿ ಹೆಜ್ಜೆ ಹಾಕುತ್ತಿದ್ದಂತೆ ಪರಂಪರಾಗತ ಹಬ್ಬವಾದ ದಸರಾದ ಕೊನೆಯ ಅಂಕ ಮುಗಿಯಿತು.

ಮಳೆ ಮೋಡಗಳ ಕಣ್ಣುಮುಚ್ಚಾಲೆಯಲ್ಲಿ ಸೃಷ್ಟಿಯಾದ ಆತಂಕದ ನಡುವೆಯೇ ಈ ಬಾರಿಯ ದಸರಾ ಸಾಗಿತು. ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನೇ ಹೊತ್ತು ತಂದ ಪ್ರತೀ ಜಿಲ್ಲೆಯ ತಂಡಗಳ ಕಲಾಭಿವ್ಯಕ್ತಿಯ ನಡುವೆ ಜಂಬೂ ಸವಾರಿಯ ವೈಭವ ಸಾಗಿತು.

• ಭಾರತಕ್ಕೆ ಜಯ ತಂದುಕೊಟ್ಟ ಶ್ರೀನಾಥ್, ಕುಂಬ್ಳೆ

ಬೆಂಗಳೂರು, ಅ. 22– ಭಾರತ ತಂಡದವರು ಟೈಟನ್ ಕಪ್ ತ್ರಿಕೋನ ಸರಣಿ ಕ್ರಿಕೆಟ್ ಪಂದ್ಯದಲ್ಲಿ ಆಸ್ಟ್ರೇಲಿಯಾದ ಎದುರು ಎರಡು ವಿಕೆಟ್‌ಗಳ ಜಯ ಗಳಿಸಿದರು.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ನಡೆಸಿದ ಆಸ್ಟ್ರೇಲಿಯಾ ತಂಡದವರು 50 ಓವರ್‌ಗಳಲ್ಲಿ ಏಳು ವಿಕೆಟ್‌ಗಳನ್ನು ಕಳೆದುಕೊಂಡು 215 ರನ್ ಗಳಿಸಿದರೆ, ನಂತರ ಬ್ಯಾಟಿಂಗ್‌ಗೆ ಇಳಿದ ಭಾರತದವರು 48.5 ಓವರುಗಳಲ್ಲಿ ಎಂಟು ವಿಕೆಟ್‌ಗಳನ್ನು ಕಳೆದುಕೊಂಡು 216 ರನ್ ಗಳಿಸಿದರು.

50 ವರ್ಷಗಳ ಹಿಂದೆ

ಶನಿವಾರ, 23-10-1971

• ನ. 1ರಂದು ಜಿಲ್ಲಾ ಮಟ್ಟದಲ್ಲಿ ಕನ್ನಡ ಆಡಳಿತ ಭಾಷೆ ಎಂದು ಸಾರಲು ಕರೆ

ಬೆಂಗಳೂರು, ಅ. 22– ನವೆಂಬರ್ ಒಂದರಂದು (ರಾಜ್ಯೋತ್ಸವದಂದು) ಕನ್ನಡ ಜನತೆಯ ಬಯಕೆಯನ್ನು ಗಮನಿಸಿ ಜಿಲ್ಲಾ ಮಟ್ಟದಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಘೋಷಿಸಬೇಕೆಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರು ರಾಜ್ಯಪಾಲ ಶ್ರೀ ಧರ್ಮವೀರ ಅವರನ್ನು ಕೋರಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, 'ಕನ್ನಡನಾಡು ಇನ್ನೂ ಪೂರ್ಣವಾಗಿ ಒಂದಾಗಿಲ್ಲ– ಹೊರನಾಡಿನ ಕನ್ನಡಿಗರ ಸ್ಥಿತಿಗತಿ ತೃಪ್ತಿಕರವಾಗಿಲ್ಲ' ಎಂದೂ ಅವರು ಹೇಳಿದ್ದಾರೆ.

• ಶಾಲಾ ಶಿಕ್ಷಕರಿಗೆ ಪ್ರಶಸ್ತಿ ನೀಡಿಕೆಗೆ ಸರ್ಕಾರದ ಒಪ್ಪಿಗೆ

ಬೆಂಗಳೂರು, ಅ. 22– ರಾಜ್ಯದ ಪ್ರಾಥಮಿಕ ಹಾಗೂ ಸೆಕೆಂಡರಿ ಶಾಲಾ ಶಿಕ್ಷಕರಿಗೆ 1971–72ನೇ ಸಾಲಿನ ಪ್ರಶಸ್ತಿ ನೀಡುವ ಬಗ್ಗೆ ಸರ್ಕಾರ ತನ್ನ ಒಪ್ಪಿಗೆಯನ್ನು ನೀಡಿದೆ.

ಈ ವಿಚಾರವನ್ನು ಇಂದು ವರದಿಗಾರರಿಗೆ ತಿಳಿಸಿದ ರಾಜ್ಯಪಾಲ ಶ್ರೀ ಧರ್ಮವೀರ ಅವರು, ಪ್ರಶಸ್ತಿ ಪಡೆಯುವ ಶಿಕ್ಷಕರಿಗೆ 300 ರೂ. ನಗದು ಹಾಗೂ ಸರ್ಟಿಫಿಕೇಟುಗಳನ್ನು ನೀಡಲಾಗುವುದು ಎಂದರು.

ಬಸವಳಿಯುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ತರುಣ ಪಡೆ ಜೀವ ತುಂಬಬಲ್ಲದೇ?

ಪ್ರಿಯಾಂಕಾ ಝಳಪಿಸಿದ ಮಹಿಳಾ ಕಾರ್ಡ್



ವಿಶ್ಲೇಷಣೆ

ನಟರಾಜ್ ಹುಳಿಯಾರ್

ಈಚೆಗೆ ರೈತ ಚಳವಳಿಗಾರರ ಮೇಲೆ ದುರಹಂಕಾರದಿಂದ ವಾಹನ ಚಲಾಯಿಸಿ ಕೊಂದ ಭೀಕರ ದೌರ್ಜನ್ಯವನ್ನು ಖಂಡಿಸಿ ಲಖಿಂಪುರಕ್ಕೆ ಹೊರಟಿದ್ದ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಮೇಲೆ ಉತ್ತರ ಪ್ರದೇಶ ಸರ್ಕಾರವು ಪೊಲೀಸರನ್ನು ಛೂಬಿಟ್ಟಿತು. ಸರ್ಕಾರಕ್ಕೆ ದಿಟ್ಟ ಉತ್ತರ ಕೊಟ್ಟ ಪ್ರಿಯಾಂಕಾ ಹೊಸ ಇಮೇಜ್ ವೈರಲ್ ಆಗಿದೆ.

ಎರಡು ವರ್ಷಗಳ ಕೆಳಗೆ ಕೂಡ ಉತ್ತರ ಪ್ರದೇಶದ ಸಾಮಾಜಿಕ ಕಾರ್ಯಕರ್ತರೊಬ್ಬರ ಮೇಲೆ ಹಲ್ಲೆಯಾದಾಗ ಅವರ ಮನೆಗೆ ಭೇಟಿ ಕೊಡಲು ಹೊರಟ ಪ್ರಿಯಾಂಕಾ ಅವರನ್ನು ಪೊಲೀಸರು ತಡೆದಿದ್ದರು; ಕಾಂಗ್ರೆಸ್ ಕಾರ್ಯಕರ್ತನ ಸ್ಕೂಟರನ್ನೇರಿ ಪ್ರಿಯಾಂಕಾ ಗುರಿ ತಲುಪಿದ್ದರು. ಕಳೆದ ವರ್ಷ ಹತ್ರಾಸ್‌ನಲ್ಲಿ ಅತ್ಯಾಚಾರಕ್ಕೆ ಬಲಿಯಾದ ಅಮಾಯಕ ಹುಡುಗಿಯ ಮನೆಗೆ ಭೇಟಿ ಕೊಡಲು ಹೊರಟಿದ್ದ ಪ್ರಿಯಾಂಕಾ, ರಾಹುಲ್ ಇಬ್ಬರನ್ನೂ ಪೊಲೀಸರು ತಡೆದಿದ್ದರು. ಇದೀಗ ಪ್ರಿಯಾಂಕಾ ಜೊತೆ ಸೆಲ್ಫಿ ಕ್ಲಿಕ್ಕಿಸಿಕೊಂಡ ಉತ್ತರಪ್ರದೇಶದ ತರುಣ ಮಹಿಳಾ ಪೊಲೀಸರ ಮೇಲೆ ಅಧಿಕಾರಿಗಳು ಗರಂ ಆಗಿದ್ದಾರೆ... ಇವೆಲ್ಲ ಪ್ರಿಯಾಂಕಾ ಅವರ ಹೊಸ ಇಮೇಜಿಗೆ ಹೆದರಿದ ಸರ್ಕಾರಿ ವ್ಯವಸ್ಥೆಯ ಬೆದರು ನಡೆಗಳಲ್ಲದೆ ಮತ್ತೇನು?!


ಅಂತೂ ಪ್ರಿಯಾಂಕಾ ಕೊನೆಗೂ ಪೂರ್ಣ ಪ್ರಮಾಣದ ರಾಜಕೀಯಕ್ಕೆ ಧುಮುಕಿದ್ದಾರೆ. ಮೊನ್ನೆ ಅಮರಿಂದರ್ ಸಿಂಗ್ ಅವರನ್ನು ಕೆಳಗಿಳಿಸಿ, ಪಂಜಾಬಿನ ಮೊದಲ ದಲಿತ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರನ್ನು ಆರಿಸಿದ್ದರಲ್ಲೂ ಪ್ರಿಯಾಂಕಾ ನಿರ್ಧಾರ ಕೆಲಸ ಮಾಡಿದೆ ಎನ್ನಲಾಗುತ್ತಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಪರಿಣಾಮ ಮಾಡದ ಪ್ರಿಯಾಂಕಾ ಈ ಸಲ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ಸಿನ ಮುಖ್ಯಮಂತ್ರಿ ಅಭ್ಯರ್ಥಿಯಂತೆಯೇ ಮುನ್ನುಗ್ಗುತ್ತಿರುವುದು ಪಕ್ಷದ ಕಾರ್ಯಕರ್ತರಲ್ಲಿ ಹೊಸ ನಿರೀಕ್ಷೆಯನ್ನಂತೂ ಹುಟ್ಟಿಸಿದೆ.

ಈ ನಿರೀಕ್ಷೆಗೆ ಬಲ ತುಂಬುವಂತೆ ಪ್ರಿಯಾಂಕಾ ಹಠಾತ್ತನೆ ಮಹಿಳಾ ಕಾರ್ಡ್ ಚಲಾಯಿಸಿದ್ದಾರೆ; ಉತ್ತರಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಶೇಕಡ 40 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲಿದೆ ಎಂದು ಘೋಷಿಸಿದ್ದಾರೆ. ಈ ಘೋಷಣೆ ಈಚೆಗೆ ನಿಶ್ಚಿತ ಮತದಾರ ವಲಯವಿಲ್ಲದ ಕಾಂಗ್ರೆಸ್ಸಿನ ಅನಿವಾರ್ಯ ಜೂಜಿನಂತೆಯೂ ಕಾಣುತ್ತಿದೆ! 'ವಿಧಾನಸಭಾ ಚುನಾವಣೆಗೆ ನಿಲ್ಲುತ್ತೀರಾ' ಎಂಬ ಪ್ರಶ್ನೆಗೆ ಪ್ರಿಯಾಂಕಾ, 'ಯಾಕಾಗಬಾರದು?' ಎಂದಿದ್ದಾರೆ; ವಿಧಾನಸಭೆಯ ನೇರ ಚುನಾವಣೆಯನ್ನು ಎದುರಿಸದಿರುವ 'ಉತ್ತರ ಪ್ರದೇಶದ ಹಾಲಿ ಮುಖ್ಯಮಂತ್ರಿಯ ಎದುರು ಚುನಾವಣೆಗೆ ನಿಲ್ಲುತ್ತೀರಾ' ಎಂಬ ಪ್ರಶ್ನೆಗೂ ಪ್ರಿಯಾಂಕಾ 'ಯಾಕಾಗಬಾರದು?' ಎಂದಿದ್ದಾರೆ. ಉತ್ತರಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಪ್ರಿಯಾಂಕಾ ಅವರು ಪಕ್ಷವನ್ನು ಮುನ್ನಡೆಸುತ್ತಾ, ಅಲ್ಲಿ ಸ್ಪರ್ಧಿಸುವುದು ಬಹುತೇಕ ಗ್ಯಾರಂಟಿಯಾಗಿದೆ; ಹೊಸ ತಲೆಮಾರಿನ ಕೈಗೆ ನಾಯಕತ್ವವನ್ನು ದಾಟಿಸಲೇಬೇಕಾದ ಅನಿವಾರ್ಯವನ್ನು ಕಾಂಗ್ರೆಸ್ ಒಪ್ಪಿಕೊಳ್ಳಲೇಬೇಕಾಗಿದೆ.

ಕಾಂಗ್ರೆಸ್ಸಿನಲ್ಲಿ ಹೊಸ ನಾಯಕಿಯೊಬ್ಬರು ಮೂಡುತ್ತಿರುವ ಈ ಕಾಲದಲ್ಲಿ ಕನ್ಹಯ್ಯ ಕುಮಾರ್ ಥರದ ಹೊಸ ತಲೆಮಾರಿನ ಹುಡುಗರು ಕಾಂಗ್ರೆಸ್ ಸೇರುತ್ತಿದ್ದಾರೆ. ಜಿಗ್ನೇಶ್ ಮೇವಾನಿ ಥರದ ಫೈರ್ ಬ್ರ್ಯಾಂಡ್ ಹಿಂದುಳಿದ ನಾಯಕ ಕಾಂಗ್ರೆಸ್ ಬೆಂಬಲಿಸುತ್ತಿದ್ದಾರೆ. ಈ ಇಬ್ಬರೂ ಇಡೀ ದೇಶದಲ್ಲೇ ಹೊಸ ತಲೆಮಾರಿನ ಸಮಾನತಾಭಾವದ ಹುಡುಗ, ಹುಡುಗಿಯರ ಹೊಸ ಐಕನ್‌ಗಳಾಗಿ ಬೆಳೆದಿದ್ದಾರೆ. ಉತ್ತರಪ್ರದೇಶ ಕಾಂಗ್ರೆಸ್ಸಿನ ತರುಣ ಅಧ್ಯಕ್ಷ ಅಜಯ್ ಕುಮಾರ್ ಲಲ್ಲು ನಿರಂತರ ಪ್ರತಿಭಟನೆಗಳ ಮೂಲಕ ಸುದ್ದಿಯಲ್ಲಿದ್ದಾರೆ. ಇನ್ನು ಪ್ರಧಾನಮಂತ್ರಿ ಸ್ಥಾನ ಕುರಿತಂತೆ ಈವರೆಗಿನ ಸಮೀಕ್ಷೆಗಳಲ್ಲಿ ರಾಹುಲ್ ಗಾಂಧಿ ಎರಡನೆಯ ಸ್ಥಾನದಲ್ಲಂತೂ ಇದ್ದೇ ಇದ್ದಾರೆ. ಬಿಜೆಪಿ ನಿರಂತರವಾಗಿ ರಾಹುಲ್ ಮೇಲೆ ದಾಳಿ, ಗೇಲಿ ಮಾಡುತ್ತಿರುವುದಕ್ಕೆ ಅವರ ಪ್ರಭಾವ ಬೆಳೆಯುತ್ತಿರುವ ಬಗೆಗಿನ ಭಯವೇ ಮೂಲ ಕಾರಣ.

ಹೀಗೆ ತಯಾರಾಗುತ್ತಿರುವ ಹೊಸ ತಲೆಮಾರಿನ ಕಾಂಗ್ರೆಸ್ ಜೊತೆಗೆ ಬಿಹಾರದ ನವನಾಯಕ ತೇಜಸ್ವಿ ಯಾದವ್, ಎಂ.ಕೆ.ಸ್ಟಾಲಿನ್ ಥರದ ಜನಪ್ರಿಯ ನಾಯಕರೂ ಇದ್ದಾರೆ. ಉತ್ತರಪ್ರದೇಶದಲ್ಲಿ ಪುನಃ ಅಧಿಕಾರ ಹಿಡಿಯಲು ತೀವ್ರ ಪ್ರಯತ್ನ ನಡೆಸಿರುವ ಅಖಿಲೇಶ್ ಸಂದರ್ಭ ಬಂದರೆ ಕಾಂಗ್ರೆಸ್ ಜೊತೆ ಹೋಗಬಲ್ಲರು. ಪಶ್ಚಿಮ ಬಂಗಾಳದಂತೆಯೇ ಈಶಾನ್ಯ ರಾಜ್ಯಗಳಲ್ಲೂ ತಳವೂರಿ, ಮುಂಬರುವ ಲೋಕ ಸಭಾ ಚುನಾವಣೆಯಲ್ಲಿ 60-70 ಸ್ಥಾನಗಳನ್ನು ಪಕ್ಕಾ ಮಾಡಿಕೊಳ್ಳಲು ಮುನ್ನುಗ್ಗುತ್ತಿರುವ ತೃಣಮೂಲ ಕಾಂಗ್ರೆಸ್ ಕೂಡ ಕಾಂಗ್ರೆಸ್ ಜೊತೆಗೆ ಹೋಗಬಲ್ಲದು.


ಇಂಥ ಸಾಧ್ಯತೆಗಳ ಸ್ಥಿತಿಯಲ್ಲೂ ಕಾಂಗ್ರೆಸ್ ತನಗೊಬ್ಬ ಹೊಸ ಡೈನಮಿಕ್ ರಾಷ್ಟ್ರೀಯ ಅಧ್ಯಕ್ಷರನ್ನು ಹುಡುಕಿಕೊಳ್ಳಲು ಆಗದಿರುವುದು ವಿಚಿತ್ರ. ಕಾಂಗ್ರೆಸ್ಸಿನಲ್ಲಿ ಬೇರು ಬಿಟ್ಟು, ಈಗ ಸಾವಿರ ವೋಟುಗಳನ್ನೂ ತರಲಾಗದ ಕೆಲವಾದರೂ ಮುದಿಗೊಡ್ಡು ಮರಗಳು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಿಂದ ಹೊರಬರದಿದ್ದರೆ, ಕಾಂಗ್ರೆಸ್ ಮರುಜೀವ ಪಡೆಯುವುದು ಕಷ್ಟ. ಹಾಗೆಂದು ಹಿರಿಯರನ್ನೆಲ್ಲ ಅಂಚಿಗೆ ತಳ್ಳಿದರೂ ಕಾಂಗ್ರೆಸ್ಸಿಗೆ ಕಷ್ಟ. ಕಮಲ್‌ನಾಥ್, ದಿಗ್ವಿಜಯ ಸಿಂಗ್, ಅಶೋಕ್ ಗೆಹ್ಲೋತ್ ಥರದ ಸ್ಟ್ರ್ಯಾಟಜಿ ಮಾಸ್ಟರುಗಳು ಪಕ್ಷಕ್ಕೆ ಅನಿವಾರ್ಯ. ಕರ್ನಾಟಕದಲ್ಲೂ ಸಿದ್ದರಾಮಯ್ಯನವರ ಥರದ ಹಿರಿಯರ ಅನುಭವ ಹಾಗೂ ಜನಮನ್ನಣೆಯ ಬಲವಿಲ್ಲದೆ ಕಾಂಗ್ರೆಸ್ ಗೆಲ್ಲಲು ಸಾಧ್ಯವಿಲ್ಲ. ಆದರೆ ಈ ಹಿರಿಯ ನಾಯಕರ ಜೊತೆಗೇ ತರುಣ ನಾಯಕರಿಗೆ ಹಾದಿ ಮಾಡಿಕೊಡುವ ಕೆಲಸವನ್ನೂ ಕಾಂಗ್ರೆಸ್ ದೊಡ್ಡ ಮಟ್ಟದಲ್ಲೇ ಮಾಡಬೇಕಾಗಿದೆ. ರಾಜಸ್ಥಾನ, ಮಧ್ಯಪ್ರದೇಶದಲ್ಲಿ ಹಿರಿಯ–ಕಿರಿಯರ ತಿಕ್ಕಾಟದಿಂದಲೇ ಕಾಂಗ್ರೆಸ್ ಸೊರಗುತ್ತಿದೆ. ಮೊದಲು ರಾಜ್ಯಗಳಲ್ಲಿ ಗಟ್ಟಿಯಾಗಿ, ನಂತರ ಕೇಂದ್ರದತ್ತ ಸಾಗುವ ರಾಜಕಾರಣಕ್ಕೆ ಮರಳುವುದು ಕಾಂಗ್ರೆಸ್ಸಿಗೆ ಈಗ ಅನಿವಾರ್ಯ.



ಈ ಸಲ ಹರಿಯಾಣ, ಪಂಜಾಬ್, ಉತ್ತರ ಪ್ರದೇಶ ಚುನಾವಣೆಗಳಲ್ಲಿ ರೈತ ಚಳವಳಿಯ ಪ್ರಭಾವವೂ ನಿರ್ಣಾಯಕವಾಗಲಿದೆ. ಕಾಂಗ್ರೆಸ್ ರೈತಪರ ಪಕ್ಷವಲ್ಲದಿದ್ದರೂ ಆಡಳಿತ ವಿರೋಧಿ ಅಲೆಯ ಲಾಭ ಕಾಂಗ್ರೆಸ್ಸಿಗೂ ಸಿಗಲಿದೆ. ಇಂಥ ಸಂದರ್ಭದಲ್ಲಿ ಪ್ರಿಯಾಂಕಾ ಮಹಿಳಾ ಕಾರ್ಡ್ ಕೊನೆಯಪಕ್ಷ ಶೇಕಡ ಐದರಷ್ಟು ಹೆಚ್ಚಿನ ಮತಗಳನ್ನು ಪಕ್ಷದೆಡೆಗೆ ತಿರುಗಿಸಿಕೊಂಡರೂ ಅದೊಂದು ಪವಾಡವೇ. ಮಮತಾ ಬ್ಯಾನರ್ಜಿ ಮಹಿಳಾ ಮತಗಳನ್ನು ಒಗ್ಗೂಡಿಸಿಕೊಂಡು ಗೆದ್ದರು; ಮಹಿಳಾ ಮತಗಳ ಒಗ್ಗೂಡಿಕೆಯಲ್ಲಿ ಒಡಿಶಾದ ನವೀನ್ ಪಟ್ನಾಯಕ್, ಬಿಹಾರದ ನಿತೀಶ್ ಕುಮಾರ್ ಯಶಸ್ವಿಯಾಗಿದ್ದಾರೆ. ಇಂಥ ಪ್ರಯೋಗಕ್ಕಿಳಿದಿರುವ ಪ್ರಿಯಾಂಕಾ ಈ ದಿಸೆಯಲ್ಲಿ ಎಸ್‌ಪಿ, ಬಿಎಸ್‌ಪಿ, ಆರ್‌ಜೆಡಿ ಪಕ್ಷಗಳು ಎತ್ತುತ್ತಲೇ ಇರುವ ಜಾತ್ಯಾಧಾರಿತ ಮಹಿಳಾ ಮೀಸಲಾತಿಯನ್ನೂ ಟಿಕೆಟ್ ಹಂಚಿಕೆಯಲ್ಲೇ ಸಾಧಿಸಿಬಿಟ್ಟರೆ, ಅದು ಕ್ರಾಂತಿಕಾರಕವಾದ ಜಾಣ ನಡೆಯಾಗಬಲ್ಲದು. ಕಾಂಗ್ರೆಸ್ಸಿನ ಕಾಲದಲ್ಲಿ ಜಾರಿಗೆ ಬಂದ ಸ್ಥಳೀಯ ಸಂಸ್ಥೆಗಳ ಮಹಿಳಾ ಮೀಸಲಾತಿಯ ಫಲವಾಗಿ ಉತ್ತರಪ್ರದೇಶದಲ್ಲೂ ಎಲ್ಲ ಜಾತಿಗಳಿಂದಲೂ ದಕ್ಷ ನಾಯಕಿಯರು ಹೊರಹೊಮ್ಮಿದ್ದಾರೆ. ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯಿತಿಗಳ ಸದಸ್ಯರಾಗಿ, ಅಧ್ಯಕ್ಷಿಣಿಯರಾಗಿ ಕೆಲಸ ಮಾಡಿರುವ ಈ ಹೊಸ ನಾಯಕಿಯರು ಶಾಸಕಿಯರಾಗಿ, ಸಚಿವೆಯರಾಗಿ, ಮುಖ್ಯಮಂತ್ರಿಯಾಗಿ ಯಾಕೆ ರೂಪುಗೊಳ್ಳಲಾರರು? ಉತ್ತರಪ್ರದೇಶದಲ್ಲಿ ಪ್ರಿಯಾಂಕಾ ಸವಾಲಿನಿಂದಾಗಿ, ಇತರ ರಾಜಕೀಯ ಪಕ್ಷಗಳ ಟಿಕೆಟ್ ಹಂಚಿಕೆಯಲ್ಲೂ ಮಹಿಳಾ ಮೀಸಲಾತಿ ಜಾರಿಯಾಗತೊಡಗಿದರೆ ಮಹಿಳಾ ಮೀಸಲಾತಿ ಮಸೂದೆ ಪಾರ್ಲಿಮೆಂಟಿನಲ್ಲೂ ಮುಂದೊಮ್ಮೆ ಜಾರಿಯಾಗಬಲ್ಲದು.

ಇಷ್ಟಾಗಿಯೂ ದೇಶದ ಹಲವೆಡೆ ಬಸವಳಿಯುತ್ತಿರುವ ಕಾಂಗ್ರೆಸ್ಸಿಗೆ ಈ ಮಹಿಳಾ ಕಾರ್ಡ್ ಶಕ್ತಿ ತುಂಬಬಲ್ಲದೆ? ವಿಶ್ಲೇಷಕರು ತೋರಿಸಿರುವಂತೆ ದೇಶದಾದ್ಯಂತ 200 ಪಾರ್ಲಿಮೆಂಟರಿ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಇನ್ನೂ ತಕ್ಕಮಟ್ಟಿನ ಬೆಂಬಲವಿದೆ. ಕಳೆದ ಪಾರ್ಲಿಮೆಂಟ್ ಚುನಾವಣೆಯಲ್ಲಿ ಬಿಜೆಪಿಯ 18 ಕೋಟಿ ವೋಟುಗಳ ಎದುರು ಕಾಂಗ್ರೆಸ್ 12 ಕೋಟಿ ವೋಟು ಪಡೆದಿದ್ದ ಅಂಕಿಅಂಶವೂ ಕಾಂಗ್ರೆಸ್ಸಿಗೆ ಸ್ಫೂರ್ತಿ ತರಬಹುದು. ಯಾವುದೇ ರಾಜಕೀಯ ಪಕ್ಷಕ್ಕೆ ಅಧಿಕಾರದ ಸಾಧ್ಯತೆ ಕಾಣದಿದ್ದರೆ ಕಾರ್ಯಕರ್ತರು, ಮತದಾರರು ಉತ್ಸಾಹಗೊಳ್ಳಲಾರರು. ಈಗ ಸ್ಥಳೀಯ ನಾಯಕರ ಛಾತಿಯಿಂದಾಗಿ, ಕಟ್ಟಾ ಬೆಂಬಲಿಗ ಜಾತಿಗಳು, ಸಾಮಾಜಿಕ ವಲಯಗಳು ಹಾಗೂ ಜಾತ್ಯತೀತ ವಲಯಗಳಿಂದಾಗಿ ಕಾಂಗ್ರೆಸ್ ಉಳಿದುಕೊಂಡಿದೆ. ಕಾಂಗ್ರೆಸ್ಸಿನ ಹಿರಿಯ ನಾಯಕರು ಕಿರಿಯರನ್ನು ತುಳಿಯುವುದೇ ತಮ್ಮ ಉಳಿವೆಂಬ ವಿನಾಶಕಾರಿ ರಾಜಕಾರಣ ಬಿಟ್ಟು ಹೊಸ ನಾಯಕರನ್ನು ತಮ್ಮೊಡನೆ ಒಯ್ಯುತ್ತಾ, ಬೆಳೆಸುತ್ತಾ ತಾವೂ ಉಳಿಯುವ ರಾಜಕಾರಣ ಮಾಡದಿದ್ದರೆ ಮುಂದಿನ ದಿನಗಳಲ್ಲಿ ಕಾಂಗ್ರೆಸ್ಸಿನ ಹಿರಿಯರೂ ಕಿರಿಯರೂ ಒಟ್ಟಿಗೇ ನೆಲ ಕಚ್ಚುವುದು ಗ್ಯಾರಂಟಿ.

ಚುರುಮುರಿ



ಕಂಡದ್ದು ಕಾಣದ್ದು!

• ಎಸ್.ಬಿ.ರಂಗನಾಥ್

'ಶಿಕ್ಷೆ ಇಲ್ಲದ್ದು ಅದೆಂಥ ಶಿಕ್ಷಣಾರೀ?' ರಾಗ ಎಳೆದಳು ಶ್ರೀಮತಿ. 'ಏನಾಯ್ತೀಗ?' ಎಂದೆ.

'ಸ್ಕೂಲಲ್ಲಿ ಮಕ್ಕಳಿಗೆ ದೈಹಿಕ ಶಿಕ್ಷೆ ಕೊಡೋಹಾಗಿಲ್ವಂತೆ!'

'ಹೌದೌದು, ಶಾಲೆಯಲ್ಲಿ ದೈಹಿಕ ಶಿಕ್ಷಣಕ್ಕೆ ಮಾತ್ರ ಅವಕಾಶ, ಶಿಕ್ಷೆಗಿಲ್ಲ. ಹಿಂದಿನ ಕಾಲದಂತೆ ಬೆತ್ತ ಬಳಸುವಂತಿಲ್ಲ, ಶುಂಠಿ ಕೊಂಬು ಕೊಡೋಹಾಗಿಲ್ಲ, ಪರಂಗಿ ಪೀಠ ಕೂರಿಸಂಗಿಲ್ಲ. ಮನೇಲೂ ನಾವು ಅವ್ರ ಮೇಲೆ ಕೈಮಾಡಂಗಿಲ್ಲ... ಅದ್ಕೇತಾನೇ ನಿನ್ನ ಮಗ ಹಿಂಗಾಗಿರೋದು?'

'ಏನಾಗಿದಾನೇ? ನಿಮಗೂ ಅವ್ನು ಮಗನಲ್ವೇ?'

'ಜನನಿ ತಾನೆ ಮೊದಲ ಗುರುವು ಅಲ್ವೆ... ಎಲ್ಲ ನಿನ್ನ ಸಲುಗೆ... ಬುದ್ಧಿ ಬೆಳೆಸ್ಕೊಳ್ಳೋ ಅಂದ್ರೆ, ದೇಹ ಬೆಳೆಸ್ಕೊಂಡಿದಾನೆ!'

'ಈ ಕೊರೊನಾದಿಂದ ಮನೇಲೇ ಇದ್ದು ಸ್ವಲ್ಪ ದಪ್ಪ ಆಗಿದಾನಷ್ಟೇ. ನಿಮ್ಮ ಹೊಟ್ಟೆಯೇನು ಗಣಪತೀದಕ್ಕಿಂತ ಸಣ್ಣದಿದೆಯೇ?'

'ಈ ಗಾಂಧಿ ಪಾಸ್ ಕಾಲದಲ್ಲೂ ಅವ್ನು ಜಸ್ಟ್ ಪಾಸಷ್ಟೇ... ಮಕ್ಕಳನ್ನ ಈಗಿನಿಂದ್ಲೇ ಅಂಕೆಲಿಟ್ಕೊಬೇಕು. ಇಲ್ದಿದ್ರೆ ಕೆಲವು ಸಿನಿಮಾ ಸ್ಟಾರ್‌ಗಳ ಮಕ್ಕಳಂತೆ ದಾರಿ ತಪ್ತಾರೆ'.

'ಅದ್ಕಾಕ್ರೀ ಹಾಗಂತೀರಿ? ನಮ್ಮ ಕನ್ನಡದ ಚಿತ್ರನಟರ ಮಕ್ಕಳು ಒಳ್ಳೇ ಹೆಸರು ತಗೊತಿದಾರಲ್ಲಾ'.

'ಕೆಲವು ಸಿನಿಮಾ ಸ್ಟಾರ್‌ಗಳನ್ನು ರಜತ ಪರದೆ ಮೇಲಷ್ಟೇ ನೋಡಿ ಆನಂದಿಸಬೇಕು ಹೊರತು ಅವ್ರ ನಿಜ ಜೀವನದತ್ತ ಇಣುಕಿ ನೋಡಬಾರದು'.

'ಇದು ನಮ್ಮ ರಾಜಕಾರಣಿಗಳಿಗೂ ಅನ್ವಯಿಸುತ್ತದಲ್ವೇ?'

'ಖಂಡಿತವಾಗಿ. ಜೊತೆಗೆ ಹಲವು ಸ್ವಘೋಷಿತ ದೇವಮಾನವರನ್ನೂ ಸೇರಿಸಬೌದು. ದೀಪಾವಳಿಗೆ ಮುಂಚೆಯೇ ನಮ್ಮ ಜನನಾಯಕರ ಪರಸ್ಪರ ಹೆಬ್ಬೆಟ್, ಡ್ರಗ್ಸ್ ಪೆಡ್ಲರ್, ಪುಟಗೋಸಿ ಆಣಿಮುತ್ತುಗಳ ವಾಗ್ಬಾಣ-ಛೂಬಾಣ ಬಿರುಸುಗಳ ಉಚಿತ ಮನರಂಜನೆ ಪಡೆಯಬೌದು'.

'ಅದ್ರೆ ಕೆಬಿಸಿ ಸೂಪರ್ ಸ್ಟಾರ್ ಬಿಗ್ ಬಿ, ಇನ್ಮೇಲೆ ಹೊಗೆಸೊಪ್ಪಿನ ಪಾನ್ ಮಸಾಲಾಗೆ ಜಾಹೀರಾತು ಕೊಡೋಲ್ಲಾಂತ ಘೋಷಿಸಿದಾರಲ್ರೀ!'

'ಅವ್ರಿಗೆ ಹ್ಯಾಟ್ಸಾಫ್' ಎಂದು ಹೈಫೈ ಚಪ್ಪಾಳೆ ತಟ್ಟಿದೆ.

ಸಂಗತ

ಪ್ರಶಸ್ತಿ ಬೇಕೇ ಪ್ರಶಸ್ತಿ?!

ಪ್ರಶಸ್ತಿ ಪುರಸ್ಕಾರಕ್ಕೆ, ಅಭಿನಂದನಾ ಗ್ರಂಥ ಸಮರ್ಪಣೆಗೆ ನಾನಾ ಮುಖಗಳಿವೆ

• ರಾಜಕುಮಾರ ಕುಲಕರ್ಣಿ

ನನ್ನ ಇ-ಮೇಲ್‌ಗೆ ಇತ್ತೀಚೆಗೆ ಒಂದು ಪತ್ರ ಬಂದಿತ್ತು. 'ನಿಮ್ಮನ್ನು 2021ನೇ ಸಾಲಿನ ಅತ್ಯುತ್ತಮ ಸಮಾಜ ಸೇವಾಕರ್ತ ಎನ್ನುವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ವರ್ಣರಂಜಿತ ಸಮಾರಂಭದಲ್ಲಿ ಗಣ್ಯರಿಂದ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ನಿಮ್ಮ ವೈಯಕ್ತಿಕ ವಿವರ ಕಳುಹಿಸಿಕೊಡಿ. ಜೊತೆಗೆ ನಮ್ಮ ಸಂಸ್ಥೆಯ ಬ್ಯಾಂಕ್ ಖಾತೆಗೆ ₹ 25,000 ಸಂದಾಯ ಮಾಡಿ'. ಇದಿಷ್ಟು ಆ ಪತ್ರದ ಒಕ್ಕಣೆಯಾಗಿತ್ತು. ಯಾವುದೇ ಸೇವಾಸಂಸ್ಥೆಯೊಂದಿಗೆ ಗುರುತಿಸಿಕೊಂಡಿರದ ನನ್ನನ್ನು ಹೀಗೆ ದಿಢೀರನೆ ಪ್ರಶಸ್ತಿಗೆ ಆಯ್ಕೆ ಮಾಡಿದ್ದು ಆಶ್ಚರ್ಯವನ್ನುಂಟು ಮಾಡಿತು. ಪ್ರಶಸ್ತಿ ಸ್ವೀಕರಿಸಲು ಹಣ ಸಂದಾಯ ಮಾಡಬೇಕಾಗಿರುವ ಸಂಗತಿ ಸಂಶಯಕ್ಕೆ ಕಾರಣವಾಗಿ, ನಾನು ಆ ಸಂಸ್ಥೆಯೊಂದಿಗೆ ಪತ್ರ ವ್ಯವಹಾರವನ್ನು ಮುಂದುವರಿಸಲಿಲ್ಲ.

ಇಂಥ ಅನುಭವ ಕೇವಲ ನನ್ನೊಬ್ಬನದಲ್ಲ. ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಆಗಾಗ ಈ ರೀತಿಯ ಪ್ರಶಸ್ತಿ ವಂಚನೆಯ ಪತ್ರಗಳು ಬರುತ್ತಿರುತ್ತವೆ. ಅತ್ಯುತ್ತಮ ವೈದ್ಯ, ಶಿಕ್ಷಕ, ಉದ್ಯಮಿ, ಸಾಮಾಜಿಕ ಸೇವಾಕರ್ತ ಎನ್ನುವ ಪ್ರಶಸ್ತಿಗಳನ್ನು ಒಂದು ನಿರ್ದಿಷ್ಟ ಮೊತ್ತಕ್ಕೆ ವಿತರಿಸುವ ಪರಿಪಾಟ ಚಾಲ್ತಿಗೆ ಬಂದಿದೆ. ಹೆಸರನ್ನೇ ಕೇಳಿರದ ಸಂಸ್ಥೆಗಳು ದಿಢೀರೆಂದು ಸಂಪರ್ಕಿಸಿ, ಸಂದಾಯ ಮಾಡಬೇಕಾದ ಮೊತ್ತವನ್ನು ತಿಳಿಸಿ ಪ್ರಶಸ್ತಿಗೆ ಆಯ್ಕೆಯಾದ ಕುರಿತು ಮಾಹಿತಿ ನೀಡುತ್ತವೆ. ಹಣ ಪಡೆದು ಸಮಾರಂಭ ಆಯೋಜಿಸಿ ಗಣ್ಯರಿಂದ ಪ್ರಶಸ್ತಿ ಫಲಕವನ್ನು ಕೊಡಿಸಿದ ಉದಾಹರಣೆಗಳೂ ಉಂಟು. ಹೀಗೆ ಪ್ರಶಸ್ತಿ ಸ್ವೀಕರಿಸಿ ಫಲಕವನ್ನು ಮನೆಯ ಹಜಾರದ ಗೋಡೆಯ ಮೇಲೆ ತೂಗುಹಾಕಿ ಧನ್ಯತೆ ಅನುಭವಿಸಿದ ಸಾಧಕರ ಸಂಖ್ಯೆಯೂ ಬಹಳಷ್ಟಿದೆ.

ಪ್ರಶಸ್ತಿ ಪುರಸ್ಕಾರಕ್ಕೆ ಬೇರೆ ಮುಖಗಳೂ ಇರುತ್ತವೆ. ಕೆಲವು ದಿನಗಳ ಹಿಂದೆ ಊರಿನಲ್ಲಿ ನನ್ನ ಮಿತ್ರನ ಶತಾಯುಷಿ ಅಜ್ಜನನ್ನು ಸನ್ಮಾನಿಸಿ ಅಭಿನಂದನಾ ಗ್ರಂಥವನ್ನು ಸಮರ್ಪಿಸುವ ಕಾರ್ಯಕ್ರಮ ಆಯೋಜಿಸಲಾಗಿತ್ತು. ಬಂಧುಗಳು, ಹಿತೈಷಿಗಳು, ರಾಜಕಾರಣಿಗಳ ಮಹಾದಂಡೇ ನೆರೆದಿತ್ತು. ಸನ್ಮಾನಿತ ಅಜ್ಜ ದೊಡ್ಡ ಸಾಧಕರೇನಲ್ಲ. ನೂರು ವರ್ಷಗಳನ್ನು ಪೂರೈಸಿದ್ದೇ ಅಭಿನಂದನೆಗೆ ಕಾರಣವಾಗಿತ್ತು. ಅಭಿನಂದನಾ ಗ್ರಂಥಗಳನ್ನು ಸಮರ್ಪಿಸುವ ಮತ್ತು ಸ್ವೀಕರಿಸುವ ವಾಂಛೆ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿದೆ. ಹೀಗೆ ಸಮರ್ಪಿಸಲು ವ್ಯಕ್ತಿಯೇನೂ ಯಾವುದೇ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಬೇಕೆಂದೇನಿಲ್ಲ. ಹಿಂದಿನ ದಿನಗಳಲ್ಲಿ ಮಹಾನ್ ಸಾಧಕರಿಗೆ ಅವರ ಅಭಿಮಾನಿಗಳು ಅಭಿನಂದನಾ ಗ್ರಂಥಗಳನ್ನು ಸಮರ್ಪಿಸುವ ಪರಿಪಾಟವಿತ್ತು. ಆದರೆ ಇಂದು ಸಾಧನೆಗಿಂತ ವಯೋಮಾನವೇ ಅಭಿನಂದನಾ ಗ್ರಂಥ ಸಮರ್ಪಣೆಗೆ ನಿರ್ದಿಷ್ಟ ಮಾನದಂಡವಾಗಿದೆ.

ರಜತ ಮಹೋತ್ಸವ, ಷಷ್ಟ್ಯಬ್ದಿ, ಸಹಸ್ರ ಚಂದ್ರಮಾನ ದರ್ಶನ ಇಂಥವೇ ಕಾರಣಗಳನ್ನು ನೀಡಿ ಸಾವಿರಾರು ಸಂಖ್ಯೆಯಲ್ಲಿ ಅಭಿನಂದನಾ ಗ್ರಂಥಗಳು ಪ್ರಕಟವಾಗುತ್ತಿವೆ. ಅಭಿನಂದನೆಗೆ ಒಳಗಾಗುವ ವ್ಯಕ್ತಿಯೇ ಅಭಿಮಾನಿ ಬಳಗವನ್ನು ಹುಟ್ಟುಹಾಕಿ ಇಡೀ ಖರ್ಚುವೆಚ್ಚವನ್ನು ಭರಿಸುವ ಅನೇಕ ಉದಾಹರಣೆಗಳಿವೆ. 'ನಾನು ನಿನ್ನನ್ನು ಅಭಿನಂದಿಸುತ್ತೇನೆ, ನೀನು ನನ್ನನ್ನು' ಎನ್ನುವ ಕೊಡು- ಕೊಳ್ಳುವ ಸಂಪ್ರದಾಯವೂ ರೂಢಿಯಲ್ಲಿದೆ. ಇನ್ನು ಅಭಿನಂದನಾ ಗ್ರಂಥದ ಶೀರ್ಷಿಕೆಗೂ ಅಭಿನಂದನೆಗೆ ಒಳಗಾಗುವ ವ್ಯಕ್ತಿಯ ಬದುಕಿಗೂ ಸಂಬಂಧವೇ ಇರುವುದಿಲ್ಲ. ಬುದ್ಧ, ಗಾಂಧಿ, ಬಸವ, ಮಹಾವೀರರೆಲ್ಲ ಶೀರ್ಷಿಕೆಗಳಲ್ಲಿ ಮೈದಾಳುತ್ತಾರೆ.



ಅತ್ಯುತ್ತಮ ಸಾಹಿತ್ಯ ಕೃತಿಗಳನ್ನು ಗುರುತಿಸಿ ಪ್ರಶಸ್ತಿ ನೀಡಲು ಕರ್ನಾಟಕದಲ್ಲಿ ಸರ್ಕಾರ ಸೇರಿದಂತೆ ಅನೇಕ ಪ್ರತಿಷ್ಠಾನಗಳು ಅಸ್ತಿತ್ವದಲ್ಲಿವೆ. ಇಂಥ ಘನಸಂಸ್ಥೆಗಳ ಪ್ರಶಸ್ತಿ ಪುರಸ್ಕಾರವನ್ನೇ ಅನುಮಾನದಿಂದ ನೋಡುವಂತೆ ಪ್ರತಿವರ್ಷ ಪ್ರಕಟವಾಗುವ ಪುಸ್ತಕಗಳಿಗೆ ಪ್ರಶಸ್ತಿ ನೀಡಲು ರಾಜ್ಯದಲ್ಲಿ ನೂರಾರು ಸಣ್ಣಪುಟ್ಟ ಸಂಸ್ಥೆಗಳು ಹುಟ್ಟಿಕೊಂಡಿವೆ. ಸ್ಪರ್ಧೆಯಲ್ಲಿ ಭಾಗವಹಿಸಲು ಲೇಖಕ ತನ್ನ ಪ್ರಕಟಿತ ಪುಸ್ತಕದ ಮೂರು ಪ್ರತಿಗಳನ್ನು ಸಂಸ್ಥೆಗೆ ಕಳುಹಿಸಿಕೊಡಬೇಕು. ಇದರಲ್ಲಿ ನೂರಾರು ಲೇಖಕರು ಭಾಗವಹಿಸುತ್ತಾರೆ. ಸಂಸ್ಥೆಗೆ ಸಾವಿರಾರು ಸಂಖ್ಯೆಯಲ್ಲಿ ಪುಸ್ತಕಗಳು ಜಮೆಯಾಗುತ್ತವೆ. ಈ ನಡುವೆ ಪ್ರಶಸ್ತಿಗಾಗಿ ಲಾಬಿ ಮತ್ತು ಶಿಫಾರಸುಗಳು ಬೇರೆ. ಜಾತಿ, ಧರ್ಮ, ಸಮುದಾಯ, ಪ್ರಾಂತ್ಯ ನೇರವಾಗಿ ಪ್ರಶಸ್ತಿ ವಿತರಣೆಯಲ್ಲಿ ಮೇಲುಗೈ ಸಾಧಿಸುತ್ತವೆ.

ಈ ನಡುವೆ ವಿಶ್ವವಿದ್ಯಾಲಯಗಳು ಕೊಡಮಾಡುವ ಗೌರವ ಡಾಕ್ಟರೇಟುಗಳು ತಮ್ಮ ಮೌಲ್ಯವನ್ನೇ ಕಳೆದುಕೊಂಡಿವೆ. ಪ್ರಶಸ್ತಿಯೂ ಈಗ ಗ್ಲೋಬಲೀಕರಣಗೊಂಡಿದೆ. ವಿದೇಶಿ ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್ ಪಡೆಯುವ ಭಾರತೀಯ ಸಾಧಕರ ಸಂಖ್ಯೆ ಹೆಚ್ಚುತ್ತಿದೆ. ಪ್ರಶಸ್ತಿಗಾಗಿ ಸಾವಿರಾರು ಡಾಲರ್‌ಗಳ ಮೊತ್ತ ಕೈ ಬದಲಾಯಿಸುತ್ತದೆ.

ಇನ್ನು ಸರ್ಕಾರದ ಕೆಲವು ಪ್ರಶಸ್ತಿಗಳ ಆಯ್ಕೆಯ ಕಸರತ್ತು ಪ್ರಶಸ್ತಿ ಪ್ರದಾನ ಸಮಾರಂಭದ ಹಿಂದಿನ ದಿನದವರೆಗೂ ನಡೆಯುತ್ತದೆ. ಈಗ ಕೇಂದ್ರ ಸರ್ಕಾರ 'ಪದ್ಮ' ಪ್ರಶಸ್ತಿಗಳಿಗಾಗಿ ಸಾರ್ವಜನಿಕರೇ ಸಾಧಕರನ್ನು ನಾಮನಿರ್ದೇಶನ ಮಾಡುವ ಪ್ರಕ್ರಿಯೆಯನ್ನು ಜಾರಿಗೆ ತಂದಿದೆ. ಪರಿಣಾಮವಾಗಿ, ಎಲೆಮರೆಯ ಕಾಯಿಯಂತೆ ಕಾರ್ಯನಿರ್ವಹಿಸುತ್ತಿರುವ ಎಷ್ಟೋ ಸಾಧಕರು ಗೌರವಕ್ಕೆ ಪಾತ್ರರಾಗಲು ಸಾಧ್ಯವಾಗಬಹುದು. ಸರ್ಕಾರವಾಗಲೀ ಸಂಘ ಸಂಸ್ಥೆಗಳಾಗಲೀ ಸಾಧಕರನ್ನು ಗುರುತಿಸಿ ಗೌರವಿಸುವಂಥ ಸಂಪ್ರದಾಯವನ್ನು ರೂಢಿಸಿಕೊಳ್ಳಬೇಕು. ಸಾಧಕರೇ ಮುಂದಾಗಿ ಪ್ರಶಸ್ತಿಗೆ ಅರ್ಜಿ ಗುಜರಾಯಿಸುವ ಪದ್ಧತಿ ಕೊನೆಗೊಳ್ಳಬೇಕು. ಪ್ರಶಸ್ತಿಗೆ ಅನರ್ಹರು ಆಯ್ಕೆಯಾಗುತ್ತಿದ್ದಾರೆ ಎನ್ನುವುದಕ್ಕಿಂತ ಅರ್ಹರು ವಂಚಿತರಾಗುತ್ತಿದ್ದಾರೆ ಎನ್ನುವ ಪ್ರಜ್ಞೆ ಸರ್ಕಾರ, ಸಂಘ ಸಂಸ್ಥೆಗಳು ಮತ್ತು ಶಿಫಾರಸು ಮಾಡುವ ರಾಜಕಾರಣಿಗಳಲ್ಲಿ ಮೂಡಬೇಕು.

ವಾಚಕರ ವಾಣಿ

ಇದು ಎಚ್‌ಎಂಟಿ ಸಮಯವಲ್ಲ!

ಎಚ್‌ಎಂಟಿ ಗಡಿಯಾರ ಕಾರ್ಖಾನೆಯ ಎರಡನೇ ಘಟಕದ ಶಂಕುಸ್ಥಾಪನೆ ಸುದ್ದಿಯನ್ನು '50 ವರ್ಷಗಳ ಹಿಂದೆ' ಅಂಕಣದಲ್ಲಿ (ಪ್ರ.ವಾ., ಅ. 22) ಓದಿ ಸಂತಸ, ದುಃಖ ಎರಡೂ ಆಯಿತು. 70-80ರ ದಶಕಗಳಲ್ಲಿ ಅತ್ಯಂತ ಪ್ರಸಿದ್ಧವಾಗಿದ್ದ ಬ್ರ್ಯಾಂಡ್ ಎಚ್‌ಎಂಟಿ. ಆಕರ್ಷಕ ವಿನ್ಯಾಸದಿಂದ ಭಾರತ ಮತ್ತು ವಿದೇಶಗಳಲ್ಲಿ ತುಂಬ ಹೆಸರು ಮಾಡಿತ್ತು. ದೇಶದಲ್ಲಿ ನಡೆದ ಪ್ರಮುಖ ಕ್ರೀಡಾ ಪಂದ್ಯಾವಳಿಯ ಲಾಂಛನದ ಚಿತ್ರವನ್ನು ತನ್ನ ಡಯಲ್‌ನಲ್ಲಿ ತೋರಿಸಿತ್ತು. ವಿವಾಹ ಸಂಭ್ರಮಕ್ಕೆ ಅನುವಾಗುವಂತೆ ವಧು ವರರಿಗಾಗಿ ಜೋಡಿ ವಾಚ್ ಪರಿಚಯಿಸಿತು. ವಿದೇಶದಲ್ಲಿ ಯಾರೋ ಒಬ್ಬ ವ್ಯಕ್ತಿ 'ಟೈಮ್ ಎಷ್ಟು?' ಎಂದು ಒಬ್ಬ ಭಾರತೀಯನನ್ನು ಕೇಳಿದಾಗ ಅವನು ಸಮಯ ತಿಳಿಸಿದನಂತೆ. ವಿದೇಶಿಯನು ಅದು 'ಜಿಎಂಟಿ ಸಮಯವೇ' (ಗ್ರೀನ್‌ವಿಚ್ ಮೀನ್ ಟೈಮ್) ಎಂದು ಕೇಳಿದಾಗ, 'ಇಲ್ಲ, ಇದು ಎಚ್‌ಎಂಟಿ ಸಮಯ' ಎಂದು ನಮ್ಮ ಭಾರತೀಯ ಉತ್ತರಿಸಿದನಂತೆ!

ಈಗ ಶತಮಾನೋತ್ಸವದ ಸಂಭ್ರಮದಲ್ಲಿ ಇರಬೇಕಾಗಿದ್ದ ಒಂದು ವಿಶ್ವವಿಖ್ಯಾತ ಸಂಸ್ಥೆ ಇಂದು ಹೇಳ ಹೆಸರಿಲ್ಲದಂತೆ ಆಗಿರುವುದು ದುರಂತವೇ ಸರಿ. ಕಾಲಾಯ ತಸ್ಮೈ ನಮಃ.

ಮುರುಗೇಶ್ ಹನಗೋಡಿಮಠ, ಹುಬ್ಬಳ್ಳಿ

ಗುಂಡ್ಲು ನದಿಗೆ ಜೀವ ತುಂಬಲು...

ಗುಂಡ್ಲುಪೇಟೆ ತಾಲ್ಲೂಕಿನ ಗುಂಡ್ಲು ನದಿ ಬತ್ತಿಹೋಗಿದ್ದು ತಾಲ್ಲೂಕಿನ ಜನ ನೀರಿಗೆ ಪರದಾಡುವಂತಾಗಿದೆ ಎಂದು ರಾಘವೇಂದ್ರ ಅಪುರಾ ಬರೆದಿದ್ದಾರೆ (ವಾ.ವಾ., ಅ. 21). ದೇಶದ ಎಷ್ಟೋ ನದಿಗಳು ಸತ್ತುಹೋಗಿವೆ. ಸರಸ್ವತಿ, ಕಣ್ವ, ಅರ್ಕಾವತಿ, ಪಿನಾಕಿನಿಯಂತಹ ನದಿಗಳು ಕ್ಷೀಣಿಸಲು ಮಾನವನ ದುರ್ನಡತೆಯೇ ಕಾರಣ. ಜಲ ಕಾಯಕಕ್ಕಾಗಿ ಹೆಸರಾಗಿರುವ ರಾಜೇಂದ್ರ ಸಿಂಗ್ ಅವರು ರಾಜಸ್ಥಾನದಲ್ಲಿ ಸತ್ತು ಹೋದ ಐದು ನದಿಗಳಿಗೆ ಜೀವ ತುಂಬಿ ಸಾವಿರಾರು ಹಳ್ಳಿಗಳಿಗೆ ನೀರುಣಿಸುವಂತೆ ಮಾಡಿದ್ದಾರೆ. ಅದೇ ರೀತಿ ಗುಂಡ್ಲು ನದಿಯೂ ಸದಾ ಹರಿಯುವಂತೆ ಮಾಡಲು ಈ ಅಂಶಗಳನ್ನು ಪಾಲಿಸುವುದು ಒಳಿತು: 1. ನದಿ ಪಾತ್ರದ ಎರಡೂ ಬದಿಯಲ್ಲಿ ಇಂಗು ಗುಂಡಿ ನಿರ್ಮಾಣ. 2. ಕೃಷಿ ಹೊಂಡ, ನಾಲಾಬದು ನಿರ್ಮಾಣ. 3. ರಾಜಕಾಲುವೆ ಮಾಡಿ ಕೆರೆಗಳ ಹೂಳು ತೆಗೆಯುವುದು. 4. ಮರಗಳನ್ನು ಬೆಳೆಸುವುದು. 5. ಅರಣ್ಯ ರಕ್ಷಣೆ ಮಾಡುವುದು.

ಗುಂಡ್ಲುಪೇಟೆ ಯುವಕರು ರಾಜಸ್ಥಾನಕ್ಕೆ ಹೋಗಿ, ಅಲ್ಲಿ ಪುನರುಜ್ಜೀವಗೊಂಡಿರುವ ನದಿಯನ್ನು ಖುದ್ದಾಗಿ ನೋಡಿ ಬಂದು ಗುಂಡ್ಲು ನದಿಗೆ ಜೀವ ತುಂಬುವ ಪ್ರಯತ್ನ ಮಾಡಬಹುದು. ಕುಡಿಯುವ ನೀರಿಗೆ ಪರಿತಪಿಸುವ ಬದಲು ಮನೆ ತಾರಸಿ ಮೇಲೆ ಬೀಳುವ ಮಳೆ ನೀರು ಸಂಗ್ರಹಿಸಿ ಬಳಸಬಹುದು. ರೈತರು ಕೃಷಿ ಹೊಂಡ ನಿರ್ಮಾಣ ಮಾಡಿ ಮಳೆ ನೀರು ಸಂಗ್ರಹಿಸಿ ಬಳಸಬಹುದು.

ಡಾ. ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ಮುಕ್ತ ವಿ.ವಿ: ತೊಂದರೆ ನೀಗಲಿ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಬಿ.ಎ. ಮಾಡಿರುವ ವಿದ್ಯಾರ್ಥಿಗಳಿಗೆ 2013- 14ನೇ ಸಾಲಿನಿಂದ ಕಾನ್ವೊಕೇಶನ್ ಸರ್ಟಿಫಿಕೇಟ್ ಕೊಡಲಾಗುತ್ತಿಲ್ಲ. 'ಕೋರ್ಟಿನಲ್ಲಿ ಕೇಸ್ ಇರುವುದರಿಂದ ಅದು ಬಗೆಹರಿಯುವವರೆಗೆ ಸರ್ಟಿಫಿಕೇಟ್ ಕೊಡಲು ಸಾಧ್ಯವಿಲ್ಲ' ಎಂದು ವಿಶ್ವವಿದ್ಯಾಲಯ ಹೇಳಿದೆ.

ರಾಜ್ಯದಲ್ಲಿ ಪರೀಕ್ಷೆ ಬರೆದ ಅನೇಕ ವಿದ್ಯಾರ್ಥಿಗಳು ಇದರಿಂದ ತೊಂದರೆಗೆ ಒಳಗಾಗಿದ್ದಾರೆ. ಪದವಿ ಪ್ರಮಾಣಪತ್ರ ಎಲ್ಲ ಕಡೆ ಕಡ್ಡಾಯವಾಗಿ ಬೇಕಾಗಿರುವುದರಿಂದ ಅದಿಲ್ಲದೆ ಬೇರೆ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಅವಕಾಶ ದೊರೆಯುತ್ತಿಲ್ಲ. ನೌಕರಿ ಹಾಗೂ ಸಂಶೋಧನೆ ಮಾಡುವವರಿಗೂ ಸಮಸ್ಯೆಯಾಗಿದೆ. ಸಂಬಂಧಪಟ್ಟವರು ಆದಷ್ಟು ಬೇಗ ಈ ಸಮಸ್ಯೆ ಬಗೆಹರಿಯುವಂತೆ ನೋಡಿಕೊಂಡು ವಿದ್ಯಾರ್ಥಿಗಳ ಸಂಕಷ್ಟವನ್ನು ಪರಿಹರಿಸಬೇಕು.

ಅನಿತಾ ಪಿ. ತಾಕೊಡೆ, ಮುಂಬೈ

ಕೈಗಾರಿಕೋದ್ಯಮಿಗಳ ಕೈ ಹಿಡಿಯಬೇಕಿದೆ

ಕೈಗಾರಿಕೆ ಆರಂಭಿಸಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡುತ್ತಿರುವ ಸೌಲಭ್ಯಗಳನ್ನು ಆರ್ಥಿಕವಾಗಿ ಹಿಂದುಳಿದವರಿಗೂ ವಿಸ್ತರಿಸಲು ನಿರ್ಧರಿಸುವುದಾಗಿ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಅವರು ಹೇಳಿರುವುದು (ಪ್ರ.ವಾ., ಅ. 22) ಪ್ರಶಂಸಾರ್ಹ. ಆರ್ಥಿಕವಾಗಿ ಹಿಂದುಳಿದವರಿಗೆ ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಕೇಂದ್ರ ಸರ್ಕಾರವು ಶೇ 10ರಷ್ಟು ಮೀಸಲಾತಿ ನೀಡುವ ಮೂಲಕ ನೆರವಿಗೆ ಬಂದಿದೆ. ಈಗ ಸಚಿವರ ಮಾತು ಅನುಷ್ಠಾನಕ್ಕೆ ಬಂದಿದ್ದೇ ಆದಲ್ಲಿ ಕರ್ನಾಟಕವು ಇತರ ರಾಜ್ಯಗಳಿಗೆ ಮಾದರಿಯಾಗುತ್ತದೆ. ಕೋವಿಡ್ ಆಕ್ರಮಣದ ನಂತರ ಶಿಕ್ಷಣ ಕ್ಷೇತ್ರಕ್ಕೆ ಹೊಡೆತ ಬಿದ್ದಂತೆ ಕೈಗಾರಿಕಾ ಕ್ಷೇತ್ರಕ್ಕೂ ಹಿನ್ನಡೆಯಾಗಿದೆ. ಆದಕಾರಣ ಕೈಗಾರಿಕಾ ಕ್ಷೇತ್ರಕ್ಕೆ ಪುನಶ್ಚೇತನದ ಅಗತ್ಯವಿದೆ. ಈ ದಿಸೆಯಲ್ಲಿ ಸರ್ಕಾರ ಕಾಳಜಿ ವಹಿಸಿ ಕೈಗಾರಿಕೋದ್ಯಮಿಗಳ ಕೈ ಹಿಡಿಯಬೇಕಿದೆ.

ಕೆ.ವಿ.ಸೀತಾರಾಮಯ್ಯ, ಬೆಂಗಳೂರು

ಕಬ್ಬು ಬಾಕಿ ಪಾವತಿ: ಕ್ರಮ ಅಗತ್ಯ

ಪ್ರಸಕ್ತ ಸಾಲಿನ ಕಬ್ಬು ನುರಿಸುವ ಹಂಗಾಮು ಪ್ರಾರಂಭವಾಗಿದ್ದು, ಹಲವಾರು ಕಾರ್ಖಾನೆಗಳಲ್ಲಿ ಈಗಾಗಲೇ ಚಾಲನೆ ನೀಡಲಾಗಿದೆ. ಕೆಲವೊಂದಿಷ್ಟು ಕಾರ್ಖಾನೆಗಳು ಇನ್ನೂ ಕಬ್ಬಿನ ಬಾಕಿ ಹಣ ಪಾವತಿಸಿಲ್ಲ. ರೈತರೆಲ್ಲರೂ ಒಂದುಗೂಡಿ ಅಧಿಕಾರಿಗಳಿಂದ ಹಿಡಿದು ಮುಖ್ಯಮಂತ್ರಿಯವರೆಗೂ ಮನವಿ ಸಲ್ಲಿಸಿದರೂ ಪ್ರಯೋಜನವಾಗದೆ ಅವರ ಬದುಕು ದುಸ್ತರವಾಗಿದೆ. ಡೀಸೆಲ್ ಬೆಲೆ ಏರಿಕೆಯಿಂದ ಹೊಲದಲ್ಲಿ ಉಳುಮೆ ಮಾಡುವ ಯಂತ್ರೋಪಕರಣಗಳ ಬಾಡಿಗೆ ದರವೂ ಹೆಚ್ಚಾಗಿದೆ. ರಸಗೊಬ್ಬರಗಳ ಬೆಲೆ ಗಗನಕ್ಕೇರಿದೆ.

ರಾಜ್ಯದ ಕೆಲವು ಕಾರ್ಖಾನೆಗಳಲ್ಲಿ ಒಂದು ರೀತಿಯ ಸರ್ವಾಧಿಕಾರದ ಆಡಳಿತ ನಡೆಯುತ್ತಿದೆ. ವಿಶೇಷವಾಗಿ ಹಲವಾರು ಕಾರ್ಖಾನೆಗಳು ಶಾಸಕರು, ಸಚಿವರಿಗೆ ಸೇರಿದವಾದ್ದರಿಂದ ಸರ್ಕಾರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂಬ ಮಾತಿದೆ. ಕಬ್ಬು ಕಳುಹಿಸಿದ 14 ದಿನಗಳಲ್ಲಿ ಹಣ ಪಾವತಿಸಬೇಕು ಎಂಬ ನಿಯಮವಿದ್ದರೂ, ತಿಂಗಳುಗಳೇ ಕಳೆದರೂ ಹಣ ಸಂದಾಯವಾಗುತ್ತಿಲ್ಲ. ಈ ಸಮಸ್ಯೆ ನೀಗಿಸಲು ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.

ರಾಕೇಶ ಆಲಬಾಳ, ದರೂರ, ಅಥಣಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಎಲ್‌ಐಸಿ ಐಪಿಒದಿಂದ ಸಂಸ್ಥೆ, ಪಾಲಿಸಿದಾರರಿಗೆ ಅನುಕೂಲವೇ?

ಇನ್ನೊಂದು ಏರ್ ಇಂಡಿಯಾ ಆಗದಂತೆ ತಡೆ



• ಎಸ್. ವಿಶ್ವನಾಥ ಭಟ್

> ದೇಶದ ಸಾರ್ವಜನಿಕ ರಂಗಕ್ಕೆ ಎಲ್‌ಐಸಿಯ ಕೊಡುಗೆಯು ಅಪಾರ. ಹಾಗಾಗಿಯೇ ಮುಂದಿನ ತಲೆಮಾರುಗಳಿಗಾಗಿ ಈ ಸಂಸ್ಥೆಯನ್ನು ಸಂರಕ್ಷಿಸಬೇಕಿದೆ. ಅಪ್ರಾಮಾಣಿಕ ಆಡಳಿತದಾರರ ಕೈಯಲ್ಲಿ ಈ ಸಂಸ್ಥೆಗೆ ಏರ್ ಇಂಡಿಯಾಕ್ಕೆ ಬಂದ ಗತಿ ಬರಬಾರದು. ಹಾಗಾಗಿ, ಪಾಲಿಸಿದಾರರ ಹಿತದೃಷ್ಟಿಯಿಂದ ಷೇರು ಮಾರಾಟ ಮತ್ತು ಷೇರು ಮಾರುಕಟ್ಟೆಯಲ್ಲಿ ನೋಂದಣಿ ಅಗತ್ಯ

66 ವರ್ಷ ಹಳೆಯದಾದ ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಶೇ 5ರಿಂದ ಶೇ 7ರಷ್ಟು ಷೇರುಗಳ ಮಾರಾಟಕ್ಕೆ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ನಿರ್ಧರಿಸಿದೆ. ಹಾಗಾಗಿ, 2022ನೇ ಆರ್ಥಿಕ ವರ್ಷದ 4ನೇ ತ್ರೈಮಾಸಿಕದಲ್ಲಿ ಎಲ್ಲ ಐಪಿಒಗಳ ತಾಯಿ ಎಂದೇ ಪರಿಗಣಿಸಬಹುದಾದ ಈ ಐಪಿಒ ಸಾರ್ವಜನಿಕರಿಗೆ ತೆರೆದುಕೊಳ್ಳಲಿದೆ. ಈ ಐಪಿಒದಲ್ಲಿ ಬಂದ ಮೊತ್ತವನ್ನು ಸರ್ಕಾರವು ರಾಷ್ಟ್ರೀಯ ಮೂಲಸೌಕರ್ಯ ಪೈಪ್‌ಲೈನ್ (ಎನ್‌ಐಪಿ) ಮೂಲಕ ಆಧುನಿಕ ಮೂಲಸೌಕರ್ಯಕ್ಕೆ ವೆಚ್ಚ ಮಾಡಲಿದೆಯೇ ಹೊರತು ರೆವೆನ್ಯೂ ವೆಚ್ಚವಾಗಿ ಅಲ್ಲ.

ಎಲ್‌ಐಸಿಯ ವೈಶಿಷ್ಟ್ಯ

1. ಎಲ್‌ಐಸಿ ಶೇಕಡಾ ನೂರರಷ್ಟು ಸರ್ಕಾರದ ನಿಯಂತ್ರಣದಲ್ಲಿ ಇದ್ದರೂ ವಾಸ್ತವದಲ್ಲಿ ಅದು ಸಾರ್ವಜನಿಕರ ಹಣವೇ ವ್ಯಾಪಾರದ ಮೂಲವಾಗಿರುವ ಕಂಪನಿ. ಸರ್ಕಾರದ ಬಂಡವಾಳ ಹೂಡಿಕೆ ಬಹಳ ಕಡಿಮೆ.

2. **ವಿಶ್ವಾಸವೇ ಮುಖ್ಯ:** ವಿಮಾ ಉದ್ಯಮದಲ್ಲಿ ಯಶಸ್ಸು ಪಡೆಯಲು ಅತ್ಯಂತ ಮುಖ್ಯವಾಗಿ ಬೇಕಿರುವುದು ವಿಶ್ವಾಸ. ಭಾರತದ ಜನರ ಹೃದಯದಲ್ಲಿಯೇ ವಿಶ್ವಾಸ ಎಂಬ ಪದವನ್ನು ಅಚ್ಚೊತ್ತಿರುವ ಸಂಸ್ಥೆ ಇದ್ದರೆ ಅದು ಎಲ್‌ಐಸಿ. 65 ವರ್ಷಗಳಲ್ಲಿನ ಕಾರ್ಯಕ್ಷಮತೆ ಮತ್ತು ಬದ್ಧತೆಗಳ ಈಡೇರಿಕೆಯು ಅದಕ್ಕೆ ಕಾರಣ. 30ಕ್ಕೂ ಹೆಚ್ಚು ವರ್ಷಗಳಲ್ಲಿ ಜನರು ಒಂದು ಕ್ಷಣವೂ ಯೋಚಿಸದೆ ವಿಮೆಗೆ ಹಣ ಹೂಡಿದ್ದಾರೆ, ಅಂದರೆ, ನಿವೃತ್ತಿ ಹೊತ್ತಲ್ಲಿ ದೊಡ್ಡ ಮೊತ್ತ ಪಡೆಯುವುದಕ್ಕಾಗಿ. ಹಾಗಾಗಿಯೇ, ನಿಯಂತ್ರಣ ಮುಕ್ತವಾಗಿ 18 ವರ್ಷಗಳ ಬಳಿಕವೂ 2019-20ರಲ್ಲಿ ವಿಮಾ ವ್ಯವಹಾರದಲ್ಲಿ ಎಲ್‌ಐಸಿಯ ಪಾಲು ಶೇ 66.22ರಷ್ಟಿತ್ತು.

ಬೃಹತ್ ಗಾತ್ರ: 2020ರಲ್ಲಿ ಸಂಸ್ಥೆಯು ಪೂರ್ಣ ಕಂಪ್ಯೂಟರೀಕೃತವಾದ 2048 ಶಾಖೆಗಳನ್ನು ಹೊಂದಿತ್ತು. 25 ಕೋಟಿಗೂ ಹೆಚ್ಚು ಪಾಲಿಸಿದಾರರಿದ್ದರು ಎಂಬುದು ಬ್ಲೂಮ್‌ಬರ್ಗ್‌ನ ಮಾಹಿತಿ. ಎಲ್‌ಐಸಿಯ ಬಳಿಯಲ್ಲಿ ₹31 ಲಕ್ಷ ಕೋಟಿಯ ಆಸ್ತಿ ಇದೆ. ಭೌಗೋಳಿಕವಾಗಿ ಎಲ್‌ಐಸಿಯ ಹೆಜ್ಜೆಗುರುತುಗಳನ್ನು ಗಮನಿಸಿದರೆ ಅದು ಅಮೆಜಾನ್‌ಗಿಂತ, ವಿಸ್ತಾರವೂ, ಪೆಸಿಫಿಕ್‌ಗಿಂತ ಆಳವೂ ಆಗಿದೆ.

ಈ ಹಿನ್ನೆಲೆಯಲ್ಲಿಯೇ ಎಲ್‌ಐಸಿಯ ಪಾಲು ಹಿಂದೆಗೆತವನ್ನು ವಿಶ್ಲೇಷಣೆಗೆ ಒಳಪಡಿಸಬೇಕು.

ಭಾರತದ ಅತ್ಯಂತ ದೊಡ್ಡ ಹಣಕಾಸು ಸಂಸ್ಥೆಯ ಷೇರು ಮಾರಾಟದಿಂದ ಅದರ ಪಾಲಿಸಿದಾರರಿಗೆ ಏನಾದರೂ ಪ್ರಯೋಜನೆ ಇದೆಯೇ? ಎಲ್‌ಐಸಿಯ ಸಿಬ್ಬಂದಿ ಸಂಘಗಳು ಎಲ್‌ಐಸಿಯ ಷೇರು ಮಾರಾಟಕ್ಕೆ ಕೇಂದ್ರ ಸರ್ಕಾರ ಕೈಗೊಂಡ ನಿರ್ಧಾರವನ್ನು ವಿರೋಧಿಸುತ್ತಿವೆ.



1) ಏರ್ ಇಂಡಿಯಾ ಹಗರಣವನ್ನೇ ತೆಗೆದುಕೊಳ್ಳಿ. ಏರ್ ಇಂಡಿಯಾ ಮತ್ತು ಇಂಡಿಯನ್ ಏರ್‌ಲೈನ್ಸ್‌ಗೆ 28 ವಿಮಾನಗಳನ್ನು ಮಾತ್ರ ಖರೀದಿಸಬೇಕು ಎಂಬುದೇ ಮೂಲ ಪ್ರಸ್ತಾವ ಆಗಿತ್ತು. ಆದರೆ, 2004ರ ಆಗಸ್ಟ್ 2ರಂದು ಯುಪಿಎ ಸರ್ಕಾರದ ನಾಗರಿಕ ವಾಯುಯಾನ ಸಚಿವ ಪ್ರಫುಲ್ ಪಟೇಲ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು: 1) ಒಟ್ಟು 111 ವಿಮಾನಗಳನ್ನು ಖರೀದಿಸುವಂತೆ ಏರ್ ಇಂಡಿಯಾ ಮೇಲೆ ಒತ್ತಡ ಹೇರಲಾಯಿತು; ಈ ವಿಮಾನಗಳನ್ನು ಪೂರೈಸುವಂತೆ ಬೋಯಿಂಗ್ ಮತ್ತು ಏರ್‌ಬಸ್ ಕಂಪನಿಗಳಿಗೆ ಬೇಡಿಕೆ ಸಲ್ಲಿಸಲಾಯಿತು. ಇವೆಲ್ಲದರ ಮೊತ್ತ ₹70,000 ಕೋಟಿ. 2) ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯವಾಗಿ ಲಾಭದಾಯಕವಾಗಿದ್ದ ಮಾರ್ಗಗಳನ್ನು ಖಾಸಗಿ ಸಂಸ್ಥೆಗಳಿಗೆ ಏರ್ ಇಂಡಿಯಾ ಬಿಟ್ಟುಕೊಡುವಂತೆ ಮಾಡಲಾಯಿತು 3) ಕೊನೆಯದಾಗಿ, ಏರ್‌ಇಂಡಿಯಾವನ್ನು ಇಂಡಿಯನ್ ಏರ್‌ಲೈನ್ಸ್ ಜತೆಗೆ ವಿಲೀನ ಮಾಡಲಾಯಿತು. ಸಚಿವಾಲಯದ ಈ ನಿರ್ಧಾರಗಳು ಮತ್ತು ಕ್ರಿಯೆಗಳು ರಾಷ್ಟ್ರೀಯ ವಿಮಾನ ಯಾನ ಸಂಸ್ಥೆಯು ಮುಗ್ಗರಿಸುವಂತೆ ಮಾಡಿದವು.

ಇದರ ಪರಿಣಾಮ ಹೀಗಿತ್ತು. 2003-04ರಲ್ಲಿ (ವಾಜಪೇಯಿ ನೇತೃತ್ವದ ಸರ್ಕಾರದ ಅವಧಿ) ₹105 ಕೋಟಿ ಲಾಭವನ್ನು ಸಂಸ್ಥೆಯು ತೋರಿಸಿತ್ತು. ಆದರೆ, ನಂತರದ ಪ್ರತಿ ವರ್ಷವೂ ವಿಮಾನ ಯಾನ ಸಂಸ್ಥೆಗೆ ಭಾರಿ ನಷ್ಟ ಉಂಟಾಯಿತು. 2020ರ ಹೊತ್ತಿಗೆ ಒಟ್ಟು ನಷ್ಟವು ₹70,820 ಕೋಟಿಗೆ ಏರಿಕೆಯಾಗಿತ್ತು. ವಿದೇಶದ ವಿಮಾನ ತಯಾರಕರು ಮತ್ತು ಖಾಸಗಿ ಹಾಗೂ ವಿದೇಶಿ ವಿಮಾನ ಯಾನ ಸಂಸ್ಥೆಗಳು ಮಾತ್ರ ಸಚಿವಾಲಯದ ನಿರ್ಧಾರಗಳ ಫಲಾನುಭವಿಗಳಾಗಿದ್ದವು. ಪ್ರತಿ ದಿನವೂ ₹20 ಕೋಟಿ ನಷ್ಟವನ್ನು ತಪ್ಪಿಸುವುದಕ್ಕಾಗಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಏರ್ ಇಂಡಿಯಾವನ್ನು ಮಾರಾಟ ಮಾಡುವ ನಿರ್ಧಾರಕ್ಕೆ ಬಂತು.

2021ರ ಡಿಸೆಂಬರ್ ಹೊತ್ತಿಗೆ ಏರ್‌ಇಂಡಿಯಾ ಸಂಸ್ಥೆಯು ಟಾಟಾ ಸನ್ಸ್ ತೆಕ್ಕೆಗೆ ಹೋಗುವ ಹೊತ್ತಿಗೆ, ಕಳೆದ ಹತ್ತು ವರ್ಷಗಳಲ್ಲಿ ರಾಷ್ಟ್ರೀಯ ವಿಮಾನ ಯಾನ ಸಂಸ್ಥೆಗಾಗಿ ಸರ್ಕಾರವು ಮಾಡಿದ ವೆಚ್ಚವು ಅಂದಾಜು ₹1,57,339 ಕೋಟಿ (ಮೌಲ್ಯಮಾಪನ ಪರಿಣತರ ಅಂದಾಜು ಇದು). ಇದರ ಪರಿಣಾಮ ಜನರಿಗೆ ನೇರವಾಗಿ ತಟ್ಟುವುದಿಲ್ಲ. ಹಾಗಿದ್ದರೂ, ನಷ್ಟವನ್ನು ಭರಿಸಲು ತೆರಿಗೆದಾರರ ಹಣವೇ ಬಳಕೆ ಆಗುತ್ತದೆ.

‘ಏರ್ ಇಂಡಿಯಾಕ್ಕೆ ಏನು ಆಯಿತೋ ಅದು ಎಲ್‌ಐಸಿಗೆ ಆಗಬಾರದಲ್ಲವೇ? ಏರ್ ಇಂಡಿಯಾದ ಎಲ್ಲ ಸೊತ್ತುಗಳೂ ಭಾರತ ಸರ್ಕಾರಕ್ಕೆ ಸೇರಿದ್ದು. ಆದರೆ, ಎಲ್‌ಐಸಿಯ ವಿಚಾರದಲ್ಲಿ ಹಾಗಲ್ಲ– ಈ ಸಂಸ್ಥೆಯ ₹31 ಲಕ್ಷ ಕೋಟಿಯ ಆಸ್ತಿಯಲ್ಲಿ ಶೇ ನೂರರಷ್ಟು ಸಾಮಾನ್ಯ ಜನರಿಗೆ ಸೇರಿದ್ದು. ಶೇಕಡಾ ನೂರರಷ್ಟು ಸರ್ಕಾರಿ ಸ್ವಾಮ್ಯದ ಸಂಸ್ಥೆ ಆಗಿದ್ದರಿಂದ ಸಂಸ್ಥೆಯ ಹಣಕಾಸು ಆರೋಗ್ಯ ಸ್ಥಿತಿಯು ಹಣಕಾಸು ಮಾರುಕಟ್ಟೆಯ ವಿಶ್ಲೇಷಣೆಯಿಂದ ಹೊರಗೇ ಇತ್ತು. ಷೇರು ಮಾರಾಟಕ್ಕಾಗಿ ಷೇರು ಮಾರುಕಟ್ಟೆಯಲ್ಲಿ ನೋಂದಣಿ ಆಗುವುದರೊಂದಿಗೆ ಎಲ್‌ಐಸಿ ಕೂಡ ಸೆಬಿಯ ನೇರ ನಿಗಾಕ್ಕೆ ಒಳಪಡುತ್ತದೆ ಮತ್ತು ಇತರ ಎಲ್ಲ ನೋಂದಿತ ಕಂಪನಿಗಳ ಹಾಗೆಯೇ, ಎಲ್ಲ ಅಗತ್ಯಗಳನ್ನು ಪೂರೈಸಬೇಕಾಗುತ್ತದೆ. ಎಲ್‌ಐಸಿ ಕೂಡ ತ್ರೈಮಾಸಿಕ ಫಲಿತಾಂಶ, ವಾರ್ಷಿಕ ಫಲಿತಾಂಶ ಪ್ರಕಟಿಸಬೇಕಾಗುತ್ತದೆ; ವಾರ್ಷಿಕ ಮಹಾಸಭೆಗಳನ್ನು ನಡೆಸಬೇಕಾಗುತ್ತದೆ. ಷೇರುದಾರರ ಕುಂದುಕೊರತೆಗಳತ್ತ ಕಡ್ಡಾಯವಾಗಿ ಗಮನ ಹರಿಸಬೇಕಾಗುತ್ತದೆ. ಎಲ್‌ಐಸಿಯ ಆರ್ಥಿಕ ಸ್ಥಿರತೆಯ ಬಗ್ಗೆ ಪಾಲಿಸಿದಾರನಿಗೂ ಅರಿವು ಇರುತ್ತದೆ.

2) ಷೇರುಪೇಟೆಯಲ್ಲಿ ನೋಂದಣಿ ಆಗುವುದರಿಂದ ಎಲ್‌ಐಸಿಯ ದಕ್ಷತೆ, ಪಾರದರ್ಶಕತೆ ಹೆಚ್ಚುತ್ತದೆ; ಮಾಹಿತಿ ಬಹಿರಂಗಪಡಿಸಬೇಕಾಗುತ್ತದೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಹಣಕಾಸು ಹಾಗೂ ಹೂಡಿಕೆಗೆ ಶಿಸ್ತು ಬರುತ್ತದೆ.

3) ಹೂಡಿಕೆದಾರರು/ ವಿಶ್ಲೇಷಕರ ಪರಿಶೀಲನೆ ಮತ್ತು ನಿಗಾ ಹಕ್ಕಾಗುತ್ತದೆ.

4) ಇಂತಹ ಕ್ರಮಗಳು ಎಲ್‌ಐಸಿಯ ಒಟ್ಟು ಆಡಳಿತವನ್ನು ಬಲಪಡಿಸುತ್ತದೆ ಮತ್ತು ಕಾಲಕ್ರಮೇಣ, ಪಾಲಿಸಿದಾರರಿಗೆ ಹೆಚ್ಚಿನ ಲಾಭ ಕೊಡಲು ನೆರವಾಗುತ್ತದೆ.

5) ನೋಂದಣಿಯ ಬಳಿಕ ಸೆಬಿಯ ನಿಗಾ ಹೆಚ್ಚುತ್ತದೆ ಮತ್ತು ಸರ್ಕಾರದ ಹಸ್ತಕ್ಷೇಪವು ಗಣನೀಯವಾಗಿ ತಗ್ಗುತ್ತದೆ ಹಾಗೂ ಎಲ್‌ಐಸಿಯ ಆಸ್ತಿ ನಿರ್ವಹಣೆಯ ಗುಣಮಟ್ಟವು ಸುಧಾರಣೆಯಾಗುತ್ತದೆ. ಒಟ್ಟಿನಲ್ಲಿ, ನೋಂದಣಿಯ ಬಳಿಕ ಸರ್ಕಾರದ ಹಸ್ತಕ್ಷೇಪ ಕಡಿಮೆಯಾಗಿ ಎಲ್‌ಐಸಿ ಹೆಚ್ಚು ವಿಶ್ವಾಸಾರ್ಹವಾಗುತ್ತದೆ. ಇದು ಸಂಸ್ಥೆಯ ಹಣಕಾಸು ಆರೋಗ್ಯಕ್ಕೆ ಸಕಾರಾತ್ಮವಾಗಿ ಪರಿಣಮಿಸುತ್ತದೆ.

6) ಏರ್ ಇಂಡಿಯಾದಲ್ಲಿ ನಡೆಸಿದಂತೆ ಸರ್ಕಾರವು ಅಪರಾಧ ಒಳಸಂಚು ನಡೆಸುವುದು ಅತ್ಯಂತ ಕಷ್ಟಕರವಾಗುತ್ತದೆ.

ಈ ಎಲ್ಲ ಅನುಕೂಲಗಳಿಂದಾಗಿ ಪಾಲಿಸಿದಾರರಿಗೆ ಸಿಗುವ ಲಾಭಾಂಶವು ಹೆಚ್ಚುತ್ತದೆ ಮತ್ತು ಅವರ ದೀರ್ಘಾವಧಿ ಹೂಡಿಕೆಗಳಿಗೆ ರಕ್ಷಣೆ ದೊರೆಯುತ್ತದೆ.

ಪಾಲಿಸಿದಾರರಿಗೆ ಇರುವ ಸರ್ಕಾರದ ಖಾತರಿಯು ಷೇರು ಮಾರಾಟ ಮತ್ತು ನೋಂದಣಿಯ ಬಳಿಕವೂ ಇರಲಿದೆಯೇ?

ಸಂಪೂರ್ಣ ಸರ್ಕಾರಿ ಸ್ವಾಮ್ಯದ ಕಂಪನಿಯಾಗಿದ್ದ ಕಾರಣ, ಖಾತರಿ ಮೊತ್ತ ಮತ್ತು ಘೋಷಿತ ಬೋನಸ್ ಮೊತ್ತಕ್ಕೆ ಸರ್ಕಾರದ ಖಾತರಿ ಇತ್ತು. ಎಲ್‌ಐಸಿಯ ಪಾಲಿಸಿಗಳ ಮಾರಾಟಕ್ಕೆ ಇದ್ದ ಬಹುದೊಡ್ಡ ಅನುಕೂಲವೂ ಅದೇ ಆಗಿತ್ತು. ಆಂಶಿಕ ಷೇರು ಮಾರಾಟದ ಪ್ರಸ್ತಾವವಷ್ಟೇ ಇದೆ. ಹಾಗಾಗಿ, ಐಪಿಒ ಬಳಿಕವೂ ಕಂಪನಿಯು ಬಹುಪಾಲು ಸರ್ಕಾರದ ಬಳಿಯೇ ಇರುತ್ತದೆ. ಹಾಗಾಗಿ, ಸರ್ಕಾರದ ಖಾತರಿಯು ಮುಂದುವರಿಯುವ ಸಾಧ್ಯತೆಯೇ ಹೆಚ್ಚು.

ದೇಶದ ಸಾರ್ವಜನಿಕ ರಂಗಕ್ಕೆ ಎಲ್‌ಐಸಿಯ ಕೊಡುಗೆಯು ಅಪಾರ. ಹಾಗಾಗಿಯೇ ಮುಂದಿನ ತಲೆಮಾರುಗಳಿಗಾಗಿ ಈ ಸಂಸ್ಥೆಯನ್ನು ಸಂರಕ್ಷಿಸಬೇಕಿದೆ. ಅಪ್ರಾಮಾಣಿಕ ಆಡಳಿತದಾರರ ಕೈಯಲ್ಲಿ ಈ ಸಂಸ್ಥೆಗೆ ಏರ್ ಇಂಡಿಯಾಕ್ಕೆ ಬಂದ ಗತಿ ಬರಬಾರದು. ಹಾಗಾಗಿ, ಪಾಲಿಸಿದಾರರ ಹಿತದೃಷ್ಟಿಯಿಂದ ಷೇರು ಮಾರಾಟ ಮತ್ತು ಷೇರು ಮಾರುಕಟ್ಟೆಯಲ್ಲಿ ನೋಂದಣಿ ಅಗತ್ಯ.

ಲೇಖಕ: ಬಿಜೆಪಿ ಆರ್ಥಿಕ ಪ್ರಕೋಷ್ಠದ ಸಂಚಾಲಕರಾಗಿದ್ದರು

ಪ್ರಜಾವಾಣಿ ಚರ್ಚೆ



ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ನಂಬಿಕೆಯೇ ದಾಂಪತ್ಯದ ಜೀವಾಳ

ಆಧುನಿಕತೆ ಬೆಳೆದಂತೆ ಮಾನವರ ದಾಂಪತ್ಯಜೀವನ ಶಿಥಿಲವಾಗುತ್ತಿದೆ. ಸಣ್ಣಪುಟ್ಟ ಕಾರಣಗಳಿಗೂ ದಾಂಪತ್ಯಜೀವನ ಕೊನೆಗೊಳಿಸಿಕೊಳ್ಳುವವರ ಸಂಖ್ಯೆ ಇತ್ತೀಚೆಗೆ ಹೆಚ್ಚಾಗುತ್ತಿದೆ. ಮದುವೆಯಾಗಿ ವರ್ಷಗಳಿರಲಿ, ಕೆಲ ತಿಂಗಳಲ್ಲೇ ವಿರಸ ಮೂಡಿಸಿಕೊಳ್ಳುವ ದಂಪತಿಗಳ ಸಂಖ್ಯೆಯೂ ಕಡಿಮೆ ಇಲ್ಲ. ಪ್ರೀತಿ-ನಂಬಿಕೆ ಕಳೆದುಕೊಂಡ ದಂಪತಿಗಳಲ್ಲಿ ಭುಗಿಲೇಳುತ್ತಿರುವ ಕಲಹ-ಕದನಗಳು ಆತಂಕಕಾರಿಯಾಗಿ ಬೆಳೆಯುತ್ತಿದೆ. ಇದರಿಂದ ನ್ಯಾಯಾಲಯಗಳಲ್ಲಿ ವಿಚ್ಛೇದನ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ. ಇದು ಹೀಗೇ ಮುಂದುವರೆದರೆ ಮುಂದೊಂದು ದಿನ ವಿಚ್ಛೇದನ ಪ್ರಕರಣಗಳಿಗೇ ಪ್ರತ್ಯೇಕ ನ್ಯಾಯಾಲಯ ನಿರ್ಮಿಸಬೇಕಾದ ಅನಿವಾರ್ಯ ಎದುರಾದರೂ ಅಚ್ಚರಿ ಇಲ್ಲ.

ಮಾನವರ ಸಂಬಂಧಗಳಲ್ಲಿ ಉಂಟಾಗುವ ಕೆಡುಕು, ಮಾನವರ ಭವಿಷ್ಯದ ಬೆಳವಣಿಗೆಗೆ ತೊಡಕಾಗುವ ಅಪಾಯ ಸಹ ಇದೆ. ಮದುವೆ ಸ್ವರ್ಗದಲ್ಲಿ ನಿಶ್ಚಯವಾಗಿರುತ್ತದೆ ಎಂಬ ನಂಬಿಕೆ ಇದೆ. ಆದರೆ ತಿಳಿಗೇಡಿಗಳು ಸ್ವರ್ಗದಲ್ಲಿ ನಿಶ್ಚಯವಾದ ಮದುವೆಯನ್ನು ವಿಚ್ಛೇದನ ಎಂಬ ನರಕದಲ್ಲಿ ಕೊನೆಗಾಣಿಸಿಕೊಳ್ಳುತ್ತಿದ್ದಾರೆ. ಇಂಥ ಪ್ರವೃತ್ತಿ ಮಾನವರ ನೆಮ್ಮದಿಯ ಬದುಕಿಗೆ ಒಳ್ಳೆಯದಲ್ಲ. ದಾಂಪತ್ಯ ಅನ್ನೋದು ಕೇವಲ ಗಂಡು-ಹೆಣ್ಣಿನ ಸಂಬಂಧಗಳಿಗಷ್ಟೆ ಸೀಮಿತವಾಗಿಲ್ಲ. ಅದು ಸಂಸಾರದಾಚೆಗಿನ ಭವಿಷ್ಯದ ಸಂಬಂಧಗಳಿಗೂ ಸೇತುವೆಯಾಗಿರುತ್ತದೆ. ಇಂಥ ಸಂಬಂಧಗಳ ವಂಶವೃಕ್ಷದ ಬಿಳಲುಗಳನ್ನು ಸ್ವಾರ್ಥ-ಪ್ರತಿಷ್ಠೆಗಳಿಗಾಗಿ ಕಡಿಯಬಾರದು. ಈ ಸಂಸಾರಬಂಧಗಳು ಸಮಾಜಕ್ಕೂ ಕೊಂಡಿ ಬೆಸೆದಿವೆ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಆ ಮೂಲಕ ಮಾನವಕುಲದ ಉದ್ಧಾರಕ್ಕೂ ಸಂಸಾರ ಬಂಧಗಳು ಕಾರಣವಾಗಿರುತ್ತವೆ ಅನ್ನೋದನ್ನ ಮರೆಯಬಾರದು.

ಮೇಲ್ನೋಟಕ್ಕೆ ಇತ್ತೀಚಿನ ದಾಂಪತ್ಯಗಳ ಸಡಿಲಿಕೆಗೆ ಸ್ವಾರ್ಥ-ಪ್ರತಿಷ್ಠೆಗಳು ಕಾರಣ ಅಂತ ಗೊತ್ತಾದರೂ, ಆಂತರಿಕವಾಗಿ ತಪ್ಪುಗಳ ಪದರಗಳನ್ನು ಬಿಡಿಸಿ ನೋಡಿದರೆ, ಅಲ್ಲಿ ದಾಂಪತ್ಯಕ್ಕೆ ಅಗತ್ಯವಾದ ನಂಬಿಕೆಯ ಬೀಜ ಚಿಗುರದೆ ಕೊಳೆತಿರುವುದು ಗೋಚರವಾಗುತ್ತದೆ. ಯಾವುದೇ ಸಂಬಂಧಗಳು ಗಟ್ಟಿಯಾಗಿರಲು ನಂಬಿಕೆಯ ಬೇರು ಗಾಢವಾಗಿ ಮನಸ್ಸಿನಾಳದಲ್ಲಿ ಬೆಳೆದಿರಬೇಕು. ಆಗಷ್ಟೆ ದಾಂಪತ್ಯವೆಂಬ ಗಿಡ ಹೆಮ್ಮರವಾಗಿ ವಂಶವೃಕ್ಷವಾಗಿ ಬಹುಕಾಲ ಬಾಳುತ್ತದೆ. ತಲೆಮಾರಿನಿಂದ ತಲೆಮಾರಿಗೆ ಮಾನವರ ವಂಶವೃಕ್ಷ ಬೆಳೆದಿರುವುದೇ ಇಂಥ ವಿಶ್ವಾಸದ ಹಂದರದಲ್ಲಿ. ಯಾರದೋ ಮನೆಯಲ್ಲಿ ಬೆಳೆದ ಹೆಣ್ಣು, ಪರಿಚಯವೇ ಇಲ್ಲದವರ ಮನೆಗೆ ಬಂದು ಬದುಕು ಕಟ್ಟಿಕೊಳ್ಳುವುದು ಮಾನವ ಜೀವನ ಪಯಣದಲ್ಲಿ ಕಾಣುವ ಬಹು ಸುಂದರ ಕ್ಷಣಗಳು. ತನ್ನವರನ್ನು ಬಿಟ್ಟು, ತನ್ನವರಲ್ಲದವರನ್ನು ತನ್ನವರೆಂದು ಹೊಸ ಬದುಕು ಕಟ್ಟುವ ಹೆಣ್ಣನ್ನು ನಮ್ಮ ಸಂಸ್ಕೃತಿಯಲ್ಲಿ ಶಕ್ತಿದೇವತೆ ಎಂದು ಕರೆಯುತ್ತೇವೆ. ನಿಜಾರ್ಥದಲ್ಲಿ ಹೆಣ್ಣು ಗಂಡಿಗಿಂತ ಹೆಚ್ಚು ಶಕ್ತಳೇ. ಆ ಶಕ್ತಿ ಆಕೆಗೆ ಇಲ್ಲದಿದ್ದರೆ, ಸಂಬಂಧವಿಲ್ಲದವರ ಮನೆಗೆ ಬಂದು ಸಂಬಂಧವನ್ನು ಶಾಶ್ವತವಾಗಿ ಗಟ್ಟಿ ಮಾಡಲು ಸಾಧ್ಯವಾಗುತ್ತಿರಲಿಲ್ಲ.

ಹೆಣ್ಣಿನ ಈ ತ್ಯಾಗವನ್ನು ಗಂಡು ಯಾವತ್ತೂ ಮರೆಯಬಾರದು. ತವರ ಮರೆತು, ಪರರ ಮನೆಯ ಬೆಳಗಲು ಬರುವ ಹೆಣ್ಣನ್ನು ತನ್ನ ಮನೆಯ ಸೇವಕಿ ಅಂದುಕೊಳ್ಳಬಾರದು. ಹಾಗೆಯೇ ತ್ಯಾಗಕ್ಕೆ ಹೆಸರಾದ ಹೆಣ್ಣು ತವರಿನ ಹೆಸರು ಳಿಸುವ ನಡವಳಿಕೆಯನ್ನೂ ರೂಢಿಸಿಕೊಳ್ಳಬೇಕು. ತವರಿನಲ್ಲಿ ಕಳೆದ ಸ್ವೇಚ್ಛೆಯ ಬದುಕಿನಿಂದ ಗಂಡನ ಮನೆಯ ಜವಾಬ್ದಾರಿಯ ಬದುಕಿಗೆ ಬಂದಿದ್ದೇನೆಂಬ ಪ್ರಜ್ಞೆ ಮೂಡಿಸಿಕೊಳ್ಳಬೇಕು. ತವರಿನಲ್ಲಿ ಮಗಳಾಗಿ ಕಲಿತ ಬದುಕಿನ ಪಾಠವನ್ನು, ಗಂಡನ ಮನೆಯಲ್ಲಿ ಪತ್ನಿಯಾಗಿ, ತಾಯಿಯಾಗಿ, ಅಜ್ಜಿಯಾಗಿ ಪರೀಕ್ಷೆಗೆ ಒಡ್ಡಿಕೊಳ್ಳಬೇಕು. ಇದಕ್ಕೆ ಗಂಡನ ಪೂರಕ ಬೆಂಬಲ ಅಗತ್ಯವಾಗಿ ಬೇಕು. ಆಗಷ್ಟೇ ವಿಚ್ಛೇದನದಂಥ ಪಿಡುಗು ನಿವಾರಣೆಯಾಗುವುದು. ಮನೆಮನಗಳಲ್ಲಿ ನೆಮ್ಮದಿಯ ಸೌಧ ನಿರ್ಮಾಣವಾಗುವುದು. ರಾಮ-ಸೀತೆಯರಂತೆ ಆದರ್ಶ ದಾಂಪತ್ಯ ಸಾಕಾರವಾಗುವುದು. ರಾಮಾಯಣ ಕೇವಲ ಕತೆಯಲ್ಲ, ಅದು ನಮ್ಮ ಬದುಕಿನ ಮಾರ್ಗದರ್ಶಿ. ದುರಾಸೆಯ ರಾವಣ-ಶೂರ್ಪನಖಿಯರ ಬಗ್ಗೆ ಎಚ್ಚರಿಸುತ್ತಾ, ಸಂಸಾರವನ್ನು ‘ಸಚ್ಚಿದಾನಂದ’ದಂತೆ ಸುಖಮಯವಾಗಿಸುವ ದೀಪಿಕೆ.

ಖಾಸಗೀಕರಣ: ಕುರುಡು ಕಾಂಚಾಣದ ರುದ್ರ ನರ್ತನ

• ಪಿ.ವಿ.ಲೋಕೇಶ್



> 40 ಕೋಟಿ ಪಾಲಿಸಿದಾರರಿರುವ, ದೇಶದ ಒಟ್ಟು ವಿಮಾ ಮಾರುಕಟ್ಟೆಯಲ್ಲಿ ಶೇ 70ರಷ್ಟು ಸಿಂಹಪಾಲು ಹೊಂದಿರು ಎಲ್‌ಐಸಿಯನ್ನು ಷೇರುಪೇಟೆಯಲ್ಲಿ ನೋಂದಣಿ ಮಾಡಿ ವಿಶ್ವಾಸಾರ್ಹತೆ ಹೆಚ್ಚಿಸುತ್ತೇವೆ ಎನ್ನುವುದು ಅರ್ಥಹೀನ. ದೇಶದ 23 ಖಾಸಗಿ ವಿಮಾ ಕಂಪನಿಗಳು ಅಭಿವೃದ್ಧಿಯ ಆದ್ಯತಾ ವಲಯದಲ್ಲಿ ಹೂಡಿರುವ ಬಂಡವಾಳದ ಮೊತ್ತ ಶೂನ್ಯವೆಂದು ತಿಳಿದೂ, ಎಲ್‌ಐಸಿಯನ್ನು ಖಾಸಗೀಕರಿಸುವುದು ದುರುದ್ದೇಶದ ಪರಮಾವಧಿ

ಈ ಬಾರಿಯ ಕೇಂದ್ರ ಬಜೆಟ್ ಅಧಿವೇಶನದಲ್ಲಿ, ಜೀವ ವಿಮಾ ನಿಗಮ ಕಾಯ್ದೆ-1956ಕ್ಕೆ 27 ತಿದ್ದುಪಡಿಗಳನ್ನು ಮಾಡಲಾಯಿತು. ಶೇ 100ರಷ್ಟು ಸರ್ಕಾರಿ ಮಾಲೀಕತ್ವದ ಎಲ್‌ಐಸಿಯ ಷೇರುಗಳನ್ನು ಖಾಸಗಿಯವರಿಗೆ ಐ.ಪಿ.ಒ. ಮೂಲಕ ಮಾರಾಟ ಮಾಡಲು ಉದ್ದೇಶಿಸಲಾಗಿದೆ. ಅದಕ್ಕಾಗಿ, ಷೇರು ಮಾರುಕಟ್ಟೆಯಲ್ಲಿ ನೋಂದಣಿ ಮಾಡುವ ಉದ್ದೇಶದಿಂದ ಎಲ್‌ಐಸಿಯನ್ನು ಕಂಪನಿ ಮತ್ತು ಸೆಬಿ ಕಾನೂನುಗಳ ವ್ಯಾಪ್ತಿಗೆ ತರಲಾಗಿದೆ. ಇದು ದೇಶದಾದ್ಯಂತ ಚರ್ಚೆಗೊಳಗಾಗಿದೆ.

ಎಲ್‌ಐಸಿಯು ಮುಕ್ತ ಮಾರುಕಟ್ಟೆಯಲ್ಲಿ ಹೆಚ್ಚಿನ ಬಂಡವಾಳ ಸಂಗ್ರಹಿಸುವುದಕ್ಕೆ, ಆಂತರಿಕ ಲೆಕ್ಕ ಪತ್ರಗಳನ್ನು ಪಾರದರ್ಶಕ ಗೊಳಿಸುವುದಕ್ಕೆ, ತನ್ನ ಸೇವಾ ದಕ್ಷತೆ ಹೆಚ್ಚಿಸುವುದಕ್ಕೆ, ಪಾಲಿಸಿದಾರರ ಹಿತಾಸಕ್ತಿ ವೃದ್ಧಿಗೆ, ಕಾರ್ಯವಿಸ್ತರಣೆಗೆ, ಆಸ್ತಿ ಮೌಲ್ಯ ಹೆಚ್ಚಳಕ್ಕೆ ಆ ಮೂಲಕ ದೇಶದ ಅಭಿವೃದ್ಧಿ ಕಾರ್ಯಕ್ಕೆ ಹೂಡಿಕೆ ಹೆಚ್ಚಿಸುವುದಕ್ಕೆ ಈ ತಿದ್ದುಪಡಿಯಿಂದ ಸಾಧ್ಯ ಎಂದು ಕೇಂದ್ರ ಸರ್ಕಾರ ಸಮರ್ಥಿಸಿಕೊಳ್ಳುತ್ತಿದೆ.

ಇದನ್ನು ವಿರೋಧಿಸುವವರ ವಾದ ಅರ್ಥವಾಗಬೇಕಾದರೆ ಎಲ್‌ಐಸಿಯ ಗಾತ್ರ, ಸ್ಥಾನ, ಪಾತ್ರ, ವ್ಯಾಪ್ತಿ, ಕೊಡುಗೆ ಮತ್ತು ಸಾಮರ್ಥ್ಯಗಳನ್ನು ತಿಳಿದುಕೊಳ್ಳಬೇಕು. ಆಗ ದೇಶದ ಆರ್ಥಿಕ ಸ್ವಾವಲಂಬನೆ, ಸಾರ್ವಭೌಮತ್ವದ ಹಿನ್ನೆಲೆಯಲ್ಲಿ ಈ ಖಾಸಗೀಕರಣದ ಆಪಾಯ ಅರಿವಾಗುತ್ತದೆ.

1956ರಲ್ಲಿ ಕೇಂದ್ರ ಸರ್ಕಾರ ಸಣ್ಣ ಪುಟ್ಟ 154 ಖಾಸಗಿ ವಿಮಾ ಕಂಪನಿಗಳು, 16 ವಿದೇಶಿ ಕಂಪನಿಗಳು, 75 ಪ್ರಾವಿಡೆಂಟ್ ಕಂಪನಿಗಳನ್ನು ರಾಷ್ಟ್ರೀಕರಣ ಮಾಡಿ ‘ಜನರ ದುಡ್ಡು ಜನರ ಕಲ್ಯಾಣಕ್ಕೆ’ ಎಂಬ ಘೋಷಣೆಯೊಂದಿಗೆ ₹5 ಕೋಟಿ ಬಂಡವಾಳದಿಂದ ಎಲ್‌ಐಸಿಯನ್ನು ಆರಂಭಿಸಿತು.

ಎಲ್‌ಐಸಿಯ ಬ್ರ್ಯಾಂಡ್ ಮೌಲ್ಯ ಚೀನಾದ ಪಿಂಗ್ಯಾಂಗ್, ಚೀನಾ ಲೈಫ್ ವಿಮಾ ಕಂಪನಿಗಳಿಗಿಂತ ಹೆಚ್ಚು. ವಿಶ್ವದ ಟಾಪ್-10 ಬ್ರ್ಯಾಂಡ್ ಮೌಲ್ಯ ಹೊಂದಿರುವ ವಿಮಾ ಕಂಪನಿಗಳಲ್ಲಿ ಎಲ್‌ಐಸಿ ಸಹ ಒಂದು. ಈ ಸಂಸ್ಥೆಯು ಸುಮಾರು 30 ಲಕ್ಷಕ್ಕಿಂತ ಹೆಚ್ಚಿನ ಫೀಲ್ಡ್ ಏಜೆಂಟರು ಮತ್ತು ಸುಮಾರು 1.25 ಲಕ್ಷಕ್ಕಿಂತ ಹೆಚ್ಚು ಜನರಿಗೆ ನೇರ ಉದ್ಯೋಗ ನೀಡಿದೆ.

ಎಲ್‌ಐಸಿಯು ಪ್ರತಿ ವರ್ಷ ಸರಾಸರಿ ₹3 ಲಕ್ಷ ಕೋಟಿಯಿಂದ ₹4 ಲಕ್ಷ ಕೋಟಿಯನ್ನು ಸರ್ಕಾರದ ಬಾಂಡ್, ಡಿಬೆಂಚರ್ ಇತ್ಯಾದಿ ಯೋಜನೆಗಳಲ್ಲಿ ಹೂಡಿಕೆ ಮಾಡುತ್ತಿದೆ. ದೇಶದ ಗೃಹ ನಿರ್ಮಾಣ, ನೀರಾವರಿ, ರಸ್ತೆ ಅಭಿವೃದ್ಧಿ ಅಲ್ಲದೆ ವಿವಿಧ ಭದ್ರತೆಯಂತಹ ಸರ್ಕಾರಿ ಯೋಜನೆಗಳಿಗೆ ಒಟ್ಟು ₹24 ಲಕ್ಷ ಕೋಟಿ ಹೂಡಿಕೆಯು ಸೇರಿ, ಇದುವರೆಗೆ ದೇಶದ ಅಭಿವೃದ್ಧಿಗೆ ₹31 ಲಕ್ಷ ಕೋಟಿ ರೂಗಳ ಹೂಡಿಕೆ ಮಾಡಿದೆ. ಸರ್ಕಾರದ ಇಂತಹ ಬೃಹತ್ ಉದ್ಯಮವು ಮಾರುಕಟ್ಟೆಯಲ್ಲಿ ಖಾಸಗಿ ಬಂಡವಾಳ ಸಂಗ್ರಹಕ್ಕೆ ಮುಂದಾಗುವುದು ಮೂರ್ಖತನ.

ಕೇಂದ್ರ ಸರ್ಕಾರದ ಐ.ಆರ್.ಡಿ.ಎ.ಐ ಎಂಬ ವಿಮಾ ಉಸ್ತುವಾರಿ ಸಂಸ್ಥೆಗೆ ಎಲ್ಲಾ ಖಾಸಗಿ ವಿಮಾ ಕಂಪನಿಗಳಂತೆ ಎಲ್‌ಐಸಿಯು ಸಹ ಪ್ರತಿ ತಿಂಗಳು ತನ್ನ ಆರ್ಥಿಕ ವಹಿವಾಟಿನ ವರದಿ ನೀಡುತ್ತಿದೆ. ಪ್ರತಿ 3 ತಿಂಗಳಿಗೊಮ್ಮೆ ತನ್ನ ವ್ಯವಹಾರದ ಸ್ಥಿತಿಗತಿಗಳ ಬಗ್ಗೆ ಸಾರ್ವಜನಿಕ ವರದಿ ಬಹಿರಂಗ ಪಡಿಸುತ್ತಿದೆ. ಮೇಲಾಗಿ ದೇಶದ ಸಂಸತ್ತಿನ ಪರಿಶೀಲನೆಗಾಗಿ ಪ್ರತಿ ವರ್ಷ ತನ್ನ ವರದಿ ಸಲ್ಲಿಸುತ್ತಿದೆ (ಖಾಸಗಿ ಕಂಪನಿಗಳಿಗೆ ಈ ನಿರ್ಬಂಧವಿಲ್ಲ). ಹೀಗಿದ್ದರೂ ಪಾರದರ್ಶಕತೆ ಇಲ್ಲವೆಂಬ ಸರ್ಕಾರದ ವಾದ ಹಾಸ್ಯಾಸ್ಪದ.

2001ರ ಸೆಪ್ಟಂಬರ್ 11ರಂದು ಭಯೋತ್ಪಾದಕ ದಾಳಿಗೆ ಡಬ್ಲ್ಯು.ಟಿ.ಒ. ಕಟ್ಟಡ ಧ್ವಂಸವಾಗಿ ಸತ್ತ ಸಾವಿರಾರು ಜನರಿಗೆ ಅಮೆರಿಕದ ಖಾಸಗಿ ವಿಮಾ ಕಂಪನಿಗಳು ವಿಮೆ ಪರಿಹಾರ ನಿರಾಕರಿಸಿದ್ದನ್ನು ನೋಡಿದ್ದೇವೆ. ಅದರೆ ಭಾರತದಲ್ಲಿ ಭೂಕಂಪ, ಪ್ರವಾಹ, ಸುನಾಮಿಗಳಂತಹ ಪ್ರಕೃತಿ ವಿಕೋಪದ ಸಾವುಗಳೂ ಸೇರಿದಂತೆ ಪಾಲಿಸಿದಾರರ ಎಲ್ಲಾ ರೀತಿಯ ಸಾವುಗಳಿಗೂ ಶೇ 99.86ರಷ್ಟು ಕ್ಲೇಮುಗಳನ್ನು ಎಲ್‌ಐಸಿ ಪಾವತಿಸಿದೆ. ಪಾಲಿಸಿದಾರರ ವಿಮಾ ಮೊತ್ತವನ್ನು ಕರಾರುವಕ್ಕಾಗಿ ಪಾವತಿಸಿದ ಜಗತ್ತಿನ ನಂ.1 ವಿಮಾ ಕಂಪನಿ ಎಂಬ ಹಿರಿಮೆ ಹೊಂದಿದೆ. ಮಾತ್ರವಲ್ಲ, ಅತ್ಯಂತ ನಂಬಿಕಸ್ಥ ಬ್ರ್ಯಾಂಡ್ (ಎಮ್.ಟಿ.ಬಿ.) ಗೋಲ್ಡನ್ ಪಿಕಾಕ್, ಮಾರ್ಗ್‌ಗಳಂತಹ ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದಿರುವ ಎಲ್‌ಐಸಿ, ಷೇರುಪೇಟೆಯಲ್ಲಿ ನೋಂದಿತವಾದ ಕಂಪನಿ ಆಗಿರಲಿಲ್ಲ ಎಂಬ ಸತ್ಯವನ್ನು ಸರ್ಕಾರ ಗಮನಿಸುವುದಿಲ್ಲ.

2022ರ ಆರಂಭದಲ್ಲಿ ಎಲ್‌ಐಸಿಯ ಶೇ 5ರಷ್ಟು ಷೇರುಗಳನ್ನು ಮಾರಾಟಕ್ಕಿಟ್ಟು (ಇದರಲ್ಲಿ ಶೇ 10ರಷ್ಟು ಪಾಲಿಸಿದಾರರಿಗೆ ಆದ್ಯತೆ) ನಂತರದ 5 ವರ್ಷಗಳಲ್ಲಿ ಶೇ 25ರಷ್ಟು ಮಾರಾಟ ಮಾಡಿ, 5 ವರ್ಷಗಳ ನಂತರ ಶೇ 49ರಷ್ಟು ಷೇರುಗಳನ್ನು ಮಾರಾಟ ಮಾಡುವುದು ಸರ್ಕಾರದ ಸದ್ಯದ ಪ್ರಸ್ತಾವ.

ದೇಶದ 5.15 ಕೋಟಿ ಡಿಮ್ಯಾಟ್ ಖಾತೆದಾರರ ಪೈಕಿ ಕೇವಲ 1.89 ಕೋಟಿ ಖಾತೆಗಳು ಮಾತ್ರ ಸಕ್ರಿಯವಾಗಿವೆ. ದೇಶದಲ್ಲಿ ಶೇ 3ರಿಂದ 4ರಷ್ಟು ಜನಸಾಮಾನ್ಯರು ಷೇರು ಮಾರುಕಟ್ಟೆ ವ್ಯವಹಾರದಲ್ಲಿದ್ದಾರೆ (ರಿಟೇಲ್ ಹೂಡಿಕೆದಾರರು). ದೇಶದ ಷೇರು ಮಾರುಕಟ್ಟೆ ವ್ಯವಹಾರದ ಒಟ್ಟು ಮೊತ್ತದಲ್ಲಿ ಈ ಸಾಮಾನ್ಯ ಜನರ ಪಾಲು ಶೇ 4ರಷ್ಟು ಮಾತ್ರ. ಸರ್ಕಾರ ಎಲ್‌ಐಸಿ ಷೇರು ಮಾರಾಟದಿಂದ ನಿರೀಕ್ಷಿಸಿರುವ ಅಂದಾಜು ₹80 ಸಾವಿರ ಕೋಟಿಯನ್ನು ಈ ದೇಶೀಯ ರಿಟೇಲ್ ಹೂಡಿಕೆದಾರರು ಕೊಳ್ಳಲು ಶಕ್ತರಾಗಿದ್ದಾರೆಯೇ ಎಂದು ಖಾಸಗೀಕರಣದ ಪರವಾಗಿರುವ ಆರ್ಥಿಕ ತಜ್ಞರು ಶಂಕಿಸುತ್ತಿದ್ದಾರೆ.

ಬಹುಶಃ ಇದನ್ನು ಗಮನಿಸಿಯೇ ಕೇಂದ್ರ ವಿತ್ತ ಸಚಿವಾಲಯವು ಸದ್ಯಕ್ಕೆ ಮಾರಾಟಕ್ಕೆ ಇಟ್ಟ ಎಲ್‌ಐಸಿಯ ಒಟ್ಟು ಐ.ಪಿ.ಒ.ಗಳಲ್ಲಿ ಅರ್ಧದಷ್ಟನ್ನು ಮಾತ್ರ ಷೇರು ಮಾರುಕಟ್ಟೆಗೆ ಬಿಡುಗಡೆ ಮಾಡಲು ಯೋಚಿಸುತ್ತಿದೆ ಎಂಬ ಸುದ್ದಿಯು ಹರಿದಾಡುತ್ತಿದೆ. ಈ ಹಿನ್ನೆಲೆಯಲ್ಲಿ ಎಲ್‌ಐಸಿಯ ಅರ್ಧದಷ್ಟು ಐ.ಪಿ.ಒ.ಗಳನ್ನಾದರೂ ಜಾಗತಿಕ ಷೇರು ಮಾರುಕಟ್ಟೆಗಳಾದ ಹಾಂಕಾಂಗ್, ಶಾಂಘೈ, ನ್ಯೂಯಾರ್ಕ್‌ಗಳಲ್ಲಿ ಲಿಸ್ಟಿಂಗ್ ಮಾಡಿಸಿ ವಿಶ್ವ ಮಾರುಕಟ್ಟೆಗೆ ಲಗ್ಗೆ ಇಡಬಾರದೇಕೇ? ಎಲ್‌ಐಸಿಗಿಂತ ಹಿಂದಿರುವ ಚೀನಾದ ವಿಮಾಕಂಪನಿಗಳೆಲ್ಲಾ ಈಗಾಗಲೇ ವಿದೇಶಿ ಷೇರು ಮಾರುಕಟ್ಟೆಯಲ್ಲಿರುವಾಗ ನಾವು ಸಹಾ ಅವರೊಟ್ಟಿಗೆ ಸ್ಪರ್ಧೆ ಮಾಡಬಹುದು ಎಂಬ ವಾದಗಳು ಬಲವಾಗಿ ಕೇಳಿಬರುತ್ತಿವೆ.

ಷೇರು ಮಾರುಕಟ್ಟೆಯಲ್ಲಿ ತೊಡಗಿರುವ ರಿಟೇಲ್ ಹೂಡಿಕೆದಾರರು ಎಲ್‌ಐಸಿಯ ಐ.ಪಿ.ಒ.ವನ್ನು ಕುತೂಹಲದಿಂದ ಕಾಯುತ್ತಿರಬಹುದು. ಏಕೆಂದರೆ ಸರ್ಕಾರ ಆರಂಭದಲ್ಲಿ ಬಿಡುಗಡೆ ಮಾಡಲಿರುವ ಒಟ್ಟು ಐ.ಪಿ.ಒ.ಗಳಲ್ಲಿ ಎಲ್.ಐ.ಸಿ. ಪಾಲಿಸಿದಾರರಿಗೆ ಶೇ 10ರಷ್ಟು ಆದ್ಯತೆ ನೀಡಿ, ಅದರ ಬೆಲೆಯಲ್ಲಿ ಶೇ 8-10ರಷ್ಟು ರಿಯಾಯಿತಿಯ ಕೊಡುಗೆಯನ್ನೂ ನೀಡುತ್ತಿದೆ. ಹಾಗಾಗಿ ರಿಟೇಲ್ ಹೂಡಿಕೆದಾರರು ಕೊಳ್ಳಲು ಮುಗಿಬೀಳಬಹುದು. ಆದರೆ ಮುಂದಿನ 5 ವರ್ಷಗಳಲ್ಲಿ ಮತ್ತು ನಂತರದ ವರ್ಷಗಳಲ್ಲಿ ಅಂತಿಮವಾಗಿ ಈ ಷೇರುಗಳು ಯಾರ ಕೈ ಸೇರಲಿವೆ ಎಂಬುದು ಮುಖ್ಯ. 135 ಕೋಟಿ ಜನರಿಗೆ ಸೇರಿದ ಈ ಆಸ್ತಿಯನ್ನೆಲ್ಲಾ ಶೇ 4ರಷ್ಟು ಜನರ ಮೂಲಕ ದೊಡ್ಡ ಕುಳಗಳ ಕೈ ಸೇರುವಂತೆ ಮಾಡುವುದೇ ಈ ಖಾಸಗೀಕರಣದ ಅಂತಿಮ ಉದ್ದೇಶ. ಅದಕ್ಕೆ ಎದುರಾಗಿ ಬೇಕಾಗಿರುವುದು ‘ದೇಶ ಮಾರಲು ಬಿಡುವುದಿಲ್ಲ’ ಎಂಬ ಪ್ರಬಲ ಪ್ರತಿರೋಧದ ಜನ ಸಂದೇಶ.

ಲೇಖಕ: ಸಿಪಿಐ ರಾಷ್ಟ್ರೀಯ ಮಂಡಳಿ ಸದಸ್ಯ

ಪದಬಂಧ 4756


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸ್ಲೇಟಿನ ಮೇಲೆ ಬರೆಯುವ ಸಾಧನ (3)
3.ಜೈನ ದೇವಾಲಯ (3)
5.ರಾಮನ ಮಗನಿಂದ ಬಂದಿರುವ ಹುರುಪು! (5)
7.ಈಕೆ ಮನ್ಮಥನ ಪತ್ನಿ (2)
9.ಪ್ರತೀ ವಾರ ನದಿಯ ದಡವನ್ನು ಹುಡುಕಿ! (2)
10.ಪಿನಾಕದ ಹತ್ತಿರವಿರುವ ಕೋಗಿಲೆ (2)
12.ನಗರದಲ್ಲಿ ರುವ ಮನುಷ್ಯ (2)
14.ಅಡಿಪಾಯದ ಮಾದರಿಯಿದು (5)
16.ಹರನಿಂದ ಸಿಕ್ಕಿರುವ ಆಶೀರ್ವಾದ (3)
17.ನಯವಾಗಿ ಹೊಳೆಯುವ ಕಣ್ಣು (3)

ಮೇಲಿಂದ ಕೆಳಕ್ಕೆ

1.ಬರದಲ್ಲಿ ತೋರುತ್ತಿರುವ ಒಣ ಜಂಬ! (4)
2. ತೆಳುವಾದ ಸೀರೆ (3)
3.ಬಯಲಲ್ಲಿರುವಾಗ ಮೂಡಿದ ಆಸೆ (3)
4.ಸೂರ್ಯನ ಇನ್ನೊಂದು ಹೆಸರು (4)
6.ಲಕ್ಷಾಧಿಪತಿಯತ್ತ ನೆಟ್ಟಿರುವ ಗುರಿ! (2)
8.ಈತ ತಿರುಪೆ ಬೇಡುವವನು (3)
9.ಮಾನವಂತ ಕೈಗೊಂಡ ನಿಶ್ಚಯ (3)
10.ತಂದೆಯ ತಂದೆ (4)
11. ಸಂಸಾರ ಬಂಧನಕ್ಕೆ ಒಳಗಾದವನು (2)
13.ಬಾಳೆ ಹಣ್ಣಿನಿಂದ ಮಾಡಿರುವ ಖಾದ್ಯ (4)
14.ಅಡಿಕೆ ಹಾಳೆಯಿಂದ ಮಾಡಿರುವ ತಟ್ಟೆ (3)
15.ಮಾನವಂತನಿಗೆ ಮಾಡುತ್ತಿರುವ ಆದರ (3)



4755ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಕಿತಾಪತಿ 5.ಜಾಯಮಾನ
6.ಕುಡುಗೋಲು
8.ಮಡಿವಾಳ
12.ವನಸುಮ
14.ಅಭಿಮಾನ
15.ಅನುಕಂಪ 16.ತರಗತಿ

ಮೇಲಿಂದ ಕೆಳಕ್ಕೆ:
1.ಅಜಾತಶತ್ರು
2.ಸಮಾಗಮ
3.ಕಿರುಕುಳ 4.ತಿಕ್ಕಲು
7.ಗೋರಿ 9.ವಾಮನ
10.ಉಷ್ಣಮಾಪಕ 11.ನಾಭಿ
12.ವನಸ್ಪತಿ 13.ಮರುನುಡಿ
14.ಅನೃತ

ಸುಡೊಕು 5142

	6				8			
1		3				8	9	4
			5		9			3
	9			7			5	
		5	9		3	4	7	
7				1				9
	7		8		1		4	
4		9				5		7
	3		4		7		1	2

5141 ಸುಡೊಕು

5	2	6	9	4	1	8	3	7
4	7	8	3	2	6	5	9	1
3	9	1	5	7	8	6	2	4
9	5	4	7	1	2	3	6	8
1	6	7	8	9	3	4	5	2
2	8	3	6	5	4	1	7	9
7	3	9	4	8	5	2	1	6
8	1	5	2	6	9	7	4	3
6	4	2	1	3	7	9	8	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ಶನಿವಾರ ಅಕ್ಟೋಬರ್ 23, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಚಿತ್ತಾ ತೃತೀಯ ಗಂ. 44-8 (ರಾ. 11-57) ಶನಿವಾರ ನಿತ್ಯ ನಕ್ಷತ್ರ ಕೃತ್ತಿಕಾ ಗಂ. 34-50 (ರಾ. 8-14) ವ್ಯತೀಪಾತ ನಾಮ ಯೋಗ ಗಂ. 39-17 ವಣಿಜ ಕರಣ ಗಂ. 11-40 ವಿಷ ಗಂ. 1-58 ಅಮೃತ ಗಂ. 28-32 ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00:
ಸೂರ್ಯೋದಯ: 6-14 ಸೂರ್ಯಾಸ್ತ: 5-53 ಅದೃಷ್ಟ ಸಂಖ್ಯೆ 7

ಮೇಷ: ಪಾರಂಪರಿಕವಾಗಿ ನಡೆದುಬಂದ ವ್ಯವಹಾರವನ್ನು ಕೈ ಬಿಡುವುದು ಬೇಡ. ಸಿನೆಮಾ ರಂಗದವರಿಗೆ ಉತ್ತಮ ಅವಕಾಶ. ಮಾಡಿದ ಕೆಲಸಗಳ ಬಗ್ಗೆ ಮತ್ತೊಮ್ಮೆ ಯೋಚಿಸುವುದು ಉತ್ತಮ.

ವೃಷಭ: ಯಾವುದೋ ಮೂಲದಿಂದ ಧನಾಗಮನದ ನಿರೀಕ್ಷೆಯಲ್ಲಿದ್ದೀರಿ. ಆ ಮೂಲದಿಂದ ಹಣಕಾಸಿನ ಅನುಕೂಲ ದೊರೆಯುವ ಸಾಧ್ಯತೆ ಕಂಡುಬರುತ್ತಿದೆ. ಬಂಧುಗಳ ಸಹಾಯ ನಿಮಗಿದೆ.

ಮಿಥುನ: ಸಾಂಸಾರಿಕ ನೆಮ್ಮದಿ ದೊರೆತರೂ ಆರ್ಥಿಕ ಸಮಸ್ಯೆಯಿಂದ ಬಳಲುವ ಸಾಧ್ಯತೆ. ಮಾನಸಿಕ ನೋವನ್ನು ಇತರರಲ್ಲಿ ಹಂಚಿಕೊಳ್ಳಿ. ಸಮಾಜಿಕ ಕಾರ್ಯಗಳಲ್ಲಿ ಭಾಗಿಯಾಗುವಿರಿ.

ಕರ್ಕಾಟಕ: ಬೇರೆಯವರ ವಿಚಾರದಲ್ಲಿ ತಲೆಕೆಡಿಸಿಕೊಳ್ಳದಿರಿ. ನಿಮ್ಮ ಕೆಲಸವನ್ನು ಬೇರೆಯವರೊಂದಿಗೆ ಮಾಡುವುದು ಉತ್ತಮ. ಆರ್ಥಿಕ ಪ್ರಗತಿಯತ್ತ ದಾಪುಗಾಲು.

ಸಿಂಹ: ನಿಮ್ಮ ಪ್ರಾಮಾಣಿಕತೆಯ ಫಲವು ನಿಮ್ಮನ್ನು ಅರಸಿ ಬರಲಿದೆ. ಶೀಘ್ರದಲ್ಲಿ ಉದ್ಯೋಗದಲ್ಲಿ ಉನ್ನತಿಯನ್ನು ಸಾಧಿಸುವಿರಿ. ವೃಥಾ ಆರೋಪಗಳ ಬಗ್ಗೆ ಗಮನ ಬೇಡ.

ಕನ್ಯಾ: ಅತಿಯಾದ ಒತ್ತಡ ಕಾಣಿಸಿದರೂ ಸ್ನೇಹಿತರ ಸಹಕಾರದಿಂದ ನಿರಾಳವಾಗಲಿದ್ದೀರಿ. ಮಕ್ಕಳ ಯೋಗಕ್ಷೇಮದ ಬಗ್ಗೆ ನಿಗಾ ಇರಲಿ. ವಿದ್ಯಾರ್ಥಿಗಳಿಗೆ ಉತ್ತಮ ಸಮಯ.

ತುಲಾ: ಕಠಿಣ ಪರಿಶ್ರಮದ ಫಲದಿಂದ ಉತ್ತಮ ಸಫಲತೆಯನ್ನು ಪಡೆಯಲಿದ್ದೀರಿ. ಯೋಜನೆಯನ್ನು ರೂಪಿಸುವ ಮುನ್ನ ಅವಲೋಕನ ಅಗತ್ಯ. ಹಿನ್ನಡೆಯ ಸಾಧ್ಯತೆ ಕಂಡುಬರುತ್ತಿದೆ.

ವೃಶ್ಚಿಕ: ಕೆಲಸದ ವಿಚಾರಕ್ಕೆ ವಿಶ್ರಾಂತಿಯ ಅಗತ್ಯತೆ. ಒತ್ತಡದಿಂದ ಹೊರಬರುವ ಸಾಧ್ಯತೆ. ನೌಕಾಯಾನಿಗಳಿಗೆ ಒಳ್ಳೆಯ ಸಮಯ. ದೇವತಾ ದರ್ಶನ.

ಧನು: ಪರಿಶ್ರಮಕ್ಕೆ ಯೋಗ್ಯವಾದ ಪ್ರತಿಫಲ ದೊರೆತು ಉತ್ತಮ ಅವಕಾಶ ನಿಮ್ಮದಾಗಲಿದೆ. ಸಮಾಜ ಸುಧಾರಕರಿಗೆ ಹಿನ್ನಡೆ ಸಾಧ್ಯತೆ. ಪತ್ರಿಕೋದ್ಯಮದವರಿಗೆ ವಿಫಲತೆ ಕಂಡುಬರುತ್ತಿದೆ.

ಮಕರ: ಆದಾಯದ ಹೊಸ ದಾರಿ ಗೋಚರಿಸಲಿದೆ. ಹಾಗಂತ ಅತಿಯಾದ ಖರ್ಚನ್ನು ನಿಯಂತ್ರಣದಲ್ಲಿಡುವುದು ಒಳ್ಳೆಯದು. ಯಂತ್ರಾಗಾರದಲ್ಲಿ ಅಗ್ನಿ ಭಯ ಸಾಧ್ಯತೆ.

ಕುಂಭ: ಮನೆಯಲ್ಲಿ ಬಹಳ ದಿನಗಳ ನಂತರ ನಗುವನ್ನು ಕಾಣಲಿದ್ದೀರಿ. ಬಂಧುಗಳ ಆಗಮನದ ಜೊತೆಗೆ ವ್ಯವಹಾರ ಸಂಬಂಧಗಳ ಬಗ್ಗೆ ಚರ್ಚೆ. ಕೈಗಾರಿಕೋದ್ಯಮಿಗಳಿಗೆ ಪ್ರಗತಿ ಸಾಧ್ಯತೆ.

ಮೀನ: ಬ್ಯಾಂಕಿನಿಂದ ಹಣಕಾಸಿನ ಅನುಕೂಲದ ನಿರೀಕ್ಷೆಯಲ್ಲಿರುವ ನಿಮಗೆ ಶೀಘ್ರಗತಿಯಲ್ಲಿ ಕೈಗೂಡಲಿದೆ. ಹೆಂಡತಿಗೆ ಅನಾರೋಗ್ಯದ ಸಾಧ್ಯತೆ ಕಂಡುಬರುತ್ತಿದೆ. ದೂರಪ್ರಯಾಣ ತರವಲ್ಲ.

ನಿಮ್ಮ ಜನ್ಮದಿನ 23-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಾಧ್ಯತೆ ಇದ್ದರೂ ಕೊನೆಯ ಕ್ಷಣದಲ್ಲಿ ತಪ್ಪಿಹೋಗುವ ಸಾಧ್ಯತೆ. ಬಂಧುಗಳಿಂದ ಕಿರಿಕಿರಿ. ವ್ಯವಹಾರ ಉದ್ಯೋಗಗಳು ಅಷ್ಟೊಂದು ಉತ್ತಮವಾಗಿ ಕಾಣುವ ಸಾಧ್ಯತೆ ಇಲ್ಲ.

ಬಿಜೆಪಿ ಪ್ರಚಾರ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿರುಗೇಟು

ಸಿದ್ದರಾಮಯ್ಯರ 'ಭಾಗ್ಯ' ಮಧ್ಯವರ್ತಿ ಪಾಲು

ಪ್ರಜಾವಾಣಿ ವಾರ್ತೆ

ಹಾವೇರಿ: 'ಮುಖ್ಯಮಂತ್ರಿಯಾಗಿದ್ದಾಗ ಸಿದ್ದರಾಮಯ್ಯ ಘೋಷಿಸಿದ 'ಭಾಗ್ಯ'ದ ಯೋಜನೆಗಳು ಜನರ ಮನೆ ಬಾಗಿಲಿಗೆ ತಲುಪದೇ ಮಧ್ಯವರ್ತಿಗಳ ಪಾಲಾದವು. ಅದಕ್ಕಾಗಿಯೇ ಕಾಂಗ್ರೆಸ್ ಪಕ್ಷವನ್ನು ರಾಜ್ಯದ ಜನ ತಿರಸ್ಕರಿಸಿ, ಪ್ರತಿಪಕ್ಷದಲ್ಲಿ ಕೂರಿಸಿದ್ದಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಿದ್ದರಾಮಯ್ಯ ಹೇಳಿಕೆಗೆ ತಿರುಗೇಟು ನೀಡಿದರು.

ಹಾನಗಲ್ ತಾಲ್ಲೂಕಿನ ಬಮ್ಮನಹಳ್ಳಿ ಗ್ರಾಮದಲ್ಲಿ ಶುಕ್ರವಾರ ಉಪಚುನಾವಣೆ ಪ್ರಚಾರಾರ್ಥ ಏರ್ಪಡಿಸಿದ್ದ ಬಿಜೆಪಿ ಸಾರ್ವಜನಿಕ ಸಭೆಯಲ್ಲಿ ಅವರು ಮಾತನಾಡಿದರು.

'ಅನ್ನಭಾಗ್ಯ' ಯೋಜನೆ ಜಾರಿ ಮಾಡಿದ ನಂತರವೇ ಜನ ಅಕ್ಕಿ ನೋಡಿದ್ದಾರೆ ಎನ್ನುವ ರೀತಿಯಲ್ಲಿ ಸಿದ್ದರಾಮಯ್ಯ ಮಾತನಾಡುತ್ತಾರೆ. 1947ರಿಂದಲೂ ಪಡಿತರದಲ್ಲಿ ಅಕ್ಕಿ ಸಿಗುತ್ತಿದೆ. 'ಅನ್ನಭಾಗ್ಯ' ಯೋಜನೆಗೆ ಕೇಂದ್ರ ಸರ್ಕಾರದ ಪಾಲು ₹29 ಹಾಗೂ ರಾಜ್ಯ ಸರ್ಕಾರದ ಪಾಲು ₹3 ರೂಪಾಯಿ ಮಾತ್ರ. ನರೇಂದ್ರ ಮೋದಿ ಫೋಟೊ ಬಳಸದೆ, ಸಿದ್ದರಾಮಯ್ಯ ಅವರು ತಮ್ಮ ಫೋಟೊ ಮಾತ್ರ ಹಾಕಿಕೊಂಡು ಮೆರೆಯುತ್ತಾರೆ' ಎಂದು ಕುಟುಕಿದರು.

ಕಾಂಗ್ರೆಸ್‌ಗೆ ಸೋಲಿನ ಭಯ: 'ಉಪಚುನಾವಣೆಯಲ್ಲಿ ಕಾಂಗ್ರೆಸ್‌ನವರು ಈ ಹಿಂದೆ ಗೆದ್ದಾಗಲೆಲ್ಲ ಜನರ ಬೆಂಬಲದಿಂದ ಗೆದ್ದಿದ್ದೇವೆ ಎಂದು ಬೀಗುತ್ತಿದ್ದರು. ಅದೇ ಬಿಜೆಪಿ ಅಭ್ಯರ್ಥಿಗಳು ಜಯಗಳಿಸಿದರೆ ಹಣದ ಬಲದಿಂದ ಎಂದು ಆರೋಪಿಸುತ್ತಾರೆ. ಯಾಕೆ ನಮಗೆ ಜನರು ವೋಟು ಹಾಕಿರಲ್ವಾ? ಕಾಂಗ್ರೆಸ್‌ಗೆ ಸೋಲಿನ ಭಯ ಕಾಡುತ್ತಿದೆ. ನಮಗೆ ಜನಶಕ್ತಿಯ ಮೇಲೆ ಪೂರ್ಣ ವಿಶ್ವಾಸವಿದೆ' ಎಂದರು.

ಕಾಂಗ್ರೆಸ್‌ನವರಿಗೆ ಕಾಮಾಲೆ ಕಣ್ಣು: ಬೆಳಗಾಲಪೇಟೆ ಪ್ರಚಾರ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ದೇಶದಲ್ಲಿ 100 ಕೋಟಿ ಕೋವಿಡ್ ಲಸಿಕಾಕರಣದ ಸಾಧನೆಯ ಸಂಭ್ರಮವನ್ನು ಆಚರಿಸಬಾರದು ಎಂದು ಸಿದ್ದರಾಮಯ್ಯ ಹೇಳುತ್ತಾರೆ. ಸಿದ್ದರಾಮಯ್ಯಗೆ ಯಾಕಿಂಥ ದುರ್ಬುದ್ಧಿ ಬಂದಿದೆಯೋ ಗೊತ್ತಿಲ್ಲ. ಲಸಿಕೆ ಬಂದಾಗ ತಗೋಬೇಡಿ ಎಂದು ಜನರನ್ನು ಹಾದಿ ತಪ್ಪಿಸಿದರು. ಜನರು ಸರದಿಯಲ್ಲಿ ನಿಂತಾಗ ಎಲ್ಲಿದೆ ವ್ಯಾಕ್ಸಿನ್? ಎಂದು ಕಿಡಿಕಾರಿದರು.

> **ಕಾಂಗ್ರೆಸ್ ಪಾರ್ಟಿ ಅಂದ್ರೆ ಮ್ಯಾಜಿಕ್ ಬಾಕ್ಸ್ ಇದ್ದಂಗೆ, ಹಾವು–ಮುಂಗಸಿ ಒಟ್ಟಿಗೇ ಇರುತ್ತವೆ ಎಂದು ದೀನದಯಾಳ ಉಪಾಧ್ಯಾಯ ಹೇಳಿದ್ದರು**
> **ಶಿವಕುಮಾರ ಉದಾಸಿ,** ಸಂಸದ

ಪ್ರತಿಯೊಂದನ್ನೂ ಟೀಕೆ ಮಾಡುವ ಕಾಂಗ್ರೆಸ್ ನಾಯಕರು ಅಧಿಕಾರ ಸಿಕ್ಕಾಗ ಮಾತ್ರ ಸಮಾಧಾನವಾಗಿರುತ್ತಾರೆ ಎಂದು ಅವರು ಜರಿದರು.



ಹಾನಗಲ್ ತಾಲ್ಲೂಕಿನ ಬಮ್ಮನಹಳ್ಳಿಯಲ್ಲಿ ಶುಕ್ರವಾರ ನಡೆದ ಉಪಚುನಾವಣೆ ಪ್ರಚಾರಾರ್ಥ ಬಿಜೆಪಿ ಸಾರ್ವಜನಿಕ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಮುರುಗೇಶ ನಿರಾಣಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಂಸದ ಶಿವಕುಮಾರ ಉದಾಸಿ, ಬಿಜೆಪಿ ಅಭ್ಯರ್ಥಿ ಶಿವರಾಜ ಸಜ್ಜನರ, ಸಚಿವ ಶಿವರಾಮ ಹೆಬ್ಬಾರ ಜನರತ್ತ ಕೈಬೀಸಿದರು

'ಮೋದಿ ಆಡಳಿತದಿಂದ ಕಾಂಗ್ರೆಸ್ ದೂಳೀಪಟ'

'ಹಣ ಬಲದಿಂದ, ಜಾತಿಯ ಬಲದಿಂದ ಚುನಾವಣೆಗಳನ್ನು ಗೆಲ್ಲುವ ಕೆಟ್ಟ ಸಂಪ್ರದಾಯ ಕಾಂಗ್ರೆಸ್‌ನಿಂದ ಆರಂಭವಾಯಿತು. ಜಾತಿಯ ವಿಷ ಬೀಜ ಬಿತ್ತುತ್ತಿದ್ದ ಕಾಂಗ್ರೆಸ್, ನರೇಂದ್ರ ಮೋದಿ ಅವರು ಪ್ರಧಾನಿ ಆದ ಮೇಲೆ ದೂಳೀಪಟವಾಯಿತು' ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಾಗ್ದಾಳಿ ನಡೆಸಿದರು.

ಜನರು ಸ್ವಾಭಿಮಾನದಿಂದ ಬದುಕಲು ಅಗತ್ಯವಾದ ಸವಲತ್ತು ಮತ್ತು ಯೋಜನೆಗಳನ್ನು ಬಿಜೆಪಿ ರೂಪಿಸಿದೆ. ಮೋದಿ ಸರ್ಕಾರದ ಸವಲತ್ತು ಪಡೆಯದ ಒಂದೇ ಒಂದು ಕುಟುಂಬ ಇದ್ದರೆ ತೋರಿಸಿ ಎಂದು ಸವಾಲು ಹಾಕಿದರು.

'ಬಿಜೆಪಿ ಸಚಿವರು ಚೀಲದಲ್ಲಿ ಹಣ ಹಂಚುತ್ತಿದ್ದಾರೆ ಎಂದು ಹೇಳುವ ಕಾಂಗ್ರೆಸ್ ನಾಯಕರಿಗೆ ನಾಚಿಕೆಯಾಗಬೇಕು. ಮತದಾರರಿಗೆ ಅಪಮಾನ ಮಾಡುವ ಕೆಲಸ ಮಾಡಬೇಡಿ' ಎಂದು ತಿರುಗೇಟು ನೀಡಿದರು.

'ಕಾಂಗ್ರೆಸ್ ಪಕ್ಷ ಮುಳುಗಿಸಲು ಇಬ್ಬರು ಸಿದ್ದುಗಳು ಸಾಕು'

ಸಿಂದಗಿ: 'ಕರ್ನಾಟಕದಲ್ಲಿ ಒಬ್ಬ ಸಿದ್ದು, ಪಂಜಾಬ್‌ನಲ್ಲಿ ಇನ್ನೊಬ್ಬ ಸಿದ್ದು. ಇವರಿಬ್ಬರೇ ಸಾಕು ದೇಶ ಕಾಂಗ್ರೆಸ್ ಮುಕ್ತವಾಗಲು. ಆ ಪಕ್ಷ ಮುಳುಗಿಸಲು' ಎಂದು ಶಾಸಕ ಜಗದೀಶ ಶೆಟ್ಟರ್ ಲೇವಡಿ ಮಾಡಿದರು.

ಇಲ್ಲಿ ಶುಕ್ರವಾರ ಸುದ್ದಿಗಾರರ ಜೊತೆಗೆ ಮಾತನಾಡಿ, '2023 ರಲ್ಲಿ ಸರ್ಕಾರ ರಚನೆ ಮಾಡುತ್ತೇವೆ ಎಂಬ ಭ್ರಮೆಯಲ್ಲಿರುವ ಸಿದ್ದು ಮತ್ತು ಡಿಕೆಶಿ ಇಬ್ಬರ ಪರಸ್ಪರ ಕಚ್ಚಾಟ ಹೆಚ್ಚಾಗಿದೆ. ಕಾಂಗ್ರೆಸ್ ಹೀನಾಯ ಸ್ಥಿತಿಯಲ್ಲಿದೆ' ಎಂದು ಟೀಕಿಸಿದರು.

ಸುದ್ದಿ 2 ನಿಮಿಷ

'ಅಂಬೇಡ್ಕರ್ ಬಗ್ಗೆ ಗೌರವವಿದ್ದರೆ ಕಾಂಗ್ರೆಸ್ ಬಿಟ್ಟು ಬನ್ನಿ'

ಸಿಂದಗಿ: 'ಬಿಜೆಪಿಯವರಿಗೆ ಸಂವಿಧಾನದ ಪರಿಕಲ್ಪನೆ ಗೊತ್ತಿಲ್ಲ ಎಂದು ಮಾಜಿ ಸಚಿವ ಎಚ್.ಸಿ.ಮಹದೇವಪ್ಪ ಹೇಳಿರುವುದು ಖಂಡನೀಯ' ಎಂದು ಸಂಸದ ರಮೇಶ ಜಿಗಜಿಣಗಿ ಕಿಡಿಕಾರಿದ್ದಾರೆ.

ಪಟ್ಟಣದಲ್ಲಿ ಸುದ್ದಿಗಾರರರೊಂದಿಗೆ ಶುಕ್ರವಾರ ಮಾತನಾಡಿದ ಅವರು, 'ನಿಮಗೆ ನಿಜವಾಗಿ ಡಾ.ಬಾಬಾಸಾಹೇಬ ಅಂಬೇಡ್ಕರ್ ಬಗ್ಗೆ ಗೌರವ, ಸ್ವಾಭಿಮಾನ ಇದ್ದರೆ ಒಂದು ನಿಮಿಷವೂ ಕಾಂಗ್ರೆಸ್ ಪಕ್ಷದಲ್ಲಿ ಇರಬಾರದು. ಡಾ.ಅಂಬೇಡ್ಕರ್‌ಗೆ ಕಾಂಗ್ರೆಸ್ ಪಕ್ಷ ಕೊಟ್ಟ ಹಿಂಸೆ ಯಾವತ್ತೂ ಮರೆಯಲಾಗದು. ಅವರನ್ನು ಚುನಾವಣೆಯಲ್ಲಿ ಸೋಲಿಸಿರುವುದು ಕಾಂಗ್ರೆಸ್ ಪಕ್ಷ. ಅವರು ತೀರಿ ಹೋದ ಸಂದರ್ಭದಲ್ಲಿ ಅಂತ್ಯಕ್ರಿಯೆಗಾಗಿ ಸ್ಥಳ ನೀಡದ ಪಕ್ಷ ಕಾಂಗ್ರೆಸ್ ಎಂಬುದನ್ನು ಪ್ರತಿಯೊಬ್ಬ ಪರಿಶಿಷ್ಟ ಜಾತಿಯ ಜನರು ಮರೆಯಬಾರದು. ಪರಿಶಿಷ್ಟ ಜಾತಿಯ ಜನರು ಕಾಂಗ್ರೆಸ್ ಪಕ್ಷಕ್ಕೆ ಯಾವತ್ತೂ ಮತ ನೀಡಬೇಡಿ' ಎಂದು ಕೇಳಿಕೊಂಡರು.



'ಪ್ರಧಾನಿ ನರೇಂದ್ರ ಮೋದಿಯವರು ಡಾ.ಅಂಬೇಡ್ಕರ್ ಬದುಕಿನ ಸ್ಥಳಗಳನ್ನು ಸ್ಮಾರಕಗಳನ್ನಾಗಿ ಮಾಡುತ್ತಿದ್ದಾರೆ. ದೆಹಲಿಯಲ್ಲಿ ₹350 ಕೋಟಿ ವೆಚ್ಚದಲ್ಲಿ ಅಂಬೇಡ್ಕರ್ ಬದುಕಿನ ಭೂಮಿಯನ್ನು ಸ್ಮಾರಕವನ್ನಾಗಿ ನಿರ್ಮಿಸಿದ್ದಾರೆ. ಮಹಾದೇವಪ್ಪನವರು ವಾಸ್ತವ ಅರಿತು ಮಾತನಾಡಬೇಕು' ಎಂದು ಸಂಸದರು ಸಲಹೆ ನೀಡಿದರು.

'ಈಗಿನದ್ದು ಡುಪ್ಲಿಕೇಟ್ ಕಾಂಗ್ರೆಸ್'

ಸಿಂದಗಿ (ವಿಜಯಪುರ): 'ಕಾಂಗ್ರೆಸ್ ಪಕ್ಷದ ಪರಿಸ್ಥಿತಿ ಈಗ ಅಯೋಮಯ. ಜೆಡಿಎಸ್‌ನ ವ್ಯಕ್ತಿಯನ್ನು ಕಾಂಗ್ರೆಸ್ ತನ್ನ ಅಭ್ಯರ್ಥಿಯನ್ನಾಗಿ ಮಾಡಿರುವುದು ನೋಡಿದರೆ ಆ ಪಕ್ಷಕ್ಕೆ ಎಂಥ ದುಸ್ಥಿತಿ ಬಂದಿದೆ ಎಂಬುದು ಗೊತ್ತಾಗುತ್ತದೆ. ಈಗಿನದ್ದು ಮೂಲ ಕಾಂಗ್ರೆಸ್ ಅಲ್ಲ;ಡುಪ್ಲಿಕೇಟ್ ಕಾಂಗ್ರೆಸ್' ಎಂದು ಶಾಸಕ ಎಚ್.ಡಿ.ರೇವಣ್ಣ ಟೀಕಿಸಿದರು.

ಇಲ್ಲಿ ಶುಕ್ರವಾರ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಕಾಂಗ್ರೆಸ್ ಪಕ್ಷ ಕೋಮುವಾದಿಗಳ ಜೊತೆ ಮಂಡ್ಯ-ತುಮಕೂರು ಚುನಾವಣೆಯಲ್ಲಿ ಶಾಮೀಲಾಗಿ ಹೊಂದಾಣಿಕೆ ರಾಜಕೀಯ ಮಾಡಿಕೊಂಡಿತು. ಕುಮಾರಸ್ವಾಮಿಗೆ ಮುಖ್ಯಮಂತ್ರಿಯಾಗುವ ಆಸೆ ಇರದಿದ್ದರೂ ಕಾಂಗ್ರೆಸ್ ನವರೇ ಬಂದು ಕೋಮುವಾದಿಗಳನ್ನು ದೂರಿಡಲು ಮುಖ್ಯಮಂತ್ರಿಯಾಗಲು ಕೇಳಿಕೊಂಡಿದ್ದರು. ಮನೆ, ಮನೆಯಲ್ಲಿ ಒಡೆದು ಆಳುವಂತಹ ಕೀಳುಮಟ್ಟದ ಸಂಸ್ಕೃತಿ ಕಾಂಗ್ರೆಸ್ ಪಕ್ಷದ್ದು' ಎಂದು ವಾಗ್ದಾಳಿ ನಡೆಸಿದರು.

ಜಿಟಿಡಿ ಬಿಟ್ಟುಕೊಡುವುದಿಲ್ಲ: ನಿಖಿಲ್

ಮೈಸೂರು: ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮತ್ತು ಶಾಸಕ ಜಿ.ಟಿ.ದೇವೇಗೌಡ ಅವರ ಪುತ್ರ ಜಿ.ಡಿ.ಹರೀಶ್ ಗೌಡ ಶುಕ್ರವಾರ ಜೊತೆಯಾಗಿ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಮತ್ತು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಪರಸ್ಪರ ವಾಕ್ಸಮರ ನಡೆಸುತ್ತಿದ್ದರೂ, ಅವರ ಮಕ್ಕಳು ಜತೆಯಾಗಿ ಕಾಣಿಸಿಕೊಂಡಿರುವುದು ಜೆಡಿಎಸ್ ಕಾರ್ಯಕರ್ತರಲ್ಲಿ ಸಂಚಲನ ಮೂಡಿಸಿದೆ.

'ನಾನು ಅಭಿನಯಿಸಿದ 'ರೈಡರ್' ಚಿತ್ರದ ಯಶಸ್ಸಿಗೆ ದೇವಿಯ ಆಶೀರ್ವಾದ ಪಡೆಯಲು ಬಂದಿದ್ದೆ. ರಾಜಕೀಯದ ಕುರಿತು ಯಾವುದೇ ಮಾತುಕತೆ ನಡೆದಿಲ್ಲ. ರಾಜಕೀಯ ಹೊರತಾದ ಸ್ನೇಹ ನಮ್ಮದು' ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ನಿಖಿಲ್ ಉತ್ತರಿಸಿದರು.

'ಜಿಟಿಡಿ ಅವರ ಮೇಲೆ ಗೌರವ ಇಟ್ಟುಕೊಂಡಿದ್ದೇವೆ. 2018ರ ಚುನಾವಣೆಯ ಯಶಸ್ಸಿನಲ್ಲಿ ಅವರೂ ಪಾತ್ರಧಾರಿ. ಯಾವುದೇ ಕಾರಣಕ್ಕೂ ಜಿ.ಟಿ.ದೇವೇಗೌಡ, ಹರೀಶ್‌ಗೌಡ ಅವರನ್ನು ಜೆಡಿಎಸ್ ಬಿಟ್ಟುಕೊಡುವುದಿಲ್ಲ' ಎಂದರು.

ತಿಂಗಳ ಹಿಂದೆಯಷ್ಟೇ ಜಿ.ಟಿ.ದೇವೇಗೌಡ ಅವರು ಕಾಂಗ್ರೆಸ್ ಸೇರುವುದಾಗಿ ಬಹಿರಂಗ ಹೇಳಿಕೆ ನೀಡಿದ್ದರು.

ಲಿಂಗಾಯತ ಧರ್ಮಕ್ಕೆ ಸಾಂವಿಧಾನಿಕ ಮಾನ್ಯತೆ: ರ‍್ಯಾಲಿ ನಾಳೆ

ಬೀದರ್: 'ಲಿಂಗಾಯತ ಧರ್ಮಕ್ಕೆ ಸಾಂವಿಧಾನಿಕ ಮಾನ್ಯತೆ ನೀಡುವಂತೆ ಆಗ್ರಹಿಸಿ ಲಿಂಗಾಯತ ಸಮನ್ವಯ ಸಮಿತಿ ವತಿಯಿಂದ ಮಹಾರಾಷ್ಟ್ರದ ಪರಭಣಿಯಲ್ಲಿ ಅಕ್ಟೋಬರ್ 24 ರಂದು ಬೃಹತ್ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ' ಎಂದು ರಾಷ್ಟ್ರೀಯ ಬಸವ ದಳದ ರಾಷ್ಟ್ರೀಯ ಘಟಕದ ಅಧ್ಯಕ್ಷ ಬಸವರಾಜ ಧನ್ನೂರ ತಿಳಿಸಿದ್ದಾರೆ.

'ಪರಭಣಿಯ ನೂತನ ಹೈಸ್ಕೂಲ್ ಮೈದಾನದಿಂದ ಜಿಲ್ಲಾಧಿಕಾರಿ ಕಚೇರಿ ವರೆಗೆ ನಡೆಯುವ ರ‍್ಯಾಲಿಯಲ್ಲಿ ಮಹಾರಾಷ್ಟ್ರ, ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ ಸೇರಿ ವಿವಿಧ ರಾಜ್ಯಗಳ ಲಿಂಗಾಯತರು ಭಾಗವಹಿಸುವರು. ಮಠಾಧೀಶರು, ಲಿಂಗಾಯತ ಸಂಘಟನೆಗಳು, ಬಸವ ಪರ ಸಂಘಟನೆ ಪ್ರಮುಖರು ನೇತೃತ್ವ ವಹಿಸುವರು' ಎಂದು ತಿಳಿಸಿದ್ದಾರೆ.

'ಪರಭಣಿ ರ‍್ಯಾಲಿಯು ಲಿಂಗಾಯತ ಸಾಂವಿಧಾನಿಕ ಮಾನ್ಯತೆಗೆ ನಡೆಯುತ್ತಿರುವ 13ನೇ ರ‍್ಯಾಲಿಯಾಗಿದೆ' ಎಂದು ಹೇಳಿದ್ದಾರೆ.

ಮುಖ್ಯಮಂತ್ರಿ ವಿರುದ್ಧ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಾಗ್ದಾಳಿ

'ಮತೀಯ ಗೂಂಡಾಗಿರಿ' ಸಮರ್ಥನೆ ಸರೀನಾ?

ಪ್ರಜಾವಾಣಿ ವಾರ್ತೆ

ಹಾವೇರಿ: 'ಬಸವರಾಜ ಬೊಮ್ಮಾಯಿ ಅವರು ಹಿಂದೆ ಗೃಹಸಚಿವರಾಗಿದ್ದರು. ಈಗ ಮುಖ್ಯಮಂತ್ರಿಯಾಗಿದ್ದಾರೆ. ಅವರು 'ಮತೀಯ ಗೂಂಡಾಗಿರಿ' ಸಮರ್ಥಿಸಿಕೊಳ್ಳುತ್ತಿರುವುದು ಸರೀನಾ? ಪೊಲೀಸರ ಘನತೆ, ಗೌರವ ಏನಾಗಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

ಹಾನಗಲ್ ತಾಲ್ಲೂಕಿನ ನರೇಗಲ್ ಗ್ರಾಮದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿ, 'ಸಂವಿಧಾನ, ಪೊಲೀಸ್ ಇಲಾಖೆ ಏಕಿರಬೇಕು? ಗೃಹ ಸಚಿವರಾಗಿ ಕೆಲಸ ಮಾಡಿದವರೇ ತಮ್ಮ ಪಕ್ಷದ ಪಟಾಲಂನ ಕಿಡಿಗೇಡಿತನ ಸಮರ್ಥಿಸಿಕೊಳ್ಳುವುದು ರಾಜ್ಯ ಮತ್ತು ಇಡೀ ದೇಶಕ್ಕೆ ಕೆಟ್ಟ ಉದಾಹರಣೆಯಾಗಿ ನಿಲ್ಲುವಂತೆ ಮಾಡಿದೆ. ನಮ್ಮನ್ನು ಕಾಯುವ ಪೊಲೀಸ್ ಇಲಾಖೆಯನ್ನು ಕೇಸರೀಕರಣ ಮಾಡುವ ಪ್ರಯತ್ನ ಖಂಡನೀಯ. ಈ ಬಗ್ಗೆ ನಾವು ಮುಂದೆ ಹೋರಾಟ ಮಾಡುತ್ತೇವೆ' ಎಂದು ಅವರು ಹೇಳಿದರು.

'ಚರ್ಚ್‌ಗೆ ಬಲವಂತವಾಗಿ ನುಗ್ಗಿ ಭಜನೆ ಮಾಡಿದವರ ವಿರುದ್ಧ ಅಲ್ಲಿನ ಪೊಲೀಸರು ಎಫ್‌ಐಆರ್ ದಾಖಲಿಸಿರುವುದು ಸ್ವಾಗತಾರ್ಹ. ನಾವು ಹಿಂದೂಗಳೇ. ಆದರೆ, ಬೇರೆ ಧರ್ಮದವರ ಪ್ರಾರ್ಥನಾ ಮಂದಿರಕ್ಕೆ ನುಗ್ಗಿ ಮಾಡಿರುವ ದಾಳಿ ಖಂಡನೀಯ. ಈ ವಿಚಾರವಾಗಿ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಪ್ರತಿಭಟಿಸಿರುವ ಅರವಿಂದ ಬೆಲ್ಲದ ಅವರನ್ನು ಸೇರಿಸಿ ಪ್ರಕರಣ ದಾಖಲಿಸಬೇಕು' ಎಂದು ಕಿಡಿಕಾರಿದರು.

ಬೊಮ್ಮಾಯಿಗೆ ಸೋಲಿನ ಭಯ: ಹಾನಗಲ್ ತಾಲ್ಲೂಕಿನ ಆಡೂರಿನ ಪ್ರಚಾರ ಸಭೆಯಲ್ಲಿ ಡಿ.ಕೆ.ಶಿವಕುಮಾರ್ ಮಾತನಾಡಿ, 'ಇದೇ ಜಿಲ್ಲೆಯವನಾದ ನನ್ನ ಮರ್ಯಾದೆ ನಿಮ್ಮ ಕೈಯಲ್ಲಿದೆ. ಇಲ್ಲಿ ಬಿಜೆಪಿ ಅಭ್ಯರ್ಥಿ ಗೊಂಬೆ ಇದ್ದಂತೆ. ನಾನೇ ಇಲ್ಲಿ ಅಭ್ಯರ್ಥಿ. ದಯವಿಟ್ಟು ನನಗೆ ಸಹಾಯ ಮಾಡಿ ಎಂದು ವಿದ್ಯುತ್ ಇಲಾಖೆ ನೌಕರರಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮನವಿ ಮಾಡಿದ್ದಾರಂತೆ. ಬೊಮ್ಮಾಯಿ ಅವರಿಗೆ ಬಿಜೆಪಿ ಅಭ್ಯರ್ಥಿ ಸೋಲುತ್ತಾರೆ ಎಂಬ ಭಯ ಕಾಡುತ್ತಿದೆ' ಎಂದು ಲೇವಡಿ ಮಾಡಿದರು.



ಹಾನಗಲ್ ತಾಲ್ಲೂಕು ಆಡೂರಿನಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಕಾರ್ಯಕರ್ತರು ತೈಲ ಬೆಲೆ ಏರಿಕೆ ಹಾಗೂ 'ಅಚ್ಛೇದಿನ್' ಕುರಿತ ವ್ಯಂಗ್ಯ ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು

ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಸವಾಲು

'ಮನೆ ಕೊಟ್ಟಿದ್ದು ಸಾಬೀತಾದರೆ ರಾಜಕೀಯ ಬಿಡ್ತೀನಿ'

ಪ್ರಜಾವಾಣಿ ವಾರ್ತೆ

ಅಕ್ಕಿಆಲೂರ/ಹಾನಗಲ್: 'ನಮ್ಮ ಸರ್ಕಾರ ಐದು ವರ್ಷಗಳಲ್ಲಿ 15 ಲಕ್ಷ ಮನೆ ನಿರ್ಮಾಣ ಮಾಡಿತ್ತು. ಈಗಿನ ಸರ್ಕಾರ ಒಂದೇ ಒಂದು ಮನೆ ಕಟ್ಟಿಕೊಟ್ಟ ಉದಾಹರಣೆ ಇಲ್ಲ. ಇದ್ದರೆ ತೋರಿಸಿ ನೋಡ್ತೀನಿ, ಕಟ್ಟಿಸಿದ್ದರೆ ರಾಜಕೀಯ ಬಿಡ್ತೀನಿ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಸವಾಲೆಸೆದರು.

ಹಾನಗಲ್ ಉಪ ಚುನಾವಣೆ ಹಿನ್ನೆಲೆಯಲ್ಲಿ ನರೇಗಲ್, ಆಡೂರು, ಅಕ್ಕಿಆಲೂರು ಮತ್ತು ಹಿರೂರು ಗ್ರಾಮಗಳಲ್ಲಿ ಶುಕ್ರವಾರ ನಡೆದ ಪ್ರಚಾರ ಸಭೆಗಳಲ್ಲಿ ಅವರು ಮಾತನಾಡಿದರು.

'ನಾವು ಮಂಜೂರು ಮಾಡಿದ್ದ ಮನೆಗಳಿಗೂ ಹಣ ಕೊಡದೇ ಲಾಕ್ ಮಾಡಿಬಿಟ್ಟಿದ್ದಾರೆ. ಎಲ್ಲ ಒಳ್ಳೆ ಕೆಲಸಗಳಿಗೂ ಬೀಗ ಜಡಿದಿದ್ದೀರಿ. ಚುನಾವಣೆಯಲ್ಲಿ ಜನ ಬಿಜೆಪಿಯನ್ನೂ ಲಾಕ್ ಮಾಡಿ ಬುದ್ಧಿ ಕಲಿಸುತ್ತಾರೆ, ನೋಡ್ತೀರಿ' ಎಂದು ಆಕ್ರೋಶ ಹೊರಹಾಕಿದರು.

'ಮಿಸ್ಟರ್ ಬಸವರಾಜ್ ಬೊಮ್ಮಾಯಿ ಒಂದೇ ವೇದಿಕೆಗೆ ನೀವೂ ಬನ್ನಿ, ನಾನೂ ಬರುತ್ತೇನೆ. ಹಾನಗಲ್ ಕ್ಷೇತ್ರದಲ್ಲಿ ನನ್ನ ಸರ್ಕಾರ ಇದ್ದಾಗ ಎಷ್ಟು ಕೆಲಸ ಆಗಿವೆ? ಎಷ್ಟು ಅನುದಾನ ಕೊಟ್ಟಿದ್ದೇನೆ ಎನ್ನುವುದನ್ನೆಲ್ಲಾ ಹೇಳುತ್ತೇನೆ. ನಿಮ್ಮ ಕೊಡುಗೆ ಏನು ಎನ್ನುವುದನ್ನು ನೀವೂ ಹೇಳಿ. ಜನರಿಗೆ ಸತ್ಯ ಗೊತ್ತಾಗಲಿ' ಎಂದು ಸವಾಲು ಹಾಕಿದರು.

'2018 ರಲ್ಲಿ ಉಂಟಾದ ಪ್ರವಾಹದಿಂದ ಕಂಚಿನೆಗಳೂರು ಗ್ರಾಮದ ಒಡ್ಡು ಒಡೆದು 3 ವರ್ಷ ಕಳೆದರೂ ಸರಿಪಡಿಸಲು ನಿಮ್ಮಿಂದ ಆಗಿಲ್ವಲ್ರೀ, ಸುಳ್ಳು ಹೇಳೋಕೆ ನಾಚಿಕೆ ಆಗಲ್ವಾ' ಎಂದು ಅವರು ಪ್ರಶ್ನಿಸಿದರು.



ಹಾನಗಲ್ ಉಪಚುನಾವಣಾ ಪ್ರಚಾರ ಸಭೆಯಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ್ ಮಾನೆ,ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪಾಲ್ಗೊಂಡಿದ್ದರು

ಮನೆ ಮಂಜೂರು: ದಾಖಲೆ ಪ್ರದರ್ಶಿಸಿದ ಸಿ.ಎಂ

ಹಾನಗಲ್: ಹಾನಗಲ್ ಕ್ಷೇತ್ರದಲ್ಲಿ ಬಡವರಿಗೆ ಸೂರು ಒದಗಿಸಿಕೊಡಲು 7,500 ಮನೆಗಳನ್ನು ಮಂಜೂರು ಮಾಡಿ ಆದೇಶಿಸಲಾಗಿದೆ ಎಂದು ಹೇಳಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ಬಗ್ಗೆ ದಾಖಲೆಗಳನ್ನು ವೇದಿಕೆಯಿಂದಲೇ ಪ್ರದರ್ಶಿಸಿದರು.

ತಾಲ್ಲೂಕಿನ ಬೆಳಗಾಲಪೇಟೆ ಗ್ರಾಮದಲ್ಲಿ ಶುಕ್ರವಾರ ನಡೆದ ಬಿಜೆಪಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ನಾವು ಬರೀ ಮಾತನಾಡುವವರಲ್ಲ. ಕೆಲಸ ಮಾಡಿ ತೋರಿಸುವವರು' ಎಂದು ಸಿದ್ದರಾಮಯ್ಯನವರಿಗೆ ತಿರುಗೇಟು ನೀಡಿದರು.

ಸಂಕ್ಷಿಪ್ತ ಸುದ್ದಿ

ಬೆದರಿಕೆ: ಸ್ಫೋಟ ಪ್ರಕರಣದ ಆರೋಪಿಯ ಪತ್ನಿ ಬಂಧನ

ಶಿವಮೊಗ್ಗ: ಬೆಂಗಳೂರಿನ ಪರಪ್ಪನ ಅಗ್ರಹಾರ ಕಾರಾಗೃಹದಿಂದ ಶಿವಮೊಗ್ಗದ ಉದ್ಯಮಿಗಳಿಗೆ ಬೆದರಿಕೆ ಹಾಕಿ, ಹಣ ವಸೂಲಿ ಮಾಡುತ್ತಿದ್ದ ಪ್ರಕರಣವನ್ನು ಭೇದಿಸಿರುವ ಪೊಲೀಸರು ಭಟ್ಕಳದ ಸಾಯಿರಾ ಬಾನು (27) ಅವರನ್ನು ಬಂಧಿಸಿದ್ದಾರೆ.

ಶಿವಮೊಗ್ಗದ ಉದ್ಯಮಿ ಶರತ್ ಎನ್ನುವವರಿಗೆ ಈಚೆಗೆ ಬೆದರಿಕೆ ಕರೆ ಬಂದಿತ್ತು. ಪ್ರಕರಣ ಸೈಬರ್ ಅಪರಾಧ ಠಾಣೆಯಲ್ಲಿ ದಾಖಲಾಗಿತ್ತು. ಆನ್‌ಲೈನ್, ವಾಟ್ಸ್‌ಆ್ಯಪ್ ಮೂಲಕ ಆರೋಪಿಗಳು ಕರೆ ಮಾಡುತ್ತಿದ್ದ ಕಾರಣ ಕರೆಗಳ ಮೂಲ ಪತ್ತೆ ಹಚ್ಚುವುದೂ ಪೊಲೀಸರಿಗೆ ಸವಾಲಾಗಿತ್ತು.

ಆರೋಪಿಗಳು ಕರೆ ಮಾಡಿ ಸೂಚಿಸಿದ್ದ ಖಾತೆಗೆ ಉದ್ಯಮಿ ಹಣ ಹಾಕಿದ್ದ ಜಾಡು ಹಿಡಿದ ಪೊಲೀಸರು ಭಟ್ಕಳ ತಲುಪಿದ್ದಾರೆ. ಖಾತೆ ಪರಿಶೀಲಿಸಿದಾಗ ಅದು ಪರಪ್ಪನ ಅಗ್ರಹಾರ ಜೈಲಿನಲ್ಲಿರುವ, ಬೆಂಗಳೂರು ಸ್ಫೋಟ ಪ್ರಕರಣವೊಂದರ ಆರೋಪಿ ಸದ್ದಾಂ ಹುಸೇನ್ ಪತ್ನಿ ಸಾಯಿರಾ ಬಾನು ಅವರದು ಎಂದು ಖಚಿತವಾಗಿದೆ. ಅವರನ್ನು ಬಂಧಿಸಲಾಗಿದೆ.

'ಆರೋಪಿ ಸದ್ದಾಂ ಭದ್ರಾವತಿ ಮೂಲದ ಮತ್ತೊಬ್ಬ ಆರೋಪಿ ನಾಗೇಂದ್ರ ಜತೆ ಸೇರಿಕೊಂಡು ಪರಪ್ಪನ ಅಗ್ರಹಾರ ಕಾರಾಗೃಹದಿಂದ ಶಿವಮೊಗ್ಗದ ಉದ್ಯಮಿಗಳಿಗೆ ಬೆದರಿಕೆ ಕರೆ ಮಾಡಿರುವುದು ದೃಢಪಟ್ಟಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಗಂಭೀರವಾಗಿ ಪರಿಗಣಿಸಲಾಗಿದೆ: ಸೆರೆಮನೆಯನ್ನು ಅರಮನೆ ಮಾಡಿಕೊಳ್ಳಲು ಅವಕಾಶ ನೀಡುವುದಿಲ್ಲ. ಈ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಪರಪ್ಪನ ಅಗ್ರಹಾರದಲ್ಲೂ ವಿಮಾನ ನಿಲ್ದಾಣ ಮಾದರಿ ತಪಾಸಣೆಗೆ ಸೂಚಿಸಲಾಗಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದ್ದಾರೆ.

ರಾಯಚೂರು: ಡೆಂಗಿಗೆ 3 ಸಾವು

ಮಾನ್ವಿ (ರಾಯಚೂರು ಜಿಲ್ಲೆ): ಶಂಕಿತ ಡೆಂಗಿ ಜ್ವರದಿಂದ ಬಳಲುತ್ತಿದ್ದ ಪಟ್ಟಣದ ಜೈಭೀಮ್ ನಗರ ನಿವಾಸಿ ಸಚಿತಕುಮಾರ್ ಜೇಗರಕಲ್ (28), ವಾಂತಿ–ಭೇದಿ ಸಮಸ್ಯೆಗೆ ಚಿಕಿತ್ಸೆ ಪಡೆಯುತ್ತಿದ್ದ ಕೋನಾಪುರಪೇಟೆಯ ಅಶ್ವಿನಿ (11) ಹಾಗೂ ನವೀನ್ (18) ಮೃತಪಟ್ಟಿದ್ದಾರೆ.

ಹೆಚ್ಚಿನ ಚಿಕಿತ್ಸೆಗಾಗಿ ಸಚಿತಕುಮಾರ್ ಅವರನ್ನು ಕಲಬುರಗಿ ಆಸ್ಪತ್ರೆಗೆ ದಾಖಲಿಸಿದಾಗ ಗುರುವಾರ ಮೃತಪಟ್ಟಿದ್ದಾರೆ.

ಸರ್ಕಾರಕ್ಕೆ ಎಚ್ಚರಿಕೆ ನೀಡಿದ ವಿದ್ಯಾರ್ಥಿನಿ ಎಚ್.ಸಿ. ಲಾವಣ್ಯಾ

'ವ್ಯಸನಮುಕ್ತ ಆಗದಿದ್ದರೆ ಆಮರಣಾಂತ ಉಪವಾಸ'

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಸರ್ಕಾರ ರಾಜ್ಯವನ್ನು ವ್ಯಸನಮುಕ್ತ ಮಾಡದೇ ಇದ್ದರೆ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸುವುದಾಗಿ ವಿದ್ಯಾರ್ಥಿನಿ ಎಚ್.ಸಿ. ಲಾವಣ್ಯಾ ಎಚ್ಚರಿಕೆ ನೀಡಿದರು.

ವ್ಯಸನಮುಕ್ತ ರಾಜ್ಯಕ್ಕೆ ಆಗ್ರಹಿಸಿ ಹಿರಿಯೂರಿನಿಂದ ಪಾದಯಾತ್ರೆ ಆರಂಭಿಸಿದ್ದ ಹೇಮದಳ ಗ್ರಾಮದ ವಿದ್ಯಾರ್ಥಿನಿ ಶುಕ್ರವಾರ ಚಿತ್ರದುರ್ಗ ತಲುಪಿದರು. ಮದ್ಯ, ಮಾದಕವಸ್ತು ನಿಷೇಧಕ್ಕೆ ಸಂಬಂಧಿಸಿ ಸರ್ಕಾರ ಶೀಘ್ರ ನಿರ್ಧಾರ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

'ಹಿರಿಯೂರು ಪಟ್ಟಣದಿಂದ ಮೂರು ಕಿ.ಮೀ ದೂರದಲ್ಲಿ ಮನೆ ಇದೆ. ಮದ್ಯ ವ್ಯಸನಿಗಳು ಮನೆಯ ಸುತ್ತ ಗಲಾಟೆ ಮಾಡುತ್ತಿದ್ದರು. ಎಲ್ಲೆಂದರಲ್ಲಿ ಕುಡಿದು ಕಿರಿಕಿರಿ ಉಂಟು ಮಾಡುತ್ತಿದ್ದರು. ಇದರಿಂದ ವ್ಯಾಸಂಗದ ಕಡೆಗೆ ಗಮನ ಹರಿಸಲು ಸಾಧ್ಯವಾಗುತ್ತಿರಲಿಲ್ಲ. ಮಾದಕ ವಸ್ತು, ಮದ್ಯವನ್ನು ನಿಷೇಧಿಸಿದರೆ ಮಾತ್ರ ಇದಕ್ಕೆ ಪರಿಹಾರ ಸಿಗಲು ಸಾಧ್ಯ' ಎಂದು ಹೇಳಿದರು.

'ಕರ್ನಾಟಕದ ಹಲವು ಹಳ್ಳಿಗಳಲ್ಲಿ ಮದ್ಯ ಮಾರಾಟ ನಡೆಯುತ್ತಿದೆ. ಚಿಕ್ಕ ಅಂಗಡಿಗಳಲ್ಲಿ ಅಕ್ರಮ ಮದ್ಯ ಮಾರಾಟ ಜೋರಾಗಿದೆ. ವ್ಯಸನದ ಕಾರಣಕ್ಕೆ ವ್ಯವಸಾಯಕ್ಕೆ ತೊಂದರೆ ಉಂಟಾಗುತ್ತಿದೆ. ವ್ಯಸನಗಳಿಗೆ ಅಂಟಿಕೊಂಡವರು ಸಮಾಜ ಬಾಹಿರ ಕೃತ್ಯಗಳಲ್ಲಿ ತೊಡಗುತ್ತಿದ್ದಾರೆ. ಇದರಿಂದ ಅತ್ಯಾಚಾರ, ಕೊಲೆಯಂತಹ ಕೃತ್ಯಗಳು ಹೆಚ್ಚಾಗುತ್ತಿವೆ' ಎಂದು ಕಳವಳ ವ್ಯಕ್ತಪಡಿಸಿದರು.

'ಮಹಿಳೆಯರು ಒಂಟಿಯಾಗಿ ಸಂಚರಿಸಲು ಭಯಪಡುವ ವಾತಾವರಣ ನಿರ್ಮಾಣವಾಗಿದೆ. ಕೌಟುಂಬಿಕ ಕಲಹ ಹೆಚ್ಚಾಗಲು ಮದ್ಯವೇ ಕಾರಣವಾಗಿದೆ. ಇದರ ಬಗ್ಗೆ ಸರ್ಕಾರಕ್ಕೆ ಅರಿವು ಇದ್ದರೂ ಮೌನವಾಗಿದೆ. ಮದ್ಯ ಮತ್ತು ಮಾದಕ ವಸ್ತುಗಳ ಮಾರಾಟಕ್ಕೆ ಅವಕಾಶ ಮಾಡಿಕೊಟ್ಟಿದೆ' ಎಂದು ದೂರಿದರು.

ವಿದ್ಯಾರ್ಥಿನಿ ತಂದೆ ಚನ್ನಕೇಶವಪ್ಪ ಪಾದಯಾತ್ರೆಯಲ್ಲಿ ಇದ್ದರು.



ವ್ಯಸನಮುಕ್ತ ಕರ್ನಾಟಕಕ್ಕೆ ಒತ್ತಾಯಿಸಿ ಪಾದಯಾತ್ರೆ ನಡೆಸಿದ ವಿದ್ಯಾರ್ಥಿನಿ ಲಾವಣ್ಯ ಚಿತ್ರದುರ್ಗ ಜಿಲ್ಲಾಧಿಕಾರಿಗೆ ಶುಕ್ರವಾರ ಮನವಿ ಸಲ್ಲಿಸಿದರು.

4.15 ಕೋಟಿ ಜನರಿಗೆ ಒಂದು ಡೋಸ್ ಲಸಿಕೆ: ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ

‘ಮೂರನೇ ಡೋಸ್ ಲಸಿಕೆ ಪ್ರಸ್ತಾಪವಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಈವರೆಗೆ ಶೇ 83 ರಷ್ಟು ಅಂದರೆ 4.15 ಕೋಟಿ ಜನರಿಗೆ ಕೋವಿಡ್ ಲಸಿಕೆಯ ಮೊದಲ ಡೋಸ್ ನೀಡಲಾಗಿದ್ದು, 2.05 ಕೋಟಿ ಜನರಿಗೆ ಎರಡನೇ ಡೋಸ್ ಲಸಿಕೆ ನೀಡಲಾಗಿದೆ. ಆದರೆ, ಮೂರನೇ ಡೋಸ್ ನೀಡುವ ಪ್ರಸ್ತಾಪ ಸರ್ಕಾರದ ಮುಂದಿಲ್ಲ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಮಲ್ಲೇಶ್ವರದ ಕಬಡ್ಡಿ ಮೈದಾನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ವೈದ್ಯರು, ವೈದ್ಯಕೀಯ ಸಿಬ್ಬಂದಿಯ ಶ್ರಮ ಮತ್ತು ನಾಗರಿಕರ ಸಹಕಾರದಿಂದ ದೇಶದಲ್ಲಿ 100 ಕೋಟಿ ಡೋಸ್ ಲಸಿಕೆ ನೀಡಲಾಗಿದೆ ಎಂದು ಅವರು ತಿಳಿಸಿದರು.

ಮೂರನೇ ಡೋಸ್ ಲಸಿಕೆ ನೀಡುವ ಸಂಬಂಧ ಯಾವುದೇ ತಜ್ಞರು ಸಲಹೆಯನ್ನು ನೀಡಿಲ್ಲವಾದ ಕಾರಣ, ಅದರ ಪ್ರಶ್ನೆಯೇ ಉದ್ಭವಿಸುವುದಿಲ್ಲ. ದೇಹದಲ್ಲಿ ನ್ಯೂಟ್ರಲೈಸ್ ಪ್ರತಿಕಾಯ ಕಡಿಮೆಯಾಗಿಲ್ಲ. ಹೀಗಾಗಿ ಆ ಬಗ್ಗೆ ಚಿಂತಿಸುವ ಅಗತ್ಯವಿಲ್ಲ. ಲಸಿಕೆಯ ಉತ್ಪಾದನೆ ಮತ್ತು ಅದನ್ನು ಜನರಿಗೆ ನೀಡುವ ವಿಚಾರದಲ್ಲಿ ನಿಬ್ಬೆರಗಾಗುವ ರೀತಿಯಲ್ಲಿ ಭಾರತ ಕೆಲಸ ಮಾಡಿದೆ. ಕೋವಿಡ್ ನಿಯಂತ್ರಣಕ್ಕೆ ಲಸಿಕೆ ಪ್ರಬಲ ಅಸ್ತ್ರವಾಗಿದ್ದು, ಅದನ್ನು ಎಲ್ಲರಿಗೂ ನೀಡುವ ಕೆಲಸ ಆಗಿದೆ ಎಂದು ಹೇಳಿದರು.

‘ಲಸಿಕೆ ನೀಡಿಕೆಯಲ್ಲಿ ದೀನ ದಲಿತರು, ಅವಕಾಶ ವಂಚಿತರಿಗೆ ಮೊದಲ ಆದ್ಯತೆ ನೀಡಿದ್ದೇವೆ. ಎಲ್ಲ ಜನರಿಗೂ ಯಾವುದೇ ತಾರತಮ್ಯವಿಲ್ಲದೇ ಲಸಿಕೆ ನೀಡಲಾಗಿದೆ. ಕೋವಿಡ್ ಪ್ರಕರಣಗಳು ಹೆಚ್ಚಾಗಿದ್ದ ಸಂದರ್ಭದಲ್ಲಿ ಮಾಸ್ಕ್, ವೆಂಟಿಲೇಟರ್, ಆಮ್ಲಜನಕ, ಬೆಡ್‌ಗಳು ಸೇರಿದಂತೆ ಅನೇಕ ಸವಾಲುಗಳು ದೇಶದ ಮುಂದಿದ್ದವು. ಈ ಸವಾಲುಗಳನ್ನು ದೇಶವು ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಸ್ಪಂದಿಸಿದೆ’ ಎಂದರು.


3 ಜನ ವೈದ್ಯರು ಮತ್ತು ಇಬ್ಬರು ಪೌರಕಾರ್ಮಿಕರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.


‘ಬೆಂಗಳೂರು ಉಸ್ತುವಾರಿ ಮುಖ್ಯಮಂತ್ರಿ ವಹಿಸಿಕೊಳ್ಳಲಿ’

‘ಬೆಂಗಳೂರು ಜಿಲ್ಲಾ ಉಸ್ತುವಾರಿಯ ವಿಚಾರ ಚುನಾವಣೆ ಬಳಿಕ ನಿರ್ಧಾರವಾಗಬಹುದು. ನನ್ನ ಅಭಿಪ್ರಾಯದ ಪ್ರಕಾರ, ಅದು ಮುಖ್ಯಮಂತ್ರಿಯವರ ಬಳಿ ಇದ್ದರೆ ಸೂಕ್ತ’ ಎಂದು ಅಶ್ವತ್ಥನಾರಾಯಣ ಹೇಳಿದರು.

ಜಿಲ್ಲಾ ಉಸ್ತುವಾರಿ ಸಂಬಂಧಿಸಿದಂತೆ ಕಂದಾಯ ಸಚಿವ ಆರ್.ಅಶೋಕ ಮತ್ತು ವಸತಿ ಸಚಿವ ವಿ.ಸೋಮಣ್ಣ ಅವರ ಮಧ್ಯೆ ಇತ್ತೀಚೆಗೆ ಮಾತಿನ ಜಟಾಪಟಿ ನಡೆದಿತ್ತು. ಬೆಂಗಳೂರಿನ ಹಿರಿಯ ಸಚಿವರಿಗೆ ಉಸ್ತುವಾರಿ ನೀಡಬೇಕು ಎಂದು ಸೋಮಣ್ಣ ಆಗ್ರಹಿಸಿದ್ದರು. ಉಸ್ತುವಾರಿಯ ಮೇಲೆ ಅಶೋಕ, ಸೋಮಣ್ಣ ಸೇರಿದಂತೆ ಹಲವು ಸಚಿವರು ಕಣ್ಣು ಹಾಕಿದ್ದಾರೆ.

‘ಮುಖ್ಯಮಂತ್ರಿ ಬಳಿ ಉಸ್ತುವಾರಿ ಇದ್ದರೆ ಅನುದಾನ ಬೇಗನೇ ಸಿಗುತ್ತದೆ. ಕಾಮಗಾರಿಗಳಿಗೂ ತ್ವರಿತವಾಗಿ ಅನುಮತಿ ಸಿಗುತ್ತದೆ ಮತ್ತು ಪೂರ್ಣಗೊಳಿಸಲು ಸಾಧ್ಯ. ನಗರದಲ್ಲಿ ಮಳೆ ನಿಂತ ಕೂಡಲೇ ರಸ್ತೆಗಳ ಗುಂಡಿ ಮುಚ್ಚುವುದು, ಡಾಂಬರೀಕರಣ ಸೇರಿ ರಸ್ತೆ ಅಭಿವೃದ್ಧಿ ಕಾರ್ಯ ನಡೆಸಲಾಗುವುದು’ ಎಂದರು.





ವಿಶೇಷ ಮೇಳ: 80 ಸಾವಿರ ಮಂದಿಗೆ ಲಸಿಕೆ

ಬೆಂಗಳೂರು: ಇದುವರೆಗೆ ಕೋವಿಡ್ ಲಸಿಕೆಯ ಒಂದು ಡೋಸನ್ನೂ ಪಡೆಯದವರನ್ನು ಪತ್ತೆ ಹಚ್ಚಿ ಲಸಿಕೆ ಹಾಕಿಸಲು ಬಿಬಿಎಂಪಿಯು ಶುಕ್ರವಾರ ಹಮ್ಮಿಕೊಂಡಿದ್ದ ವಿಶೇಷ ಮೇಳದಲ್ಲಿ ಒಟ್ಟು 80 ಸಾವಿರ ಮಂದಿಗೆ ಲಸಿಕೆ ನೀಡಲಾಗಿದೆ.

ಬಿಬಿಎಂಪಿಯು 4.80 ಲಕ್ಷ ಮಂದಿಗೆ ಲಸಿಕೆ ನೀಡುವ ಗುರಿಯನ್ನು ಹೊಂದಿತ್ತು. ಆದರೆ, ಕೋವಿಡ್ ಲಸಿಕೆ ಪಡೆಯುವ ಅರ್ಹತೆ ಹೊಂದಿದವರಲ್ಲಿ ಈಗಾಗಲೇ ಶೇ 86ರಷ್ಟು ಮಂದಿ ಮೊದಲ ಡೋಸ್ ಹಾಗೂ ಶೇ 52ರಷ್ಟು ಮಂದಿ ಎರಡನೇ ಡೋಸ್ ಪಡೆದಿದ್ದರು. ಹಾಗಾಗಿ ವಿಶೇಷ ಮೇಳದಲ್ಲಿ ಲಸಿಕೆ ಪಡೆದವರ ಸಂಖ್ಯೆ 80ಸಾವಿರಕ್ಕೆ ಸೀಮಿತವಾಗಿದೆ ಎಂದು ಬಿಬಿಎಂಪಿಯ ಸಾರ್ವಜನಿಕ ಆರೋಗ್ಯ ವಿಭಾಗದ ಮೂಲಗಳು ತಿಳಿಸಿವೆ.

‘ಅರ್ಹತೆ ಹೊಂದಿರುವ ಎಲ್ಲರಿಗೂ ಲಸಿಕೆ ಲಭ್ಯವಾಗಬೇಕು ಎಂಬ ಕಾರಣಕ್ಕೆ ವಿಶೇಷ ಮೇಳ ಹಮ್ಮಿಕೊಳ್ಳಲಾಗಿತ್ತು ನಗರದಾದ್ಯಂತ ಅಲ್ಲಲ್ಲಿ ಲಸಿಕೆ ಕೇಂದ್ರಗಳನ್ನು ಹಾಗೂ ಸಂಚಾರ ಶಿಬಿರಗಳನ್ನು ಆಯೋಜಿಸಲಾಗಿತ್ತು. ಲಸಿಕೆ ಪಡೆಯುವಂತೆ ಜಾಗೃತಿ ಮೂಡಿಸಲು ಮನೆ ಮನೆಗೆ ತೆರಳಿ ಅಭಿಯಾನ ನಡೆಸಲಾಗುತ್ತಿದೆ. ಲಸಿಕೆ ಕಾರ್ಯಕ್ರಮ ಮುಂದುವರಿಯಲಿದೆ’ ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಸಾರ್ವಜನಿಕ ಆರೋಗ್ಯ) ಕೆ.ವಿ. ತ್ರಿಲೋಕಚಂದ್ರ ‘ಪ್ರಜಾವಾಣಿ’ಗೆ ತಿಳಿಸಿದರು.

ಕೋವಿಶೀಲ್ಡ್ ಎರಡನೇ ಡೋಸ್ ಪಡೆದಿದ್ದ ಮಂಗಳಾ

ರಸ್ತೆಯಲ್ಲಿ ಕುಸಿದು ಬಿದ್ದು ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಗೋಪಾಲನಗರ ಠಾಣೆ ವ್ಯಾಪ್ತಿಯಲ್ಲಿ ರಸ್ತೆಯಲ್ಲೇ ಕುಸಿದು ಬಿದ್ದು ಮಂಗಳಾ (36) ಎಂಬುವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದಾರೆ.

‘ಕಾಮಾಕ್ಷಿಪಾಳ್ಯದ ಲಕ್ಷ್ಮಣನಗರ ನಿವಾಸಿಯಾಗಿದ್ದ ಮಂಗಳಾ, ಪತಿ ದಿನೇಶ್ ಜೊತೆ ವಾಸವಿದ್ದರು. ಅವರ ಸಾವಿನಲ್ಲಿ ಅನುಮಾನ ಇರುವುದಾಗಿ ಪತಿ ದೂರು ನೀಡಿದ್ದಾರೆ. ಅದರನ್ವಯ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕೋವಿಶೀಲ್ಡ್ ಲಸಿಕೆಯ ಮೊದಲ ಡೋಸ್ ಪಡೆದಿದ್ದ ಮಂಗಳಾ, ಎರಡನೇ ಡೋಸ್ ಪಡೆಯಲೆಂದು ಹೆಗ್ಗನಹಳ್ಳಿಯ ಸರ್ಕಾರಿ ಆಸ್ಪತ್ರೆಗೆ ಶುಕ್ರವಾರ ತೆರಳಿದ್ದರು. ಬೆಳಿಗ್ಗೆ 11.20 ಗಂಟೆಗೆ ಲಸಿಕೆ ಪಡೆದು, ವಾಪಸು ಮನೆಗೆ ಬಂದಿದ್ದರು.’

‘ಐದು ನಿಮಿಷವಷ್ಟೇ ಮನೆಯಲ್ಲಿದ್ದ ಮಹಿಳೆ, ಚೀಟಿ ಹಣ ಕಟ್ಟಲೆಂದು ಮಾರುಕಟ್ಟೆಯಲ್ಲಿದ್ದ ಪರಿಚಯಸ್ಥರ ಬಳಿ ಹೊರಟಿದ್ದರು. ನಡೆದುಕೊಂಡು ತೆರಳುತ್ತಿದ್ದ ಅವರು, ಮಾರ್ಗಮಧ್ಯೆಯೇ ಕುಸಿದು ಬಿದ್ದು ಪ್ರಜ್ಞೆ ತಪ್ಪಿದ್ದರು. ತಕ್ಷಣವೇ ರಕ್ಷಣೆಗೆ ಧಾವಿಸಿದ ಸ್ಥಳೀಯರು, ಅವರನ್ನು ಆಸ್ಪತ್ರೆಗೆ ಕರೆದೊಯ್ದಿದ್ದರು. ಆದರೆ, ಅವರು ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು’ ಎಂದೂ ಪೊಲೀಸರು ವಿವರಿಸಿದರು.

ಕೋವಿಡ್ ಲಸಿಕೆ ಕಾರಣ?: ‘ಪತ್ನಿ ಆರೋಗ್ಯ ಚೆನ್ನಾಗಿತ್ತು. ಲಸಿಕೆಯ ಎರಡನೇ ಡೋಸ್ ಪಡೆದ ಅರ್ಧ ಗಂಟೆಯಲ್ಲೇ ಆರೋಗ್ಯದಲ್ಲಿ ವ್ಯತ್ಯಾಸವಾಗಿ ಮೃತಪಟ್ಟಿದ್ದಾರೆ. ಈ ಸಾವಿಗೆ ಕೋವಿಡ್ ಲಸಿಕೆ ಕಾರಣವೆಂಬ ಅನುಮಾನವಿದ್ದು, ಸೂಕ್ತ ತನಿಖೆ ನಡೆಸಬೇಕು’ ಎಂದು ಪತಿ ದಿನೇಶ್ ದೂರಿನಲ್ಲಿ ಒತ್ತಾಯಿಸಿದ್ದಾರೆ.

ದೂರು ದಾಖಲಾಗಿರುವ ಕುರಿತು ಪ್ರತಿಕ್ರಿಯಿಸಿದ ಪೊಲೀಸರು, ‘ಕೋವಿಡ್ ಲಸಿಕೆ ಪಡೆದ ನಂತರ, ಅದರ ಪರಿಣಾಮದಿಂದ ಮಂಗಳಾ ಮೃತಪಟ್ಟಿದ್ದಾರೆಯೇ ಅಥವಾ ಬೇರೆ ಯಾವುದಾದರೂ ಕಾರಣಗಳಿಂದ ಸಾವು ಸಂಭವಿಸಿದೆಯೇ ಎಂಬುದು ತನಿಖೆಯಿಂದ ತಿಳಿಯಬೇಕಿದೆ’ ಎಂದರು.

‘ಮಹಿಳೆಯ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಬೇಕಿದೆ. ಅದರ ವರದಿ ಬಂದ ನಂತರ ಮತ್ತಷ್ಟು ಮಾಹಿತಿ ದೊರೆಯಲಿದೆ’ ಎಂದೂ ಹೇಳಿದರು.

‘ಮರಣೋತ್ತರ ಪರೀಕ್ಷೆ ಬಳಿಕವೇ ತಿಳಿಯಲಿದೆ ಕಾರಣ’

‘ಕೋವಿಡ್ ಲಸಿಕೆ ಪಡೆದ ಬಳಿಕ ಮಹಿಳೆಯೊಬ್ಬರು ಸತ್ತಿರುವ ವಿಚಾರ ಗಮನಕ್ಕೆ ಬಂದಿದೆ. ಮಹಿಳೆಯ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಯಬೇಕಿದೆ. ಅದರ ವರದಿ ಬಂದ ಬಳಿಕವೇ ಮಹಿಳೆಯ ಸಾವಿಗೆ ನಿಖರ ಕಾರಣ ತಿಳಿಯಲಿದೆ. ಅಲ್ಲಿಯವರೆಗೂ ಯಾವುದೇ ತೀರ್ಮಾನಕ್ಕೆ ಬರಲಾಗದು’ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘52 ಲಕ್ಷ ಸಾವಾದರೂ ಬಿಜೆಪಿ ಸಂಭ್ರಮ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಔಷಧ, ಬೆಡ್ ನೀಡದ ಕಾರಣ ಕೋವಿಡ್‌ನಿಂದ ದೇಶದಲ್ಲಿ 52 ಲಕ್ಷ ಹಾಗೂ ರಾಜ್ಯದಲ್ಲಿ 5 ಲಕ್ಷ ಜನ ಮೃತರಾಗಿದ್ದಾರೆ. ಆದರೂ, ಬಿಜೆಪಿ ಅವರು 100 ಕೋಟಿ ಡೋಸ್ ಲಸಿಕೆ ನೀಡಿದ್ದೇವೆ ಎಂದು ಸಂಭ್ರಮಿಸುತ್ತಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ದೇಶದಲ್ಲಿ ಕೇವಲ 29 ಕೋಟಿ ಜನರಿಗೆ ಎರಡು ಡೋಸ್, 42 ಕೋಟಿ ಜನರಿಗೆ ಒಂದು ಡೋಸ್ ನೀಡಲಾಗಿದೆ. ಇನ್ನು 68 ಕೋಟಿ ಜನರಿಗೆ ಒಂದು ಡೋಸ್ ಲಸಿಕೆಯನ್ನೂ ನೀಡಿಲ್ಲ. ಯಾವ ಸಾಧನೆಗೆ ಸಂಭ್ರಮಾಚರಣೆ ಮಾಡುತ್ತಿದ್ದಾರೆ’ ಎಂದು ಪ್ರಶ್ನಿಸಿದರು.

‘ನಾನು ಮುಖ್ಯಮಂತ್ರಿಯಾಗಿದ್ದಾಗ ಹಾನಗಲ್‌ಗೆ ₹2,400 ಕೋಟಿ ಅನುದಾನ ನೀಡಿದ್ದೆ. ಬಿಜೆಪಿ ಸರ್ಕಾರ ಏನು ಮಾಡಿದೆ ಎಂಬುದರ ಅಭಿವೃದ್ಧಿ ಕಾರ್ಯಗಳ ಪಟ್ಟಿ ಮಾಡಲಿ’ ಎಂದು ಅವರು ಸವಾಲು ಹಾಕಿದರು.

‘ಲಸಿಕೆ ಪಡೆದ ಜನರೇ ಉತ್ತರಿಸುತ್ತಾರೆ’

‘ಕೋವಿಡ್ ಲಸಿಕೆ ಬಗ್ಗೆ ಟೀಕೆ ಮಾಡುವ ಸಿದ್ದರಾಮಯ್ಯ ಅವರಿಗೆ 100 ಕೋಟಿ ಡೋಸ್ ಲಸಿಕೆ ಪಡೆದ ಜನರೇ ಉತ್ತರಿಸಲಿದ್ದಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿರುಗೇಟು ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ‘ಲಸಿಕೆ ಬಗ್ಗೆ ಸಿದ್ದರಾಮಯ್ಯ ಅಪಪ್ರಚಾರ ಮಾಡುತ್ತಿದ್ದಾರೆ. ಅಷ್ಟೊಂದು ಜನಕ್ಕೆ ಲಸಿಕೆ ಕೊಟ್ಟೇ ಇಲ್ಲ ಎನ್ನುತ್ತಿದ್ದಾರೆ. ಇಂಥ ಪ್ರಶ್ನೆಗಳು ಬರುತ್ತವೆ ಎನ್ನುವ ಕಾರಣಕ್ಕಾಗಿಯೇ ಲಸಿಕೆ ಪಡೆದವರ ಮಾಹಿತಿ ಸಂಗ್ರಹಿಸಿ, ಆಧಾರ್ ಸಂಖ್ಯೆ ಅದಕ್ಕೆ ಜೋಡಿಸಲಾಗಿದೆ. ವೈಜ್ಞಾನಿಕವಾಗಿ ದಾಖಲೆ ನೋಂದಣಿ ಮಾಡಿಯೇ ಲಸಿಕೆ ನೀಡಲಾಗಿದೆ’ ಎಂದರು.

‘ನಾಯಕ ಶ್ರೀ’ ಪ್ರಶಸ್ತಿಗೆ ಮೀರಾಸಾಬಿಹಳ್ಳಿ ಶಿವಣ್ಣ ಆಯ್ಕೆ



ಚಳ್ಳಕೆರೆ: ಕರ್ನಾಟಕ ಇತಿಹಾಸ ಅಕಾಡೆಮಿಯ 2020ನೇ ಸಾಲಿನ ರಾಜ್ಯಮಟ್ಟದ ‘ನಾಯಕಶ್ರೀ’ ಪ್ರಶಸ್ತಿಗೆ ಜಿಲ್ಲೆಯ ಹಿರಿಯ ಜಾನಪದ ವಿದ್ವಾಂಸ ಮೀರಾಸಾಬಿಹಳ್ಳಿ ಶಿವಣ್ಣ ಅವರು ಆಯ್ಕೆಯಾಗಿದ್ದಾರೆ ಎಂದು ಇತಿಹಾಸ ಅಕಾಡೆಮಿಯ ರಾಜ್ಯ ಅಧ್ಯಕ್ಷ ದೇವರಕೊಂಡ ರೆಡ್ಡಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿವಣ್ಣ ಅವರು ಮ್ಯಾಸಬೇಡರ ಸಂಸ್ಕೃತಿಯ ಕುರಿತು ‘ದುರುಗ ಜಾನಪದ’, ‘ಮ್ಯಾಸಮಂಡಲ’, ಸೇರಿದಂತೆ ಒಟ್ಟು 40 ಕೃತಿಗಳನ್ನು ರಚಿಸಿದ್ದಾರೆ. ಪ್ರಶಸ್ತಿಯ ಮೊತ್ತ ₹ 10 ಸಾವಿರ. ನವೆಂಬರ್ ಅಥವಾ ಡಿಸೆಂಬರ್ ಮೊದಲ ವಾರದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಹೊರನಾಡು ಅನ್ನಪೂರ್ಣೇಶ್ವರಿ ದೇವಾಲಯದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸರ್ಕಾರ, ಖಾಸಗಿ ಕಂಪನಿಗಳು ಜೊತೆಯಾಗಿ ತೈಲ ಖರೀದಿ?

ನವದೆಹಲಿ: ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಹಾಗೂ ಖಾಸಗಿ ಕಂಪನಿಗಳು ಜೊತೆಯಾಗಿ ಸೌದಿ ಅರೇಬಿಯಾ ಮತ್ತು ಇತರ ದೇಶಗಳಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವ ಸಾಧ್ಯತೆಗಳ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರದೀಪ್ ಸಿಂಗ್ ಪುರಿ ಹೇಳಿದ್ದಾರೆ.

ಎರಡೂ ವಲಯದ ಕಂಪನಿಗಳು ಜೊತೆಯಾಗಿ ತೈಲ ಆಮದು ಮಾಡಿಕೊಂಡಾಗ, ಬೆಲೆ ವಿಚಾರದಲ್ಲಿ ಚೌಕಾಸಿ ಮಾಡಲು ಸಾಧ್ಯವಾಗುತ್ತದೆ ಎಂದು ಅವರು ಹೇಳಿದ್ದಾರೆ. ಸರ್ಕಾರಿ ಮತ್ತು ಖಾಸಗಿ ಕಂಪನಿಗಳ ಪ್ರತಿನಿಧಿಗಳ ಜೊತೆ ಮಾತುಕತೆ ನಡೆಸಲು ಈ ವಿಚಾರವಾಗಿ ಸಭೆ ಕರೆಯಲಾಗಿತ್ತು.

ಖಾಸಗಿ ವಲಯದ ತೈಲ ಸಂಸ್ಕರಣಾ ಕಂಪನಿಗಳು ಉತ್ಸಾಹದಿಂದ ಪ್ರತಿಕ್ರಿಯೆ ನೀಡಿವೆ ಎಂದು ಪುರಿ ತಿಳಿಸಿದ್ದಾರೆ. ಈಗಿರುವ ವ್ಯವಸ್ಥೆಯ ಅಡಿಯಲ್ಲಿ ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್, ಇಂಡಿಯನ್ ಆಯಿಲ್ ಕಾರ್ಪೊರೇಷನ್ ಮತ್ತು ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಕಂಪನಿಗಳು ಪ್ರತ್ಯೇಕವಾಗಿ ತೈಲ ಆಮದು ಮಾಡಿಕೊಳ್ಳುತ್ತಿವೆ.


ಖಾಸಗಿ ಕಂಪನಿಗಳು ಕೂಡ ಪ್ರತ್ಯೇಕವಾಗಿ ಆಮದು ಮಾಡಿಕೊಳ್ಳುತ್ತಿವೆ. ಎಲ್ಲ ಕಂಪನಿಗಳೂ ಒಟ್ಟಾಗಿ ತೈಲ ಆಮದು ಮಾಡಿಕೊಳ್ಳುವಂತೆ ಆದಲ್ಲಿ, ಬೆಲೆ ವಿಚಾರದಲ್ಲಿ ಚೌಕಾಸಿ ಮಾಡಲು ಸಾಧ್ಯವಾಗುತ್ತದೆ ಎಂಬುದು ಕೇಂದ್ರದ ಲೆಕ್ಕಾಚಾರ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಮಾಹಿತಿ

ದಂಡನೆಗೆ ‘ಸಮಗ್ರ ಕನ್ನಡ ಭಾಷಾ ಮಸೂದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆದಷ್ಟು ಬೇಗ ‘ಸಮಗ್ರ ಕನ್ನಡ ಭಾಷಾ ಮಸೂದೆ’ಯ ಕರಡನ್ನು ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸಲಾಗುವುದು. ಇದು ಕಾಯ್ದೆಯಾಗಿ ಜಾರಿಗೊಂಡಲ್ಲಿ ಕನ್ನಡ ಅನುಷ್ಠಾನದ ಬಗ್ಗೆ ಅಸಡ್ಡೆ ತೋರುವ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಲು ಹಾಗೂ ಕನ್ನಡಕ್ಕೆ ಶಕ್ತಿ ತುಂಬಲು ಸಾಧ್ಯ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ತಿಳಿಸಿದರು.



ಪ್ರಾಧಿಕಾರವು ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ನಾಗಾಭರಣ ‘ಕನ್ನಡ– ಕನ್ನಡಿ ಚಿಂತನ ಮಂಥನ’ ಕಾರ್ಯಕ್ರಮದಲ್ಲಿ ಎರಡು ವರ್ಷಗಳ ಸಾಧನೆ ಬಗ್ಗೆ ಅವರು ವಿವರಿಸಿದರು.

‘ಅಧಿಕಾರ ವಹಿಸಿಕೊಂಡ ಬಳಿಕ ಎರಡು ವರ್ಷಗಳ ಅವಧಿಯಲ್ಲಿ ಒಂದೂವರೆ ವರ್ಷ ಕೋವಿಡ್ ನಡುವೆಯೇ ಸಾಗಬೇಕಾಯಿತು. ಅಷ್ಟಾಗಿಯೂ ಸವಾಲುಗಳ ನಡುವೆಯೇ ಇರುವ ಅವಕಾಶಗಳನ್ನು ಸಮರ್ಪಕವಾಗಿ ಬಳಸಿಕೊಂಡು, ವಿವಿಧ ಕನ್ನಡ ಪರ ಕಾರ್ಯಗಳನ್ನು ನಡೆಸಲಾಯಿತು. ಈ ಅವಧಿಯಲ್ಲಿ ಅಂದುಕೊಂಡಿದ್ದ ಎಲ್ಲವನ್ನೂ ಮಾಡಲು ಸಾಧ್ಯವಾಗಲಿಲ್ಲ’ ಎಂದರು.

ಒಂದು ವರ್ಷಕ್ಕೆ ಯೋಜನೆ: ‘ಎರಡು ವರ್ಷಗಳಲ್ಲಿ ಬ್ಯಾಂಕ್‌ಗಳಲ್ಲಿ ಕನ್ನಡ ಅನುಷ್ಠಾನ, ನ್ಯಾಯಾಲಯದಲ್ಲಿ ಕನ್ನಡ ಬಳಕೆ ಸೇರಿದಂತೆ ವಿವಿಧ ಅಭಿಯಾನಗಳನ್ನು ನಡೆಸಿ, ಜಾಗೃತಿ ಮೂಡಿಸಲಾಯಿತು. ಮುಂದಿನ ಒಂದು ವರ್ಷದಲ್ಲಿ ಕೈಗೊಳ್ಳಬೇಕಾದ ಯೋಜನೆಗಳನ್ನು ಈಗಾಗಲೇ ರೂಪಿಸಲಾಗಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಕನ್ನಡ ಅನುಷ್ಠಾನ ಅಭಿಯಾನ, ತಂತ್ರಾಂಶಗಳ ಮೂಲಕ ತಂತ್ರಜ್ಞಾನದಲ್ಲಿ ಭವಿಷ್ಯದ ಕನ್ನಡ ಸಿದ್ಧಪಡಿಸುವಿಕೆ ಹಾಗೂ ಆನ್‌ಲೈನ್ ಕನ್ನಡ ಕಲಿಕಾ ಪಾಠಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗುತ್ತದೆ’ ಎಂದು ವಿವರಿಸಿದರು.

‘ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗೆ ಅಧ್ಯಯನ ನಡೆಸಲು ಹಾಗೂ ನಾಡಿನ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಇಚ್ಛಿಸುವವರಿಗೆ ಅನುಕೂಲವಾಗುವಂತೆ ‘ಕರ್ನಾಟಕ ಸಂಗಾತಿ’ ಕೃತಿಯನ್ನು ಇವತ್ತಿನ ಕಾಲಘಟ್ಟಕ್ಕೆ ತಕ್ಕಂತೆ ಪರಿಷ್ಕರಿಸಲಾಗುತ್ತಿದೆ’ ಎಂದರು.

ಪ್ರಾಧಿಕಾರದ ಸದಸ್ಯ ಪ್ರೊ. ಅಬ್ದುಲ್ ರೆಹಮಾನ್ ಪಾಷ, ‘ಕನ್ನಡ ತಿಳಿಯದವರಿಗೆ ಕನ್ನಡ ಕಲಿಸುವ ಅಭಿಯಾನವನ್ನು ನಡೆಸುತ್ತಿದ್ದೇವೆ. ಜಿಲ್ಲಾ ಮಟ್ಟದಲ್ಲಿಯೂ ಅನುವಾದ ಕಮ್ಮಟಗಳನ್ನು ನಡೆಸಲು ನಿರ್ಧರಿಸಲಾಗಿದೆ. ಉರ್ದು ಭಾಷಾ ಶಿಕ್ಷಕರಿಗೆ ಕನ್ನಡ ಅನುವಾದ ಕಮ್ಮಟವನ್ನು ಹಮ್ಮಿಕೊಳ್ಳಲಾಗುತ್ತದೆ’ ಎಂದರು.

ಸದಸ್ಯರಾದ ಗುಬ್ಬಿಗೂಡು ರಮೇಶ್, ಡಾ.ಸಿ.ಎ. ಕಿಶೋರ್, ಕಾರ್ಯದರ್ಶಿ ಸಂತೋಷ್ ಹಾನಗಲ್ ಇದ್ದರು.

‘ಕೆನರಾ ಬ್ಯಾಂಕ್‌ನಲ್ಲಿ ಕನ್ನಡ ಕಡೆಗಣನೆ’

‘ಟಿ.ಎಸ್. ನಾಗಾಭರಣ ಅವರ ನೇತೃತ್ವದಲ್ಲಿ ಪ್ರಾಧಿಕಾರದವರು ಕೆನರಾ ಬ್ಯಾಂಕ್ ಕೇಂದ್ರ ಕಚೇರಿ ಆವರಣದಲ್ಲಿ ಈ ಹಿಂದೆ ಕನ್ನಡ ಅನುಷ್ಠಾನದ ಬಗ್ಗೆ ಜಾಗೃತಿ ಮೂಡಿಸಿದ್ದರು. ಆದರೆ, ಅದರಿಂದ ಯಾವುದೇ ಬದಲಾವಣೆಗಳಾಗಿಲ್ಲ. ನಮ್ಮ ನೆಲದಲ್ಲೇ ಹುಟ್ಟಿದ ಬ್ಯಾಂಕ್ ಆದರೂ ಕನ್ನಡ ಅಂದರೆ ಎಲ್ಲರೂ ಮೂಗು ಮುರಿಯುತ್ತಾರೆ. ಹಿಂದಿಯಲ್ಲಿಯೇ ವ್ಯವಹರಿಸುತ್ತಾರೆ’ ಎಂದು ಬ್ಯಾಂಕಿನ ಅಧಿಕಾರಿಯೊಬ್ಬರು ಬೇಸರ ವ್ಯಕ್ತಪಡಿಸಿದರು.

‘ಹಿಂದಿ ದಿವಸದ ಪ್ರಯುಕ್ತ ಬ್ಯಾಂಕ್‌ನಲ್ಲಿ ತಿಂಗಳು ಪೂರ್ತಿ ಕಾರ್ಯಕ್ರಮಗಳನ್ನು ನಡೆಸಲಾಯಿತು. ಆದರೆ, ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಕಾರ್ಯಕ್ರಮಗಳನ್ನು ನಡೆಸಲು ಯಾರೂ ಆಸಕ್ತಿ ತೋರುತ್ತಿಲ್ಲ. ಅಲ್ಲಿ ಕನ್ನಡಿಗರು ಇದ್ದರೂ ಕನ್ನಡದ ಕಾರ್ಯಕ್ರಮಗಳನ್ನು ನಡೆಸುವ ವಾತಾವರಣವಿಲ್ಲ. ಹಾಗಾಗಿ, ಪ್ರಾಧಿಕಾರವು ಬ್ಯಾಂಕ್‌ಗಳಿಗೆ ನಿರಂತರ ಭೇಟಿ ನೀಡಿ, ಕನ್ನಡ ಅನುಷ್ಠಾನದ ಬಗ್ಗೆ ಪರಿಶೀಲನೆ ನಡೆಸಬೇಕು’ ಎಂದು ಆಗ್ರಹಿಸಿದರು.

‘ಜಾಗೃತಿ ಸಂದೇಶಗಳನ್ನು ಕನ್ನಡದಲ್ಲೇ ನೀಡಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಮಾಜಿಕ ಜಾಲತಾಣಗಳಲ್ಲಿ ಬೆಂಗಳೂರು ನಗರ ಪೊಲೀಸ್ ಕಚೇರಿಯು ಹಾಕುತ್ತಿರುವ ಜಾಗೃತಿ ಸಂದೇಶಗಳು ಇಂಗ್ಲಿಷ್‌ನಲ್ಲಿ ಮಾತ್ರ ಇರುತ್ತವೆ ಎಂಬ ದೂರುಗಳು ಬಂದಿವೆ. ಈ ಬಗ್ಗೆ ಸಂಬಂಧಪಟ್ಟವರ ಮೇಲೆ ಕ್ರಮಕೈಗೊಂಡು, ಜಾಗೃತಿ ಸಂದೇಶಗಳನ್ನು ಕನ್ನಡದಲ್ಲೇ ನೀಡಬೇಕು’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಸೂಚಿಸಿದ್ದಾರೆ.

ಈ ಬಗ್ಗೆ ಅವರು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಪತ್ರ ಬರೆದಿದ್ದಾರೆ. ‘ಸರ್ಕಾರಿ ಸುತ್ತೋಲೆಯ ಪ್ರಕಾರ ಕನ್ನಡವನ್ನು ರಾಜ್ಯದಾದ್ಯಂತ ಆಡಳಿತ ಭಾಷೆಯಾಗಿ ಎಲ್ಲ ಹಂತದಲ್ಲೂ ಕಡ್ಡಾಯವಾಗಿ ಜಾರಿಗೆ ತರಲಾಗಿದೆ. ಸರ್ಕಾರಿ ಇಲಾಖೆ ಹಾಗೂ ಕಚೇರಿಗಳಲ್ಲಿ ಕನ್ನಡ ಭಾಷೆಯ ಬಳಕೆಗೆ ಆಗುವ ಅಡೆತಡೆಗಳಿಗೆ ಆಯಾ ಇಲಾಖೆಗಳ ಮುಖ್ಯಸ್ಥರನ್ನು ಜವಾಬ್ದಾರರನ್ನಾಗಿ ಮಾಡಿ ಆದೇಶ ಹೊರಡಿಸಲಾಗಿದೆ. ಹಾಗಾಗಿ, ಬೆಂಗಳೂರು ನಗರ ಪೊಲೀಸ್ ಕಚೇರಿಯು ಕನ್ನಡಕ್ಕೆ ಆದ್ಯತೆ ನೀಡಿ, ಎಲ್ಲೆಡೆ ಕನ್ನಡವನ್ನು ಬಳಸಬೇಕು’ ಎಂದು ತಿಳಿಸಿದ್ದಾರೆ.

‘ಸಾಮಾಜಿಕ ಜಾಲತಾಣಗಳಲ್ಲಿ ಇಂಗ್ಲಿಷ್ ಭಾಷೆಯ ಸಂದೇಶಗಳನ್ನು ಬಳಸುತ್ತಿರುವ ಬಗ್ಗೆ ಪರಿಶೀಲಿಸಿ, ಕನ್ನಡಲ್ಲಿಯೂ ಸಂದೇಶಗಳನ್ನು ಹಾಕುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಬೇಕು’ ಎಂದು ಸಲಹೆ ನೀಡಿದ್ದಾರೆ.

ನಿಮ್ಹಾನ್ಸ್: ಕನ್ನಡಕ್ಕೆ ಮೂರನೇ ಸ್ಥಾನ

‘ಕೇಂದ್ರ ಸರ್ಕಾರದ ತ್ರಿಭಾಷಾ ನಿಯಮದನ್ವಯ ಕೇಂದ್ರ ಸ್ವಾಮ್ಯದ ಕಚೇರಿಗಳು ಪ್ರಾದೇಶಿಕ ಭಾಷೆಯಾದ ಕನ್ನಡವನ್ನು ಪ್ರಥಮ ಸ್ಥಾನದಲ್ಲಿ ಬಳಸುವುದು ಕಡ್ಡಾಯ. ಆದರೆ, ಇತ್ತೀಚೆಗೆ ನಡೆದ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) 25ನೇ ಘಟಿಕೋತ್ಸವದಲ್ಲಿ ವೇದಿಕೆಯ ಫಲಕದ ಮೇಲೆ ಕನ್ನಡಕ್ಕೆ ಮೂರನೇ ಸ್ಥಾನ ನೀಡಲಾಗಿದೆ. ಹಾಗಾಗಿ, ಸಂಬಂಧಪಟ್ಟವರ ಮೇಲೆ ಶಿಸ್ತುಕ್ರಮ ಕೈಗೊಳ್ಳಬೇಕು’ ಎಂದು ಟಿ.ಎಸ್. ನಾಗಾಭರಣ ಅವರು ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ ಅವರನ್ನು ಆಗ್ರಹಿಸಿದ್ದಾರೆ. ಈ ಬಗ್ಗೆ ಅವರು ಪತ್ರ ಬರೆದಿದ್ದು, ‘ರಾಜ್ಯದಲ್ಲಿ ಕನ್ನಡವೇ ಸಾರ್ವಭೌಮ. ಆಡಳಿತ ಭಾಷೆಯೂ ಹೌದು. ಆದರೆ, ನಿಮ್ಹಾನ್ಸ್ ಸಂಸ್ಥೆಯು ಕನ್ನಡವನ್ನು ಮೂರನೇ ಸ್ಥಾನಕ್ಕೆ ತಳ್ಳಿರುವುದು ಆಡಳಿತ ಲೋಪ. ಕೇಂದ್ರ ಸ್ವಾಮ್ಯದ ಕಚೇರಿಗಳು ಪ್ರಾದೇಶಿಕ ಭಾಷೆಯಾದ ಕನ್ನಡವನ್ನು ಪ್ರಥಮ ಸ್ಥಾನದಲ್ಲಿ ಅಚ್ಚುಕಟ್ಟಾಗಿ ಬಳಸುವುದು ಕಡ್ಡಾಯ’ ಎಂದು ನೆನಪಿಸಿದ್ದಾರೆ.

ಪಿಎಸ್‌ಐ ಅಮಾನತು

ಮಂಗಳೂರು: ಲೋಕಾಯುಕ್ತ ವಿಭಾಗದ ವಿಶೇಷ ಸರ್ಕಾರಿ ಅಭಿಯೋಜಕ ಕೆ.ಎಸ್.ಎನ್ ರಾಜೇಶ್ ವಿರುದ್ಧ ದಾಖಲಾಗಿರುವ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿ, ಕರ್ತವ್ಯಲೋಪ ಎಸಗಿದ ಆರೋಪದ ಮೇಲೆ ಉರ್ವ ಪೊಲೀಸ್ ಠಾಣೆಯ ಪಿಎಸ್‌ಐ ಶ್ರೀಕಲಾ ಮತ್ತು ಹೆಡ್ ಕಾನ್‌ಸ್ಟೆಬಲ್ ಪ್ರಮೋದ್ ಅವರನ್ನು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಅಮಾನತುಗೊಳಿಸಿದ್ದಾರೆ.

ಸಂತ್ರಸ್ತ ಯುವತಿಯಿಂದ ಮುಚ್ಚಳಿಕೆ ಬರೆಯಿಸಿಕೊಂಡು, ಹೆಬ್ಬೆಟ್ಟು ಹಾಕಿಸಿಕೊಂಡು, ಕಾನೂನುಬಾಹಿರವಾಗಿ ನಡೆದು ಕೊಂಡಿರುವ ಕಾರಣಕ್ಕೆ ಇಬ್ಬರನ್ನು ಅಮಾನತು ಮಾಡಲಾಗಿದೆ. ಠಾಣೆಯ ಇನ್‌ಸ್ಪೆಕ್ಟರ್ ಭಾರತಿ ಅವರಿಗೆ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಲಾಗಿದೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ಪ್ರಮುಖ ಆರೋಪಿಯ ಪತ್ತೆಗೆ ಕ್ರಮ ವಹಿಸಲಾಗಿದೆ.. ಪಾರದರ್ಶಕ ತನಿಖೆ ನಡೆಯುತ್ತಿದೆ ಎಂದು ಎಂದೂ ಪೊಲೀಸ್ ಕಮಿಷನರ್ ತಿಳಿಸಿದ್ದಾರೆ.

ಕೋವಿಡ್ ಲಸಿಕೆ: 100 ಕೋಟಿ ಡೋಸ್ ನೀಡಿದ ಹಿನ್ನೆಲೆಯಲ್ಲಿ ದೇಶವನ್ನು ಉದ್ದೇಶಿಸಿ ಪ್ರಧಾನಿ ಭಾಷಣ

‘ಅಭಿಯಾನದ ವೇಗಕ್ಕೆ ಬಾಯಿಮುಚ್ಚಿದ ಟೀಕಾಕಾರರು’

ನವದೆಹಲಿ (ಪಿಟಿಐ): ದೇಶದ ಲಸಿಕಾ ಅಭಿಯಾನ ‘ವಿಜ್ಞಾನದಿಂದ ಹುಟ್ಟಿದ, ವಿಜ್ಞಾನ ಮುನ್ನಡೆಸಿದ ಮತ್ತು ವಿಜ್ಞಾನ ಆಧಾರಿತ ಕಾರ್ಯಕ್ರಮವಾಗಿದೆ’ ಎಂದು ಶುಕ್ರವಾರ ಪ್ರಧಾನಿ ನರೇಂದ್ರ ಮೋದಿ ಹೇಳಿದರು. ಅಭಿಯಾನದ ವೇಗ ಮತ್ತು ಪ್ರಮಾಣ ದೇಶದ ಒಳಗಿನ ಮತ್ತು ದೇಶದ ಹೊರಗಿನ ಟೀಕಾಕಾರರ ಬಾಯಿ ಮುಚ್ಚಿಸಿದೆ ಎಂದರು.

ಕೋವಿಡ್ ವಿರುದ್ಧದ ಲಸಿಕಾ ಅಭಿಯಾನದಲ್ಲಿ ದೇಶವು 100 ಕೋಟಿ ಡೋಸ್‌ಗಳ ಮೈಲಿಗಲ್ಲು ತಲುಪಿದ ಹಿನ್ನೆಲೆಯಲ್ಲಿ ಅವರು ದೇಶವನ್ನು ಉದ್ದೇಶಿಸಿ ಶುಕ್ರವಾರ ಭಾಷಣ ಮಾಡಿದರು. ಲಸಿಕೆಯ ಅಗತ್ಯ ಮತ್ತು ದೇಶದ ಆರ್ಥಿಕತೆ ಕುರಿತು ಆಶಾಭಾವನೆ ಮತ್ತು ಭರವಸೆ ಮೂಡುತ್ತಿರುವ ಕುರಿತು ಮಾತನಾಡಿದರು.

ಈ ಸಾಧನೆ ಭಾರತದ ಸಾಮರ್ಥ್ಯವನ್ನು ಪ್ರಶ್ನಿಸುತ್ತಿದ್ದವರ ಬಾಯಿ ಮುಚ್ಚಿಸಿದೆ. ಅಲ್ಲದೇ, ‘ನವ ಭಾರತ’ ಕಷ್ಟಕರ ಗುರಿ ನಿಗದಿಪಡಿಸಿಕೊಂಡು ಅದನ್ನು ಸಾಧಿಸುತ್ತದೆ ಎಂಬುದನ್ನು ಈ ಲಸಿಕಾ ಅಭಿಯಾನ ತೋರಿಸಿಕೊಟ್ಟಿದೆ ಎಂದರು.

ಪ್ರತಿಪಕ್ಷಗಳಿಗೆ ತಿರುಗೇಟು: ಪ್ರತಿಪಕ್ಷಗಳ ಟೀಕೆಗಳ ವಿರುದ್ಧ ಹರಿಹಾಯ್ದ ಅವರು, ಚಪ್ಪಾಳೆ ತಟ್ಟುವುದರಿಂದ ಮತ್ತು ದೀಪ ಹಚ್ಚುವುದರಿಂದ ಹೇಗೆ ವೈರಸ್ ನಾಶ ಆಗುತ್ತದೆ ಎಂದು ಸಾಂಕ್ರಾಮಿಕದ ಆರಂಭಿಕ ದಿನಗಳಲ್ಲಿ ಟೀಕೆ ಮಾಡುತ್ತಿದ್ದರು. ಈ ಕ್ರಮಗಳು ಜನರ ಭಾಗವಹಿಸುವಿಕೆ ಮತ್ತು ಒಗ್ಗಟ್ಟನ್ನು ತೋರುತ್ತವೆ. 100 ಕೋಟಿ ಡೋಸ್ ಲಸಿಕೆ ನೀಡಿರುವುದು ಇತಿಹಾಸದಲ್ಲಿ ಹೊಸ ಅಧ್ಯಾಯವಾಗಿದೆ ಮತ್ತು ಇದು ದೇಶದ ಸಾಮರ್ಥ್ಯವನ್ನು ಪ್ರತಿಫಲಿಸುತ್ತದೆ. ಭಾರತದ ಲಸಿಕಾ ಅಭಿಯಾನ ‘ಸಬ್ ಕಾ ಸಾಥ್, ಸಬ್ ಕಾ ವಿಶ್ವಾಸ್ ಮತ್ತು ಸಬ್ ಕಾ ಪ್ರಯಾಸ್’ ಘೋಷಣೆಯ ಅತ್ಯಂತ ಪರಿಣಾಮಕಾರಿ ಉದಾಹರಣೆ ಆಗಿದೆ ಎಂದರು.



ದೇಶದಲ್ಲಿ ಈಗ ಆತ್ಮವಿಶ್ವಾಸ ಇದೆ. ಆರ್ಥಿಕತೆ ಸೇರಿ ಸಮಾಜದ ಎಲ್ಲ ಸ್ತರಗಳಲ್ಲಿ, ಎಲ್ಲ ಹಂತಗಳಲ್ಲಿ ಎಲ್ಲೆಡೆಯೂ ಇರುವುದು ಆಶಾಭಾವ, ಆಶಾಭಾವ, ಆಶಾಭಾವ

ನರೇಂದ್ರ ಮೋದಿ, ಪ್ರಧಾನಿ

ಈ ಮೈಲುಗಲ್ಲು ತಲುಪಿದ್ದರಿಂದ ಆಗುವ ಮತ್ತೊಂದು ಮಹತ್ತರ ಪರಿಣಾಮವೇನೆಂದರೆ, ಭಾರತವನ್ನು ಕೊರೊನಾ ವೈರಸ್‌ನಿಂದ ಸುರಕ್ಷಿತ ದೇಶ ಎಂದು ಪರಿಗಣಿಸಲಾಗುತ್ತದೆ. ಔಷಧಿ ತಯಾರಿಕಾ ವಲಯದಲ್ಲಿ ಭಾರತದ ಸ್ಥಾನ ಜಾಗತಿಕವಾಗಿ ದೊಡ್ಡ ಮಟ್ಟಕ್ಕೇರುತ್ತದೆ ಎಂದರು.

ವಿಐಪಿ ಸಂಸ್ಕೃತಿಗೆ ಜಾಗ ಇಲ್ಲ: ಭಾರತದಂಥ ಪ್ರಜಾಪ್ರಭುತ್ವದಲ್ಲಿ ಕೋವಿಡ್‌ನಂಥ ಸಾಂಕ್ರಾಮಿಕದ ಎದುರು ಹೋರಾಡುವುದು ಬಹಳ ಕಷ್ಟ ಎಂಬ ಆತಂಕಗಳು ಸಾಂಕ್ರಾಮಿಕದ ಆರಂಭದಲ್ಲಿ ವ್ಯಕ್ತವಾಗಿದ್ದವು. ಸಾಂಕ್ರಾಮಿಕ ತಡೆಗೆ ಬೇಕಿರುವ ಶಿಸ್ತನ್ನು ಹೇಗೆ ಜನರಲ್ಲಿ ತರಲಾಗುತ್ತದೆ ಎಂಬ ಕುರಿತೂ ಪ್ರಶ್ನೆಗಳು ಎದ್ದಿದ್ದವು. ನಮಗೆ ಪ್ರಜಾಪ್ರಭುತ್ವ ಎಂದರೆ ‘ಸಬ್ ಕಾ ಸಾಥ್’. ಎಲ್ಲರನ್ನೂ ಒಟ್ಟಿಗೆ ಸೇರಿಸಿಕೊಂಡು ನಾವು ‘ಎಲ್ಲರಿಗೂ ಲಸಿಕೆ, ಉಚಿತ ಲಸಿಕೆ’ ಅಭಿಯಾನ ಆರಂಭಿಸಿದೆವು. ಈ ರೋಗ ಹೇಗೆ ಯಾರ ಕುರಿತೂ ತಾರತಮ್ಯ ಮಾಡುವುದಿಲ್ಲವೋ ಅದೇ ರೀತಿ ಲಸಿಕೆ ಹಂಚಿಕೆ ವಿಚಾರದಲ್ಲೂ ನಾವು ತಾರತಮ್ಯ ಮಾಡಬಾರದು ಎಂಬ ಮಂತ್ರ ಇರಿಸಿಕೊಂಡಿದ್ದೆವು, ಹಾಗಾಗಿ ಇಲ್ಲಿ ವಿಐಪಿ ಸಂಸ್ಕೃತಿ ಇರಲಿಲ್ಲ ಎಂದರು.

ಹಬ್ಬಗಳ ಋತುವಿನಲ್ಲಿ ಕೋವಿಡ್ ಸಂಬಂಧಿ ಎಚ್ಚರಿಕೆಗಳನ್ನು ಪಾಲಿಸಬೇಕು. ನೀವು ತೆಗೆದುಕೊಂಡಿರುವ ಲಸಿಕೆ ಎಷ್ಟೇ ಉತ್ತಮವಾಗಿರಲಿ ಆದರೆ ಯುದ್ಧ ಮುಗಿಯುವ ವರೆಗೆ ಶಸ್ತ್ರಗಳನ್ನು ಕೆಳಗಿಡಬಾರದು. ಮುಂಜಾಗ್ರತೆ ವಹಿಸಿಯೇ ಹಬ್ಬಗಳನ್ನು ಆಚರಿಸಿ ಎಂದರು.

‘ಇನ್ನೂ 106 ಕೋಟಿ ಡೋಸ್ ಯಾವಾಗ ನೀಡುತ್ತೀರಿ’

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಕೋವಿಡ್ ಲಸಿಕೆ ವಿಚಾರದಲ್ಲಿ ಅರ್ಧಸತ್ಯವನ್ನಷ್ಟೇ ಹೇಳಿ, ದೇಶದ ಜನರ ದಿಕ್ಕುತಪ್ಪಿಸುತ್ತಿದ್ದಾರೆ. ಇದು ಅಪಾಯಕಾರಿ ಎಂದು ಕಾಂಗ್ರೆಸ್ ಆರೋಪಿಸಿದೆ.

ಕೋವಿಡ್ ಲಸಿಕೆಯ ನೂರು ಕೋಟಿ ಡೋಸ್‌ಗಳನ್ನು ನೀಡಿದ ಮರುದಿನ ದೇಶವನ್ನು ಉದ್ದೇಶಿಸಿ ಮೋದಿ ಅವರು ಮಾಡಿದ ಭಾಷಣಕ್ಕೆ ಪ್ರತಿಕ್ರಿಯೆಯಾಗಿ ಕಾಂಗ್ರೆಸ್, ಹಲವು ಪ್ರಶ್ನೆಗಳನ್ನು ಪ್ರಧಾನಿ ಎದುರಿಗೆ ಇರಿಸಿದೆ.

‘ದೇಶದ ಶೇ 21ರಷ್ಟು ಜನರು ಮಾತ್ರವೇ ಲಸಿಕೆಯ ಎರಡೂ ಡೋಸ್‌ಗಳನ್ನು ಪಡೆದಿದ್ದಾರೆ. ಡಿಸೆಂಬರ್ ಅಂತ್ಯದ ವೇಳೆಗೆ ದೇಶದ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಎರಡೂ ಡೋಸ್ ಲಸಿಕೆ ನೀಡುತ್ತೇವೆ ಎಂದು ಪ್ರಧಾನಿ ಮೋದಿ ಘೋಷಿಸಿದ್ದರು. ಈಗ ಉಳಿದಿರುವ 70 ದಿನಗಳಲ್ಲಿ ಹೇಗೆ 106 ಕೋಟಿ ಡೋಸ್ ಲಸಿಕೆ ನೀಡಬೇಕಿದೆ. ಈ ಎಪ್ಪತ್ತು ದಿನಗಳಲ್ಲಿ ದೇಶದ ಎಲ್ಲಾ ವಯಸ್ಕರಿಗೆ ಲಸಿಕೆ ನೀಡಲಾಗುವುದು ಎಂಬುದರ ಬಗ್ಗೆ ಪ್ರಧಾನಿ ಶ್ವೇತಪತ್ರ ಹೊರಡಿಸಲಿ’ ಎಂದು ಕಾಂಗ್ರೆಸ್ ನಾಯಕ ಗೌರವ್ ವಲ್ಲಭ್ ಸವಾಲು ಹಾಕಿದ್ದಾರೆ.

ಕೋವಿಡ್‌ನಿಂದ ದೇಶದಲ್ಲಿ 4.53 ಲಕ್ಷ ಜನರು ಸತ್ತಿದ್ದಾರೆ. ಅವರ ಸಾವಿಗೆ ಸಂತಾಪ ಸೂಚಿಸಲು ಮೋದಿ ಅವರ ಬಳಿ ಒಂದು ಪದವೂ ಇಲ್ಲ. ಸಂಭ್ರಮಾಚರಣೆ ಮಾತ್ರ ಮಾಡುತ್ತಾರೆ

ಗೌರವ್ ವಲ್ಲಭ್, ಕಾಂಗ್ರೆಸ್ ನಾಯಕ

‘ವಿಶ್ವದಲ್ಲಿ 50 ಕೋಟಿಗಿಂತ ಹೆಚ್ಚು ಜನಸಂಖ್ಯೆ ಇರುವ ದೇಶಗಳು ಎರಡು ಮಾತ್ರ. 100 ಕೋಟಿ ಲಸಿಕೆ ನೀಡಿರುವ ಏಕೈಕ ಮತ್ತು ಮೊದಲ ದೇಶ ಭಾರತ ಎಂದು ಮೋದಿ ಅವರು ಸುಳ್ಳು ಹೇಳುತ್ತಿದ್ದಾರೆ. ಆದರೆ, ನಮಗಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಚೀನಾ ಸೆಪ್ಟೆಂಬರ್ ಅಂತ್ಯದ ವೇಳೆಗೆ 216 ಕೋಟಿ ಡೋಸ್‌ಗಳಷ್ಟು ಲಸಿಕೆ ನೀಡಿದೆ. ಚೀನಾ ತನ್ನ ಜನಸಂಖ್ಯೆಯ ಶೇ 80ರಷ್ಟು ಜನರಿಗೆ ಎರಡೂ ಡೋಸ್‌ಗಳನ್ನು ನೀಡಿದೆ. ತನ್ನ ಒಟ್ಟು ಜನಸಂಖ್ಯೆಯ ಶೇ 21ರಷ್ಟು ಜನರಿಗೆ ಮಾತ್ರ ಎರಡೂ ಡೋಸ್ ಲಸಿಕೆ ನೀಡಿರುವ ಪ್ರಧಾನಿ ಮೋದಿ ಅವರ ಸರ್ಕಾರ ಲಸಿಕೆ ಮಹೋತ್ಸವವನ್ನು ಸಂಭ್ರಮಿಸುತ್ತಿದೆ’ ಎಂದು ಅವರು ಟೀಕಿಸಿದ್ದಾರೆ.

‘ಪ್ರಧಾನಿ ಮೋದಿ ಅವರು ತಮ್ಮ ಭಾಷಣದಲ್ಲಿ ಜನರಿಗೆ ಉಪಯೋಗವಾಗುವ ಯಾವುದಾದರೂ ವಿಷಯಗಳ ಬಗ್ಗೆ ಮಾತನಾಡುತ್ತಾರೆ ಎಂದು ನಿರೀಕ್ಷಿಸಿದ್ದೆವು. ದೇಶದಲ್ಲಿ ಬೆಲೆ ಏರಿಕೆಯಾಗುತ್ತಿದೆ, ಉಗ್ರರ ಉಪಟಳ ಹೆಚ್ಚಾಗುತ್ತಿದೆ. ಆದರೆ ಮೋದಿ ಅವರು ಈ ಯಾವುದರ ಬಗ್ಗೆಯೂ ಮಾತನಾಡಲಿಲ್ಲ. ಬದಲಿಗೆ ಸಂಭ್ರಮಾಚರಣೆ ಮಾಡುತ್ತಿದ್ದಾರೆ’ ಎಂದು ಅವರು ಟೀಕಿಸಿದ್ದಾರೆ.

2021ರ ಜನವರಿಯಿಂದ ಈವರೆಗೆ ಇಂಧನದ ಬೆಲೆ ಶೇ 29ರಷ್ಟು ಏರಿಕೆಯಾಗಿದೆ. ಈ ಅವಧಿಯಲ್ಲಿ ಪ್ರಧಾನಿ ಮೋದಿ ಅವರ ಕೆಲವು ಕಾರ್ಪೊರೇಟ್ ಗೆಳೆಯರ ಆದಾಯ ಹೊರತುಪಡಿಸಿ, ಬೇರೆ ಯಾರಾದ್ದಾದರೂ ಆದಾಯ ಶೇ 20ರಷ್ಟು ಏರಿಕೆಯಾಗಿದೆಯೇ? ಆದರೆ ಮೋದಿ ಅವರು ಬೆಲೆ ಏರಿಕೆಯ ಈ ಸ್ಥಿತಿಯ ಬಗ್ಗೆ ಮಾತೇ ಆಡುವುದಿಲ್ಲ ಎಂದು ಅವರು ಲೇವಡಿ ಮಾಡಿದ್ದಾರೆ.

ಜಮ್ಮು-ಕಾಶ್ಮೀರದಲ್ಲಿ ಉಗ್ರರ ಉಪಟಳ ಹೆಚ್ಚಾಗುತ್ತಿದೆ. ಎರಡು ವಾರದಲ್ಲಿ 32 ಜನ ಅಮಾಯಕರು ಉಗ್ರರಿಗೆ ಬಲಿಯಾಗಿದ್ದಾರೆ. ಈ ಬಗ್ಗೆ ಮಾತನಾಡಿ ಜನರಲ್ಲಿ ವಿಶ್ವಾಸ ಮೂಡಿಸುವ ಕೆಲಸವನ್ನು ಪ್ರಧಾನಿ ಮಾಡಲಿಲ್ಲ ಎಂದು ಅವರು ಹೇಳಿದ್ದಾರೆ.

ಆರ್ಥಿಕ ಚೇತರಿಕೆ ಮತ್ತು ಆಶಾಭಾವನೆ

ದೇಶದಲ್ಲಿ ಈಗ ಆಶಾಭಾವನೆ ಮೂಡಿದೆ. ಆರ್ಥಿಕತೆ ಕುರಿತು ಸಮಾಜದ ಎಲ್ಲಾ ಸ್ತರಗಳಲ್ಲಿ ಭರವಸೆ ಮೂಡಿದೆ. ಕೋವಿಡ್ ಸಾಂಕ್ರಾಮಿಕದಿಂದ ಹೊಡೆತಕ್ಕೊಳಗಾಗಿದ್ದ ಆರ್ಥಿಕ ವಲಯ ಚೇತರಿಸಿಕೊಳ್ಳುತ್ತಿದೆ. ತಜ್ಞರು ಮತ್ತು ಜಾಗತಿಕ ಮಟ್ಟದ ಸಂಸ್ಥೆಗಳು ಭಾರತದ ಆರ್ಥಿಕತೆ ಕುರಿತು ಧನಾತ್ಮಕ ಅಭಿಪ್ರಾಯ ಹೊಂದಿದ್ದಾರೆ. ಭಾರತದ ಕಂಪನಿಗಳು ಮತ್ತು ನವೋದ್ಯಮಗಳಿಗೆ ದಾಖಲೆಯ ಮಟ್ಟದಲ್ಲಿ ಬಂಡವಾಳ ಹರಿದು ಬರುತ್ತಿದೆ ಮತ್ತು ದಾಖಲೆಯ ಮಟ್ಟದಲ್ಲಿ ಉದ್ಯೋಗ ಸೃಷ್ಟಿ ಆಗುತ್ತಿದೆ ಎಂದರು.

‘ಸ್ವಚ್ಛ ಭಾರತ ಅಭಿಯಾನ’ ಒಂದು ಸಮೂಹ ಅಭಿಯಾನ. ಅದೇ ಮಾದರಿಯಲ್ಲೇ ಜನರು ‘ವೋಕಲ್ ಫಾರ್ ಲೋಕಲ್’ ಅಭಿಯಾನವನ್ನೂ ಗಂಭೀರವಾಗಿ ಪರಿಗಣಿಸಿದ್ದಾರೆ. ಭಾರತದಲ್ಲಿ ತಯಾರಾದ ಮತ್ತು ಭಾರತೀಯರು ತಯಾರಿಸಿದ ವಸ್ತುಗಳನ್ನು ಕೊಳ್ಳುವುದನ್ನೂ ಸ್ವಚ್ಛ ಭಾರತ ಅಭಿಯಾನದ ಮಾದರಿಯಲ್ಲೇ ಅನುಷ್ಠಾನಕ್ಕೆ ತಂದಿದ್ದಾರೆ. ಕಳೆದ ದೀಪಾವಳಿ ವೇಳೆಯಲ್ಲಿ ಜನರಲ್ಲಿ ಭಯ ಮನೆಮಾಡಿತ್ತು. ಆದರೆ ಈಗ 100 ಕೋಟಿ ಡೋಸ್ ಲಸಿಕೆ ನೀಡಿರುವುದರಿಂದ ಜನರಲ್ಲಿ ವಿಶ್ವಾಸ ಮೂಡಿದೆ ಎಂದರು.

ಯೋಗಿ ಭದ್ರಕೋಟೆಗೆ ಪ್ರಿಯಾಂಕಾ ಲಗ್ಗೆ



ಲಖನೌ: ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್‌ನ ಪ್ರಚಾರಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರ ಲೋಕಸಭಾ ಕ್ಷೇತ್ರ ವಾರಾಣಸಿಯಿಂದ ಚಾಲನೆ ನೀಡಿದ್ದ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು, ಈ ತಿಂಗಳ ಅಂತ್ಯಕ್ಕೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಕ್ಷೇತ್ರ ಗೋರಖಪುರದಲ್ಲಿ ಪ್ರಚಾರ ನಡೆಸಲಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಚೈತನ್ಯ ತುಂಬಲು ಶ್ರಮಿಸುತ್ತಿರುವ ಪ್ರಿಯಾಂಕಾ ಗಾಂಧಿ ಅವರು ಗೋರಖಪುರದಲ್ಲಿ ಈ ತಿಂಗಳ ಅಂತ್ಯದ ವೇಳೆಗೆ ಬೃಹತ್ ಸಾರ್ವಜನಿಕ ಸಭೆ ನಡೆಸಲಿದ್ದಾರೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಕ್ಷೇತ್ರ ಮತ್ತು ಭದ್ರಕೋಟೆಯಾಗಿರುವ ಗೋರಖಪುರದಲ್ಲಿ ನಡೆಯಲಿರುವ ಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಸೇರಿಸುವ ಬಗ್ಗೆ ಅಲ್ಲಿನ ಪಕ್ಷದ ನಾಯಕರಿಗೆ ಪ್ರಿಯಾಂಕಾ ಅವರು ಸೂಚನೆ ನೀಡಿದ್ದಾರೆ ಎಂದು ಪಕ್ಷದ ಮೂಲಗಳು ಹೇಳಿವೆ.


ಬಾರಾಬಂಕಿ ಜಿಲ್ಲೆಯಲ್ಲಿ ಶನಿವಾರ ಪ್ರಿಯಾಂಕಾ ಗಾಂಧಿ ಅವರು ಕಾಂಗ್ರೆಸ್‌ನ ‘ಪ್ರತಿಜ್ಞಾ ಯಾತ್ರೆ’ಗೆ ಚಾಲನೆ ನೀಡಲಿದ್ದಾರೆ. ರಾಜ್ಯದ ಜನತೆಗಾಗಿ ಪಕ್ಷವು ಕೈಗೊಳ್ಳಲಿರುವ ಮತ್ತಷ್ಟು ಪ್ರತಿಜ್ಞೆಗಳ ವಿಚಾರವನ್ನು ಅವರು ಜನರ ಮುಂದೆ ಇರಿಸಲಿದ್ದಾರೆ ಎಂದು ಉತ್ತರ ಪ್ರದೇಶ ವಿಧಾನಸಭೆಯಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕಿ ಆರಾಧನಾ ಮಿಶ್ರಾ ಅವರು ಮಾಹಿತಿ ನೀಡಿದ್ದಾರೆ.

ಮುಂದಿನ ಚುನಾವಣೆಯಲ್ಲಿ ಪಕ್ಷವು ಶೇ 40ರಷ್ಟು ಟಿಕೆಟ್‌ಗಳನ್ನು ಮಹಿಳೆಯರಿಗೆ ನೀಡುವ, ಅಧಿಕಾರಕ್ಕೆ ಬಂದರೆ ಪ್ರೌಢಶಾಲಾ ಶಿಕ್ಷಣ ಪೂರ್ಣಗೊಳಿಸಿದ ಎಲ್ಲಾ ಬಾಲಕಿಯರಿಗೆ ಸ್ಮಾರ್ಟ್‌ಫೋನ್ ನೀಡುವ ಮತ್ತು ಪದವಿ ಪೂರ್ಣಗೊಳಿಸಿದ ಎಲ್ಲಾ ಹೆಣ್ಣುಮಕ್ಕಳಿಗೆ ಇ-ಸ್ಕೂಟರ್ ನೀಡುವ ಪ್ರತಿಜ್ಞೆಯನ್ನು ಕಾಂಗ್ರೆಸ್ ಕೈಗೊಂಡಿದೆ.

ಮುಂಬೈ ಕಟ್ಟಡದಲ್ಲಿ ಅಗ್ನಿ ಅವಘಡ: ವ್ಯಕ್ತಿ ಸಾವು

ಮುಂಬೈ(ಪಿಟಿಐ): ಇಲ್ಲಿಯ ಕರ್ರಿ ರಸ್ತೆಯ 61 ಅಂತಸ್ತಿನ ವಸತಿ ಸಮುಚ್ಚಯ ಒಂದರಲ್ಲಿ ಶುಕ್ರವಾರ ಮಧ್ಯಾಹ್ನ ಅಗ್ನಿ ಅವಘಡ ಸಂಭವಿಸಿದ್ದು, 30 ವರ್ಷ ವಯಸ್ಸಿನ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ ಎಂದು ಅಗ್ನಿಶಾಮಕ ದಳದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದಕ್ಷಿಣ ಮುಂಬೈನ ಲಾಲ್‌ಬಾಗ್ ಪ್ರದೇಶದಲ್ಲಿರುವ ಅವಿಘ್ನ ಪಾರ್ಕ್ ಕಟ್ಟಡದಲ್ಲಿ ಈ ದುರಂತ ಸಂಭವಿಸಿದೆ. ಬೆಂಕಿ ಹತ್ತಿಕೊಂಡಿದ್ದ 19ನೇ ಮಹಡಿಯ ಬಾಲ್ಕನಿಯಿಂದ ಕೆಳಕ್ಕೆ ಬಿದ್ದ ವ್ಯಕ್ತಿ ಮೃತಪಟ್ಟಿದ್ದಾರೆ. ಅವರನ್ನು ಕಟ್ಟಡದ ಭದ್ರತಾ ಸಿಬ್ಬಂದಿ ಅರುಣ್ ತಿವಾರಿ ಎಂದು ಗುರುತಿಸಲಾಗಿದೆ.



ಬಾಲ್ಕನಿಯ ಕಂಬಿ ಹಿಡಿದು ವ್ಯಕ್ತಿ ನೇತಾಡುತ್ತಿರುವ ದೃಶ್ಯ

‘ಕಟ್ಟಡದಲ್ಲಿ ಬೆಂಕಿ ಹೊತ್ತಿಕೊಂಡಿರುವುದು ಅರಿವಿಗೆ ಬರುತ್ತಿದ್ದಂತೆ ಅರುಣ್ 19ನೇ ಅಂತಸ್ತಿಗೆ ಓಡಿದರು. ಆದರೆ ತಾವು ಇರುವ ಜಾಗದಲ್ಲೂ ಬೆಂಕಿ ಹೊತ್ತಿಕೊಂಡಿದೆ ಎಂದು ತಿಳಿಯುತ್ತಿದ್ದಂತೆ ರಕ್ಷಣೆಗಾಗಿ ಬಾಲ್ಕನಿಗೆ ಓಡಿದರು. ಬಾಲ್ಕನಿಯ ಸರಳುಗಳನ್ನು ಹಿಡಿದು ಹಲವಾರು ನಿಮಿಷಗಳ ಕಾಲ ನೇತಾಡುತ್ತಿದ್ದರು. ಹತೋಟಿ ತಪ್ಪಿ ಕೆಳಗೆ ಬಿದ್ದು ಸಾವಿಗೀಡಾದರು’ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಸಂಜೆ ಸುಮಾರು 4.20ರ ವೇಳೆಗೆ ಬೆಂಕಿಯನ್ನು ಹತೋಟಿಗೆ ತರಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ದುರಂತದ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಮುಂಬೈ ಮುನಿಸಿಪಲ್ ಆಯುಕ್ತರಾದ ಇಕ್ಬಾಲ್ ಸಿಂಗ್ ಚಹಲ್ ಹೇಳಿದ್ದಾರೆ. ಉತ್ತಮ ತರಬೇತಿ ಪಡೆದಿರುವ ಖಾಸಗಿ ಭದ್ರತಾ ಸಿಬ್ಬಂದಿಯನ್ನು ಕಟ್ಟಡದಲ್ಲಿ ನೇಮಿಸಿದ್ದರೆ ಸಂತ್ರಸ್ತನ ಜೀವ ಉಳಿಯುತ್ತಿತ್ತು ಎಂದು ಮುಂಬೈ ಮೇಯರ್ ಕಿಶೋರಿ ಪೆಡ್ನೇಕರ್ ಹೇಳಿದ್ದಾರೆ.

‘ಕಡತ ವಿಲೇವಾರಿಗಾಗಿ ₹300 ಕೋಟಿ ಆಮಿಷ’

ನವದೆಹಲಿ (ಪಿಟಿಐ): ತಾವು ಜಮ್ಮು ಮತ್ತು ಕಾಶ್ಮೀರದಲ್ಲಿ ರಾಜ್ಯಪಾಲರಾಗಿದ್ದ ವೇಳೆ ಅಂಬಾನಿ ಗ್ರೂಪ್ಸ್ ಮತ್ತು ಆರ್‌ಎಸ್‌ಎಸ್ ಸಂಬಂಧಿತ ವ್ಯಕ್ತಿಗೆ ಸೇರಿದ ಕಡತಗಳನ್ನು ತೆರವುಗೊಳಿಸುವುದಕ್ಕಾಗಿ ತಮಗೆ ₹ 300 ಕೋಟಿ ಆಮಿಷ ಒಡ್ಡಲಾಗಿತ್ತು. ಆದರೆ ಅವುಗಳನ್ನು ತಿರಸ್ಕರಿಸಿದ್ದೆ ಎಂದು ಮೇಘಾಲಯದ ರಾಜ್ಯಪಾಲ ಸತ್ಯಪಾಲ್ ಮಲಿಕ್ ಹೇಳಿದ್ದಾರೆ.

ರಾಜಸ್ಥಾನದ ಝುಂಝುನುವಿನಲ್ಲಿ ನಡೆದ ಕಾರ್ಯಕ್ರಮವೊಂದಲ್ಲಿ ಅವರು ಮಾತನಾಡಿದ್ದಾರೆ.

’ನಾನು ಕಾಶ್ಮೀರಕ್ಕೆ ತೆರಳಿದಾಗ ಎರಡು ಕಡತಗಳು ವಿಲೇವಾರಿಗಾಗಿ ನನ್ನ ಬಳಿಗೆ ಬಂದಿದ್ದವು. ಒಂದು ಅಂಬಾನಿ ಅವರಿಗೆ ಸಂಬಂಧಿಸಿದ್ದು. ಇನ್ನೊಂದು ಕಡತ ಮೆಹಬೂಬ ಮುಫ್ತಿ ನೇತೃತ್ವದ (ಪಿಡಿಪಿ-ಬಿಜೆಪಿ ಸಮ್ಮಿಶ್ರ) ಸರ್ಕಾರದಲ್ಲಿ ಸಚಿವರಾಗಿದ್ದ, ಆರ್‌ಎಸ್‌ಎಸ್ ಸಂಪರ್ಕದಲ್ಲಿದ್ದ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಆಪ್ತರಾಗಿದ್ದ ವ್ಯಕ್ತಿಗೆ ಸಂಬಂಧಿಸಿದ್ದು’ ಎಂದಿದ್ದಾರೆ.

‘ಈ ಕಡತಗಳ ವ್ಯವಹಾರದಲ್ಲಿ ಹಗರಣವಿದೆ ಎಂಬುದನ್ನು ಸಂಬಂಧಪಟ್ಟ ಇಲಾಖೆಗಳ ಕಾರ್ಯದರ್ಶಿಗಳು ತಿಳಿಸಿದ್ದರು. ಅದರಂತೆ ಆ ವ್ಯವಹಾರಗಳನ್ನು ರದ್ದುಪಡಿಸಿದ್ದೆ. ಪ್ರತಿ ಕಡತ ವಿಲೇವಾರಿಗೆ ನನಗೆ ತಲಾ ₹ 150 ಕೋಟಿ ಸಿಗಲಿದೆ ಎಂದು ಕಾರ್ಯದರ್ಶಿಗಳು ಹೇಳಿದ್ದರು. ಆದರೆ, ನಾನು ಐದು ಕುರ್ತಾ-ಪೈಜಾಮಾಗಳೊಂದಿಗೆ ಇಲ್ಲಿಗೆ ಬಂದಿದ್ದೇನೆ. ಇಲ್ಲಿಂದ ಹೋಗುವಾಗಲೂ ಅವುಗಳೊಂದಿಗೇ ಹೋಗುತ್ತೇನೆ ಎಂದು ಅವರಿಗೆ ಹೇಳಿದ್ದೆ’ ಎಂದಿದ್ದಾರೆ.

ಮುಂದುವರಿದು, ’ಮುನ್ನೆಚ್ಚರಿಕೆಯಾಗಿ ಕಡತಗಳು ಮತ್ತು ಹಗರಣದಲ್ಲಿ ಶಾಮೀಲಾಗಿದ್ದ ವ್ಯಕ್ತಿಗಳ ಬಗ್ಗೆ ಪ್ರಧಾನಿ ಅವರಿಗೂ ತಿಳಿಸಿದ್ದೆ. ನಾನು ಸ್ಥಾನ ತ್ಯಜಿಸಲು ಸಿದ್ಧವಿರುವುದಾಗಿ ಮತ್ತು ಸ್ಥಾನದಲ್ಲಿ ಮುಂದುವರಿಯಬೇಕಾದರೆ ಕಡತಗಳಿಗೆ ಅನುಮೋದನೆ ನೀಡುವುದಿಲ್ಲ ಎಂಬುದಾಗಿ ಅವರಿಗೆ (ಮೋದಿಗೆ) ನೇರವಾಗಿ ಹೇಳಿದ್ದೆ‘ ಎಂದು ಹೇಳಿಕೆ ನೀಡಿದ್ದಾರೆ. ಆಗ ಮೋದಿಯವರು ಭ್ರಷ್ಟಾಚಾರದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಅಗತ್ಯವಿಲ್ಲ ಎಂದು ನನ್ನ ನಿರ್ಧಾರವನ್ನು ಬೆಂಬಲಿಸಿದ್ದರು ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಮಲಿಕ್ ಅವರು ಕಡತಗಳ ಬಗ್ಗೆ ವಿವರವಾಗಿ ಹೇಳಿಲ್ಲ. ಆದರೆ, ಸರ್ಕಾರಿ ನೌಕರರು, ಪಿಂಚಣಿದಾರರಿಗೆ ವಿಮಾ ಸೌಲಭ್ಯ ಒದಗಿಸುವುದಕ್ಕೆ ಸರ್ಕಾರದ ಜೊತೆ ಅನಿಲ್ ಅಂಬಾನಿ ನೇತೃತ್ವದ ರಿಲಯನ್ಸ್ ಗ್ರೂಪ್‌ನ ರಿಲಯನ್ಸ್ ಜನರಲ್ ಇನ್ಶ್ಯೂರೆನ್ಸ್ ಒಪ್ಪಂದ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದ್ದು ಎಂದಿದ್ದಾರೆ.

ಸತ್ಯಪಾಲ್ ಮಲಿಕ್‌ಗೆ ನೋಟಿಸ್

ಶ್ರೀನಗರ (ಪಿಟಿಐ): ತಮ್ಮ ವಿರುದ್ಧದ ಮಾನಹಾನಿಕಾರಕ ಹೇಳಿಕೆ ನೀಡಿರುವ ಕಾರಣ ಪರಿಹಾರವಾಗಿ ₹ 10 ಕೋಟಿ ನೀಡುವಂತೆ ಆಗ್ರಹಿಸಿ ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಅವರು ಜಮ್ಮು-ಕಾಶ್ಮೀರದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಅವರಿಗೆ ವಕೀಲರ ಮೂಲಕ ನೋಟಿಸ್ ನೀಡಲಾಗಿದೆ.

ಮೆಹಬೂಬಾ ಅವರು ಭೂ ಸ್ವಾಮ್ಯದ ಹಕ್ಕುಗಳನ್ನು ನೀಡುವ ರೋಶ್ನಿ ಯೋಜನೆಯ ಫಲಾನುಭವಿ ಎಂದು ಮಲಿಕ್ ಆರೋಪಿಸಿದ್ದರು.

ಸಂಕ್ಷಿಪ್ತ ಸುದ್ದಿ

ಮಾಸ್ಕೊ: ಇದೇ 28ರಿಂದ ಭಾಗಶಃ ಲಾಕ್‌ಡೌನ್

ಮಾಸ್ಕೊ(ರಾಯಿಟರ್ಸ್): ಮುಂದಿನ ವಾರದ ಕೊನೆಯಲ್ಲಿ ಅಥವಾ ಆರಂಭದಲ್ಲಿ ರಷ್ಯಾ ರಾಜಧಾನಿಯಲ್ಲಿ ಕೋವಿಡ್ 19 ಸೋಂಕಿನ ಪ್ರಕರಣಗಳ ಸಂಖ್ಯೆ ಹೊಸ ದಾಖಲೆ ಮುಟ್ಟಲಿದೆ ಎಂದು ಮಾಸ್ಕೊ ಮೇಯರ್ ಸೆರ್ಗೆಯ್ ಸೋಬಯಾನಿಕ್ ಅಂದಾಜಿಸಿದ್ದಾರೆ ಎಂದು ಇಂಟರ್‌ಫ್ಯಾಕ್ಸ್ ಸುದ್ದಿ ಸಂಸ್ಥೆ ಶುಕ್ರವಾರ ಹೇಳಿದೆ.

ರಷ್ಯಾದಲ್ಲಿ ದಾಖಲೆ ಪ್ರಮಾಣದಲ್ಲಿ ಕೋವಿಡ್ ಪ್ರಕರಣಗಳು ಮತ್ತು ಸಾವಿನ ಪ್ರಕರಣಗಳು ವರದಿಯಾಗಿದೆ. ಈ ಸಂಬಂಧ ಮುನ್ನೆಚ್ಚರಿಕೆಯಾಗಿ ಇದೇ 28 ರಿಂದ ಮಾಸ್ಕೊದಲ್ಲಿ ಭಾಗಶಃ ಲಾಕ್‌ಡೌನ್ ಜಾರಿಯಾಗಲಿದೆ.

ಕೋವಿಡ್ ಪತ್ತೆ: ವಿಮಾನಗಳ ಸಂಚಾರ ನಿರ್ಬಂಧ

ಬೀಜಿಂಗ್: ವಿಮಾನಗಳಲ್ಲಿ ಕೋವಿಡ್ ಪ್ರಕರಣಗಳು ವರದಿಯಾದ ಹಿನ್ನೆಲೆಯಲ್ಲಿ ಚೀನಾದ ನಾಗರಿಕ ವಿಮಾನಯಾನವು ಐದು ಅಂತರರಾಷ್ಟ್ರೀಯ ವಿಮಾನಗಳ ಹಾರಾಟವನ್ನು ಸ್ಥಗಿತಗೊಳಿಸಿದೆ. ಈ ಕುರಿತು ಚೀನಾದ ರಾಷ್ಟ್ರೀಯ ಸುದ್ದಿ ವಾಹಿನಿಯೊಂದು ಶುಕ್ರವಾರ ವರದಿ ಮಾಡಿದೆ. ಅ. 1ರಂದು ಫ್ರಾಂಕ್‌ಫರ್ಟ್‌ನಿಂದ ಚೀನಾದ ಚಾಂಗ್‌ಚುನ್‌ಗೆ ಬಂದ ಏರ್ ಚೀನಾ ವಿಮಾನದ ಪ್ರಯಾಣಿಕರ ಪೈಕಿ ಆರು ಮಂದಿಗೆ ಕೋವಿಡ್ ಇರುವುದು ಗೊತ್ತಾಗಿತ್ತು. ಇದರ ಜೊತೆಗೆ ಇನ್ನೂ ಹಲವು ವಿಮಾನಗಳಲ್ಲಿಯೂ ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ ಎಂದು ಸರ್ಕಾರ ಹೇಳಿದೆ.

ಚೀನಾದ ಕೆಲವು ಭಾಗಗಳಲ್ಲಿ ಕೋವಿಡ್ ಉಲ್ಬಣಿಸಿದೆ. ಅದನ್ನು ತಡೆಯಲು ಲಾಕ್ ಡೌನ್ ಕ್ರಮಗಳನ್ನು ಕೈಗೊಳ್ಳಲಾಗಿದೆ. ಶಾಲೆಗಳನ್ನೂ ಮುಚ್ಚಲಾಗಿದೆ.

ರಷ್ಯಾದ ಗನ್ ಪೌಡರ್ ಕಾರ್ಖಾನೆ ಸ್ಫೋಟದಲ್ಲಿ 16 ಮಂದಿ ಸಾವು

ಮಾಸ್ಕೊ(ಎಪಿ): ರಷ್ಯಾದಲ್ಲಿ ಶುಕ್ರವಾರ ಗನ್ ಪೌಡರ್ (ಮದ್ದು ಗುಂಡುಗಳ ತಯಾರಿಸುವ ಪುಡಿ) ಕಾರ್ಖಾನೆಯಲ್ಲಿ ಸ್ಫೋಟ ಸಂಭವಿಸಿದ ಪರಿಣಾಮ 16 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮಾಸ್ಕೊದ ಆಗ್ನೇಯ ಭಾಗದಲ್ಲಿ 270 ಕಿ.ಮೀ ದೂರದಲ್ಲಿರುವ ರಯಜಾನ್ ಪ್ರದೇಶದಲ್ಲಿರುವ ಕಾರ್ಖಾನೆಯಲ್ಲಿ ಈ ಸ್ಫೋಟ ಸಂಭವಿಸಿದೆ ಎಂದು ತುರ್ತು ಪರಿಸ್ಥಿತಿ ಸಚಿವಾಲಯ ತಿಳಿಸಿದೆ. ತುರ್ತು ಇಲಾಖೆಯ ಸುಮಾರು 170 ಸಿಬ್ಬಂದಿ, 50 ಅಗ್ನಿಶಾಮಕ ವಾಹನಗಳೊಂದಿಗೆ ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದರು ಎಂದು ಸಚಿವಾಲಯ ಹೇಳಿದೆ.

ಸಿಬಿಎಸ್‌ಇ ವರ್ಗೀಕರಣ, ಪಂಜಾಬ್ ಆಕ್ಷೇಪ

ಎಲ್ಲ ಪ್ರಾದೇಶಿಕ ಭಾಷೆಗಳು ಸಣ್ಣ ಭಾಷೆಗಳು

ನವದೆಹಲಿ (ಪಿಟಿಐ): ಕೇಂದ್ರ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು (ಸಿಬಿಎಸ್‌ಇ) 10 ಮತ್ತು 12ನೇ ತರಗತಿಯ ಮೊದಲ ಅವಧಿಯ ಪರೀಕ್ಷೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಪ್ರಾದೇಶಿಕ ಭಾಷೆಗಳನ್ನು ವರ್ಗೀಕರಣ ಮಾಡಿದೆ. ಅದರ ಪ್ರಕಾರ, ಎಲ್ಲ ಪ್ರಾದೇಶಿಕ ಭಾಷೆಗಳನ್ನು ‘ಸಣ್ಣ ಭಾಷೆಗಳ’ ಗುಂಪಿಗೆ ಸೇರಿಸಿದೆ.

ಮುಖ್ಯಭಾಷೆಗಳ ಗುಂಪಿನಿಂದ ಪಂಜಾಬಿ ಭಾಷೆಯನ್ನು ಹೊರಗಿಡಲಾಗಿದೆ ಎಂದು ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ತಕರಾರು ಎತ್ತಿದ್ದರು. ಅದರ ಹಿಂದೆಯೇ ಸಿಬಿಎಸ್‌ಇ ಭಾಷೆಗಳ ವರ್ಗೀಕರಣವನ್ನು ಮಾಡಿದೆ.

‘ಪಂಜಾಬಿ ಭಾಷೆಯನ್ನು ಮುಖ್ಯಭಾಷೆಗಳ ಗುಂಪಿನಿಂದ ಹೊರಗಿಡುವ ಸಿಬಿಎಸ್‌ಇ ಕ್ರಮವನ್ನು ವಿರೋಧಿಸುತ್ತೇನೆ. ಇದು, ಸಂವಿಧಾನದ ಆಶಯಗಳಿಗೆ ವಿರುದ್ಧ. ಇದು, ತಾಯ್ನೆಲದ ಭಾಷೆಯಲ್ಲಿ ಕಲಿಯುವ ಪಂಜಾಬಿ ಮಕ್ಕಳ ಹಕ್ಕುಗಳನ್ನು ಈ ಮೂಲಕ ಕಸಿಯುವ ಯತ್ನ. ಈ ತಾರತಮ್ಯವನ್ನು ನಾನು ವಿರೋಧಿಸುತ್ತೇನೆ’ ಎಂದು ಚನ್ನಿ ಅವರು ಟ್ವೀಟ್ ಮಾಡಿದ್ದರು.


ಇದಕ್ಕೆ ಪ್ರತಿಕ್ರಿಯಿಸಿದ್ದ ಸಿಬಿಎಸ್‌ಇ ಅಧಿಕಾರಿಯೊಬ್ಬರು, ‘ಸಿಬಿಎಸ್‌ಇ 10 ಮತ್ತು 12ನೇ ತರಗತಿಯ ಮೊದಲ ಅವಧಿಯ ಪರೀಕ್ಷೆಗಳಿಗೆ ಸಂಬಂಧಿಸಿ ಪ್ರಮುಖ ವಿಷಯಗಳಿಗೆ ಸಂಬಂಧಿಸಿ ಈಗ ವೇಳಾಪಟ್ಟಿ ಪ್ರಕಟಿಸಿದೆ‘ ಎಂದರು.

‘ಮೊದಲ ಅವಧಿಯ ಪರೀಕ್ಷೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಆಯಾ ವಿಷಯಗಳ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಸಂಖ್ಯೆಗಳಿಗೆ ಅನುಸಾರವಾಗಿ ಆಡಳಿತಾತ್ಮಕ ಉದ್ದೇಶದಿಂದ ಮಾತ್ರ ಈಗ ಭಾಷಾ ವರ್ಗೀಕರಣ ಮಾಡಲಾಗಿದೆ. ಅಲ್ಲದೆ, ಭಾಷೆಯನ್ನು ಸಣ್ಣದು ಅಥವಾ ದೊಡ್ಡದು ಎಂದು ನೋಡುವ ಯಾವುದೇ ಉದ್ದೇಶವಿಲ್ಲ‘ ಎಂದು ಸ್ಪಷ್ಟನೆ ನೀಡಿದ್ದಾರೆ.

10ನೇ ತರಗತಿಯ ಮೊದಲ ಅವಧಿಯ ಪರೀಕ್ಷೆಯು ನವೆಂಬರ್ 30ರಿಂದ ಹಾಗೂ 12ನೇ ತರಗತಿಯ ಮೊದಲ ಅವಧಿಯ ಪರೀಕ್ಷೆಯು ಡಿಸೆಂಬರ್ 1ರಿಂದ ಆರಂಭವಾಗಲಿದೆ ಎಂದು ಮಂಡಳಿಯು ಸೋಮವಾರ ಪ್ರಕಟಿಸಿತ್ತು.

ಸಣ್ಣ (ಮೈನರ್) ವಿಷಯಗಳ ಪರೀಕ್ಷೆಗಳು 10ನೇ ತರಗತಿಗೆ ನವೆಂಬರ್ 17 ರಿಂದ ಡಿಸೆಂಬರ್ 7 ಹಾಗೂ 12ನೇ ತರಗತಿಗೆ ಡಿಸೆಂಬರ್ 1ರಿಂದ ಆರಂಭವಾಗಲಿವೆ ಎಂದು ತಿಳಿಸಿತ್ತು.

ಪ್ರಜಾವಾಣಿ ಶನಿವಾರ, 23 ಅಕ್ಟೋಬರ್ 2021
ಭೂಮಿಕಾ
ಮಹಿಳೆಯ ಆಪ್ತ ಸಂಗಾತಿ



ವಿಚ್ಛೇದನ ದಂಪತಿಗೆ ಮಾತ್ರ ಮಕ್ಕಳ ಕ್ಷೇಮದಲ್ಲಿದೆ ಇಬ್ಬರದೂ ಪಾತ್ರ

ರೇಷ್ಮಾ

ಮನರಂಜನಾ ಮಾಧ್ಯಮದಲ್ಲಿ ಕೆಲಸ ಮಾಡುತ್ತಿರುವ ಸುನಿಧಿ ಚಾವ್ಲಾ ಹಾಗೂ ಆಶ್ರಯ್ ಕಾಮತ್ ದಂಪತಿ ಹದಿನೈದು ವರ್ಷದ ಹಿಂದೆ ಪರಸ್ಪರ ಪ್ರೀತಿಸಿ ಮದುವೆಯಾಗಿದ್ದರು. ಈ ದಂಪತಿಗೆ ಹತ್ತು ವರ್ಷದ ಇಬ್ಬರು ಮುದ್ದಾದ ಅವಳಿ ಮಕ್ಕಳಿದ್ದಾರೆ. ಈ ಜೋಡಿಯ ಅನ್ಯೋನ್ಯತೆ ಕಂಡು ಅಸೂಯೆಪಟ್ಟವರೇ ಹೆಚ್ಚು, ಅಷ್ಟು ಸುಂದರವಾಗಿತ್ತು ಅವರ ಸಂಸಾರ ಬಂಧನ. ಆದರೆ ಕಳೆದ ಕೆಲವು ತಿಂಗಳ ಹಿಂದೆ ಈ ಇಬ್ಬರು ಪರಸ್ಪರ ಸಹಮತದೊಂದಿಗೆ ವಿಚ್ಛೇದನ ಪಡೆದುಕೊಂಡಿದ್ದರು. ವಿಚ್ಛೇದನಕ್ಕೆ ಕಾರಣ ಮಾತ್ರ ವೈಯಕ್ತಿಕವಾಗಿತ್ತು. ಕಾನೂನಾತ್ಮಕವಾಗಿ ವಿಚ್ಛೇದನ ಪಡೆದು ಬೇರೆ ಬೇರೆ ವಾಸಿಸಲು ಆರಂಭಿಸಿದ ಮೇಲೂ ಈ ಜೋಡಿ ಆಗಾಗ ಮಕ್ಕಳೊಂದಿಗೆ ಪ್ರವಾಸಕ್ಕೆ ಹೋಗುವುದು, ಶಾಪಿಂಗ್, ಸಿನಿಮಾ ಎಂದು ಸುತ್ತಾಟ ಮಾಡುತ್ತಲೇ ಇದ್ದಾರೆ. ಇದರಿಂದ ಮಕ್ಕಳೂ ಸಂತೋಷವಾಗಿದ್ದಾರೆ.

ಪೋಷಕರ ವಿಚ್ಛೇದನ ಎನ್ನುವುದು ಮಕ್ಕಳ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರದೇ ಇರದು. ಪೋಷಕರ ನಡುವಿನ ದೀರ್ಘಕಾಲದ ಸಂಘರ್ಷವು ವಿಚ್ಛೇದನದಲ್ಲಿ ಅಂತ್ಯಗೊಳ್ಳಬಹುದು. ಆದರೆ ಈ ಅಂತ್ಯವು ಮಕ್ಕಳ ಮಾನಸಿಕ ವೇದನೆಯ ಆರಂಭವಾಗಬಾರದು. ಆ ಕಾರಣಕ್ಕೆ ವಿಚ್ಛೇದನದ ನಂತರವೂ ದಂಪತಿ ಜೊತೆಯಾಗಿ ಭೇಟಿ ಮಾಡುವುದು, ಹಬ್ಬ-ಹರಿದಿನಗಳನ್ನು ಒಂದಾಗಿ ಆಚರಿಸುವುದು, ಹುಟ್ಟುಹಬ್ಬವನ್ನು ಒಟ್ಟಾಗಿ ಆಚರಣೆ ಮಾಡುವುದು, ಶಾಪಿಂಗ್ ಹೋಗುವುದು ಮುಂತಾದುವನ್ನು ಮಾಡಬೇಕು. ಇದರಿಂದ ಮಕ್ಕಳು ಮಾನಸಿಕವಾಗಿ ಹಾಗೂ ಭಾವನಾತ್ಮಕವಾಗಿ ಸ್ಥಿರವಾಗುತ್ತಾರೆ
ಜಾಹ್ನವಿ ಪಿ., ಆಪ್ತಸಮಾಲೋಚಕಿ

ಇತ್ತೀಚೆಗೆ ಇಂಥದ್ದೊಂದು ಟ್ರೆಂಡ್ ಹೆಚ್ಚು ಸದ್ದು ಮಾಡುತ್ತಿದೆ. ಅನ್ಯೋನ್ಯವಾಗಿದ್ದ ದಂಪತಿ ಇದ್ದಕ್ಕಿದ್ದ ಹಾಗೇ ಕಾನೂನಿನ ಮೂಲಕವೇ ದೂರವಾಗಿ ಬೇರೆ ಬೇರೆಯಾಗಿ ವಾಸಿಸುತ್ತಿರುತ್ತಾರೆ. ಆದರೆ ಸಮಯ ಸಿಕ್ಕಾಗಲೆಲ್ಲಾ ಕುಟುಂಬದವರೊಂದಿಗೆ, ಮಕ್ಕಳೊಂದಿಗೆ ಒಂದಾಗಿ ಹೊರ ಹೋಗುವುದು, ಕಾರ್ಯಕ್ರಮಗಳಲ್ಲಿ ಕಾಣಿಸಿಕೊಳ್ಳುವುದು ಮಾಡುತ್ತಾರೆ. ತಮ್ಮ ಮಕ್ಕಳ ಕಾರಣದಿಂದ ವಿಚ್ಛೇದನದ ಬಳಿಕವೂ ಪೋಷಕರು ಭೇಟಿಯಾಗುವುದನ್ನು ಹಲವು ಸೆಲೆಬ್ರಿಟಿಗಳಲ್ಲೂ ನೋಡಬಹುದು.

ಬಾಲಿವುಡ್‌ನ ಅಮೀರ್ ಖಾನ್-ಕಿರಣ್ ರಾವ್, ಹೃತಿಕ್ ರೋಷನ್-ಸುಸಾನೆ ಖಾನ್ ದಂಪತಿ ಕೂಡ ಇದೇ ರೀತಿ ವಿಚ್ಛೇದನ ಪಡೆದ ನಂತರವೂ ಮಕ್ಕಳಿಗಾಗಿ ಆಗಾಗ ಭೇಟಿಯಾಗುತ್ತಿರುತ್ತಾರೆ. ಈ ರೀತಿ ಭೇಟಿಯಾಗುವ ಮೂಲಕ ಮಕ್ಕಳಿಗೆ ತಂದೆ-ತಾಯಿ ಇಬ್ಬರ ಒಡನಾಟವೂ ಸಿಗುವಂತೆ ನೋಡಿಕೊಳ್ಳುತ್ತಿದ್ದಾರೆ. ಅಲ್ಲದೇ ಈ ಭೇಟಿಯಿಂದ ಮಕ್ಕಳ ಮನಸ್ಸಿನ ಮೇಲೆ ತಮ್ಮ ವಿಚ್ಛೇದನದ ಪರಿಣಾಮವಾಗದಂತೆ ನೋಡಿಕೊಳ್ಳುತ್ತಿದ್ದಾರೆ.

ವಿಚ್ಛೇದನಕ್ಕೂ ಮುನ್ನ...

- ಪೋಷಕರು ಮಕ್ಕಳಿಗೆ ತಮ್ಮ ವಿಚ್ಛೇದನದ ಕುರಿತು ಮೊದಲೇ ತಿಳಿಸಬೇಕು. ತಾವು ದೂರವಾಗುತ್ತಿರುವ ಕಾರಣವನ್ನೂ ವಿವರಿಸಿ ಅರ್ಥವಾಗುವಂತೆ ಹೇಳಬೇಕು. ಸಾಧ್ಯವಾದರೆ ಅವರ ಒಪ್ಪಿಗೆ ಪಡೆದೇ ವಿಚ್ಛೇದನದಲ್ಲಿ ಮುಂದುವರಿಯುವುದು ಉತ್ತಮ.
- ವಿಚ್ಛೇದನದ ನಂತರ ಮಕ್ಕಳು ಸಂಪೂರ್ಣ ಜವಾಬ್ದಾರಿ ಯಾರದ್ದು ಎಂಬುದನ್ನು ಮೊದಲೇ ನಿರ್ಧರಿಸಬೇಕು. ಮಕ್ಕಳು ಯಾರ ಜೊತೆ ಇರಲು ಮಾನಸಿಕವಾಗಿ ಒಪ್ಪಿಕೊಂಡಿದ್ದಾರೆ ಎಂಬುದನ್ನು ಅವರ ಜೊತೆಗೆ ಚರ್ಚೆ ಮಾಡಿ ನಿರ್ಧಾರ ತೆಗೆದುಕೊಳ್ಳಬೇಕು. 12 ವರ್ಷದ ನಂತರದ ನ್ಯಾಯಾಲಯವು ಮಕ್ಕಳ ಬಳಿ 'ಪೋಷಕರಲ್ಲಿ ಯಾರ ಜೊತೆ ಇರಲು ಇಷ್ಟ?' ಎಂದು ಕೇಳಿ ನಿರ್ಧಾರ ತೆಗೆದುಕೊಳ್ಳುತ್ತದೆ. ಆದರೂ ಪೋಷಕರೂ ಕೂಡ ಈ ಬಗ್ಗೆ ಮೊದಲೇ ತಿಳಿದುಕೊಂಡಿರುವುದು ಉತ್ತಮ.

ವಿಚ್ಛೇದನದ ನಂತರದ ಭೇಟಿ

- ವಿಚ್ಛೇದನ ಪಡೆದುಕೊಂಡ ನಂತರವೂ ದಂಪತಿ ಆಗಾಗ ಮಕ್ಕಳೊಂದಿಗೆ ಭೇಟಿಯಾಗುವುದು ಮಕ್ಕಳ ಮಾನಸಿಕ ಹಿತಾಸಕ್ತಿಯ ದೃಷ್ಟಿಯಿಂದ ಉತ್ತಮ.
- ತಾವು ಹುಟ್ಟಿದಾಗಿನಿಂದ ಜೊತೆಯಾಗಿಯೇ ಇದ್ದ ಪೋಷಕರು ಇದ್ದಕ್ಕಿದ್ದಂತೆ ದೂರವಾಗಿ ಇರುವುದನ್ನು ಒಪ್ಪಿಕೊಳ್ಳಲು ಮಕ್ಕಳು ಮಾನಸಿಕವಾಗಿ ಸಿದ್ಧರಿರುವುದಿಲ್ಲ. ಪೋಷಕರ ವಿಚ್ಛೇದನ ಎನ್ನುವುದು ಅವರಲ್ಲಿ ಖಿನ್ನತೆ, ಆತಂಕ, ಭವಿಷ್ಯದ ಭದ್ರತೆಯ ಬಗ್ಗೆ ಚಿಂತೆ ಮುಂತಾದ ವಿಷಯಗಳನ್ನು ಮನಸ್ಸಿನಲ್ಲಿ ಹುಟ್ಟುಹಾಕುವಂತೆ ಮಾಡುತ್ತದೆ. ಇದರಿಂದ ಅವರು ಮಾನಸಿಕವಾಗಿ ಬಳಲಬಹುದು. ಆ ಕಾರಣಕ್ಕೆ ಪೋಷಕರು ಆಗಾಗ ಭೇಟಿ ಮಾಡುವುದು ಸೂಕ್ತ ಎನ್ನುತ್ತಾರೆ ಆಪ್ತಸಮಾಲೋಚಕಿ ಜಾಹ್ನವಿ.
- ಕಾನೂನಾತ್ಮಕವಾಗಿ ಮಗುವಿನ ಸಂಪೂರ್ಣ ಜವಾಬ್ದಾರಿ ಪೋಷಕರಲ್ಲಿ ತಂದೆ ಅಥವಾ ತಾಯಿ ಇಬ್ಬರಲ್ಲಿ ಒಬ್ಬರದ್ದೇ ಆಗಿರುತ್ತದೆ. ಕೆಲವೊಮ್ಮೆ ಜಂಟಿಯಾಗಿ ಜವಾಬ್ದಾರಿ ನಿರ್ವಹಿಸುವಂತೆ ನ್ಯಾಯಾಲಯ ಆದೇಶ ನೀಡಿರುತ್ತದೆ. ನ್ಯಾಯಾಲಯದ ಆದೇಶ ಏನೇ ಇದ್ದರೂ ಮಕ್ಕಳ ಹಿತಾಸಕ್ತಿಯಿಂದ ಪೋಷಕರಿಬ್ಬರೂ ಮಕ್ಕಳ ಜವಾಬ್ದಾರಿ ತೆಗೆದುಕೊಳ್ಳುವುದು ಉತ್ತಮ.
- ವಿಚ್ಛೇದಿತ ದಂಪತಿಯ ಮಕ್ಕಳು ಸಾಮಾಜಿಕವಾಗಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿರುತ್ತಾರೆ. ಮಕ್ಕಳಲ್ಲಿ ಇಂತಹ ಸಮಸ್ಯೆ ಎದುರಾಗುವುದನ್ನು ತಡೆಯಲೂ ಕೂಡ ಪೋಷಕರಿಬ್ಬರೂ ಮಕ್ಕಳೊಂದಿಗೆ ಆಗಾಗ ಭೇಟಿ ಮಾಡುತ್ತಿರಬೇಕು. ಇದರಿಂದ ಮಕ್ಕಳಿಗೆ ತಮ್ಮ ತಂದೆ-ತಾಯಿ ದೂರವಾಗಿದ್ದಾರೆ ಎಂಬ ಭಾವನೆ ಮೂಡುವುದಿಲ್ಲ.
- ಪೋಷಕರ ನಡುವೆ ಯಾವುದೇ ಭಾವನೆ ಇರಲಿ, ಇಲ್ಲದಿರಲಿ ಮಕ್ಕಳು ಮಾತ್ರ ಇವರು ತಮ್ಮ ತಂದೆ-ತಾಯಿ ಎಂದುಕೊಂಡು ಮಾನಸಿಕವಾಗಿ ಹಾಗೂ ಭಾವನಾತ್ಮಕವಾಗಿ ಹಚ್ಚಿಕೊಂಡಿರುತ್ತಾರೆ. ಆ ಭಾವನೆಯನ್ನು ಅವರಿಂದ ಕಸಿಯುವುದು ಒಳ್ಳೆಯದಲ್ಲ. ಆ ಕಾರಣಕ್ಕೂ ಭೇಟಿ ಅಗತ್ಯ.

> ಪೋಷಕರಿಬ್ಬರೂ ಪರಸ್ಪರ ಒಪ್ಪಿಗೆ ಪಡೆದು ವಿಚ್ಛೇದನ ಪಡೆದ ಬಳಿಕವೂ ಮಕ್ಕಳಿಗಾಗಿ ಆಗಾಗ ಭೇಟಿ ಮಾಡುವುದು ಇತ್ತೀಚಿನ ಟ್ರೆಂಡ್. ಇದು ಮಕ್ಕಳ ಮಾನಸಿಕ ಹಿತಾಸಕ್ತಿ ಹಾಗೂ ಸಾಮಾಜಿಕ ದೃಷ್ಟಿಯಿಂದಲೂ ಉತ್ತಮವಾದುದು.

- ಮಕ್ಕಳಲ್ಲಿ ಸುರಕ್ಷತೆ ಭಾವನೆ ಮೂಡಿಸಲು ಕೂಡ ಸಹಕಾರ ಅವಶ್ಯ. ಮಕ್ಕಳಿಗೆ ತಂದೆ-ತಾಯಿ ಇಬ್ಬರ ಪ್ರೀತಿ, ವಿಶ್ವಾಸ ದೊರೆತಾಗ ಅವರಲ್ಲಿ ಸುರಕ್ಷತೆಯ ಭಾವನೆ ಮೂಡುವ ಜೊತೆಗೆ ಆತ್ಮವಿಶ್ವಾಸವೂ ಹೆಚ್ಚುತ್ತದೆ.
- ವಿಚ್ಛೇದನದ ನಂತರದ ಪೋಷಕರ ಭೇಟಿಯಿಂದಾಗಿ ಮಕ್ಕಳಲ್ಲಿ ಒಂದೇ ರೀತಿಯ ನೀತಿ-ನಿಯಮ, ಶಿಸ್ತು ರೂಢಿಸಿಕೊಳ್ಳಲು ನೆರವಾಗುತ್ತದೆ. ಇಬ್ಬರ ನಿರೀಕ್ಷೆಯಂತೆಯೇ ಮಗು ಕೂಡ ಬೆಳೆಯಲು ಸಹಕಾರಿ.
- ಪೋಷಕರಿಬ್ಬರೂ ವಿಚ್ಛೇದನದ ನಂತರವೂ ಚೆನ್ನಾಗಿದ್ದರೆ ಮಕ್ಕಳಲ್ಲಿ ಸಮಸ್ಯೆಯನ್ನು ಎದುರಿಸುವ ಗುಣ ಬೆಳೆಯುತ್ತದೆ. ಮಕ್ಕಳಲ್ಲಿ ಧೈರ್ಯವೂ ಹೆಚ್ಚುತ್ತದೆ.
- ಸಂಬಂಧದಲ್ಲಿನ ಬಾಂಧವ್ಯದ ಬಗ್ಗೆ ತಿಳಿದುಕೊಳ್ಳಲು ಕೂಡ ಮಕ್ಕಳಿಗೆ ಇದೊಂದು ದಾರಿಯಿದ್ದಂತೆ. ಹಾಗಾಗಿ ಪೋಷಕರು ಖುಷಿಯಿಂದ ಭೇಟಿಯಾಗುವುದು ಬಾಂಧವ್ಯ ವೃದ್ಧಿಗೂ ಕಾರಣವಾಗುತ್ತದೆ. ಕೌಟುಂಬಿಕ ಸೌಹಾರ್ದತೆಯ ಬಗ್ಗೆ ತಿಳಿದುಕೊಳ್ಳಲು ಇದರಿಂದ ಸಾಧ್ಯ.

ಹೀಗೆ ಮಾಡದಿರಿ

- ಮಕ್ಕಳಿಗೆ ಬೇಸರವಾಗುತ್ತದೆ ಎಂಬ ಕಾರಣಕ್ಕೆ ನೆಪ ಮಾತ್ರದ ಭೇಟಿ ಬೇಡ. ಮಕ್ಕಳು ಎದುರಿಗೆ ಆದಷ್ಟು ಸಹಜವಾಗಿಯೇ ಇರಿ.
- ಮಕ್ಕಳನ್ನು ನಿಮ್ಮ ನಡುವಿನ ಸಂವಹನಕ್ಕೆ ಸಂಪರ್ಕಕೊಂಡಿಯನ್ನಾಗಿ ಮಾಡಿಕೊಳ್ಳಬೇಡಿ.
- ವಿಚ್ಛೇದನದ ನಂತರದ ಭೇಟಿ ಸ್ನೇಹಿತರ ಭೇಟಿಯಂತಿರಲಿ. ಅಲ್ಲಿ ಜಗಳ, ಮನಸ್ತಾಪವಾಗದಂತೆ ನೋಡಿಕೊಳ್ಳಿ.
- 'ಕೇವಲ ನಿನಗಾಗಿ ಅವರನ್ನು ಭೇಟಿ ಮಾಡಿದೆ' ಎಂದು ಮಗುವಿನ ಮನಸ್ಸಿನಲ್ಲಿ ಬರುವಂತೆ ಮಾಡಬೇಡಿ.

ಸ್ವಾತಂತ್ರ್ಯವನ್ನು ನಾವೇ ಪಡೆದುಕೊಳ್ಳಬೇಕು..

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

• 30ರ ಯುವಕ. ತಂದೆಯವರು ಸಮಾಜದಲ್ಲಿ ಗಣ್ಯವ್ಯಕ್ತಿ. ತಮ್ಮ ಪ್ರತಿಷ್ಠೆಗಾಗಿ ಯಾರನ್ನಾದರೂ ಬಲಿಕೊಡುತ್ತಾರೆ. ನನಗಾಗಲೀ ಮನೆಯವರಿಗಾಗಲೀ ಸ್ವತಂತ್ರವಾಗಿ ಜೀವಿಸುವ ಹಕ್ಕು ಕಸಿದುಕೊಂಡಿರುತ್ತಾರೆ. ಆತ್ಮವಿಶ್ವಾಸ ಕುಂದಿ ಸರಿಯಾದ ನಿರ್ಧಾರ ತೆಗೆದುಕೊಳ್ಳಲಾಗುತ್ತಿಲ್ಲ. ಜೀವನ ಜಟಿಲವಾದಂತೆ ಅನಿಸುತ್ತದೆ. ಪರಿಹಾರವೇನು?

ಹೆಸರು, ಊರು ತಿಳಿಸಿಲ್ಲ.

ಸ್ವಾತಂತ್ರ್ಯ ಎಂದರೆ ಯಾರಾದರೂ ಕೊಡುವ ವಸ್ತು ಎಂದುಕೊಂಡಿದ್ದೀರೇನು? ಅದನ್ನು ನಾವೇ ಪಡೆದುಕೊಳ್ಳಬೇಕು. ನಿಮ್ಮೆಲ್ಲರ ಮೌನದ ನಿಷ್ಕ್ರಿಯವಾದ ಸಹನೆಯೇ ತಂದೆಯವರ ದಬ್ಬಾಳಿಕೆಗೆ ಹೆಚ್ಚಿನ ಬಲ ನೀಡುತ್ತಿದೆಯಲ್ಲವೇ? ಎಲ್ಲರೂ ಸೇರಿ ಅಥವಾ ಯಾರ ಬೆಂಬಲವಿಲ್ಲದಿದ್ದರೂ ನೀವಾದರೂ ಸ್ವಾತಂತ್ರ್ಯವನ್ನು ಪಡೆಯಬೇಕಾದರೆ ಪ್ರತಿಭಟಿಸಲೇಬೇಕು. ತಾತ್ಕಾಲಿಕವಾಗಿ ಸಂಬಂಧಗಳು ಹದಗೆಡಬಹುದು. ಈಗ ಇರುವುದು ಮಾಲೀಕ-ಸೇವಕರು ಎನ್ನುವ ರೀತಿಯ ಸಂಬಂಧವಲ್ಲವೇ? ಅದನ್ನು ಉಳಿಸಿಕೊಂಡು ಪಡೆಯುವುದಾದರೂ ಏನನ್ನು? ಸ್ವಾತಂತ್ರ್ಯವನ್ನು ಪಡೆಯಲು ನಿಮ್ಮೊಳಗಿರುವ ಹಿಂಜರಿಕೆಯನ್ನು ಹೇಗೆ ನಿವಾರಿಸಿಕೊಳ್ಳುವುದು ಎಂದು ಮೊದಲು ಯೋಚಿಸಿ. ತಂದೆಯವರನ್ನು ದೂಷಿಸುತ್ತಾ ನಿಮ್ಮ ಬದುಕನ್ನೇಕೆ ಹಾಳುಮಾಡಿಕೊಳ್ಳುತ್ತೀರಿ?

• ಯುವತಿ. ವಿವಾಹವಾಗಿ 6 ತಿಂಗಳಾಗಿದೆ. ಅತ್ತೆಯವರು ನಾನು ಮಾಡುವ ಪ್ರತಿಯೊಂದು ಕೆಲಸಕ್ಕೂ ತಕರಾರು ಮಾಡುತ್ತಾ 'ನಾನು ಹೀಗೆ ಮಾಡುತ್ತಿದ್ದೆ' ಎನ್ನುತ್ತಿರುತ್ತಾರೆ. ಸಣ್ಣಪುಟ್ಟ ಸಹಾಯವನ್ನೂ ಮಾಡುವುದಿಲ್ಲ. ಕೋಪಬಂದರೂ ತೋರಿಸಿಕೊಳ್ಳುವಂತಿಲ್ಲ. ಕಡೆಗಣಿಸಿದರೂ ಕೋಪ ಹೆಚ್ಚಾಗುತ್ತದೆ. ಏನು ಮಾಡಲಿ?

ಹೆಸರು, ಊರು ತಿಳಿಸಿಲ್ಲ.

ನೀವೇಕೆ ನಿಮ್ಮ ಕೋಪವನ್ನು ಹೊರಹಾಕುತ್ತಿಲ್ಲ? ಇದಕ್ಕೆ ನಿಮ್ಮೊಳಗಿರುವ ಹಿಂಜರಿಕೆಗಳೇನು? ಅದನ್ನು ನಿವಾರಿಸಿಕೊಳ್ಳುವುದು ಹೇಗೆ ಎಂದು ಯೋಚಿಸಿ. ಕೋಪವನ್ನು ಕೂಗಾಡಿಯೇ ಹೊರಹಾಕಬೇಕೆಂದೇನೂ ಇಲ್ಲವಲ್ಲ. ನಿಮ್ಮ ಮೌನ ಅವರ ಅಧಿಕಾರವನ್ನು ಹೆಚ್ಚಿಸುತ್ತದೆಯಲ್ಲವೇ? ಅವರ ವರ್ತನೆಯ ಬಗೆಗಿನ ನಿಮ್ಮ ಬೇಸರವನ್ನು ಸಮಾಧಾನದಿಂದಲೇ ಸ್ಪಷ್ಟ ಮಾತುಗಳಲ್ಲಿ ಹೊರಹಾಕಿ. ಸಹಾಯದ ನಿರೀಕ್ಷೆ ಇದ್ದಾಗ ಕೇಳಿ. ಅದು ಸಿಗದಿದ್ದಾಗ ನಿಮಗೆ ಸಾಧ್ಯವಾಗುವಷ್ಟನ್ನು ಮಾತ್ರ ಮಾಡಿ. ಒಟ್ಟಿನಲ್ಲಿ ನಿಮ್ಮ ವ್ಯಕ್ತಿತ್ವವನ್ನು ನೀವೇ ರಕ್ಷಿಸಿಕೊಳ್ಳದಿದ್ದರೆ ಇನ್ನಾರು ಅದನ್ನು ರಕ್ಷಿಸುತ್ತಾರೆ?

• ಹಿಂದಿನ ಒಂದು ತಪ್ಪು ನಿರ್ಧಾರದಿಂದ ಇಕ್ಕಟ್ಟಿನಲ್ಲಿದ್ದೇನೆ. ನನ್ನ ಮೂಲಕ ಸ್ನೇಹಿತರು ಮತ್ತು ಪರಿಚಯದವರಿಗೆ ಕಂಪನಿಯೊಂದರಲ್ಲಿ ಹಣ ಹೂಡಿಸಿದೆ. ಈಗ ಅದರ ಮಾಲೀಕ ಮಾಯವಾಗಿದ್ದಾನೆ. ಎಲ್ಲರೂ ನನ್ನ ಹಿಂದೆ ಬಿದ್ದಿದ್ದಾರೆ. ಹೊರಗೆ ಹೋಗುವುದೇ ಕಷ್ಟವಾಗಿದೆ. ಏನು ಮಾಡಬೇಕು ಎಂದು ತಿಳಿಯದೆ ಮನೆಯವರೆಲ್ಲರೂ ಕಷ್ಟದಲ್ಲಿದ್ದೇವೆ. ಸಹಾಯಮಾಡಿ.

ಹೆಸರು, ಊರು ತಿಳಿಸಿಲ್ಲ.

ನಿಮ್ಮ ತಪ್ಪು ನಿರ್ಧಾರದಿಂದಾಗಿ ಕಾನೂನಿನ ಪ್ರಕಾರ ನಿಮ್ಮ ಮೇಲೆ ಹಣದ ಹೊರೆ ಬರುತ್ತದೆಯೇ ಎನ್ನುವುದನ್ನು ವಕೀಲರ ಮೂಲಕ ತಿಳಿದುಕೊಳ್ಳಿ. ಎಲ್ಲರಿಂದ ತಪ್ಪಿಸಿಕೊಂಡು ಹೋಗುವುದರಿಂದ ಅವರ ಸಿಟ್ಟನ್ನು ಹೆಚ್ಚುಮಾಡುವುದರ ಹೊರತಾಗಿ ನೀವೇನು ಸಾಧಿಸುತ್ತಿದ್ದೀರಿ? ಸುಳ್ಳುಗಳು ನಿಮ್ಮನ್ನು ಎಷ್ಟು ದಿನ ಕಾಪಾಡಬಲ್ಲವು? ಎಲ್ಲರನ್ನು ನೀವಾಗಿಯೇ ಭೇಟಿಮಾಡಿ ಪ್ರಾಮಾಣಿಕವಾಗಿ ಕ್ಷಮೆ ಕೇಳಿ. ಅವರ ನೋವು, ಸಿಟ್ಟುಗಳನ್ನು ಎದುರಿಸಿ. ಎಲ್ಲರೂ ಸೇರಿ ಕಂಪನಿ ಮಾಲಿಕರ ವಿರುದ್ಧ ಕಾನೂನು ಹೋರಾಟ ಮಾಡುವುದು ಹೇಗೆಂದು ಯೋಚಿಸಿ. ಆಗ ಮಾತ್ರ ನೀವು ಮತ್ತೆ ದುಡಿಯುವ ದಾರಿ ಹುಡುಕಿಕೊಳ್ಳಬಹುದಲ್ಲವೇ?

• ಎಂಬಿಬಿಎಸ್ ವಿದ್ಯಾರ್ಥಿ. ಬಾಲ್ಯದಿಂದಲೂ ಹೆಚ್ಚಿನ ಜನಸಂಪರ್ಕ ಇಲ್ಲ. ಅಕ್ಕಪಕ್ಕದವರೊಡನೆಯೂ ಮಾತನಾಡುವುದಿಲ್ಲ. ಎಲ್ಲಾ ಕಡೆಯೂ ಏಕಾಂಗಿಯಾಗಿರುತ್ತೇನೆ. ಮನೆಯವರೆಲ್ಲರೂ ಜನರ ಜೊತೆ ಬೆರೆಯಲು, ವೇದಿಕೆಯಲ್ಲಿ ಮಾತನಾಡಲು ಸಲಹೆ ಕೊಡುತ್ತಾರೆ. ಆದರೆ ನಾನು ಹಿಂಜರಿಯುತ್ತೇನೆ. ನಾನು ಸಾಮಾಜಿಕವಾಗಿ ಮುಕ್ತಮನಸ್ಸಿನವನಲ್ಲ ಎನ್ನಿಸುತ್ತದೆ. ಏನು ಮಾಡಲಿ?

ಹೆಸರು, ಊರು ತಿಳಿಸಿಲ್ಲ.

ನಮಗೆಲ್ಲರಿಗೂ ಮನುಷ್ಯ ಸಂಪರ್ಕದ ಹಸಿವು ಸಹಜವಾಗಿಯೇ ಇರುತ್ತದೆ. ನಿಮಗೆ ಎಲ್ಲರೊಡನೆ ಸಹಜವಾಗಿ ಬೆರೆಯಲು ಸಾಧ್ಯವಾಗದಿದ್ದರೆ ಅದರ ಮೂಲ ನಿಮ್ಮ ಬಾಲ್ಯದ ಅನುಭವಗಳಲ್ಲಿರುತ್ತದೆ. ಅಂತಹ ಅನುಭವಗಳು ನಿಮ್ಮಲ್ಲಿ ಮೂಡಿಸಿರುವ ಹಿಂಜರಿಕೆಗಳೇನು? ಅವು ನಿಮ್ಮ ಬಗ್ಗೆ ನಿಮ್ಮೊಳಗೇ ಸೃಷ್ಟಿಸಿರುವ ಅಭಿಪ್ರಾಯಗಳೇನು? ಇವೆಲ್ಲವನ್ನು ಪಟ್ಟಿಮಾಡಿಕೊಂಡು ಅವುಗಳ ಸತ್ಯಾಸತ್ಯತೆಗಳನ್ನು ಪರೀಕ್ಷೆ ಮಾಡುತ್ತಾ ಹೋಗಿ. ಅಗತ್ಯವಿದ್ದರೆ ತಜ್ಞ ಮನೋಚಿಕಿತ್ಸಕರ ಸಹಾಯ ಪಡೆಯಿರಿ.

ಏನಾದ್ರೂ ಕೇಳ್ಬೋದು
ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ. bhoomika@prajavani.co.in

ಚಳಿಗಾಲದ ಸೌಂದರ್ಯಕ್ಕೆ ಪುಲ್‌ಓವರ್

ಮನಸ್ವಿ

ಚಳಿಗಾಲ, ಮಳೆಗಾಲ, ಬೇಸಿಗೆ ಕಾಲ.. ಹೀಗೆ ಋತುಮಾನಗಳು ಬದಲಾಗುವಂತೆ ಫ್ಯಾಷನ್ ಕ್ಷೇತ್ರದಲ್ಲೂ ಬದಲಾವಣೆಗಳಾಗುತ್ತಿರುತ್ತವೆ. ಆಯಾ ಕಾಲಕ್ಕೆ ಹೊಂದುವಂತಹ ಫ್ಯಾಷನ್ ಉಡುಪುಗಳು ಮಾರುಕಟ್ಟೆಯನ್ನು ಪ್ರವೇಶಿಸುತ್ತವೆ. ಇಷ್ಟು ದಿನ ಮಳೆಗಾಲಕ್ಕೆ ಸೂಕ್ತವಾದ ಉಡುಪುಗಳನ್ನು ಧರಿಸುತ್ತಿದ್ದ ನಾವು ಈಗ ಅದನ್ನು ವಾರ್ಡ್‌ರೋಬ್ ಮೂಲೆಗೆ ಸೇರಿಸಿ ಚಳಿಗಾಲಕ್ಕೆ ಸನ್ನದ್ಧರಾಗಬೇಕಿದೆ. ಚಳಿಗಾಲವೆಂದರೆ ಬೆಚ್ಚನೆಯ ಉಡುಪುಗಳು. ಇದು ಜಾಕೆಟ್, ಸ್ವೆಟ್‌ಶರ್ಟ್, ಪುಲ್‌ಓವರ್‌ಗಳು ವಾರ್ಡ್‌ರೋಬ್‌ನ ಮುನ್ನೆಲೆಗೆ ಬರುವಂತಹ ಕಾಲ. ಅದರಲ್ಲೂ ಚಳಿಗಾಲದಲ್ಲಿ ಪುಲ್‌ಓವರ್ ಧರಿಸಲು ಹೆಣ್ಣುಮಕ್ಕಳು ಹೆಚ್ಚು ಇಷ್ಟಪಡುತ್ತಾರೆ. ಪುಲ್ ಓವರ್‌ಗಳು ಟ್ರೆಂಡಿ ಎನ್ನಿಸುವ ಜೊತೆಗೆ ಅಂದವನ್ನೂ ಹೆಚ್ಚಿಸುತ್ತವೆ. ಜೊತೆಗೆ ಚಳಿಗಾಲದಲ್ಲಿ ದೇಹವನ್ನೂ ಬೆಚ್ಚಗಿರಿಸುತ್ತವೆ. ಇದನ್ನು ಜೀನ್ಸ್ ಜೊತೆ, ಕುರ್ತಾ ಹಾಗೂ ಸೀರೆ ಮೇಲೆ, ಸ್ಕರ್ಟ್ ಜೊತೆ ಧರಿಸಬಹುದು.



ಜೀನ್ಸ್ ಜೊತೆ ಪುಲ್‌ಓವರ್

ಜೀನ್ಸ್ ಜೊತೆ ಪುಲ್‌ಓವರ್ ಹೆಚ್ಚು ಹೊಂದುತ್ತದೆ. ಯಾವುದೇ ಬಣ್ಣದ ಜೀನ್ಸ್ ಮೇಲೆ ಅದಕ್ಕೆ ವಿರುದ್ಧ ಬಣ್ಣದ ಪುಲ್ ಓವರ್ ಧರಿಸಬಹುದು. ಹೆಚ್ಚಾಗಿ ಪುಲ್‌ಓವರ್ ಎಂದರೆ ಉದ್ದ ತೋಳಿನದ್ದೇ ಇರುತ್ತದೆ. ಆದರೆ ಇತ್ತೀಚೆಗೆ ಅರ್ಧ ತೋಳಿನ ಈ ದಿರಿಸುಗಳು ಮಾರುಕಟ್ಟೆಯಲ್ಲಿ ಹೆಚ್ಚು ಸದ್ದು ಮಾಡುತ್ತಿವೆ. ಇದರೊಂದಿಗೆ ಕ್ರಾಪ್ ಟಾಪ್‌ನಂತೆ ಅರ್ಧ ಹೊಟ್ಟೆ ಕಾಣಿಸುವಂತಿರುವ ಈ ಉಡುಪುಗಳು ಟ್ರೆಂಡ್ ಸೃಷ್ಟಿಸುತ್ತಿವೆ.

ಸ್ಕರ್ಟ್ ಮೇಲೆ ಪುಲ್‌ಓವರ್



ಪಾದದವರೆಗೆ ಇಳಿಬಿಟ್ಟಿರುವ ಸ್ಕರ್ಟ್ ಮೇಲೆ ಪುಲ್ ಓವರ್ ಧರಿಸುವುದರಿಂದ ಅಂದವನ್ನು ಹೆಚ್ಚಿಸಿಕೊಳ್ಳಬಹುದು. ಈ ಉಡುಪು ನಮಗೆ ಸಾಂಪ್ರದಾಯಿಕ ಹಾಗೂ ಪಾಶ್ಚಾತ್ಯ ಎರಡೂ ನೋಟ ಸಿಗುವಂತೆ ಮಾಡುತ್ತದೆ. ಉದ್ದನೆಯ ಸ್ಕರ್ಟ್ ಜೊತೆ ತುಂಬು ತೋಳಿನದ್ದು ಹೊಂದುತ್ತದೆ. ಮೊಣಕಾಲಿನವರೆಗೆ ಬರುವ ಶಾರ್ಟ್ ಸ್ಕರ್ಟ್ ಮೇಲೂ ಕೂಡ ಇದನ್ನು ಧರಿಸಬಹುದು. ಇದರಿಂದ ಸ್ಟೈಲಿಶ್ ಆಗಿ ಕಾಣಬಹುದು.

ಕುರ್ತಾ ಮೇಲೆ

ಚಳಿಗಾಲದಲ್ಲಿ ಬೆಚ್ಚಗೆ ಇರಬೇಕು ಎಂದರೆ ಕುರ್ತಾ ಮೇಲೆ ಪುಲ್‌ಓವರ್ ಧರಿಸಬಹುದು. ಕುರ್ತಾ ಬಣ್ಣದ್ದೇ ಹೂವಿನ ಚಿತ್ತಾರವಿರುವ ಈ ಉಡುಪು ಧರಿಸುವುದರಿಂದ ಅಂದ ಹೆಚ್ಚುವುದಲ್ಲದೇ ಟ್ರೆಂಡ್ ಸೃಷ್ಟಿಸಿದಂತಾಗುತ್ತದೆ. ಕುರ್ತಾ ಮೇಲೆ ಇದನ್ನು ಧರಿಸಿದಾಗ ಉಲ್ಲನ್ ಸ್ಟೋಲ್ ಕುತ್ತಿಗೆಗೆ ಸುತ್ತಿಕೊಳ್ಳಬಹುದು. ಇದು ನಮ್ಮ ನೋಟವನ್ನೇ ಬದಲಿಸುವುದರಲ್ಲಿ ಸಂಶಯವಿಲ್ಲ.



ಸೀರೆಯೊಂದಿಗೆ

ಸೀರೆಯೊಂದಿಗೆ ಬ್ಲೌಸ್ ಧರಿಸುವುದು ಕಾಮನ್. ಆದರೆ ಈಗ ಬ್ಲೌಸ್ ಬದಲು ಪುಲ್ ಓವರ್ ಧರಿಸುವುದು ಟ್ರೆಂಡ್. ಪುಲ್‌ಓವರ್ ಮೇಲೆ ಸೀರೆ ಧರಿಸಿ ಈ ಮೂಲಕ ಸೀರೆಯ ಅಂದದೊಂದಿಗೆ ನಮ್ಮ ಅಂದವನ್ನೂ ಹೆಚ್ಚಿಸಿಕೊಳ್ಳಬಹುದು. ಇದು ಹೊಸ ಟ್ರೆಂಡ್ ಕೂಡ ಹೌದು. ಸಂಪ್ರದಾಯಕ್ಕೆ ಒತ್ತು ಕೊಟ್ಟ ಹಾಗೂ ಆಗುತ್ತದೆ, ಚಳಿಗಾಲದಲ್ಲಿ ಈ ರೀತಿಯಾಗಿ ದೇಹವನ್ನು ಬೆಚ್ಚಗಿರಿಸಬಹುದು.

ಬೂಟ್ಸ್



ಜೀನ್ಸ್ ಹಾಗೂ ಪುಲ್‌ಓವರ್ ಧರಿಸಿದಾಗ ಬೂಟ್ಸ್ ಧರಿಸಬಹುದು. ಪುಲ್ಲೋವರ್ ಬಣ್ಣದ್ದೇ ಅರ್ಧ ಕಾಲಿನವರೆಗೆ ಮುಚ್ಚುವ ಬೂಟ್ಸ್ ಧರಿಸುವ ಮೂಲಕ ಅಂದ ಹೆಚ್ಚಿಸಿಕೊಳ್ಳಬಹುದು. ಲೆದರ್ ಬೂಟ್‌ಗಳನ್ನು ಧರಿಸುವುದರಿಂದ ನಮಗೆ ಐಷಾರಾಮಿ ನೋಟ ಸಿಗುವುದರಲ್ಲಿ ಎರಡು ಮಾತಿಲ್ಲ.

ಸ್ಲಿಂಗ್ ಬ್ಯಾಗ್



ಪುಲ್‌ಓವರ್ ಧರಿಸಿದಾಗ ಸ್ಲಿಂಗ್ ಬ್ಯಾಗ್ ಹೆಚ್ಚು ಹೊಂದುತ್ತದೆ. ಇದು ಸೀರೆ, ಸ್ಕರ್ಟ್, ಕುರ್ತಾ ಎಲ್ಲದರ ಜೊತೆಗೂ ಹೊಂದುತ್ತದೆ. ಇದು ಟ್ರೆಂಡಿ ಕೂಡ ಹೌದು.

ಉಲ್ಲನ್ ಶಾಲ್

ಪುಲ್‌ಓವರ್ ಧರಿಸಿದಾಗ ಉಲ್ಲನ್ ಶಾಲ್ ಅನ್ನು ಕತ್ತಿಗೆ ಸುತ್ತಿಕೊಳ್ಳಬಹುದು. ಇದು ಚಳಿಯಿಂದ ನಮ್ಮನ್ನು ರಕ್ಷಿಸುವುದಲ್ಲದೇ ಟ್ರೆಂಡಿ ಆಗಿಯೂ ಕಾಣಿಸುತ್ತದೆ. ಜೀನ್ಸ್ ಹಾಗೂ ಸ್ಕರ್ಟ್ ಜೊತೆ ಇದನ್ನು ಧರಿಸಿದಾಗ ಉಲ್ಲನ್ ಶಾಲ್ ಅನ್ನು ಕತ್ತಿಗೆ ಸುತ್ತಿಕೊಳ್ಳಬಹುದು.

ಗೋಧಿಹಿಟ್ಟಿನ ಕುಕೀಸ್, ಆಲೂ ಟಿಕ್ಕಿ ಚಾಟ್

ರಶ್ಮಿ ಭಟ್



ಪ್ರಜಾವಾಣಿ ನೋಡಿಯೊ
ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ನಳಪಾಕ

ಗೋಧಿಹಿಟ್ಟಿನ ಕುಕೀಸ್

ಬೇಕಾಗುವ ಸಾಮಗ್ರಿಗಳು: ಗೋಧಿಹಿಟ್ಟು – 2 ಕಪ್, ಕಸ್ಟರ್ಡ್ ಪುಡಿ – ಅರ್ಧ ಕಪ್, ಉಪ್ಪು – ರುಚಿಗೆ, ಸಕ್ಕರೆ ಪುಡಿ – 1 ಕಪ್, ಗೋಡಂಬಿ – 1 ಸಣ್ಣ ಕಪ್, ತೆಂಗಿನಕಾಯಿ ತುರಿ – 1 ಸಣ್ಣ ಕಪ್, ತುಪ್ಪ – ಮುಕ್ಕಾಲು ಕಪ್, ಏಲಕ್ಕಿ ಪುಡಿ – ಕಾಲು ಚಮಚ

ತಯಾರಿಸುವ ವಿಧಾನ: ಒಂದು ಅಗಲವಾದ ಕಪ್‌ಗೆ 2 ಕಪ್ ಗೋಧಿಹಿಟ್ಟು, ಅರ್ಧ ಕಪ್ ಕಸ್ಟರ್ಡ್ ಪುಡಿ ಹಾಗೂ ಚಿಟಿಕೆ ಉಪ್ಪು ಸೇರಿಸಿ ಜರಡಿ ಹಿಡಿದುಕೊಳ್ಳಿ. ಈ ಎಲ್ಲವನ್ನೂ ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಿ. ಇದಕ್ಕೆ ಮುಕ್ಕಾಲು ಕಪ್ ಸಕ್ಕರೆ ಪುಡಿ, ಹೆಚ್ಚಿದ ಗೋಡಂಬಿ ಹಾಗೂ ತೆಂಗಿನಕಾಯಿ ಸೇರಿಸಿ ಮಿಶ್ರಣ ಮಾಡಿ. ತುಪ್ಪ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಅದಕ್ಕೆ ಅರ್ಧ ಚಮಚ ಏಲಕ್ಕಿ ಪುಡಿ ಸೇರಿಸಿ ಪುನಃ ಅರ್ಧ ಕಪ್ ತುಪ್ಪ ಹಾಕಿ ಕೈಯಿಂದ ಚೆನ್ನಾಗಿ ನಾದಿಕೊಳ್ಳಿ. ಪ್ಲೇಟ್‌ಗೆ ತುಪ್ಪ ಸವರಿ. ಮಿಶ್ರಣದಿಂದ ಕುಕೀಸ್ ಆಕಾರ ಕೊಟ್ಟು ಅದರ ಮೇಲೆ ಸಾಲಾಗಿ ಜೋಡಿಸಿ. ಫೋರ್ಕ್‌ನಿಂದ ಅಚ್ಚು ಮೂಡಿಸಿ. ಓವೆನ್ ಅನ್ನು 180 ಡಿಗ್ರಿ ಸೆಲ್ಸಿಯಸ್‌ನಷ್ಟು ಬಿಸಿ ಮಾಡಿಕೊಂಡು ಕುಕೀಸ್ ಅನ್ನು ಬೇಯಿಸಿ. ಈಗ ನಿಮ್ಮ ಮುಂದೆ ರುಚಿಯಾದ ಸಿಹಿಯಾದ ಕುಕೀಸ್ ತಿನ್ನಲು ಸಿದ್ಧ. ಇದನ್ನು ಡಬ್ಬಿಯಲ್ಲಿ ವಾರಗಟ್ಟಲೇ ಇಟ್ಟುಕೊಂಡು ತಿನ್ನಬಹುದು.

ಆಲೂ ಟಿಕ್ಕಿ ಚಾಟ್

ಬೇಕಾಗುವ ಸಾಮಗ್ರಿಗಳು: ಬೇಯಿಸಿದ ಆಲೂಗೆಡ್ಡೆ – 8, ಖಾರದಪುಡಿ – 1 ಚಮಚ, ಗರಂಮಸಾಲ – 1 ಚಮಚ, ಕಾರ್ನ್ ಫ್ಲೋರ್ – 3 ಚಮಚ, ಉಪ್ಪು – ರುಚಿಗೆ, ಇಂಗು – ಚಿಟಿಕೆ, ಕೊತ್ತಂಬರಿ ಸೊಪ್ಪು ಹೆಚ್ಚಿದ್ದು – 1 ಕಪ್, ಹಸಿಮೆಣಸು – 2 ಹೆಚ್ಚಿದ್ದು, ಮಿಕ್ಸರ್ – ಸಿಂಗರಿಸಲು, ಹುಣಸೆಹಣ್ಣಿನ ಚಟ್ನಿ, ಹಸಿಮೆಣಸು ಚಟ್ನಿ, ಎಣ್ಣೆ – ಕಾಯಿಸಲು, ಮೊಸರು – ಸ್ವಲ್ಪ

ತಯಾರಿಸುವ ವಿಧಾನ: ಬೇಯಿಸಿಕೊಂಡ ಆಲೂಗೆಡ್ಡೆಯನ್ನು ಚೆನ್ನಾಗಿ ಮ್ಯಾಶ್ ಮಾಡಿಕೊಳ್ಳಿ. ಅದಕ್ಕೆ ಖಾರದ ಪುಡಿ, ಗರಂ ಮಸಾಲೆ, ಇಂಗು, ಉಪ್ಪು, ಕಾರ್ನ್ ಫ್ಲೋರ್, ಕೊತ್ತಂಬರಿ ಸೊಪ್ಪು, ಹಸಿಮೆಣಸು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಇದನ್ನು ವಡೆಯಾಕಾರಕ್ಕೆ ತಟ್ಟಿಕೊಳ್ಳಿ. ತವಾ ಮೇಲೆ ಇರಿಸಿ ಸ್ವಲ್ಪ ಎಣ್ಣೆ ಹಚ್ಚಿ ಎರಡೂ ಬದಿ ಕಾಯಿಸಿ. ಕಾಯಿಸಿಕೊಂಡ ಆಲೂ ಟಿಕ್ಕಿ ಮೇಲೆ ಹುಣಸೆಹಣ್ಣಿನ ಚಟ್ನಿ, ಹಸಿಮೆಣಸಿನ ಚಟ್ನಿ, ಚಾಟ್ ಮಸಾಲ, ಪುಡಿ ಮಾಡಿದ ಪುರಿ ಉದುರಿಸಿ, ಅದರ ಮೇಲೆ ಮೊಸರು ಹಾಗೂ ಮಿಕ್ಸರ್ ಉದುರಿಸಿದರೆ ಆಲೂ ಟಿಕ್ಕಿ ಚಾಟ್ ತಿನ್ನಲು ಸಿದ್ಧ. ಇದನ್ನು ಮಕ್ಕಳು ಕೂಡ ಇಷ್ಟಪಟ್ಟು ತಿನ್ನುತ್ತಾರೆ.



ಅವಲಕ್ಕಿ ಮಿಕ್ಸರ್


ಬೇಕಾಗುವ ಸಾಮಗ್ರಿಗಳು: ಅವಲಕ್ಕಿ – 400 ಗ್ರಾಂ, ಎಣ್ಣೆ, ಸಾಸಿವೆ, ಜೀರಿಗೆ, ಒಣಮೆಣಸು, ಹಸಿಮೆಣಸು, ಕರಿಬೇವು ತೆಂಗಿನಕಾಯಿ – ಉದ್ದಕ್ಕೆ ಕತ್ತರಿಸಿದ್ದು, ಶೇಂಗಾ – ಅರ್ಧ ಕಪ್, ಗೋಡಂಬಿ – 10, ಬೆಳ್ಳುಳ್ಳಿ – 8 ರಿಂದ 10, ಪುಟಾಣಿ – ಕಾಲು ಕಪ್, ಅರಿಸಿನ – ಅರ್ಧ ಟೀ ಚಮಚ, ಖಾರದಪುಡಿ – ಅರ್ಧ ಚಮಚ, ಉಪ್ಪು – ರುಚಿಗೆ, ಟೊಮೆಟೊ, ಈರುಳ್ಳಿ, ತೆಂಗಿನತುರಿ.

ತಯಾರಿಸುವ ವಿಧಾನ: ಅಗಲವಾದ ದಪ್ಪ ತಳದ ಪಾತ್ರೆಯಲ್ಲಿ ಅವಲಕ್ಕಿಯನ್ನು ಗರಿಗರಿಯಾಗಿ ಹುರಿದು ತೆಗೆದಿಟ್ಟುಕೊಳ್ಳಿ. ಅದೇ ಪ್ಯಾನ್ ಮೇಲೆ ಎಣ್ಣೆ ಹಾಕಿ ಬಿಸಿ ಮಾಡಿ. ಅದಕ್ಕೆ ಸಾಸಿವೆ, ಜೀರಿಗೆ ಹಾಗೂ ಒಣಮೆಣಸು ಹಾಕಿ ಹುರಿದುಕೊಳ್ಳಿ. ಸಾಸಿವೆ ಸಿಡಿಯಲು ಆರಂಭಿಸಿದಾಗ ಹಸಿಮೆಣಸು ಹಾಗೂ ಕರಿಬೇವು ಸೇರಿಸಿ ಮಿಶ್ರಣ ಮಾಡಿ. ಇದಕ್ಕೆ 1 ಕಪ್ ತೆಂಗಿನಕಾಯಿ ತುರಿ ಸೇರಿಸಿ ಮಿಶ್ರಣ ಮಾಡಿ. ಚೆನ್ನಾಗಿ ಬಣ್ಣ ಬದಲಾಗುವವರೆಗೂ ಹುರಿದುಕೊಳ್ಳಿ. ಅದಕ್ಕೆ ಶೇಂಗಾ, ಗೋಡಂಬಿ ಸೇರಿಸಿ ಕೈಯಾಡಿಸಿ. ಬೆಳ್ಳುಳ್ಳಿ ಸೇರಿಸಿ ಹುರಿದುಕೊಳ್ಳಿ. ಅದಕ್ಕೆ ಪುಟಾಣಿ ಸೇರಿಸಿ. ನಂತರ ಚಿಟಿಕೆ ಅರಿಸಿನ, ಖಾರದಪುಡಿ ಹಾಗೂ ಉಪ್ಪು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಅದಕ್ಕೆ ಅವಲಕ್ಕಿ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಇದನ್ನು ಬಡಿಸುವಾಗ ಇದರ ಜೊತೆಗೆ ಟೊಮೆಟೊ, ಈರುಳ್ಳಿ, ಹಸಿಮೆಣಸು, ಕೊತ್ತಂಬರಿ ಸೊಪ್ಪು ಹಾಗೂ ತೆಂಗಿನತುರಿ ಮಿಶ್ರಣವನ್ನು ಸೇರಿಸಿ ತಿನ್ನಲು ಕೊಡಿ. ಇದನ್ನು ಸಂಜೆ ಹೊತ್ತಿಗೆ ತಿನ್ನಲು ಸ್ನ್ಯಾಕ್ ಆಗಿ ಬಳಸಬಹುದು.



(ಲೇಖಕಿ: ರಶ್ಮೀಸ್ ವೆಜ್ ಯೂಟ್ಯೂಬ್ ಚಾನೆಲ್ ನಿರ್ವಾಹಕಿ)

ಷೇರುಪೇಟೆ ವಹಿವಾಟು 101



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,178
ಇಂದಿನ ಅಂತ್ಯ	18,114
▼	63
ದಿನದ ಗರಿಷ್ಠ	18,314

ವಿನಿಮಯ ದರ

$ ಡಾಲರ್	74.9
£ ಪೌಂಡ್	103.4
€ ಯುರೊ	87.21
¥ ಯೆನ್ (100ಕ್ಕೆ)	65.79

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹435
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹442

ರಿಲಯನ್ಸ್ ಲಾಭ ಶೇ 43ರಷ್ಟು ಏರಿಕೆ



ಮುಕೇಶ್ ಅಂಬಾನಿ

ನವದೆಹಲಿ (ಪಿಟಿಐ): ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಕಂಪನಿಯ ಲಾಭವು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇಕಡ 43ರಷ್ಟು ಏರಿಕೆ ಕಂಡಿದೆ. ಕಂಪನಿಯು ₹ 13,680 ಕೋಟಿ ಲಾಭ ದಾಖಲಿಸಿದೆ. ಕಂಪನಿಯ ಪ್ರತಿ ಷೇರು ₹ 20.88ರಷ್ಟು ನಿವ್ವಳ ಲಾಭ ತಂದುಕೊಟ್ಟಿದೆ.

ಹಿಂದಿನ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ₹ 9,567 ಕೋಟಿ ಲಾಭ ಗಳಿಸಿತ್ತು. ಈ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ಆದಾಯವು ₹ 1.91 ಲಕ್ಷ ಕೋಟಿಗೆ ತಲುಪಿದೆ. ರಿಲಯನ್ಸ್ ಕಂಪನಿಯು ನಾಲ್ಕು ಬಗೆಯ ವಾಣಿಜ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ. ತೈಲ–ರಾಸಾಯನಿಕ ಉದ್ಯಮ, ಚಿಲ್ಲರೆ ವಹಿವಾಟು ಮತ್ತು ಇ–ವಾಣಿಜ್ಯ ಉದ್ಯಮ, ಜಿಯೊ ಒಳಗೊಂಡ ಡಿಜಿಟಲ್ ಸೇವಾ ಉದ್ಯಮ, ನವ ಇಂಧನ ಉದ್ಯಮದಲ್ಲಿ ಕಂಪನಿಯ ವಹಿವಾಟುಗಳು ವಿಸ್ತರಿಸಿಕೊಂಡಿವೆ.

ಕೈಗೆಟಕುವ ಬೆಲೆಗೆ ಸ್ಮಾರ್ಟ್‌ಫೋನ್‌ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಉದ್ದೇಶದಿಂದ ಗೂಗಲ್ ಕಂಪನಿ ಜೊತೆ ಕೆಲಸ ಮಾಡಲಾಗುತ್ತಿದೆ. ಈ ಸ್ಮಾರ್ಟ್‌ಫೋನ್ ದೀಪಾವಳಿ ಹೊತ್ತಿಗೆ ಮಾರುಕಟ್ಟೆಗೆ ಬಿಡುಗಡೆ ಆಗಲಿದೆ ಎಂದು ರಿಲಯನ್ಸ್ ತಿಳಿಸಿದೆ. ಕಂಪನಿಯ ಚಿಲ್ಲರೆ ವಹಿವಾಟು ಉದ್ಯಮವು ಕೋವಿಡ್‌ಗೂ ಮೊದಲಿನ ಮಟ್ಟವನ್ನು ದಾಟಿದೆ.

ಜಿಯೊ ಲಾಭ ಶೇ 23.48ರಷ್ಟು ಹೆಚ್ಚಳ: ರಿಲಯನ್ಸ್ ಇಂಡಸ್ಟ್ರೀಸ್ ಸಮೂಹಕ್ಕೆ ಸೇರಿರುವ ಜಿಯೊ ಪ್ಲಾಟ್‌ಫಾರ್ಮ್ಸ್ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 3,728 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿ ಗಳಿಸಿದ್ದ ಲಾಭಕ್ಕೆ ಹೋಲಿಸಿದರೆ ಈ ಬಾರಿಯ ಲಾಭದಲ್ಲಿ ಶೇಕಡ 23.48ರಷ್ಟು ಏರಿಕೆ ಆಗಿದೆ.

ಹಿಂದಿನ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ₹ 3,019 ಕೋಟಿ ಲಾಭ ಗಳಿಸಿತ್ತು. ಈ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ಆದಾಯವು ₹ 23,222 ಕೋಟಿಗೆ ತಲುಪಿದೆ. ದೂರಸಂಪರ್ಕ ಸೇವೆ ಒದಗಿಸುವ ಜಿಯೊ ಮತ್ತು ಅದಕ್ಕೆ ಸಂಬಂಧಿಸಿದ ಹಲವು ಆ್ಯಪ್‌ಗಳು ಜಿಯೊ ಪ್ಲಾಟ್‌ಫಾರ್ಮ್ಸ್ ಕಂಪನಿಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತವೆ.

ತೈಲ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಸತತ ಮೂರನೆಯ ದಿನವೂ ಏರಿಕೆ ಆಗಿದೆ. ಈ ಎರಡೂ ತೈಲಗಳ ಬೆಲೆಯನ್ನು ಲೀಟರ್‌ಗೆ ತಲಾ 35 ಪೈಸೆಯಷ್ಟು ಹೆಚ್ಚಿಸಲಾಗಿದೆ.

ಈ ಬೆಲೆ ಏರಿಕೆಯ ಪರಿಣಾಮವಾಗಿ ಬೆಂಗಳೂರಿನಲ್ಲಿ ಲೀಟರ್ ಪೆಟ್ರೋಲ್ ದರವು ₹ 110.61ಕ್ಕೆ, ಡೀಸೆಲ್ ದರವು ₹ 101.49ಕ್ಕೆ ತಲುಪಿದೆ.

ಬಯೋಕಾನ್ ಲಾಭ ಇಳಿಕೆ

ನವದೆಹಲಿ (ಪಿಟಿಐ): ಜೈವಿಕ ತಂತ್ರಜ್ಞಾನ ಕ್ಷೇತ್ರದ ಪ್ರಮುಖ ಕಂಪನಿಯಾಗಿರುವ ಬಯೋಕಾನ್‌ನ ಸೆಪ್ಟೆಂಬರ್ ತ್ರೈಮಾಸಿಕದ ನಿವ್ವಳ ಲಾಭದ ಪ್ರಮಾಣದಲ್ಲಿ ಶೇಕಡ 18ರಷ್ಟು ಇಳಿಕೆ ಆಗಿದೆ. ಕಂಪನಿಯು ಸೆಪ್ಟೆಂಬರ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಒಟ್ಟು ₹ 138 ಕೋಟಿ ನಿವ್ವಳ ಲಾಭ ಗಳಿಸಿದೆ.

ಪೇಟಿಎಂ ಕಂಪನಿಯ ಐಪಿಒಗೆ ಸೆಬಿ ಒಪ್ಪಿಗೆ

ನವದೆಹಲಿ (ಪಿಟಿಐ): ಹಣಕಾಸು ಸೇವೆಗಳನ್ನು ಡಿಜಿಟಲ್ ವೇದಿಕೆಯ ಮೂಲಕ ಒದಗಿಸುತ್ತಿರುವ ಪೇಟಿಎಂ ಕಂಪನಿಗೆ ಐಪಿಒ (ಆರಂಭಿಕ ಸಾರ್ವಜನಿಕ ಕೊಡುಗೆ) ಮೂಲಕ ₹ 16,600 ಕೋಟಿ ಬಂಡವಾಳ ಸಂಗ್ರಹಿಸಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಶುಕ್ರವಾರ ಒಪ್ಪಿಗೆ ನೀಡಿದೆ.

ಕಂಪನಿಯು ಈ ತಿಂಗಳ ಅಂತ್ಯದ ಹೊತ್ತಿಗೆ ಷೇರು ಮಾರುಕಟ್ಟೆ ಪ್ರವೇಶಿಸುವ ನಿರೀಕ್ಷೆ ಹೊಂದಿದೆ ಎಂದು ಮೂಲಗಳು ತಿಳಿಸಿವೆ. ಷೇರುಪೇಟೆಯಲ್ಲಿ ನೋಂದಾಯಿತ ಆಗುವ ಪ್ರಕ್ರಿಯೆಗೆ ವೇಗ ನೀಡಬೇಕು ಎಂಬ ಉದ್ದೇಶದಿಂದ ಕಂಪನಿಯು ಐಪಿಒ ಪೂರ್ವದ ಷೇರು ಮಾರಾಟ ಪ್ರಕ್ರಿಯೆಯನ್ನು ಕೈಬಿಡುವ ಸಾಧ್ಯತೆ ಇದೆ ಎನ್ನಲಾಗಿದೆ.

ಕಂಪನಿಯು ತನ್ನ ಮಾರುಕಟ್ಟೆ ಬಂಡವಾಳ ಮೌಲ್ಯವು ₹ 1.47 ಲಕ್ಷ ಕೋಟಿಯಿಂದ ₹ 1.78 ಲಕ್ಷ ಕೋಟಿವರೆಗೆ ಇರಬಹುದು ಎಂದು ಅಂದಾಜು ಮಾಡಿದೆ. ಕಂಪನಿಗಳ ಮೌಲ್ಯವನ್ನು ಲೆಕ್ಕಹಾಕುವಲ್ಲಿ ಪರಿಣತಿ ಹೊಂದಿರುವ ಅಮೆರಿಕ ಮೂಲದ ತಜ್ಞ ಅಶ್ವತ್ಥ್ ದಾಮೋದರನ್ ಅವರು ಕಂಪನಿಯ ಪ್ರತಿ ಷೇರಿನ ಬೆಲೆಯು ₹ 2,950 ಆಗಬಹುದು ಎಂದು ಅಂದಾಜು ಮಾಡಿದ್ದಾರೆ.

ಪೇಟಿಎಂ ಐಪಿಒ ದೇಶದಲ್ಲಿ ಇದುವರೆಗೆ ನಡೆದಿರುವ ಐಪಿಒಗಳ ಪೈಕಿ ಅತಿ ದೊಡ್ಡ ಮೊತ್ತದ್ದಾಗಿರಲಿದೆ.

ಯೆಸ್ ಬ್ಯಾಂಕ್ ಲಾಭ ಶೇ 74ರಷ್ಟು ಏರಿಕೆ

ನವದೆಹಲಿ (ಪಿಟಿಐ): ಯೆಸ್ ಬ್ಯಾಂಕ್‌ನ ಸೆಪ್ಟೆಂಬರ್ ತ್ರೈಮಾಸಿಕದ ನಿವ್ವಳ ಲಾಭದ ಪ್ರಮಾಣದಲ್ಲಿ ಶೇಕಡ 74ರಷ್ಟು ಏರಿಕೆ ಆಗಿದೆ. ಈ ತ್ರೈಮಾಸಿಕದಲ್ಲಿ ಬ್ಯಾಂಕ್ ₹ 225 ಕೋಟಿ ನಿವ್ವಳ ಲಾಭ ಗಳಿಸಿದೆ.

ಖಾಸಗಿ ವಲಯದ ಈ ಬ್ಯಾಂಕ್ ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ₹ 129 ಕೋಟಿ ಲಾಭ ಗಳಿಸಿತ್ತು. ಈ ವರ್ಷದ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಬ್ಯಾಂಕ್‌ನ ಒಟ್ಟು ಆದಾಯವು ₹ 5,430 ಕೋಟಿಗೆ ಇಳಿಕೆ ಕಂಡಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ₹ 5,842 ಕೋಟಿ ಲಾಭ ಗಳಿಸಿತ್ತು.

ಯೆಸ್ ಬ್ಯಾಂಕ್‌ನ ನಿವ್ವಳ ಎನ್‌ಪಿಎ (ವಸೂಲಾಗದ ಸಾಲದ ಪ್ರಮಾಣ) ಶೇಕಡ 5.55ಕ್ಕೆ ಹೆಚ್ಚಳವಾಗಿದೆ. ಹಿಂದಿನ ವರ್ಷದ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಇದು ಶೇ 4.71ರಷ್ಟು ಇತ್ತು.

ಐಎಫ್‌ಎಫ್‌ಐನಲ್ಲಿ ಇಸ್ತಾನ್ ಸಬೂ, ಮಾರ್ಟಿನ್‌ಗೆ ಸತ್ಯಜಿತ್ ರೇ ಪ್ರಶಸ್ತಿ ಪ್ರದಾನ

ನವದೆಹಲಿ: ಹಂಗೇರಿಯಾದ ಚಲನಚಿತ್ರ ನಿರ್ದೇಶಕ ಇಸ್ತಾನ್ ಸಬೂ ಮತ್ತು ಅಮೆರಿಕದ ಚಿತ್ರ ನಿರ್ದೇಶಕ ಮಾರ್ಟಿನ್ ಸ್ಕಾರ್ಸೆಸೆ ಅವರಿಗೆ ಸತ್ಯಜಿತ್ ರೇ ಜೀವಮಾನ ಸಾಧನೆ ಪ್ರಶಸ್ತಿಯನ್ನು ನ. 20ರಿಂದ ಆರಂಭವಾಗುವ ಭಾರತದ 52ನೇ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ (ಐಎಫ್‌ಎಫ್‌ಐ) ನೀಡಿ ಗೌರವಿಸಲಾಗುತ್ತಿದೆ.

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1450 (1450)
ಸೋಯಾ (ರಿಫೈನ್ಡ್)	₹1305(1320)
ಸೂರ್ಯಕಾಂತಿ (ರಿಫೈನ್ಡ್)	₹1360 (1380)
ಪಾಮೋಲಿನ್	₹1200 (1210)

ಮುಂಬೈ ಧಾರಣೆ

ಶೇಂಗಾ

22-9-2021

ಜಾವಾ 70/80(ಹೊಸ)	10450-10500
ಜಾವಾ 80/90(ಹೊಸ)	10150-10200
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1460 (1460)
ಒಂದು ವಾರದ ಡೆಲಿವರಿ	1455 (1455)
ಸೋಯಾ ಕಚ್ಚಾ	1260 (1265)
ಪಾಮ್ ವಾರದ ಡೆಲಿವರಿ	1198(1208)
ಸೂರ್ಯಕಾಂತಿ ಎಣ್ಣೆ ಕಚ್ಚಾ	1280 (1285)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
47,750 (47300)
ಬೆಳ್ಳಿ ಕೆ.ಜಿ
65,350 (64,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 600-650
ನಡುಗೋಲು 700-750
ರಾಶಿ 800-850
ರಾಶಿ ಉತ್ತಮ 900-950
ಜರಡಿ 1000-1050
ಹರಕಿದ್ದು 1200-1300
ಹಸಿರು ಸಾಧಾರಣ 800-850
ಹಸಿರು ಉತ್ತಮ 1000-1050
ಹಸಿರು ಅತಿ ಉತ್ತಮ 1300-1400
ಕಾಳು ಮೆಣಸು 440

ಅಡಿಕೆ
ಬಂಟ್ವಾಳ
ಕೋಕ 10000-25000
ಹೊಸತು 25000-50000
ಹಳತು 46000-51500

ಭದ್ರಾವತಿ
ರಾಶಿ 46166-48499

ಬೆಳ್ತಂಗಡಿ
ಹೊಸತು 32000-50000
ಹಳತು 42950-51500

ಚಿತ್ರದುರ್ಗ
ಅಪಿ 46629-47059
ಬೆಟ್ಟೆ 39619-40003
ಕೆಂಪುಗೋಟು 30209-30610
ರಾಶಿ 46139-46569

ದಾವಣಗೆರೆ
ರಾಶಿ 37569-48509

ಹೊಸನಗರ
ಚಾಲಿ 32899-44899
ಕೆಂಪುಗೋಟು 33099-38499
ರಾಶಿ 44399-48929

ಕಾರ್ಕಳ
ಹಳತು 46000-50000

ಶಿವಮೊಗ್ಗ
ಗೊರಬಲು 16865-37389
ಹೊಸತು 45599-47599
ರಾಶಿ 43569-47599
ಸರಕು 50009-73896
ಬೆಟ್ಟೆ 44009-50069

ಸಿದ್ದಾಪುರ
ಬಿಳೆಗೋಟು 34199-41699
ಚಾಲಿ 44299-47639
ಕೋಕ 24609-36208
ಕೆಂಪುಗೋಟು 26099-34089
ರಾಶಿ 40099-47009
ತಟ್ಟಿಬೆಟ್ಟೆ 39219-41499

ಶಿರಸಿ
ಬೆಟ್ಟೆ 34521-45699
ಬಿಳೆಗೋಟು 20181-46239
ಚಾಲಿ 39009-47599
ರಾಶಿ 40699-47999

ಯಲ್ಲಾಪುರ
ಬಿಳೆಗೋಟು 34299-40777
ಚಾಲಿ 41959-47829
ಕೋಕ 22069-32122
ಕೆಂಪುಗೋಟು 29619-35101
ರಾಶಿ 45000-50399
ತಟ್ಟಿಬೆಟ್ಟೆ 36869-44000
ಅಪಿ 51779-51779

ಕುಮಟಾ
ಚಿಪ್ಪು 35019-40109
ಕೋಕ 20189-32589
ಫ್ಯಾಕ್ಟರಿ 11089-19811
ಹೊಸಚಾಲಿ 43569-47610

ಕುಂದಾಪುರ
ಹಳೆಚಾಲಿ 44000-50000

ಪುತ್ತೂರು
ಕೋಕ 10500-26000
ಹೊಸತು 35500-50000

ರೇಷ್ಮೆಗೂಡು ಮಾರುಕಟ್ಟೆ
ರಾಮನಗರ
ಮಿಶ್ರ ತಳಿ 281-512
ದ್ವಿತಳಿ 326-549

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	12,900	12,800	13,075	203.30ಸೆಂಟ್ಸ್
ಎಸಿ	6,325	5,000	5,400	
ಆರ್‌ಪಿ	6,000	6,000	6,250	ಲಂಡನ್
ಆರ್‌ಸಿ	3,510	3,400	3,625	2116ಡಾಲರ್ಸ್

ಚೊಚ್ಚಲ ಪ್ರಯತ್ನದಲ್ಲಿಯೇ ನಮಿಬಿಯಾ 'ಸೂಪರ್'

ಶಾರ್ಜಾ (ಪಿಟಿಐ): ಇದೇಮೊದಲ ಸಲ ಟಿ20 ವಿಶ್ವಕಪ್ ಟೂರ್ನಿಯ ಪ್ರಾಥಮಿಕ ಸುತ್ತಿನಲ್ಲಿ ಆಡುವ ಅವಕಾಶ ಪಡೆದ ನಮಿಬಿಯಾ ತಂಡವು ಸೂಪರ್ 12 ಹಂತಕ್ಕೂ ಲಗ್ಗೆ ಹಾಕಿತು.

ಶುಕ್ರವಾರ ನಡೆದ ಪ್ರಾಥಮಿಕ ಸುತ್ತಿನ ಎ ಗುಂಪಿನ ಪಂದ್ಯದಲ್ಲಿ ಐರ್ಲೆಂಡ್ ವಿರುದ್ಧ ಎಂಟು ವಿಕೆಟ್‌ಗಳಿಂದ ಗೆದ್ದು ಇತಿಹಾಸ ಬರೆಯಿತು.

ನಾಯಕ ಗೆರಾರ್ಡ್ ಯರಸ್ಮಸ್ (ಅಜೇಯ 53; 49ಎಸೆತ) ಅಮೋಘ ಅರ್ಧಶತಕದಿಂದಾಗಿ ತಂಡವು ಐರ್ಲೆಂಡ್ ಒಡ್ಡಿದ 125 ರನ್‌ಗಳ ಸವಾಲನ್ನು ಮೀರಿ ನಿಂತಿತು. 18.3 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 126 ರನ್ ಗಳಿಸಿದ ನಮಿಬಿಯಾ ಸೂಪರ್ ಸುತ್ತಿಗೆ ಹೆಜ್ಜೆಯಿಟ್ಟಿತು.

ಟಾಸ್ ಗೆದ್ದ ಐರ್ಲೆಂಡ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಸ್ಟರ್ಲಿಂಗ್ (38 ರನ್) ಮತ್ತು ಕೆವಿನ್ ಒ ಬ್ರೆನ್ (25 ರನ್) ಮೊದಲ ವಿಕೆಟ್ ಜೊತೆಯಾಟದಲ್ಲಿ 62 ರನ್ ಸೇರಿಸಿದರು.

ಎಂಟನೇ ಓವರ್‌ನಲ್ಲಿ ಸ್ಟರ್ಲಿಂಗ್ ಔಟಾದ ನಂತರ ನಾಯಕ ಬಲ್ಬಿರ್ನಿ ಅವರು ಸ್ವಲ್ಪ ಹೋರಾಟ ತೋರಿದರು. ಆದರೆ, ಕೆವಿನ್ ಮತ್ತು ಬಲ್ಬಿರ್ನಿ ಅವರಿಬ್ಬರ ವಿಕೆಟ್ ಗಳಿಸಿದ ನಮಿಬಿಯಾದ ಫ್ರೈಲಿಂಕ್ ಮಹತ್ವದ ಮುನ್ನಡೆ ಸಾಧಿಸಿಕೊಟ್ಟರು.

ಈ ಅವಕಾಶ ಬಳಸಿಕೊಂಡ ಡೇವಿಡ್ ವೀಸ್ ಮಧ್ಯಮ ಕ್ರಮಾಂಕದ ಇಬ್ಬರು ಬ್ಯಾಟ್ಸ್‌ಮನ್‌ಗಳ ವಿಕೆಟ್ ಕಬಳಿಸಿದರು.

ಅಲ್ಲದೇ ಮಾರ್ಕ್ ಅಡೇರ್ ರನೌಟ್ ಆಗಲು ವೀಸ್ ಚುರುಕಿನ್ ಫೀಲ್ಡಿಂಗ್ ಕಾರಣವಾಯಿತು. ಇದರಿಂದಾಗಿ ಐರ್ಲೆಂಡ್ ತಂಡವು ಸಾಧಾರಣ ಮೊತ್ತ ಗಳಿಸಿತು.

ಗುರಿ ಬೆನ್ನತ್ತಿದ್ದ ನಮಿಬಿಯಾ ಆರಂಭಿಕ ಜೋಡಿಯು 25 ರನ್ ಸೇರಿಸಿತು. ಆರನೇ ಓವರ್‌ನಲ್ಲಿ ಕರ್ಟಿಸ್ ಕ್ಯಾಂಫರ್ ಈ ಜೊತೆಯಾಟವನ್ನು ಮುರಿದರು. ಕ್ರೀಸ್‌ಗೆ ಬಂದ ಯರಸ್ಮಸ್ ಮತ್ತು ಗ್ರೀನ್ 14ನೇ ಓವರ್‌ನವರೆಗೂ ವಿಕೆಟ್ ಪತನವಾಗದಂತೆ ತಡೆದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 48 ರನ್ ಸೇರಿಸಿದರು. ಈ ಜೊತೆಯಾಟವನ್ನೂ ಕರ್ಟಿಸ್ ಅವರೇ ಮುರಿದರು.

ಗ್ರೀನ್ ಔಟಾದಾಗ ಕ್ರೀಸ್‌ಗೆ ಬಂದ ವೀಸ್ ಬ್ಯಾಟಿಂಗ್‌ನಲ್ಲಿಯೂ ಮಿಂಚಿದರು.

ಸಂಕ್ಷಿಪ್ತ ಸ್ಕೋರು: ಐರ್ಲೆಂಡ್: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 125 (ಸ್ಟರ್ಲಿಂಗ್ 38, ಕೆವಿನ್ ಒ ಬ್ರೆನ್ 25, ಆ್ಯಂಡ್ರ್ಯೂ ಬಲ್ಬಿರ್ನಿ 21, ಡೇವಿಡ್ ವೀಸ್ 22ಕ್ಕೆ2, ಜೇನ್ ಫ್ರೈಲಿಂಕ್ 21ಕ್ಕೆ3) ನಮಿಬಿಯಾ: 18.3 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 126 (ಝೇನ್ ಗ್ರೀನ್ 24, ಗೆರಾರ್ಡ್ ಯರಸ್ಮಸ್ ಔಟಾಗದೆ 53, ಡೇವಿಸ್ ವೀಸ್ ಔಟಾಗದೆ 28,ಕರ್ಟಿಸ್ ಕ್ಯಾಂಫರ್ 14ಕ್ಕೆ2) ಫಲಿತಾಂಶ: ನಮಿಬಿಯಾ ತಂಡಕ್ಕೆ 8 ವಿಕೆಟ್‌ಗಳ ಜಯ. ಪಂದ್ಯಶ್ರೇಷ್ಠ: ಡೇವಿಡ್ ವೀಸ್.



ಸಂತಸದಲ್ಲಿ ನಮಿಬಿಯಾ ನಾಯಕ ಗೆರಾರ್ಡ್ ಯರಸ್ಮಸ್ –ಎಎಫ್‌ಪಿ ಚಿತ್ರ

ಚಾಂಪಿಯನ್ನರಿಗೆ ಇಂಗ್ಲೆಂಡ್ ಸವಾಲು

ದುಬೈ (ಪಿಟಿಐ): ಎರಡು ಬಾರಿಯ ಚಾಂಪಿಯನ್ ವೆಸ್ಟ್ ಇಂಡೀಸ್ ತಂಡವು ಶನಿವಾರ ಆರಂಭವಾಗಲಿರುವ ಟ್ವೆಂಟಿ-20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಇಂಗ್ಲೆಂಡ್ ವಿರುದ್ಧ ಮೊದಲ ಪಂದ್ಯವಾಡಲಿದೆ.

ಹಾಲಿ ಚಾಂಪಿಯನ್ ಕೂಡ ಆಗಿರುವ ವೆಸ್ಟ್ ಇಂಡೀಸ್ ತಂಡವನ್ನು ಈ ಬಾರಿ ಕೀರನ್ ಪೊಲಾರ್ಡ್ ಮುನ್ನಡೆಸುವರು. ದಿಗ್ಗಜ ಆಟಗಾರರಾದ ಕ್ರಿಸ್ ಗೇಲ್, ಡ್ವೇನ್ ಬ್ರಾವೊ ಮತ್ತು ಆ್ಯಂಡ್ರೆ ರಸೆಲ್ ತಂಡದಲ್ಲಿದ್ದಾರೆ.

ಆದರೆ ಐಪಿಎಲ್‌ನಲ್ಲಿ ಆಲ್‌ರೌಂಡರ್ ಬ್ರಾವೊ ಬಿಟ್ಟರೆ ಉಳಿದವರು ಫಾರ್ಮ್‌ನಲ್ಲಿರಲಿಲ್ಲ. ಕೆರೆಬಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಗೇಲ್ 9 ಇನಿಂಗ್ಸ್‌ಗಳಿಂದ ಕೇವಲ 165 ರನ್‌ಗಳನ್ನು ಮಾಡಿದ್ದರು.

ಬೌಲಿಂಗ್ ವಿಭಾಗವೂ ಅಷ್ಟೇನೂ ಸಬಲವಾಗಿಲ್ಲ. 2016ರಲ್ಲಿ ಡ್ಯಾರೆನ್ ಸಾಮಿ ನೇತೃತ್ವದ ತಂಡವು ಪ್ರಶಸ್ತಿ ಗೆದ್ದಿತ್ತು. ಐಪಿಎಲ್‌ನ ಎರಡನೇ ಲೆಗ್‌ನಲ್ಲಿ ಕೇವಲ ಎರಡು ಪಂದ್ಯಗಳಲ್ಲಿ ಆಡಿದ್ದರು. ರಸೆಲ್ ಫಿಟ್ ಆಗಿರಲಿಲ್ಲ.

ವಿಂಡೀಸ್ ಬಳಗಕ್ಕೆ ಹೋಲಿಸಿದರೆ ಇಂಗ್ಲೆಂಡ್ ಬಲಿಷ್ಠವಾಗಿದೆ. ನಾಯಕ ಏಯಾನ್ ಮಾರ್ಗನ್ ಬ್ಯಾಟಿಂಗ್‌ನಲ್ಲಿ ಲಯ ಕಂಡುಕೊಳ್ಳಬೇಕು. ಆದರೆ, ಜಾನಿ ಬೆಸ್ಟೊ, ಮೋಯಿನ್ ಅಲಿ, ಜೊಸ್ ಬಟ್ಲರ್, ಲಿಯಾಮ್ ಲಿವಿಂಗ್ ಸ್ಟೋನ್, ಜೇಸನ್ ರಾಯ್ ಅವರು ರನ್‌ಗಳ ಹೊಳೆ ಹರಿಸಬಲ್ಲರು. ಕ್ರಿಸ್ ವೋಕ್ಸ್ ಮತ್ತು ಮಾರ್ಕ್ ವುಡ್ ದಾಳಿ ರಂಗೇರಬಹುದು. ಆದರೆ, ಪ್ರಮುಖ ಆಲ್‌ರೌಂಡರ್ ಬೆನ್ ಸ್ಟೋಕ್ಸ್ ಮತ್ತು ವೇಗಿ ಜೋಫ್ರಾ ಆರ್ಚರ್ ಅವರ ಅನುಪಸ್ಥಿತಿ ತಂಡವನ್ನು ಕಾಡುವ ಸಾಧ್ಯತೆ ಇದೆ.



ಕೀರನ್ ಪೊಲಾರ್ಡ್



ಏಯಾನ್ ಮಾರ್ಗನ್

ತಂಡಗಳು

ವೆಸ್ಟ್ ಇಂಡೀಸ್: ಕೀರನ್ ಪೊಲಾರ್ಡ್ (ನಾಯಕ), ನಿಕೊಲಸ್ ಪೂರನ್, ಡ್ವೇನ್ ಬ್ರಾವೊ, ರಾಸ್ಟನ್ ಚೇಸ್, ಆ್ಯಂಡ್ರೆ ಫ್ಲೆಚರ್, ಕ್ರಿಸ್ ಗೇಲ್, ಶಿಮ್ರೊನ್ ಹೆಟ್ಮೆಯರ್, ಎವಿನ್ ಲೂಯಿಸ್, ಒಬೇದ್ ಮೆಕಾಯ್, ಲೆಂಡ್ಲ್ ಸಿಮನ್ಸ್, ರವಿ ರಾಮಪಾಲ್, ಆ್ಯಂಡ್ರೆ ರಸೆಲ್, ಒಷೇನ್ ಥಾಮಸ್, ಹೇಡನ್ ವಾಲ್ಶ್ ಜೂನಿಯರ್.

ಇಂಗ್ಲೆಂಡ್: ಏಯಾನ್ ಮಾರ್ಗನ್ (ನಾಯಕ), ಮೋಯಿನ್ ಅಲಿ, ಜೋನಾಥನ್ ಬೆಸ್ಟೊ, ಸ್ಯಾಮ್ ಬಿಲಿಂಗ್ಸ್, ಜೊಸ್ ಬಟ್ಲರ್, ಟಾಮ್ ಕರನ್, ಕ್ರಿಸ್ ಜೋರ್ಡಾನ್, ಲಿಯಾಮ್ ಲಿವಿಂಗ್‌ಸ್ಟೋನ್, ಡೇವಿಡ್ ಮಲಾನ್, ಟೈಮಲ್ ಮಿಲ್ಸ್, ಆದಿಲ್ ರಶೀದ್, ಜೇಸನ್ ರಾಯ್, ಡೇವಿಡ್ ವಿಲಿ, ಕ್ರಿಸ್ ವೋಕ್ಸ್, ಮಾರ್ಕ್ ವುಡ್.

ಪಂದ್ಯ ಆರಂಭ
ರಾತ್ರಿ 7.30
(ಭಾರತೀಯ ಕಾಲಮಾನ)

ನೇರ ಪ್ರಸಾರ
ಸ್ಟಾರ್ ಸ್ಪೋರ್ಟ್ಸ್

ಜುಲೈನಲ್ಲಿ ಭಾರತ–ಇಂಗ್ಲೆಂಡ್ ಟೆಸ್ಟ್ ಮರುನಿಗದಿ

ನವದೆಹಲಿ(ಪಿಟಿಐ): ಈಚೆಗೆ ಇಂಗ್ಲೆಂಡ್‌ನಲ್ಲಿ ನಡೆದಿದ್ದ ಟೆಸ್ಟ್ ಸರಣಿಯಲ್ಲಿ ಕೆಲವು ಆಟಗಾರರಿಗೆ ಕೋವಿಡ್ ಖಚಿತವಾದ ಹಿನ್ನೆಲೆಯಲ್ಲಿ ಮುಂದೂಡಲಾಗಿದ್ದ ಕೊನೆಯ ಪಂದ್ಯವನ್ನು ಮುಂದಿನ ವರ್ಷದ ಜುಲೈ 1ರಿಂದ 5ರವರೆಗೆ ಮರುನಿಗದಿಗೊಳಿಸಲಾಗಿದೆ. ಆ ಸರಣಿಯ ಪಂದ್ಯವು ಮ್ಯಾಂಚೆಸ್ಟರ್‌ನಲ್ಲಿ ನಡೆಯ ಬೇಕಿತ್ತು. ಕೆಲವು ಆಟಗಾರರಿಗೆಕೋವಿಡ್ ತಗುಲಿದ್ದ ಕಾರಣಕ್ಕೆ ರದ್ದುಗೊಳಿಸಲಾಗಿತ್ತು. ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಭಾರತ 2-1ರ ಅಂತರದ ಮುನ್ನಡೆ ಸಾಧಿಸಿತ್ತು. ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಹಾಗೂ ಇಂಗ್ಲೆಂಡ್ ಹಾಗೂ ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ನಡುವೆ ಒಮ್ಮತ ಮೂಡಿಬಂದಿದೆ.

ಟೆಸ್ಟ್ ಪಂದ್ಯದ ಬಳಿಕ ಇಂಗ್ಲೆಂಡ್ ವಿರುದ್ಧ ತಲಾ ಮೂರು ಟ್ವೆಂಟಿ-20 ಹಾಗೂ ಏಕದಿನ ಸರಣಿಗಳಲ್ಲಿ ಭಾರತ ಆಡಲಿದೆ.

ಪರಿಷ್ಕೃತ ವೇಳಾಪಟ್ಟಿ ಇಂತಿದೆ

ಜು. 1ರಿಂದ **5**ರ ವರೆಗೆ: ಟೆಸ್ಟ್, ಎಜ್‌ಬಾಸ್ಟನ್

ಟ್ವೆಂಟಿ-20 ಸರಣಿ

ಜು. 7: ಮೊದಲ ಟ್ವೆಂಟಿ-20, ಏಜೀಸ್ ಬೌಲ್

ಜು. 9: ಎರಡನೇ ಟ್ವೆಂಟಿ-20, ಎಜ್‌ಬಾಸ್ಟನ್

ಜು. 10: ಅಂತಿಮ ಟ್ವೆಂಟಿ-20, ಟ್ರೆಂಟ್ ಬ್ರಿಡ್ಜ್

ಏಕದಿನ ಸರಣಿ :

ಜು. 12: ಮೊದಲ ಏಕದಿನ , ದಿ ಓವಲ್

ಜು. 14: ದ್ವಿತೀಯ ಏಕದಿನ, ಲಾರ್ಡ್ಸ್.

ಜು. 17: ಅಂತಿಮ ಏಕದಿನ, ಓಲ್ಡ್ ಟ್ರಾಫರ್ಡ್

ಲಂಕಾಕ್ಕೆ ಜಯ

ಶಾರ್ಜಾ (ಪಿಟಿಐ): ಲಹೀರು ಕುಮಾರ ಮತ್ತು ವಾನಿಂದು ಹಸರಂಗಾ ಅವರ ಅಮೋಘ ಬೌಲಿಂಗ್ ಮುಂದೆ ನೆದರ್ಲೆಂಡ್ಸ್ ಅಲ್ಪಮೊತ್ತಕ್ಕೆ ಕುಸಿಯಿತು. ಶ್ರೀಲಂಕಾ ತಂಡವು 8 ವಿಕೆಟ್‌ಗಳ ಸುಲಭ ಜಯ ಸಾಧಿಸಿತು.

ಶುಕ್ರವಾರ ನಡೆದ ಎ ಗುಂಪಿನ ಪಂದ್ಯದಲ್ಲಿ ಟಾಸ್ ಗೆದ್ದ ಶ್ರೀಲಂಕಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನೆದರ್ಲೆಂಡ್ಸ್ 10 ಓವರ್‌ಗಳಲ್ಲಿ 44 ರನ್ ಗಳಿಸಿ ಆಲೌಟಾಯಿತು.

ಇದಕ್ಕುತ್ತರವಾಗಿ ಲಂಕಾ ತಂಡವು 7.1 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 45 ರನ್ ಗಳಿಸಿತು.

ದಕ್ಷಿಣ ಆಫ್ರಿಕಾ–ಆಸ್ಟ್ರೇಲಿಯಾ ಸೆಣಸು

ಅಬುಧಾಬಿ (ಪಿಟಿಐ): ಅಗ್ರ ಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯದ ಆತಂಕದಲ್ಲಿರುವ ಆಸ್ಟ್ರೇಲಿಯಾ ತಂಡ ಸೂಪರ್ 12 ಹಂತದ ಒಂದನೇ ಗುಂಪಿನ ಮೊದಲ ಪಂದ್ಯದಲ್ಲಿ ಶನಿವಾರ ದಕ್ಷಿಣ ಆಫ್ರಿಕಾವನ್ನು ಎದುರಿಸಲಿದೆ.

ಟ್ವೆಂಟಿ-20 ವಿಶ್ವಕಪ್ ಟೂರ್ನಿಯಲ್ಲಿ ಮೊದಲ ಪ್ರಶಸ್ತಿಯ ಕನಸು ಹೊತ್ತು ಕೊಂಡು ಕಣಕ್ಕೆ ಇಳಿಯುತ್ತಿರುವ ಆಸ್ಟ್ರೇಲಿಯಾ ಈಚೆಗೆ ಬಾಂಗ್ಲಾದೇಶ, ವೆಸ್ಟ್ ಇಂಡೀಸ್, ನ್ಯೂಜಿಲೆಂಡ್, ಭಾರತ ಮತ್ತು ಇಂಗ್ಲೆಂಡ್ ಎದುರು ನಡೆದ ಸರಣಿಗಳಲ್ಲಿ ಸೋತಿತ್ತು. ಈ ಸರಣಿಗಳಲ್ಲಿ ಪ್ರಮುಖ ಆಟಗಾರರು ಲಭ್ಯ ಇರಲಿಲ್ಲ. ಹೀಗಾಗಿ ಒಟ್ಟು 18 ಪಂದ್ಯಗಳ ಪೈಕಿ 13ರಲ್ಲಿ ತಂಡ ಸೋತಿತ್ತು.

ಆರಂಭಿಕ ಬ್ಯಾಟರ್ ಡೇವಿಡ್ ವಾರ್ನರ್ ಅವರು ಫಾರ್ಮ್‌ನಲ್ಲಿ ಇಲ್ಲದೇ ಇರುವುದು ತಂಡವನ್ನು ಕಾಡುತ್ತಿರುವ ಪ್ರಮುಖ ಸಮಸ್ಯೆ. ಐಪಿಎಲ್‌ನಲ್ಲಿ ನೀರಸ ಆಟವಾಡಿದ್ದ ಅವರನ್ನು ರಾಷ್ಟ್ರೀಯ ತಂಡದಿಂದ ಎರಡು ಬಾರಿ ಕೈಬಿಡಲಾಗಿತ್ತು.

ವಿಶ್ವಕಪ್‌ನ ಎರಡು ಅಭ್ಯಾಸ ಪಂದ್ಯಗಳಲ್ಲಿ 0 ಮತ್ತು 1 ರನ್ ಗಳಿಸಿದ್ದರು. ನಾಯಕ ಆ್ಯರನ್ ಫಿಂಚ್ ಮೊಣಕಾಲಿನ ಶಸ್ತ್ರಚಿಕಿತ್ಸೆ ಕಳೆದು ಬಂದಿದ್ದಾರೆ. ಉಪ ನಾಯಕ ಪ್ಯಾಟ್ ಕಮಿನ್ಸ್ ಐಪಿಎಲ್‌ನ ಮೊದಲ ಹಂತದ ಪಂದ್ಯದ ನಂತರ ಆಡಲಿಲ್ಲ.

ಐರ್ಲೆಂಡ್, ಶ್ರೀಲಂಕಾ ಮತ್ತು ಹಾಲಿ ಚಾಂಪಿಯನ್ ವೆಸ್ಟ್ ಇಂಡೀಸ್ ಎದುರು ಈಚೆಗೆ ನಡೆದ ಸರಣಿಗಳಲ್ಲಿ ಅಮೋಘ ಜಯ ಸಾಧಿಸಿರುವ ದಕ್ಷಿಣ ಆಫ್ರಿಕಾ ಭರವಸೆಯಲ್ಲಿದೆ. ಐಸಿಸಿ ಟೂರ್ನಿಗಳಲ್ಲಿ ನಿರೀಕ್ಷಿತ ಸಾಧನೆ ಮಾಡಲು ಆಗದೇ ಇರುವ ಅಂಶ ತಂಡವನ್ನು ಕಾಡುತ್ತಿದ್ದು ಅದರಿಂದ ಹೊರಬರಲು ಪ್ರಯತ್ನಿಸಲಿದೆ.

ತಂಡಗಳು: ಆಸ್ಟ್ರೇಲಿಯಾ: ಆ್ಯರನ್ ಫಿಂಚ್ (ನಾಯಕ), ಆ್ಯಷ್ಟನ್ ಅಗರ್, ಪ್ಯಾಟ್ ಕಮಿನ್ಸ್ (ಉಪನಾಯಕ), ಜೋಶ್ ಹ್ಯಾಜಲ್‌ವುಡ್, ಜೋಶ್ ಇಂಗ್ಲಿಸ್, ಮಿಷೆಲ್ ಮಾರ್ಷ್, ಗ್ಲೆನ್ ಮ್ಯಾಕ್ಸ್‌ವೆಲ್, ಕೇನ್ ರಿಚರ್ಡ್ಸನ್, ಸ್ಟೀವ್ ಸ್ಮಿತ್, ಮಿಷೆಲ್ ಸ್ಟಾರ್ಕ್, ಮಾರ್ಕಸ್ ಸ್ಟೋಯಿನಿಸ್, ಮಿಷೆಲ್ ಸ್ವೆಪ್ಸನ್, ಮ್ಯಾಥ್ಯೂ ವೇಡ್, ಡೇವಿಡ್ ವಾರ್ನರ್, ಆ್ಯಡಂ ಜಂಪಾ.

ದಕ್ಷಿಣ ಆಫ್ರಿಕಾ: ತೆಂಬಾ ಬವುಮ (ನಾಯಕ), ಕೇಶವ್ ಮಹಾರಾಜ್, ಕ್ವಿಂಟನ್ ಡಿ ಕಾಕ್ (ವಿಕೆಟ್ ಕೀಪರ್), ಜಾನ್ ಫಾರ್ಟ್ಯೂನ್, ರೀಜಾ ಹೆಂಡ್ರಿಕ್ಸ್, ಹೆನ್ರಿಕ್ ಕ್ಲಾಸೆನ್, ಏಡನ್ ಮರ್ಕರಮ್, ಡೇವಿಡ್ ಮಿಲ್ಲರ್, ಡಬ್ಲ್ಯು ಮಲ್ಡರ್, ಲುಂಗಿ ಗಿಡಿ, ಆ್ಯನ್ರಿಚ್ ನಾರ್ಕಿಯ, ಡ್ವೇನ್ ಪ್ರಿಟೋರಿಯಸ್, ಕಗಿಸೊ ರಬಾಡ, ತಬ್ರೇಜ್ ಶಂಸಿ, ರಸ್ಸಿ ವ್ಯಾನ್ ಡೆರ್ ಡುಸೆನ್.



ತೆಂಬ ಬವುಮ
–ಎಎಫ್‌ಪಿ ಚಿತ್ರ

ಪಂದ್ಯ ಆರಂಭ: ಮಧ್ಯಾಹ್ನ 3.30 (ಭಾರತೀಯ ಕಾಲಮಾನ)
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಟ್ವೆಂಟಿ-20 ವಿಶ್ವಕಪ್ ವೇಳಾಪಟ್ಟಿ

(ಸಮಯ: ಭಾರತೀಯ ಕಾಲಮಾನ)

ದಿನಾಂಕ	ಪಂದ್ಯ	ಸ್ಥಳ	ಆರಂಭ
ಅ.23	ಆಸ್ಟ್ರೇಲಿಯಾ–ದಕ್ಷಿಣ ಆಫ್ರಿಕಾ	ಅಬುಧಾಬಿ	ಮಧ್ಯಾಹ್ನ 3.30
ಅ.23	ಇಂಗ್ಲೆಂಡ್–ವೆಸ್ಟ್ ಇಂಡೀಸ್	ದುಬೈ	ಸಂಜೆ 7.30
ಅ.24	ಬಾಂಗ್ಲಾದೇಶ–ಶ್ರೀಲಂಕಾ	ಶಾರ್ಜಾ	ಮಧ್ಯಾಹ್ನ 3.30
ಅ.24	**ಭಾರತ–ಪಾಕಿಸ್ತಾನ**	**ದುಬೈ**	**ಸಂಜೆ 7.30**
ಅ.25	ಅಫ್ಗಾನಿಸ್ತಾನ–ಸ್ಕಾಟ್ಲೆಂಡ್	ಶಾರ್ಜಾ	ಸಂಜೆ 7.30
ಅ.26	ದಕ್ಷಿಣ ಆಫ್ರಿಕಾ–ವೆಸ್ಟ್ ಇಂಡೀಸ್	ದುಬೈ	ಮಧ್ಯಾಹ್ನ 3.30
ಅ.26	ಪಾಕಿಸ್ತಾನ–ನ್ಯೂಜಿಲೆಂಡ್	ಶಾರ್ಜಾ	ಸಂಜೆ 7.30
ಅ.27	ಬಾಂಗ್ಲಾದೇಶ–ಇಂಗ್ಲೆಂಡ್	ಅಬುಧಾಬಿ	ಮಧ್ಯಾಹ್ನ 3.30
ಅ.27	ಸ್ಕಾಟ್ಲೆಂಡ್–ನಮಿಬಿಯಾ	ಅಬುಧಾಬಿ	ಸಂಜೆ 7.30
ಅ.28	ಆಸ್ಟ್ರೇಲಿಯಾ–ಶ್ರೀಲಂಕಾ	ದುಬೈ	ಮಧ್ಯಾಹ್ನ 3.30
ಅ.29	ಬಾಂಗ್ಲಾದೇಶ–ವೆಸ್ಟ್ ಇಂಡೀಸ್	ಶಾರ್ಜಾ	ಮಧ್ಯಾಹ್ನ 3.30
ಅ.29	ಅಫ್ಗಾನಿಸ್ತಾನ–ಪಾಕಿಸ್ತಾನ	ದುಬೈ	ಸಂಜೆ 7.30
ಅ.30	ದಕ್ಷಿಣ ಆಫ್ರಿಕಾ–ಶ್ರೀಲಂಕಾ	ಶಾರ್ಜಾ	ಮಧ್ಯಾಹ್ನ 3.30
ಅ.30	ಆಸ್ಟ್ರೇಲಿಯಾ–ಇಂಗ್ಲೆಂಡ್	ದುಬೈ	ಸಂಜೆ 7.30
ಅ.31	ಅಫ್ಗಾನಿಸ್ತಾನ– ನಮಿಬಿಯಾ	ಅಬುಧಾಬಿ	ಮಧ್ಯಾಹ್ನ 3.30
ಅ.31	**ಭಾರತ–ನ್ಯೂಜಿಲೆಂಡ್**	**ದುಬೈ**	**ಸಂಜೆ 7.30**
ನ.1	ಇಂಗ್ಲೆಂಡ್–ಶ್ರೀಲಂಕಾ	ಶಾರ್ಜಾ	ಸಂಜೆ 7.30
ನ.2	ಬಾಂಗ್ಲಾದೇಶ––ದಕ್ಷಿಣ ಆಫ್ರಿಕಾ	ಅಬುಧಾಬಿ	ಮಧ್ಯಾಹ್ನ 3.30
ನ.2	ಪಾಕಿಸ್ತಾನ–ನಮಿಬಿಯಾ	ಅಬುಧಾಬಿ	ಸಂಜೆ 7.30
ನ.3	ನ್ಯೂಜಿಲೆಂಡ್–ಸ್ಕಾಟ್ಲೆಂಡ್	ದುಬೈ	ಮಧ್ಯಾಹ್ನ 3.30
ನ.3	**ಅಫ್ಗಾನಿಸ್ತಾನ–ಭಾರತ**	**ಅಬುಧಾಬಿ**	**ಸಂಜೆ 7.30**
ನ.4	ಆಸ್ಟ್ರೇಲಿಯಾ–ಬಾಂಗ್ಲಾದೇಶ	ದುಬೈ	ಮಧ್ಯಾಹ್ನ 3.30
ನ.4	ವೆಸ್ಟ್ ಇಂಡೀಸ್–ಶ್ರೀಲಂಕಾ	ಅಬುಧಾಬಿ	ಸಂಜೆ 7.30
ನ.5	ನ್ಯೂಜಿಲೆಂಡ್–ನಮಿಬಿಯಾ	ಶಾರ್ಜಾ	ಮಧ್ಯಾಹ್ನ 3.30
ನ.5	**ಭಾರತ–ಸ್ಕಾಟ್ಲೆಂಡ್**	**ದುಬೈ**	**ಸಂಜೆ 7.30**
ನ.6	ಆಸ್ಟ್ರೇಲಿಯಾ–ವೆಸ್ಟ್ ಇಂಡೀಸ್	ಅಬುಧಾಬಿ	ಮಧ್ಯಾಹ್ನ 3.30
ನ.6	ಇಂಗ್ಲೆಂಡ್–ದಕ್ಷಿಣ ಆಫ್ರಿಕಾ	ಶಾರ್ಜಾ	ಸಂಜೆ 7.30
ನ.7	ನ್ಯೂಜಿಲೆಂಡ್–ಅಫ್ಗಾನಿಸ್ತಾನ	ಅಬುಧಾಬಿ	ಮಧ್ಯಾಹ್ನ 3.30
ನ.7	ಪಾಕಿಸ್ತಾನ–ಸ್ಕಾಟ್ಲೆಂಡ್	ಶಾರ್ಜಾ	ಸಂಜೆ 7.30
ನ.8	**ಭಾರತ–ನಮಿಬಿಯಾ**	**ದುಬೈ**	**ಸಂಜೆ 7.30**
ನ.10	ಮೊದಲ ಸೆಮಿಫೈನಲ್	ಅಬುಧಾಬಿ	ಸಂಜೆ 7.30
ನ.11	ಎರಡನೇ ಸೆಮಿಫೈನಲ್	ದುಬೈ	ಸಂಜೆ 7.30


ಈ ವರೆಗಿನ ವಿಶ್ವಕಪ್ ಟೂರ್ನಿಗಳ ಪ್ರಮುಖ ಅಂಶಗಳು



2007
ವಿಜೇತ ತಂಡ: **ಭಾರತ**
(ನಾಯಕ: **ಮಹೇಂದ್ರ ಸಿಂಗ್ ಧೋನಿ**)
ರನ್ನರ್ಸ್ ಅಪ್: **ಪಾಕಿಸ್ತಾನ**
ಗರಿಷ್ಠ ರನ್: **ಮ್ಯಾಥ್ಯೂ ಹೇಡನ್** (265, ಆಸ್ಟ್ರೇಲಿಯಾ)
ಗರಿಷ್ಠ ವಿಕೆಟ್: **ಉಮರ್ ಗುಲ್** (13, ಪಾಕಿಸ್ತಾನ)
ಗರಿಷ್ಠ ಸಿಕ್ಸರ್: **ಕ್ರೆಗ್ ಮೆಕ್‌ಮಿಲನ್** (13, ನ್ಯೂಜಿಲೆಂಡ್)
ಸರಣಿ ಶ್ರೇಷ್ಠ ಆಟಗಾರ: **ಶಾಹೀದ್ ಆಫ್ರಿದಿ** (ಪಾಕಿಸ್ತಾನ)
ಆತಿಥ್ಯ: **ದಕ್ಷಿಣ ಆಫ್ರಿಕಾ**



2009
ವಿಜೇತ ತಂಡ: **ಪಾಕಿಸ್ತಾನ**
(ನಾಯಕ: **ಯೂನಿಸ್ ಖಾನ್**)
ರನ್ನರ್ಸ್ ಅಪ್: **ಶ್ರೀಲಂಕಾ**
ಗರಿಷ್ಠ ರನ್: **ತಿಲಕರತ್ನೆ ದಿಲ್ಶಾನ್** (317, ಶ್ರೀಲಂಕಾ)
ಗರಿಷ್ಠ ವಿಕೆಟ್: **ಉಮರ್ ಗುಲ್** (13, ಪಾಕಿಸ್ತಾನ)
ಗರಿಷ್ಠ ಸಿಕ್ಸರ್: **ಯುವರಾಜ್ ಸಿಂಗ್** (9, ಭಾರತ)
ಸರಣಿ ಶ್ರೇಷ್ಠ ಆಟಗಾರ: **ತಿಲಕರತ್ನೆ ದಿಲ್ಶಾನ್**
ಆತಿಥ್ಯ: **ಇಂಗ್ಲೆಂಡ್**



2010
ವಿಜೇತ ತಂಡ: ಇಂಗ್ಲೆಂಡ್
(ನಾಯಕ: **ಪಾಲ್ ಕಾಲಿಂಗ್‌ವುಡ್**)
ರನ್ನರ್ಸ್ ಅಪ್: **ಆಸ್ಟ್ರೇಲಿಯಾ**
ಗರಿಷ್ಠ ರನ್: **ಮಹೇಲ ಜಯವರ್ಧನೆ** (302, ಶ್ರೀಲಂಕಾ)
ಗರಿಷ್ಠ ವಿಕೆಟ್: **ಡರ್ಕ್ ನ್ಯಾನ್ಸ್** (14, ಆಸ್ಟ್ರೇಲಿಯಾ)
ಗರಿಷ್ಠ ಸಿಕ್ಸರ್: **ಕ್ಯಾಮರೂನ್ ವೈಟ್** (12, ಆಸ್ಟ್ರೇಲಿಯಾ)
ಸರಣಿ ಶ್ರೇಷ್ಠ ಆಟಗಾರ: **ಕೆವಿನ್ ಪೀಟರ್‌ಸನ್** (ಇಂಗ್ಲೆಂಡ್)
ಆತಿಥ್ಯ: **ವೆಸ್ಟ್ ಇಂಡೀಸ್**



2012
ವಿಜೇತ ತಂಡ: ವೆಸ್ಟ್ ಇಂಡೀಸ್ (ನಾಯಕ: **ಡರೆನ್ ಸಮಿ**)
ರನ್ನರ್ಸ್ ಅಪ್: **ಶ್ರೀಲಂಕಾ**
ಗರಿಷ್ಠ ರನ್: **ಶೇನ್ ವಾಟ್ಸನ್** (249, ಆಸ್ಟ್ರೇಲಿಯಾ)
ಗರಿಷ್ಠ ವಿಕೆಟ್: **ಅಜಂತಾ ಮೆಂಡಿಸ್** (15, ಶ್ರೀಲಂಕಾ)
ಗರಿಷ್ಠ ಸಿಕ್ಸರ್: **ಕ್ರಿಸ್ ಗೇಲ್** (16, ವೆಸ್ಟ್ ಇಂಡೀಸ್)
ಸರಣಿ ಶ್ರೇಷ್ಠ ಆಟಗಾರ: **ಶೇನ್ ವಾಟ್ಸನ್**
ಆತಿಥ್ಯ: **ಶ್ರೀಲಂಕಾ**



2014
ವಿಜೇತ ತಂಡ: **ಶ್ರೀಲಂಕಾ** (ನಾಯಕ: **ಲಸಿತ್ ಮಾಲಿಂಗ**)
ರನ್ನರ್ಸ್ ಅಪ್: **ಭಾರತ**
ಗರಿಷ್ಠ ರನ್: **ವಿರಾಟ್ ಕೊಹ್ಲಿ** (319, ಭಾರತ)
ಗರಿಷ್ಠ ವಿಕೆಟ್: **ಇಮ್ರಾನ್ ತಾಹಿರ್** (12 ದಕ್ಷಿಣ ಆಫ್ರಿಕಾ), **ಅಹ್ಸನ್ ಮಲಿಕ್** (12, ನೆದರ್ಲೆಂಡ್ಸ್)
ಗರಿಷ್ಠ ಸಿಕ್ಸರ್: **ಸ್ಟಿಫನಸ್ ಮೇಬರ್ಗ್** (13, ನೆದರ್ಲೆಂಡ್ಸ್)
ಸರಣಿ ಶ್ರೇಷ್ಠ ಆಟಗಾರ: **ವಿರಾಟ್ ಕೊಹ್ಲಿ** (ಭಾರತ)
ಆತಿಥ್ಯ: **ಬಾಂಗ್ಲಾದೇಶ**



2016
ವಿಜೇತ ತಂಡ: **ವೆಸ್ಟ್ ಇಂಡೀಸ್** (ನಾಯಕ: **ಡೆರೆನ್ ಸಮಿ**)
ರನ್ನರ್ಸ್ ಅಪ್: **ಇಂಗ್ಲೆಂಡ್**
ಗರಿಷ್ಠ ರನ್: **ತಮೀಮ್ ಇಕ್ಬಾಲ್** (295, ಬಾಂಗ್ಲಾದೇಶ)
ಗರಿಷ್ಠ ವಿಕೆಟ್: **ಮೊಹಮ್ಮದ್ ನಬಿ** (12 ಅಫ್ಗಾನಿಸ್ತಾನ)
ಗರಿಷ್ಠ ಸಿಕ್ಸರ್: **ತಮೀಮ್ ಇಕ್ಬಾಲ್** (14, ಬಾಂಗ್ಲಾದೇಶ)
ಸರಣಿ ಶ್ರೇಷ್ಠ ಆಟಗಾರ: **ವಿರಾಟ್ ಕೊಹ್ಲಿ** (ಭಾರತ)
ಆತಿಥ್ಯ: **ಭಾರತ**

ಪುಣೆ ರೇಸ್

ಐರನ್ ಏಜ್ ಗೆಲ್ಲುವ ನಿರೀಕ್ಷೆ

ಅಕ್ಕಾಸಾಹೇಬ್ ಮಹಾರಾಜ್ ಟ್ರೋಫಿ ಶನಿವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಐರನ್ ಏಜ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.00 ಗಂಟೆಗೆ ಆರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಮಾಲ್‌ಬೋರೊ ಮ್ಯಾನ್ 4, ಮೆಮರಬಲ್ ಮೊಮೆಂಟ್ಸ್ 1, ಐರಿಶ್ ಐಸ್ 6
2ನೇ ರೇಸ್: ಲಿಟ್ 13, ಕಿನ್ನರ 11, ಎಂಪರರ್ 2
3ನೇ ರೇಸ್: ಅರೇಬಿಯನ್ ಫಿನಿಕ್ಸ್ 3, ಬೋಲ್ಡ್ ಲೆಜೆಂಡ್ 1, ಕ್ವೀನ್ ಓ ವಾರ್ 2
4ನೇ ರೇಸ್: ಸಕ್ಸೆಸರ್ 6, ಟಿಗ್ರಿಯೊ 4, ಜೈಂಟ್ ಸ್ಟಾರ್ 2
5ನೇ ರೇಸ್: ಪ್ರೈಡ್ಸ್ ಏಂಜೆಲ್ 2, ಆನ್ ವಾ ಡ್ಯಾನ್ಸರ್ 1, ಟೈಮ್‌ಲೆಸ್ ಡೀಡ್ಸ್ 3
6ನೇ ರೇಸ್: ಇಮ್ಮಿಸ್ಯೂರಬಲ್ 1, ಮಲ್ಟಿಸ್ಟಾರರ್ 6, ನ್ಯುಮೆರೊ ಉನೊ 5
7ನೇ ರೇಸ್: ಐರನ್ ಏಜ್ 1, ಸ್ಮ್ಯಾಶಿಂಗ್ ಬ್ಲೂ 4, ಹಿಡನ್ ಗೋಲ್ಡ್ 5
8ನೇ ರೇಸ್: ಅಗಸ್ಟಿನೊ 1, ಎಮೆರಾಲ್ಡ್ 8, ಗ್ಯಾಲಪಿಂಗ್ ಗ್ಲೋರಿ 10
9ನೇ ರೇಸ್: ಎನಿಗ್ಮ 1, ವೇಇನ್ 2, ಎಲ್ ಕ್ಯಾಪಿಟನ್ 4

ಉತ್ತಮ ಬೆಟ್: ಎನಿಗ್ಮ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	1,2,3	4,5,6	7,8,9

ರಾಷ್ಟ್ರೀಯ ಜೂನಿಯರ್, ಸಬ್‌ಜೂನಿಯರ್ ಈಜು ಚಾಂಪಿಯನ್‌ಷಿಪ್

ದಾಖಲೆ ಬರೆದ ಹಷಿಕಾ ರಾಮಚಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಹಷಿಕಾ ರಾಮಚಂದ್ರ ಈಜುಕೊಳದಲ್ಲಿ ಮತ್ತೊಮ್ಮೆ ಮಿನುಗಿದರು. ಬಾಲಕಿಯರ 100 ಮೀ. ಬಟರ್‌ಫ್ಲೈ ವಿಭಾಗದಲ್ಲಿ ನೂತನ ದಾಖಲೆ ಬರೆದರು.

ಇಲ್ಲಿನ ಬಸವನಗುಡಿ ಈಜು ಕೇಂದ್ರದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಜೂನಿಯರ್ ಮತ್ತು ಸಬ್‌ಜೂನಿಯರ್ ಚಾಂಪಿಯನ್‌ಷಿಪ್‌ನ ನಾಲ್ಕನೇ ದಿನವಾದ ಶುಕ್ರವಾರ ಬಾಲಕಿಯರ ಎರಡನೇ ಗುಂಪಿನ ವಿಭಾಗದಲ್ಲಿ ಅವರು 1 ನಿಮಿಷ 5.51 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಇದರೊಂದಿಗೆ 2016ರಲ್ಲಿ ಕರ್ನಾಟಕದ ಮಯೂರಿ ಲಿಂಗರಾಜ್ (1:05.98)ಬೆಂಗಳೂರಿನಲ್ಲಿ ಸ್ಥಾಪಿಸಿದ್ದ ದಾಖಲೆಯನ್ನು ಮೀರಿದರು.

ಬಂಗಾಳದ ಸ್ವದೇಶ್ ಮಂಡಲ್ ಕೂಡ ಎರಡು ನೂತನ ದಾಖಲೆ ನಿರ್ಮಿಸಿದರು.



ಹಷಿಕಾ ರಾಮಚಂದ್ರ– ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

ನಾಲ್ಕನೇ ದಿನದ ಫಲಿತಾಂಶಗಳು: ಬಾಲಕಿಯರು: 1500 ಮೀ. ಫ್ರೀಸ್ಟೈಲ್: ಎರಡನೇ ಗುಂಪು: ಶಿರಿನ್ (ಕರ್ನಾಟಕ)–1, ಕಾಲ:18:45.01, ಅನನ್ಯಾ ರಾವತ್ (ದೆಹಲಿ)–2, ಅಂಬರ್ ಜೆ. ಸಿಂಗ್ (ಕರ್ನಾಟಕ)–3. 800 ಮೀ. ಫ್ರೀಸ್ಟೈಲ್: ಒಂದನೇ ಗುಂಪು: ವೃತ್ತಿ ಅಗರವಾಲ್ (ತೆಲಂಗಾಣ)–1, ಕಾಲ: 9:22.16, ಅನ್ಯಾ ವಾಲ (ಮಹಾರಾಷ್ಟ್ರ)–2, ಅಶ್ಮಿತಾ ಚಂದ್ರ (ಕರ್ನಾಟಕ)–3. 400 ಮೀ. ಮೆಡ್ಲೆ: ಎರಡನೇ ಗುಂಪು: ಹಷಿಕಾ ರಾಮಚಂದ್ರ (ಕರ್ನಾಟಕ)–1, ಕಾಲ: 5:27.86, ರಿತಿಕಾ ಬಿ.ಎಂ. (ಕರ್ನಾಟಕ)–2, ಶ್ರೀ ನಿತ್ಯ ಸಾಗಿ (ತೆಲಂಗಾಣ)–3. 50 ಮೀ. ಬಟರ್‌ಫ್ಲೈ: ಮೂರನೇ ಗುಂಪು: ತನಿಶಾ ಗುಪ್ತಾ (ಕರ್ನಾಟಕ)–1, ಕಾಲ: 30.57, ಅದಿತಿ ಹೆಗ್ಡೆ (ಮಹಾರಾಷ್ಟ್ರ)–2, ಸಂಜನಾ ಪಿ.ವಿ. (ಕರ್ನಾಟಕ)–3. ನಾಲ್ಕನೇ ಗುಂಪು: ಅಲಿಸ್ಸಾ ಸ್ವಿಡಲ್ ರೆಗೊ (ಕರ್ನಾಟಕ)–1, ಕಾಲ: 34.16, ಜೋಯಾ ಜನ್ನತ್ (ಬಂಗಾಳ)–2, ಅನ್ವೇಷಾ ಖಾನಿಕರ್ (ಅಸ್ಸಾಂ)–3. ಐದನೇ ಗುಂಪು: ಲಾಸ್ಯ ಶ್ರೀ ಕೆ. (ಆಂಧ್ರಪ್ರದೇಶ) –1,ಕಾಲ: 35.76, ಆಡ್ರಿಜಾ ರಾಣಿ ಚೇಟಿಯಾ (ಅಸ್ಸಾಂ)–2, ಅಶ್ವಿತಾ ವಿ. (ತಮಿಳುನಾಡು)–3. 50 ಮೀ. ಫ್ರೀಸ್ಟೈಲ್: ಒಂದನೇ ಗುಂಪು: ಜಾಹ್ನವಿ ಚೌಧರಿ (ಬಂಗಾಳ)–1, ಕಾಲ: 27.48, ಲೇತಿಶಾ ಮಂದಣ್ಣ (ಕರ್ನಾಟಕ)–2, ದಿಶಾ ಭಂಡಾರಿ (ಉತ್ತರಪ್ರದೇಶ)–3. ಎರಡನೇ ಗುಂಪು: ರಿಧಿಮಾ ವೀರೇಂದ್ರಕುಮಾರ್ (ಕರ್ನಾಟಕ)–1, ಕಾಲ: 27.88, ಶಾಲಿನಿ ದೀಕ್ಷಿತ್ (ಕರ್ನಾಟಕ)–2, ಜಾಹ್ನವಿ ಕಶ್ಯಪ್ (ಅಸ್ಸಾಂ)–3. 100 ಮೀ. ಬ್ಯಾಕ್‌ಸ್ಟ್ರೋಕ್: ಒಂದನೇ ಗುಂಪು: ನೀನಾ ವೆಂಕಟೇಶ್ (ಕರ್ನಾಟಕ)–1, ಕಾಲ: 1:06.68, ಸಂಜನಾ ಪ್ರಭುಗಾಂವಕರ್ (ಗೋವಾ)–2, ಪಲಕ್ ಧಾಮಿ (ಮಹಾರಾಷ್ಟ್ರ)–3. ಮೂರನೇ ಗುಂಪು: ಧಿನಿಧಿ ದೇಶಿಂಗು (ಕರ್ನಾಟಕ)–1 ಕಾಲ: 1:11.23, ಪ್ರಮಿತಿ ಜ್ಞಾನಶೇಖರನ್ (ತಮಿಳುನಾಡು)–2, ನೈಶಾ (ಕರ್ನಾಟಕ)–3. ನಾಲ್ಕನೇ ಗುಂಪು: ಅನಿಕಾ ದೆಬೋರಾ (ತೆಲಂಗಾಣ)–1, ಕಾಲ: 1:21.67, ಅನ್ವಿ ದೇಶ್ವಾಲ್ (ಮಹಾರಾಷ್ಟ್ರ)–2, ಸಾನ್ವಿ ದೇಶ್ವಾಲ್ (ಮಹಾರಾಷ್ಟ್ರ)–3. ಐದನೇ ಗುಂಪು: ಶ್ರೇಯಾ ಬಿನಿಲ್ (ಕೇರಳ)–1, ಕಾಲ: 1:26.11, ಅನಂಗ್‌ಶಾ ಶರ್ಮಾ (ಅಸ್ಸಾಂ)–2, ಔನಾ ಪವನ್ ಆಳ್ವಾ (ಕರ್ನಾಟಕ)–3. 100 ಮೀ. ಬಟರ್‌ಫ್ಲೈ: ಎರಡನೇ ಗುಂಪು: ಹಷಿಕಾ ರಾಮಚಂದ್ರ (ಕರ್ನಾಟಕ)–1, ಕಾಲ: 1:05.51 (ನೂತನ ದಾಖಲೆ), ರಿಷಿಕಾ ಯು. ಮಂಗಳೆ (ಕರ್ನಾಟಕ)–2, ಪ್ರತಿಷ್ಠಾ ದಾಂಗಿ (ಮಹಾರಾಷ್ಟ್ರ)–3 (1:05.98, ಈ ಹಿಂದಿನ ದಾಖಲೆಯನ್ನು ಕರ್ನಾಟಕದ ಮಯೂರಿ ಲಿಂಗರಾಜ್ 2016ರಲ್ಲಿ ನಿರ್ಮಿಸಿದ್ದರು). 200 ಮೀ. ಬ್ರೆಸ್ಟ್‌ಸ್ಟ್ರೋಕ್: ಒಂದನೇ ಗುಂಪು: ಸಾನ್ವಿ ರಾವ್ (ಕರ್ನಾಟಕ)–1, ಕಾಲ:2:47.70, ಎಸ್. ಲಾಕ್ಷ್ಯಾ (ಕರ್ನಾಟಕ)–2, ಯಶಸ್ವಿ ಕರಾತ್ (ಮಹಾರಾಷ್ಟ್ರ)–3.

ವಾಟರ್‌ಪೋಲೊ ಫೈನಲ್‌ಗೆ ಕರ್ನಾಟಕ ಬಾಲಕಿಯರು: ನೆಟ್ಟಕಲ್ಲಪ್ಪ ಈಜು ಕೇಂದ್ರದಲ್ಲಿ ನಡೆಯುತ್ತಿರುವ ವಾಟರ್‌ಪೋಲೊ ಸ್ಪರ್ಧೆಯ ಜೂನಿಯರ್ ಬಾಲಕಿಯರ ವಿಭಾಗದಲ್ಲಿ ಕರ್ನಾಟಕ ಹಾಗೂ ಕೇರಳ ತಂಡಗಳು ಫೈನಲ್ ತಲುಪಿದವು. ಸೆಮಿಫೈನಲ್‌ಗಳಲ್ಲಿ ಕರ್ನಾಟಕ ತಂಡವು 12–10ರಿಂದ ಮಹಾರಾಷ್ಟ್ರ ತಂಡವನ್ನು ಸೋಲಿಸಿದರೆ, ಕೇರಳ ತಂಡವು 6–2ರಿಂದ ಬಂಗಾಳದ ವಿರುದ್ಧ ಗೆದ್ದಿತು.

ರಾಜ್ಯದ ಬಾಲಕರ ತಂಡವು ನಾಲ್ಕನೇ ಸ್ಥಾನ ಗಳಿಸಿತು.

ಬಾಲಕರ ವಿಭಾಗದ ಫಲಿತಾಂಶಗಳು

1500 ಮೀ. ಫ್ರೀಸ್ಟೈಲ್: ಒಂದನೇ ಗುಂಪು: ಪವನ್ ಧನಂಜಯ್ (ಕರ್ನಾಟಕ)–1, ಕಾಲ: 17:12.05, ಕವೀನ್ ರಾಜ್ ವಿ. (ತಮಿಳುನಾಡು)–2, ಅಲಸ್ಟೇರ್ ಸ್ಯಾಮ್ಯುಯೆಲ್ ರೆಗೊ (ಕರ್ನಾಟಕ)–3. 400 ಮೀ. ಮೆಡ್ಲೆ: ಸ್ವದೇಶ್ ಮಂಡಲ್ (ಬಂಗಾಳ)–1, ಕಾಲ: 4:34.15 (ನೂತನ ದಾಖಲೆ), ಶೋನ್ ಗಂಗೂಲಿ (ಕರ್ನಾಟಕ)–2, ಕಲ್ಪ್ ಎಸ್. ಬೊಹ್ರಾ (ಕರ್ನಾಟಕ)–3. (4:34.76; ಈ ಹಿಂದಿನ ದಾಖಲೆಯನ್ನು 2018ರಲ್ಲಿ) ಅದ್ವೈತ್ ಪಾಜ್ ನಿರ್ಮಿಸಿದ್ದರು). 50 ಮೀ. ಬಟರ್‌ಫ್ಲೈ: ಮೂರನೇ ಗುಂಪು: ಅಕ್ಷಜ್ ಠಾಕೂರಿಯಾ (ಕರ್ನಾಟಕ)–1, ಕಾಲ: 30.56, ನಿತೀಶ್ ಎಂ.ಎಸ್. (ತಮಿಳುನಾಡು)–2, ಸೈರಾಜ್ ಲಾಸ್ಕರ್ (ಬಂಗಾಳ)–3. ನಾಲ್ಕನೇ ಗುಂಪು: ಶರಣ್ ಶ್ರೀಧರ್ (ಕರ್ನಾಟಕ)–1, ಕಾಲ: 32.86, ಲೈತೊಂಜಮ್ ಲಾಂಚೆಂಬಾ (ಮಣಿಪುರ)–2, ತೋಶಾಲ್ ಬಿರುದ್ (ಮಹಾರಾಷ್ಟ್ರ)–3. ಐದನೇ ಗುಂಪು: ಅಜೀತ್ ಯಾದವ್ (ಉತ್ತರಪ್ರದೇಶ)–1, ಕಾಲ: 34.20, ಅಬ್ದುಲ್ ಹಫೀಜ್ ಎಂ. (ತಮಿಳುನಾಡು)–2, ಮೋನಿಶ್ ನಾಯ್ಡು ಪಿ. (ತಮಿಳುನಾಡು)–3. 50 ಮೀ. ಫ್ರೀಸ್ಟೈಲ್: ಒಂದನೇ ಗುಂಪು: ಸಂಭವ್ ಆರ್. (ಕರ್ನಾಟಕ)–1, ಕಾಲ: 23.57, ವೀರ್ ಖಾತ್ಕರ್ (ಹರಿಯಾಣ)–2, ಆರ್ಯನ್ ವರ್ಣೇಕರ್ (ಮಹಾರಾಷ್ಟ್ರ)–3. ಎರಡನೇ ಗುಂಪು: ಸರುಂಗಬಮ್ ಅಥೋಬಾ ಮೀಟಿ (ಮಣಿಪುರ)–1, ಕಾಲ: 25.99, ಹೀರ್ ಪಿತ್ರೊಡಾ (ಗುಜರಾತ್)–2, ಪ್ರಾಂಜಲ್ ಪಾಂಡೆ (ಮಧ್ಯಪ್ರದೇಶ)–3. 100 ಮೀ. ಬ್ಯಾಕ್‌ಸ್ಟ್ರೋಕ್: ಒಂದನೇ ಗುಂಪು: ಉತ್ಕರ್ಷ್ ಪಾಟೀಲ್ (ಕರ್ನಾಟಕ)–1, ಕಾಲ: 58.93, ನಿತಿಕ್ ಎಚ್. (ತಮಿಳುನಾಡು)–2, ಮಧುರ್ ಅಗರವಾಲ್ (ದೆಹಲಿ)–3. ಮೂರನೇ ಗುಂಪು: ಯಶಸ್ವಿ ನ್ಯೂನ್ (ತೆಲಂಗಾಣ)–1, ಕಾಲ: 1:15.37, ಒಜಸ್ ಸುಂದ್ (ಪುಣೆ)–2, ಅರ್ನವ್ ಕಾಡು (ಮಹಾರಾಷ್ಟ್ರ)–3. ನಾಲ್ಕನೇ ಗುಂಪು: ಇಶಾನ್ ಘೋಷ್ (ಬಂಗಾಳ)–1, ಕಾಲ: 1:16.11, ಶರಣ್ ಶ್ರೀಧರ್ (ಕರ್ನಾಟಕ)–2, ವಿಹಾನ್ ಚತುರ್ವೇದಿ (ಮಹಾರಾಷ್ಟ್ರ)–3. ಐದನೇ ಗುಂಪು: ಅರ್ಜುನ್ ರಾಘವನ್ (ಕರ್ನಾಟಕ)–1, ಕಾಲ: 1:29.89, ವರದ್ ಬೋರ್ (ಮಹಾರಾಷ್ಟ್ರ)–2, ಅದ್ವೈತ್ ದಳವಿ (ಕರ್ನಾಟಕ)–3. 100 ಮೀ. ಬಟರ್‌ಫ್ಲೈ: ಎರಡನೇ ಗುಂಪು: ಆದಿತ್ಯ ಥಾಪಾ (ಎಸ್‌ಎಸ್‌ಬಿಸಿ)–1, ಕಾಲ: 1:01.48, ಉತ್ಕರ್ಷ್ ಗೋರ್ (ಮಹಾರಾಷ್ಟ್ರ)–1, ದೇವಗಣೇಶ್ ಎನ್ (ಆಂಧ್ರಪ್ರದೇಶ)–3. 200 ಮೀ. ಬ್ರೆಸ್ಟ್‌ಸ್ಟ್ರೋಕ್: ಒಂದನೇ ಗುಂಪು: ಸ್ವದೇಶ್ ಮಂಡಲ್ (ಬಂಗಾಳ), ಕಾಲ: 2:22.29 (ನೂತನ ದಾಖಲೆ), ವಿದಿತ್ ಶಂಕರ್ (ಕರ್ನಾಟಕ)–2, ಭಾರ್ಗವ್ ಫುಕಾನ್ (ಅಸ್ಸಾಂ)–3 (2:22.44: ಈ ಹಿಂದಿನ ದಾಖಲೆಯನ್ನು 2017ರಲ್ಲಿ ತಮಿಳುನಾಡಿನ ಧನುಷ್ ಎಸ್. ನಿರ್ಮಿಸಿದ್ದರು).



ಸ್ವದೇಶ್ ಮೊಂಡಲ್– ಪ್ರಜಾವಾಣಿ ಚಿತ್ರ

ರಫೀಕ್‌ಗೆ ಚಿನ್ನ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಧಾರವಾಡದವರಾದ ಭಾರತೀಯ ಸೇನೆಯ ಕುಸ್ತಿಪಟು ರಫೀಕ್ ಹೊಳಿ ಅವರು ದೆಹಲಿಯಲ್ಲಿ ನಡೆದ ಇಂಟರ್ ಸರ್ವೀಸಸ್ ಕುಸ್ತಿ ಚಾಂಪಿಯನ್‌ಷಿಪ್‌ನ 77 ಕೆ.ಜಿ. ಗ್ರೀಕೊ ರೋಮನ್ ವಿಭಾಗದಲ್ಲಿ ಚಿನ್ನದ ಪದಕವನ್ನು ಗೆದ್ದುಕೊಂಡಿದ್ದಾರೆ.

ಫೈನಲ್ ಪಂದ್ಯದಲ್ಲಿ ರಫೀಕ್ ಹೊಳಿ ಅವರು ಮಹಾರಾಷ್ಟ್ರದ ಶಿವಾಜಿ ಪಾಟೀಲ್ ವಿರುದ್ಧ 8–0ರಲ್ಲಿ ಗೆಲುವು ಸಾಧಿಸಿದರು. ಇದಕ್ಕೂ ಮೊದಲು ನಡೆದ ಮೊದಲ ಪಂದ್ಯದಲ್ಲಿ ರಫೀಕ್ ಅವರು 8–2ರಲ್ಲಿ ಹರಿಯಾಣದ ಸೋನು ಅವರನ್ನು ಮಣಿಸಿದ್ದರು. ಇನ್ನೊಂದು ಪಂದ್ಯದಲ್ಲಿ ದೆಹಲಿಯ ಮಜಿತ್ ವಿರುದ್ಧ 5–3ರಲ್ಲಿ ಗೆಲುವು ಸಾಧಿಸಿದ್ದರು.

ಭೋಪಾಲ್‌ನ 3 ಇಎಂಇ ರೆಜಿಮೆಂಟ್‌ನಲ್ಲಿ ಹವಾಲ್ದಾರ್ ಆಗಿರುವ ರಫೀಕ್ ಅವರು ಪುಣೆಯ ಆರ್ಮಿ ಸ್ಪೋರ್ಟ್ಸ್ ಇನ್‌ಸ್ಟಿಟ್ಯೂಟ್‌ನಲ್ಲಿ ಕುಸ್ತಿ ಅಭ್ಯಾಸ ಮಾಡುತ್ತಿದ್ದಾರೆ. ಮುಂದಿನ ವರ್ಷ ಇರಾನ್‌ನಲ್ಲಿ ನಡೆಯಲಿರುವ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ಗೆ ತಾಲೀಮು ನಡೆಸುತ್ತಿದ್ದಾರೆ.

ರಫೀಕ್ ಅವರು ಈ ಹಿಂದೆ ದಾವಣಗೆರೆಯ ಕ್ರೀಡಾ ವಸತಿನಿಲಯದಲ್ಲಿದ್ದುಕೊಂಡು ಅಂತರರಾಷ್ಟ್ರೀಯ ತರಬೇತುದಾರ ಶಿವಾನಂದ ಆರ್. ಅವರ ಬಳಿ ಕುಸ್ತಿ ತರಬೇತಿ ಪಡೆದುಕೊಂಡಿದ್ದರು.

ಡೆನ್ಮಾರ್ಕ್ ಓಪನ್: ಸಿಂಧು, ಲಕ್ಷ್ಯ ಸೇನ್‌ಗೆ ಸೋಲು

ಸಮೀರ್ ವರ್ಮಾಗೆ ನಿರಾಸೆ

ಒಡೆನ್ಸ್, ಡೆನ್ಮಾರ್ಕ್ (ಪಿಟಿಐ): ವಿಶ್ವದ ಮೂರನೇ ಕ್ರಮಾಂಕದ ಆಟಗಾರ ಆ್ಯಂಡರ್ಸ್ ಆ್ಯಂಟನ್ಸನ್‌ಗೆ ಗುರುವಾರ ರಾತ್ರಿ ಆಘಾತ ನೀಡಿ ಗಮನ ಸೆಳೆದ ಭಾರತದ ಸಮೀರ್ ವರ್ಮಾ ಎಂಟರ ಘಟ್ಟದ ಪಂದ್ಯದಲ್ಲಿ ಮುಗ್ಗರಿಸಿದರು.

ಶುಕ್ರವಾರ ಡೆನ್ಮಾರ್ಕ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಇಂಡೊನೇಷ್ಯಾದ ಟಾಮಿ ಸುಗರ್ತೊ ಎದುರು ಮೊದಲ ಗೇಮ್‌ನಲ್ಲಿ 17–21ರ ಹಿನ್ನಡೆಯಲ್ಲಿದ್ದಾಗ ಸಮೀರ್ ವರ್ಮಾ ನಿವೃತ್ತರಾಗಿ ಹೊರನಡೆದರು.ಪಿ.ವಿ.ಸಿಂಧು ಹಾಗೂ ಲಕ್ಷ್ಯ ಸೇನ್ ಸೋತು ಹೊರಬಿದ್ದರು.

ವಿಶ್ವ ಕ್ರಮಾಂಕದಲ್ಲಿ 28ನೇ ಸ್ಥಾನದ ಲ್ಲಿರುವ ಸಮೀರ್, 2018ರಲ್ಲಿ ವಿಶ್ವ ಟೂರ್ ಫೈನಲ್ಸ್ ಪ್ರವೇಶಿಸಿದ್ದರು. ಗುರುವಾರ ನಡೆದ ಪುರುಷರ ಸಿಂಗಲ್ಸ್ ಪ್ರೀಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಅವರು 21-14, 21-18ರಿಂದ ಡೆನ್ಮಾರ್ಕ್‌ನ ಆ್ಯಂಟನ್ಸನ್‌ಗೆ ಸೋಲುಣಿಸಿದರು. 50 ನಿಮಿಷಗಳಲ್ಲಿ ಅವರಿಗೆ ಗೆಲುವು ಒಲಿಯಿತು.

ಭರವಸೆ ಮೂಡಿಸಿದ್ದ ಲಕ್ಷ್ಯ ಸೇನ್ ಎಡವಿದರು. ಎರಡನೇ ಸುತ್ತಿನ ಪಂದ್ಯದಲ್ಲಿ ಅವರ ವಿರುದ್ಧ ಕಣಕ್ಕಿಳಿದಿದ್ದ ಒಲಿಂಪಿಕ್ ಚಾಂಪಿಯನ್ ವಿಕ್ಟರ್ ಅಕ್ಸೆಲ್ಸೆನ್ 21-15 21-7ರಿಂದ ಜಯದ ನಗೆ ಬೀರಿದರು.



ಸಮೀರ್ ವರ್ಮಾ– ಪಿಟಿಐ ಚಿತ್ರ

ಸಿಂಧು ಸವಾಲು ಅಂತ್ಯ: ಟೋಕಿಯೊ ಒಲಿಂಪಿಕ್ಸ್ ಬಳಿಕ ದೀರ್ಘವಿರಾಮ ಪಡೆದು ಮೊದಲ ಬಾರಿ ಕಣಕ್ಕಿಳಿದಿದ್ದ ಪಿ.ವಿ.ಸಿಂಧು ಕ್ವಾರ್ಟರ್‌ಫೈನಲ್‌ನಲ್ಲಿ ಮುಗ್ಗರಿಸಿದರು. ಮಹಿಳಾ ಸಿಂಗಲ್ಸ್ ಹಣಾಹಣಿಯಲ್ಲಿ ಅವರು 11–21, 12–21ರಿಂದ ವಿಶ್ವ ಕ್ರಮಾಂಕದಲ್ಲಿ ಎಂಟನೇ ಸ್ಥಾನದಲ್ಲಿರುವ, ಕೊರಿಯಾದ ಆ್ಯನ್ ಸೆಯಂಗ್ ಎದುರು ಸೋತರು. ಟೋಕಿಯೊ ಕೂಟದಲ್ಲಿ ಕಂಚು ಗೆದ್ದಿದ್ದ ಸಿಂಧು ಅವರಿಗೆ ಕೇವಲ 36 ನಿಮಿಷಗಳಲ್ಲಿ ಎದುರಾಳಿ ಸೆಯಂಗ್ ಸೋಲುಣಿಸಿದರು.

ಟಿಟಿ: ಯಶಸ್ವಿನಿಗೆ ಬೆಳ್ಳಿ ಪದಕ

ಬೆಂಗಳೂರು: ಕರ್ನಾಟಕದ ಯಶಸ್ವಿನಿ ಘೋರ್ಪಡೆ ಅವರು ಉತ್ತರ ವಲಯ ರಾಷ್ಟ್ರೀಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದಾರೆ.



ಯಶಸ್ವಿನಿ

ಹರಿಯಾಣದ ಪಂಚಕುಲದಲ್ಲಿ ಶುಕ್ರವಾರ ಕೊನೆಗೊಂಡ ಟೂರ್ನಿಯ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಅವರು 11-5,9-11,8-11,11-6,9-11,11-13ರಿಂದ ಹರಿಯಾಣದ ಸುಹಾನಾ ಸೈನಿ ಎದುರು ಸೋತರು. ಆರಂಭದಲ್ಲಿ ದೊರೆತ ಮುನ್ನಡೆಯನ್ನು ಉಳಿಸಿಕೊಳ್ಳಲಾಗದೆ ಅವರು ಬೆಳ್ಳಿ ಪದಕಕ್ಕೆ ಸಮಾಧಾನಪಡಬೇಕಾಯಿತು.

ನಾಲ್ಕರ ಘಟ್ಟದ ಪಂದ್ಯದಲ್ಲಿ ಯಶಸ್ವಿನಿ 11-5,11-7,11-8,11-6ರಿಂದ ದೆಹಲಿಯ ವಂಶಿಕಾ ಭಾರ್ಗವ ಎದುರು ಜಯಿಸಿದ್ದರು.

ಸೊಂಪಾದ ಕೂದಲಿಗೆ... 2



ಅಡುಗೆ ಮನೆಗೆ ಬೇಕು ಸ್ಮಾರ್ಟ್ ಉಪಕರಣ

ಎಸ್ಸೆಚ್

ಅಡುಗೆ ಮಾಡುವುದು ದೊಡ್ಡ ಕೆಲಸವಾದರೆ, ಅದಕ್ಕೆ ಬೇಕಾದಂತಹ ಸಾಮಾನು ಸರಂಜಾಮು, ಸಲಕರಣೆಗಳನ್ನು ಹೊಂದಿಸಿಕೊಳ್ಳುವುದು ಇನ್ನೂ ಕಷ್ಟ. ತುಂಬಾ ಅನುಕೂಲಕರ ಎಂದು ಖರೀದಿಸಿದ ಗ್ಯಾಜೆಟ್ ಏನೂ ಬಳಕೆಯಿಲ್ಲದೇ ಅಟ್ಟ ಸೇರುವುದೂ ಉಂಟು. ಮಾರುಕಟ್ಟೆಯಲ್ಲಂತೂ ಹೊಸ ಬಗೆಯ ಸಲಕರಣೆಗಳು ಬರುತ್ತಲೇ ಇರುತ್ತವೆ. ಆನ್‌ಲೈನ್‌ನಲ್ಲಿ ಕೂಡ ರಿಯಾಯ್ತಿ ದರದಲ್ಲಿ ಇವುಗಳ ಮಾರಾಟ ಭರ್ಜರಿಯಾಗಿ ನಡೆಯುತ್ತಿರುತ್ತದೆ. ಆಧುನಿಕ ಸ್ಮಾರ್ಟ್ ಅಡುಗೆ ಪರಿಕರಗಳ ಬಗ್ಗೆ ಟಿವಿಯಲ್ಲಿ ಬೇಕಾದಷ್ಟು ಪ್ರಚಾರವೂ ನಡೆಯುತ್ತಿರುತ್ತದೆ. ಆದರೆ ಏನು ಖರೀದಿಸುವುದು, ಅವೆಷ್ಟು ಬಳಕೆಗೆ ಯೋಗ್ಯ ಎಂಬುದನ್ನು ನಿರ್ಧರಿಸಿ ಕೊಳ್ಳಬೇಕಾಗುತ್ತದೆ.

ಮನೆಯಲ್ಲಿ ಅಡುಗೆಗೆ ಅಗತ್ಯವಾದ ಕೆಲವು ಉಪಕರಣಗಳನ್ನು ಖರೀದಿಸಿಟ್ಟುಕೊಂಡರೆ ಅಡುಗೆಯೂ ಸುಲಭ. ಅಂತಹ ಕೆಲವು ಸಲಕರಣೆಗಳು ಹೀಗಿವೆ..

ಏರ್ ಫ್ರೈಯರ್ ಓವೆನ್

ಇದು ನಿಮ್ಮ ಬಹಳಷ್ಟು ಕೆಲಸಗಳನ್ನು ಸರಾಗವಾಗಿ ಮಾಡುತ್ತದೆ. ಬೇಕ್ ಮಾಡಲು, ಟೋಸ್ಟ್ ಮಾಡಲು, ಕಡಿಮೆ ಎಣ್ಣೆ ಬಳಸಿ ಮಾಡುವ ಕುರುಕಲು ತಿಂಡಿಗೆ.. ಇದು ಪ್ರಯೋಜನಕಾರಿ. ಕ್ಷಣಮಾತ್ರದಲ್ಲಿ ಬೇಯಿಸಿದ ತರಕಾರಿ ಪ್ಲೇಟ್‌ಗೆ ಬೀಳುತ್ತದೆ. ಟೋಸ್ಟರ್, ಏರ್ ಫ್ರೈಯರ್ ಎಂದು ಬೇರೆ ಬೇರೆ ಬಳಸುವ ಅಗತ್ಯವಿಲ್ಲ.



ಸ್ಟ್ಯಾಂಡ್ ಮಿಕ್ಸರ್

ಕೋವಿಡ್ ಸಂದರ್ಭದಲ್ಲಿ ವೈವಿಧ್ಯಮಯ ಅಡುಗೆಗಳನ್ನು ಕಲಿತವರಿಗೆ ಈ ಸ್ಟ್ಯಾಂಡ್ ಮಿಕ್ಸರ್ ಹೆಚ್ಚು ಪ್ರಯೋಜನಕಾರಿ ಎನ್ನಬಹುದು. ಕುಕೀಸ್ ಮಿಶ್ರಣ, ಬ್ರೆಡ್ ಮಿಶ್ರಣ ತಯಾರಿಸಲು, ಸಾಸ್, ಸೂಪ್‌ಗೆ, ಪ್ಯಾನ್‌ಕೇಕ್ ತಯಾರಿಕೆಗೆ ಇದು ಉಪಯೋಗಕ್ಕೆ ಬರುತ್ತದೆ. ಕುಕೀಸ್, ಕೇಕ್, ಬ್ರೌನಿ, ಬ್ರೆಡ್, ಪಿಜ್ಜಾ ಮೊದಲಾದವುಗಳ ಮಿಶ್ರಣ ತಯಾರಿಸಬಹುದು. ಬಳಕೆಗೆ ಮಾತ್ರವಲ್ಲ, ಶುಚಿಗೊಳಿಸುವುದೂ ಸುಲಭ. ಮಿಕ್ಸರ್ ಹಾಕಿ, ಬೇರೆ ಕೆಲಸ ಮಾಡಿಕೊಳ್ಳಬಹುದು.



ಇನ್‌ಸ್ಟಂಟ್ ಪಾಟ್ ಕುಕರ್

ರೈಸ್ ಕುಕರ್ ಎಲ್ಲರ ಮನೆಯಲ್ಲೂ ಸಾಮಾನ್ಯ. ಆದರೆ ವಿದ್ಯುತ್ ಬಳಸುವ ಇನ್‌ಸ್ಟಂಟ್ ಪಾಟ್ ಕುಕರ್ ಅನ್ನು ತರಹೇವಾರಿ ಅಡುಗೆ ಮಾಡಲು ಬಳಸಬಹುದು. ಅನ್ನವನ್ನು ಮಾತ್ರವಲ್ಲ, ತರಕಾರಿಗಳನ್ನು ಉಗಿಯಲ್ಲಿ ಬೇಯಿಸಬಹುದು. ಕಡಿಮೆ ಎಣ್ಣೆಯಲ್ಲಿ ಮಾಡುವಂತಹ ಏರ್ ಫ್ರೈಯರ್ ತರಹ ಬಳಕೆ ಮಾಡಬಹುದು. ಪುಲಾವ್, ಖಿಚಡಿಯನ್ನು ರುಚಿಕರವಾಗಿ ಮಾಡಬಹುದು.



ಫುಡ್ ಪ್ರೊಸೆಸರ್

ಚಾಕುವಿನಿಂದ ತರಕಾರಿ, ಮಾಂಸ ಕತ್ತರಿಸುವುದು ಸುಲಭವೇ. ಆದರೆ ಫುಡ್ ಪ್ರೊಸೆಸರ್ ಇಟ್ಟುಕೊಂಡರೆ ತರಕಾರಿ ಹೆಚ್ಚುವುದು, ಟೊಮೆಟೊ ಪಲ್ಪ್ ತಯಾರಿಸುವುದು ಇನ್ನೂ ಸುಲಭ. ಕ್ಷಣಾರ್ಧದಲ್ಲಿ ಮಾಡಬಹುದು.

ಉದಾಹರಣೆಗೆ ಕ್ಯಾಬೇಜ್ ಅನ್ನು ಪಲ್ಯಕ್ಕೆ ಚಿಕ್ಕದಾಗಿ ಹೆಚ್ಚುತ್ತ ಕುಳಿತರೆ ಅರ್ಧ ಗಂಟೆಯಾದರೂ ಬೇಕು. ಆದರೆ ಫುಡ್ ಪ್ರೊಸೆಸರ್‌ನಲ್ಲಿ ಎರಡೇ ನಿಮಿಷದಲ್ಲಿ 5-6 ಜನರಿಗೆ ಪಲ್ಯಕ್ಕೆ ಸಾಕಾಗುವಷ್ಟು ಕ್ಯಾಬೇಜ್ ಅನ್ನು ಬೇಕಾದ ಸೈಝ್‌ಗೆ ಕತ್ತರಿಸಿ ಹಾಕಬಹುದು. ಮೂಲಂಗಿ, ಕ್ಯಾರೆಟ್ ತುರಿಯುತ್ತ ಕೂರುವ ಬದಲು ದೊಡ್ಡದಾಗಿ ಕತ್ತರಿಸಿ ಫುಡ್ ಪ್ರೊಸೆಸರ್‌ನಲ್ಲಿ ಹಾಕಿದರೆ ಸಣ್ಣ ತುರಿ ಕ್ಷಣಾರ್ಧದಲ್ಲಿ ಲಭ್ಯ.

ಬ್ಲೆಂಡರ್

ತರಕಾರಿ, ಹಣ್ಣುಗಳ ರಸ, ಸ್ಮೂದಿ, ಸೂಪ್‌ಗೆ ಟೊಮೆಟೊ ಪಲ್ಪ್ ಮಾಡಲು... ಹೀಗೆ ತರಹೇವಾರಿ ಕೆಲಸಗಳಿಗೆ ಬ್ಲೆಂಡರ್ ನೆರವಿಗೆ ಬರುತ್ತದೆ. ದಾಳಿಂಬೆ ರಸ ತಯಾರಿಸುವಾಗ ಬೀಜವನ್ನೂ ಅರೆಯುವುದರಿಂದ ಪೌಷ್ಟಿಕಾಂಶವನ್ನು ಉಳಿಸಿಕೊಳ್ಳಬಹುದು.



ತಾಯಿಯ ಸಿಹಿ ಅಪ್ಪುಗೆಯಲ್ಲಿ ರಾಯನ್

ಸಿನಿಮಾ

ರಾಯನ್‌ಗೆ ಜನ್ಮದಿನದ ಸಂಭ್ರಮ


ಜ್ಯೂ.ಚಿರು ಎಂದೇ ಕರೆಯಲ್ಪಡುವ ದಿವಂಗತ ನಟ ಚಿರಂಜೀವಿ ಸರ್ಜಾ ಹಾಗೂ ನಟಿ ಮೇಘನಾ ರಾಜ್ ಅವರ ಮಗ ರಾಯನ್ ರಾಜ್ ಸರ್ಜಾಗೆ ನಿನ್ನೆ (ಶುಕ್ರವಾರ) ಮೊದಲ ಜನ್ಮದಿನದ ಸಂಭ್ರಮ.

ಮಗನ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ನಟಿ ಮೇಘನಾ, ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ರಾಯನ್ ಜೊತೆಗಿರುವ ಫೋಟೊವೊಂದನ್ನು ಹಂಚಿಕೊಂಡಿದ್ದು, ಶುಭ ಕೋರಿದ್ದಾರೆ.

'ನಮ್ಮ ಮಗು, ನಮ್ಮ ಪ್ರಪಂಚ, ನಮ್ಮ ಜಗತ್ತು, ನಮ್ಮ ಸರ್ವಸ್ವ! ಚಿರು.. ನಮ್ಮ ರಾಜಕುಮಾರನಿಗೆ ಈಗ ಒಂದು ವರ್ಷ' ಎಂಬ ಅಡಿ ಬರಹದೊಂದಿಗೆ ಮಗನ ಹುಟ್ಟುಹಬ್ಬದ ಸಂದೇಶವನ್ನು ಬರದುಕೊಂಡಿದ್ದಾರೆ. ಈ ಪೋಸ್ಟ್‌ಗೆ ನಿರ್ದೇಶಕ ಪನ್ನಗ ಭರಣ ಸೇರಿದಂತೆ ಅನೇಕ ಸೆಲೆಬ್ರಿಟಿಗಳು ಕಾಮೆಂಟ್ ಮಾಡುವ ಮೂಲಕ ರಾಯನ್‌ಗೆ ಹುಟ್ಟುಹಬ್ಬದ ಶುಭಾಶಯ ತಿಳಿಸಿದ್ದಾರೆ.

ಹಸಿವಿಗೂ ರುಚಿಗೂ ಫ್ರಿಟ್ಟಾಟ





ಹೊಸ ಹೊಸ ಅಡುಗೆ ಪ್ರಯೋಗಗಳನ್ನು ಮಾಡುವುದು ಎಂದರೆ ಹಲವರಿಗೆ ಅಚ್ಚುಮೆಚ್ಚು. ಮನೆಯಲ್ಲಿ ಬಿಡುವಿನ ವೇಳೆ ಭಾರತೀಯ, ಇಟಾಲಿನ್, ಉತ್ತರ ಭಾರತೀಯ ಶೈಲಿ ಹೀಗೆ ವಿವಿಧ ಬಗೆಯ ಅಡುಗೆ ಪ್ರಯೋಗಗಳನ್ನು ಮಾಡುತ್ತಲೇ ಇರುತ್ತಾರೆ. ನಿಮ್ಮ ಅಡುಗೆ ಪ್ರಯೋಗದ ಪಟ್ಟಿಗೆ ಫ್ರಿಟ್ಟಾಟವನ್ನೂ ಸೇರಿಸಿಕೊಳ್ಳಬಹುದು. ಇದು ಹೊಟ್ಟೆ ತುಂಬಿಸುವುದರೊಂದಿಗೆ ಬಾಯಿ ಚಪಲವನ್ನೂ ತಣಿಸುತ್ತದೆ. ನಿಮಗೆ ಸ್ವಲ್ಪ ಹಸಿವಾಗುತ್ತಿದ್ದು ಹೊಟ್ಟೆ ತುಂಬಿಸಿಕೊಳ್ಳುವ ಯೋಚನೆ ಇದ್ದರೆ ಇದನ್ನು ಪ್ರಯತ್ನಿಸಬಹುದು. ಪಿಜ್ಜಾದಂತೆ ಅಗಲವಾಗಿರುವ ಫ್ರಿಟ್ಟಾಟ ಪಿಜ್ಜಾಕ್ಕಿಂತ ಕೊಂಚ ಭಿನ್ನ ರುಚಿಯನ್ನು ಹೊಂದಿರುತ್ತದೆ. ಮೊಟ್ಟೆಯಿಂದ ಮಾಡುವ ಕಾರಣ ವೆಜ್ ಪ್ರಿಯರಿಗೆ ಇದು ಇಷ್ಟವಾಗದೇ ಇರಬಹುದು. ಫ್ರಿಜ್ ಮೂಲೆಯಲ್ಲಿ ಸ್ವಲ್ಪ ತರಕಾರಿಗಳು ಹಾಗೂ ಉಳಿದ ಮಾಂಸವಿದ್ದರೆ 20 ನಿಮಿಷದಲ್ಲಿ ಇದನ್ನು ತಯಾರಿಸಬಹುದು. ಮನೆಗೆ ಯಾರಾದರೂ ನೆಂಟರು ಬಂದರೂ ಇದರ ರುಚಿ ತಿನ್ನಿಸಬಹುದು.

ಫ್ರಿಟ್ಟಾಟ ಮಾಡುವ ತಂತ್ರವನ್ನು ಒಮ್ಮೆ ಕಲಿತರೆ ಇದನ್ನು ಮಾಡುವುದು ಬಲು ಸುಲಭ. ಇದನ್ನು ತಯಾರಿಸಲು ಕಡಿಮೆ ಸಮಯ ಹಾಗೂ ಸಾಮಗ್ರಿಗಳು ಸಾಕು. ಹದ ಸರಿಯಾಗಿ ಫ್ರಿಟ್ಟಾಟ ಸಖತ್ ಆಗಿರುತ್ತದೆ. ಇದಕ್ಕೆ ಬಳಸುವ ಮೊಟ್ಟೆ, ಕ್ರೀಮ್, ಚೀಸ್, ತರಕಾರಿ ಎಲ್ಲವೂ ತಾಜಾವಾಗಿರುವಂತೆ ನೋಡಿಕೊಳ್ಳಬೇಕು. ಆಗ ಇದು ಇನ್ನಷ್ಟು ಚೆನ್ನಾಗಿರುತ್ತದೆ.

ರೆಸಿಪಿ

6 ಮೊಟ್ಟೆಗೆ ಕಾಲು ಕಪ್ ಕ್ರೀಮ್, ಚೀಸ್ 1 ಕಪ್ ಹಾಗೂ ತರಕಾರಿ 2 ಕಪ್ ಸೇರಿಸಬೇಕು. ಫ್ರಿಟ್ಟಾಟವನ್ನು ನಾನ್‌ಸ್ಟಿಕ್ ಪಾತ್ರೆಯಲ್ಲಿ ಮಾಡುವುದು ಉತ್ತಮ. ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಯಲ್ಲಿ ಮಾಡಬಹುದು, ಆದರೆ ಜಾಸ್ತಿ ಎಣ್ಣೆ ಬಳಸಬೇಕಾಗುತ್ತದೆ. ಕೆಲವೊಮ್ಮೆ ಪಾತ್ರೆಯ ತಳ ಹಿಡಿಯುವ ಸಾಧ್ಯತೆಯೂ ಇದ್ದು ಕೆಡಬಹುದು. ಇದನ್ನು ಬೆಳಗಿನ ತಿಂಡಿ ಅಥವಾ ರಾತ್ರಿಯೂಟ ಸಂದರ್ಭದಲ್ಲಿ ಸೇವಿಸಬಹುದು. ಒಂದು ಪೂರ್ಣ ಫ್ರಿಟ್ಟಾಟವನ್ನು 4 ರಿಂದ 6 ಜನ ತಿನ್ನಬಹುದು.

ಫ್ರಿಟ್ಟಾಟ ಮಾಡುವುದು...

ಬೇಕಾಗುವ ಸಾಮಗ್ರಿಗಳು: ಮೊಟ್ಟೆ – 6, ಕ್ರೀಮ್ – ಕಾಲು ಕಪ್, ಉಪ್ಪು – 1 ಟೀ ಚಮಚ, ಮಾಂಸದ ತುಂಡು – 4, ಕಾಳುಮೆಣಸಿನ ಪುಡಿ – ಕಾಲು ಚಮಚ, ಪಾಲಕ್ – 2 ಕಪ್, ಕೊತ್ತಂಬರಿ ಸೊಪ್ಪು – 2 ಟೀ ಚಮಚ, ಚೀಸ್ – 1 ಕಪ್, ಬ್ರೊಕೊಲಿ – ಸ್ವಲ್ಪ, ಈರುಳ್ಳಿ – 1

ತಯಾರಿಸುವ ವಿಧಾನ: ಒಂದು ನಾನ್‌ಸ್ಟಿಕ್ ತವಾಕ್ಕೆ ಒಂದೆರಡು ಚಮಚ ಎಣ್ಣೆ ಹಾಕಿ ಬಿಸಿ ಮಾಡಲು ಇಡಿ. ಅದಕ್ಕೆ ಈರುಳ್ಳಿ ಕತ್ತರಿಸಿ ಹಾಕಿ. ಮಾಂಸದ ತುಂಡನ್ನು ಚಿಕ್ಕ ಚಿಕ್ಕದಾಗಿ ಕತ್ತರಿಸಿ. ಬ್ರೊಕೊಲಿಯನ್ನು ಚಿಕ್ಕದಾಗಿ ಕತ್ತರಿಸಿ. ಕೊತ್ತಂಬರಿ ಸೊಪ್ಪನ್ನು ಚಿಕ್ಕದಾಗಿ ಕತ್ತರಿಸಿ. ಕಪ್‌ವೊಂದಕ್ಕೆ ಮೊಟ್ಟೆಯನ್ನು ಒಡೆದು ಹಾಕಿ. ಅದಕ್ಕೆ ಕ್ರೀಮ್ ಸೇರಿಸಿ. ಈ ಎರಡನ್ನೂ ಚೆನ್ನಾಗಿ ಮಿಶ್ರಣ ಮಾಡಿ. ಅದಕ್ಕೆ ಕಾಳುಮೆಣಸಿನ ಪುಡಿ ಸೇರಿಸಿ. ಚೀಸ್ ತುರಿದಿಟ್ಟುಕೊಳ್ಳಿ. ಕತ್ತರಿಸಿಕೊಂಡ ತರಕಾರಿ ಚೂರುಗಳನ್ನು ಎಣ್ಣೆಯಲ್ಲಿ ಬೇಯುತ್ತಿರುವ ಈರುಳ್ಳಿ ಹಾಗೂ ಮಾಂಸಕ್ಕೆ ಸೇರಿಸಿ ಎಲ್ಲವೂ ಮಿಶ್ರಣವಾಗುವಂತೆ ನೋಡಿಕೊಳ್ಳಿ. ಅದರ ಮೇಲೆ ಮೊಟ್ಟೆಯ ಮಿಶ್ರಣವನ್ನು ಸುರಿಯಿರಿ. ಅದನ್ನು ಒಂದೆರಡು ನಿಮಿಷ ಬಿಸಿ ಮಾಡಿ ಅದರ ಮೇಲೆ ಚೀಸ್ ಉದುರಿಸಿ. ನಂತರ ಕಡಿಮೆ ಉಷ್ಣಾಂಶದಲ್ಲಿ ಓವೆನ್‌ನಲ್ಲಿ ಬೇಯಿಸಿ. ಅದನ್ನು ಹೊರ ತೆಗೆದು ಮತ್ತೆ ಪುನಃ ಇರಿಸಿ ದೊಡ್ಡ ಉರಿಯಲ್ಲಿ ಬೇಯಿಸಿ. ಈಗ ಫ್ರಿಟ್ಟಾಟ ತಿನ್ನಲು ಸಿದ್ಧ. ಇದನ್ನು ಪಿಜ್ಜಾದಂತೆ ತುಂಡು ಮಾಡಿ ತಿನ್ನಬಹುದು.







ಫ್ಯಾಷನ್ ವೈರಾಗ್ಯ ನೀಗುವುದು ಹೇಗೆ?

ರೇಷ್ಮಾ

ಫ್ಯಾಷನ್

ಕೋವಿಡ್ ನಮ್ಮೆಲ್ಲರ ಬದುಕಿನಲ್ಲಿ ಹಲವು ಮಹತ್ತರ ಬದಲಾವಣೆಗಳಿಗೆ ಕಾರಣವಾಗಿತ್ತು. ನಮ್ಮದಲ್ಲದ ಜೀವನಕ್ಕೆ ನಮ್ಮನ್ನು ಕರೆದೊಯ್ಯುವ ಮೂಲಕ ಹೊಸ ಜೀವನ ಪಾಠವನ್ನೂ ಕಲಿಸಿತ್ತು. ಈ ನಡುವೆ ಈ ಮಹಾಮಾರಿ ನಮಗೆ ಹಲವು ವಿಷಯಗಳ ಮೇಲೆ ಬೇಸರ ಮೂಡುವಂತೆ ಮಾಡಿಸಿದ್ದೂ ಸುಳ್ಳಲ್ಲ. ಸದಾ ಕಚೇರಿ, ಸಿನಿಮಾ, ಶಾಪಿಂಗ್, ಪಿಕ್‌ನಿಕ್, ಪ್ರವಾಸ ಎಂದು ತಿರುಗಾಡಿಕೊಂಡಿದ್ದ ನಮಗೆ ಇದೆಲ್ಲದ್ದಕ್ಕೂ ಬ್ರೇಕ್ ಹಾಕಿಸಿ ಮನೆಯೊಳಗೆ ಕುಳಿತುಕೊಳ್ಳುವಂತೆ ಮಾಡಿತ್ತು. ಸುಮಾರು ಒಂದೂವರೆ ವರ್ಷಗಳ ಕಾಲ ಮನೆಯೊಳಗೆ ನೈಟ್ ಪ್ಯಾಂಟ್, ಕುರ್ತಾ, ಟೀ ಶರ್ಟ್‌ನಲ್ಲಿ ಕಾಲ ಕಳೆದ ಮಂದಿಗೆ ಅದುವೇ ಜಗತ್ತಾಗಿದೆ. ಈಗ ಪುನಃ ಫ್ಯಾಷನ್ ಲೋಕಕ್ಕೆ ತೆರೆದುಕೊಳ್ಳಲು ಮನಸ್ಸು ಹಿಂಜರಿಯುತ್ತಿದೆ. ಈ ಫ್ಯಾಷನ್ ಕುರಿತಾದ ಬರ್ನ್ ಔಟ್ ಅಥವಾ ವೈರಾಗ್ಯ ಎನ್ನುವುದು ನಮ್ಮ ಜೀವನದ ಬೇಸರವನ್ನು ಇನ್ನಷ್ಟು ಹೆಚ್ಚಿಸುತ್ತದೆ. ಆ ಕಾರಣಕ್ಕೆ ಈ ಬೇಸರವನ್ನು ಬದಿಗಿಟ್ಟು ಬದುಕಿನ ಚೈತನ್ಯವನ್ನು ಮರಳಿ ಗಳಿಸುವುದು ಹೇಗೆ?



ಫ್ಯಾಷನ್ ಬರ್ನ್ ಔಟ್ ಎಂದರೆ..



ಫ್ಯಾಷನ್ ಬರ್ನ್ ಔಟ್ ಎಂದರೆ ಫ್ಯಾಷನ್ ಅಥವಾ ಹೊಸ ಹೊಸ ಬಟ್ಟೆ ಧರಿಸುವುದರ ಮೇಲೆ ವೈರಾಗ್ಯ ಮೂಡುವುದು. ಮನೆಯಲ್ಲೇ ದಿನ ಕಳೆಯುತ್ತಿದ್ದವರಿಗೆ ಬಗೆ ಬಗೆಯ ಬಟ್ಟೆಗಳ ಅವಶ್ಯಕತೆ ಇರಲಿಲ್ಲ. ಅಂತಹ ಸಮಯದಲ್ಲಿ ಸಮವಸ್ತ್ರದಂತೆ ಮೂರ್ನಾಲ್ಕು ಜೊತೆ ಬಟ್ಟೆಯಲ್ಲೇ ಕಾಲ ಕಳೆದಿದ್ದೆವು. ಈಗ ಪುನಃ ಕೋವಿಡ್ ಹಿಂದಿನ ಸಹಜ ಜೀವನಕ್ಕೆ ಹೊಂದಿಕೊಳ್ಳಲು ಕಷ್ಟವಾಗುತ್ತಿದೆ. ಆದರೆ ಹೊಂದಿಕೊಳ್ಳದೇ ಬೇರೆ ದಾರಿ ಇಲ್ಲ. ಈ ಬಟ್ಟೆಯ ಏಕತಾನತೆ ಎನ್ನುವುದೂ ಫ್ಯಾಷನ್ ಬರ್ನ್ ಔಟ್‌ಗೆ ಕಾರಣವಾಗಿದೆ.

ಮದುವೆ, ಸಮಾರಂಭಗಳೂ ಸರಳ

ಹಿಂದೆಲ್ಲಾ ಮದುವೆ ಸಮಾರಂಭಗಳೆಂದರೆ ಸಡಗರ. ಕೋವಿಡ್ ಇಂತಹ ಸಂಭ್ರಮಕ್ಕೂ ಕಡಿವಾಣ ಹಾಕಿತ್ತು. ಹಾಗಾಗಿ ಮದುವೆ, ಮುಂಜಿಯಂತಹ ಕಾರ್ಯಕ್ರಮಗಳೂ ಸರಳ ಉಡುಪಿನಲ್ಲೇ ಮುಗಿದು ಹೋಗಿದ್ದವು. ಹೊಸ ಉಡುಪು, ಅದಕ್ಕೆ ಮ್ಯಾಚಿಂಗ್ ಎನ್ನಿಸುವ ಆಭರಣಗಳು, ಡ್ರೆಸ್‌ಗೆ ಹೊಂದುವ ಚಪ್ಪಲಿ, ಬ್ಯಾಗ್ ಇವೆಲ್ಲಾ ಈಗ ಮೂಲೆಗೆ ಸರಿದಿದೆ. ತುಂಬಿಸಿಟ್ಟ ವಾರ್ಡ್‌ರೋಬ್ ಕಡೆ ನೋಡುವುದೂ ಕಷ್ಟವಾಗಿದೆ.

ಕಚೇರಿಗೂ ಅದೇ ಸ್ಟೈಲ್

ಹಿಂದೆಲ್ಲಾ ಕಚೇರಿಗೆ ಹೋಗಲೆಂದೇ ಒಂದಿಷ್ಟು ಉಡುಪು ಖರೀದಿಸುವ ಸಲುವಾಗಿ ಬಹುತೇಕರು ತಿಂಗಳಿಗೊಮ್ಮೆ ಶಾಪಿಂಗ್ ಮಾಡುತ್ತಿದ್ದೆವು. ಆದರೆ ಈಗ ವಾರ್ಡ್‌ರೋಬ್‌ನಲ್ಲಿ ಹಿಂದೆ ಪೇರಿಸಿಟ್ಟ ಯಾವುದೋ ಒಂದು ಉಡುಪನ್ನು ಧರಿಸಿ ಹೋಗುತ್ತಿದ್ದೇವೆ. ಯಾವುದೋ ಪ್ಯಾಂಟ್, ಯಾವುದೋ ಟಾಪ್, ಕೈಗೆ ಸಿಕ್ಕಿದ ದುಪಟ್ಟಾ ತೊಟ್ಟುಕೊಂಡು ಕಚೇರಿಯ ದಿನವನ್ನು ಮುಗಿಸುತ್ತಿದ್ದೇವೆ.

ಫ್ಯಾಷನ್ ಬರ್ನ್ ಔಟ್‌ನಿಂದ ದೂರವಾಗಿ ಸಹಜ ಜೀವನಕ್ಕೆ ಮರಳಿ ಜೀವನವನ್ನು ಸರಾಗಗೊಳಿಸುವ ಹಾದಿಯಲ್ಲಿ ನಾವು ಸಾಗಬೇಕಿದೆ. ಫ್ಯಾಷನ್ ಬರ್ನ್ ಔಟ್‌ನಿಂದ ಹೊರಬರಲು ಈ ಮಾರ್ಗಗಳನ್ನು ಅನುಸರಿಸಿ.

1 ಸಂದರ್ಭ ಯಾವುದೇ ಇರಲಿ. ಯಾವುದೋ ಒಂದು ಉಡುಪು ಧರಿಸಿದರೆ ಆಯ್ತು ಎನ್ನುವ ಅಸಡ್ಡೆಯ ಮನೋಭಾವ ಬೇಡ. ಸಮಯ ಸಿಕ್ಕಾಗಲೆಲ್ಲಾ ಒಳ್ಳೆಯ ಬಟ್ಟೆ ಧರಿಸಿ, ಅಲಂಕರಿಸಿಕೊಳ್ಳಿ. ಈ ಕ್ಷಣವನ್ನು ಅನುಭವಿಸಲು ರೆಡಿಯಾಗಿ.

2 ಇತ್ತೀಚೆಗೆ ಒತ್ತಡ ನಿವಾರಣೆಯಲ್ಲಿ ಸಾಮಾಜಿಕ ಜಾಲತಾಣಗಳ ಪಾತ್ರವೂ ದೊಡ್ಡದಿದೆ. ಸಾಮಾಜಿಕ ಜಾಲತಾಣಗಳನ್ನು ನಾವು ಹೇಗೆ ಬಳಸಿಕೊಳ್ಳುತ್ತೇವೆ ಎನ್ನುವುದು ಮುಖ್ಯವಾಗುತ್ತದೆ. ಸುಂದರ ಉಡುಪುಗಳನ್ನು ಧರಿಸಿ ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂಗಳಲ್ಲಿ ಫೋಟೊ ಹಂಚಿಕೊಳ್ಳಬಹುದು.

3 ನಿಮ್ಮ ಕಲ್ಪನೆಯಂತೆ ನಿಮ್ಮನ್ನು ನೀವು ಸಿಂಗರಿಸಿಕೊಳ್ಳುವುದನ್ನು ಕಲಿಯಿರಿ. ಕಲ್ಪನೆಗೆ ಮೀರಿದ್ದು ಯಾವುದೂ ಇಲ್ಲ.

4 ನಮ್ಮ ನೋಟ ಅಥವಾ ಸೌಂದರ್ಯ ಎನ್ನುವುದು ಕೇವಲ ಉಡುಪುಗಳ ಮೇಲೆ ಅವಲಂಬಿತವಾಗಿಲ್ಲ. ನಾವು ತೊಟ್ಟ ಉಡುಪಿಗೆ ನಿಜವಾದ ಸೌಂದರ್ಯ ಹೆಚ್ಚಲು ನಮ್ಮ ಮುಖದಲ್ಲಿನ ಖುಷಿಯೂ ಕಾರಣವಾಗುತ್ತದೆ.

5 ಮನಸ್ಸಿಗೆ ಇಷ್ಟವಾದ ಉಡುಪನ್ನು ಆಯ್ಕೆ ಮಾಡಿ ಧರಿಸಿ. ಬೇರೆಯವರಿಗೆ ನೀವು ತಯಾರಾದ ರೀತಿ ಹೇಗೆ ಕಾಣಿಸಬಹುದು ಎಂದು ಯೋಚಿಸುವುದಕ್ಕಿಂತ ನಿಮಗಾಗಿ ನೀವು ತಯಾರಾಗಿ. ಆ ಖುಷಿಯನ್ನು ಅನುಭವಿಸಿ.

6 ಅತಿ ಆಡಂಬರವಾಗಿ ತಯಾರಾಗುವ ಬದಲು ಸರಳವಾಗಿ, ಅಂದವಾಗಿ ಸಿದ್ಧವಾಗುವುದನ್ನು ಕಲಿಯಿರಿ. ವಾರ್ಡ್‌ರೋಬ್‌ನಲ್ಲಿರುವ ಬೇಡದ ಉಡುಪುಗಳನ್ನು ದಾನ ಮಾಡಿ. ಇದರಿಂದ ವಾರ್ಡ್‌ರೋಬ್ ಸ್ವಚ್ಛ ಮಾಡಿದ ಹಾಗೆಯೂ ಆಗುತ್ತದೆ; ಮನಸ್ಸಿಗೂ ಖುಷಿ ಸಿಗುತ್ತದೆ.

7 ನಿಮ್ಮ ಬಳಿ ಇಲ್ಲದೇ ಇರುವುದರ ಬಗ್ಗೆ ಯೋಚಿಸುತ್ತಾ ಕೊರಗುವ ಬದಲು ಇರುವುದನ್ನೇ ಧರಿಸಿ ಖುಷಿಪಡಿ.

8 ಯಾವತ್ತೋ ನಡೆಯುವ ಕಾರ್ಯಕ್ರಮಗಳಿಗೆ ಇಂದಿನಿಂದಲೇ ಉಡುಪುಗಳನ್ನು ಖರೀದಿಸಿ ಇಡಬೇಡಿ. ಇರುವ ಹೊಸ ಉಡುಪುಗಳನ್ನು ಧರಿಸಲು ಸಂದರ್ಭಕ್ಕಾಗಿ ಕಾಯಬೇಡಿ. ಸಿಕ್ಕ ಸಂದರ್ಭವನ್ನೇ ಅವಕಾಶವನ್ನಾಗಿಸಿಕೊಳ್ಳಿ.



ಸೊಂಪಾದ ಕೂದಲಿಗೆ...

ಮನಸ್ವಿ

ಸೌಂದರ್ಯ

ಕೂದಲು ಕಾಳಜಿ ಇತ್ತೀಚಿನ ಯುವಜನರಿಗೆ ಸವಾಲು ಎನ್ನಿಸಿದ್ದು ಸುಳ್ಳಲ್ಲ. ಕೂದಲಿನ ಬಗ್ಗೆ ಎಷ್ಟೇ ಕಾಳಜಿ ಮಾಡಿದರೂ ಕೂದಲು ಉದುರುವುದು, ಬಾಲನೆರೆ ಕಾಣಿಸಿಕೊಳ್ಳುವುದು, ಸೀಳು ಬಿಡುವುದು ಆಗುತ್ತಲೇ ಇರುತ್ತದೆ. ಮಾರುಕಟ್ಟೆಯಲ್ಲಿ ಸಿಗುವ ಎಲ್ಲಾ ಔಷಧಿಗಳನ್ನು ಬಳಸಿ ನೋಡಿದರೂ ಕೂದಲ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ ಎನ್ನುವವರೇ ಹೆಚ್ಚು. ಕೂದಲು ಚೆನ್ನಾಗಿ ಬೆಳೆಯುವಂತೆ ಮಾಡಿ ಕೂದಲ ಅಂದವನ್ನು ಹೆಚ್ಚಿಸಿಕೊಳ್ಳುವ ಕೆಲವು ಸುಲಭ ಮಾರ್ಗಗಳು ಹೀಗಿವೆ.

ಉದ್ದನೆಯ ಕೂದಲಿಗೆ

ದಟ್ಟ ಹಾಗೂ ಉದ್ದನೆಯ ಕೂದಲು ಬೇಕು ಎನ್ನುವುದು ಎಲ್ಲರ ಆಸೆ. ಸರಳವಾದ ಮಾರ್ಗದ ಮೂಲಕ ಕೂದಲ ಬೆಳವಣಿಗೆಯನ್ನು ವೃದ್ಧಿಸಿಕೊಳ್ಳಬಹುದು. ಕೂದಲ ಬೆಳವಣಿಗೆಯನ್ನು ಉತ್ತೇಜಿಸುವ ಸರಳ ಮಾರ್ಗವೆಂದರೆ ನೆತ್ತಿಯ ಬುಡಕ್ಕೆ ಮಸಾಜ್ ಮಾಡುವುದು. ಕೂದಲ ಪೋಷಕಾಂಶಕ್ಕೆ ನೆರವಾಗುವ ಎಣ್ಣೆಯನ್ನು ನೆತ್ತಿಯ ಬುಡಕ್ಕೆ ಹಚ್ಚಿಕೊಂಡು ಚೆನ್ನಾಗಿ ಮಸಾಜ್ ಮಾಡಬೇಕು. ಇದಕ್ಕೆ ಹರಳೆಣ್ಣೆ ಬಹಳ ಉತ್ತಮ. ಬಿಸಿಎಣ್ಣೆಯ ಚಿಕಿತ್ಸೆ ಅಥವಾ ಎಣ್ಣೆಯ ಮಸಾಜ್ ಕೂದಲ ಬೆಳವಣಿಗೆಗೆ ಉತ್ತಮ ಮಾರ್ಗ. ಎಣ್ಣೆ ಮಸಾಜ್ ಮಾಡಿದ ನಂತರ ಸ್ನಾನ ಮಾಡಿ ಕೂದಲನ್ನು ನೈಸರ್ಗಿಕವಾಗಿ ಒಣಗಿಸಬೇಕು.

ಕೂದಲು ಉದುರುವುದು ತಡೆಯಲು

ಕೂದಲು ಉದುರುವುದು ಬಹಳ ಕಿರಿಕಿರಿ ಎನ್ನಿಸುವ ಸಮಸ್ಯೆ. ಅಲ್ಲದೇ ಇದು ಹಲವರನ್ನು ಕಾಡುತ್ತಿದೆ. ಕೂದಲು ಉದುರುತ್ತಲೇ ಇರುತ್ತದೆ, ಆದರೆ ಬೆಳೆಯುವುದು ಕಷ್ಟ. ಹಾಗಾಗಿ ಕೂದಲಿಗೆ ನಿರಂತರವಾಗಿ ಎಣ್ಣೆ ಹಚ್ಚುವುದು ಒಳ್ಳೆಯದು. ಇದರಿಂದ ರಕ್ತ ಸಂಚಾರ ಸುಗಮವಾಗುತ್ತದೆ. ಅಲ್ಲದೇ ಕೂದಲು ಬೇರಿನಿಂದಲೇ ಗಟ್ಟಿಯಾಗುತ್ತದೆ. ಒತ್ತಡದ ಕಾರಣದಿಂದಲೂ ಕೂದಲು ಉದುರುತ್ತದೆ. ಆ ಕಾರಣಕ್ಕೆ ಒತ್ತಡ ಕಡಿಮೆ ಮಾಡುವ ಯೋಗ, ಧ್ಯಾನದಂತಹ ಹವ್ಯಾಸವನ್ನು ರೂಢಿಸಿಕೊಳ್ಳಬೇಕು. ಆತಂಕ, ಒತ್ತಡವನ್ನು ಕಡಿಮೆ ಮಾಡಿಕೊಂಡಷ್ಟೂ ಕೂದಲಿನ ಸಮಸ್ಯೆಯೂ ನಿವಾರಣೆಯಾಗುತ್ತದೆ. ಗ್ರೀನ್ ಟೀ ಬಳಕೆಯು ಕೂದಲು ಉದುರುವುದನ್ನು ತಡೆಯಬಹುದು. ಇದರಲ್ಲಿ ಅತ್ಯಧಿಕ ಆ್ಯಂಟಿಆಕ್ಸಿಡೆಂಟ್ ಅಂಶವಿದ್ದು ಇದು ಕೂದಲ ಬೆಳವಣಿಗೆಗೆ ಸಹಕರಿಸುತ್ತದೆ. ಬಿಸಿ ಇರುವ ಗ್ರೀನ್ ಟೀ ಬ್ಯಾಗ್ ಅನ್ನು ಕೂದಲ ಬುಡಕ್ಕೆ ಹಚ್ಚಬೇಕು. ನಂತರ ಒಂದು ಗಂಟೆ ಬಿಟ್ಟು ಸ್ನಾನ ಮಾಡಬೇಕು.

ತಲೆಹೊಟ್ಟು ನಿವಾರಣೆಗೆ

ತಲೆಹೊಟ್ಟಿನ ಕಾರಣದಿಂದ ತಲೆನೋವು ಶುರು ಮಾಡಿಕೊಂಡವರ ಸಂಖ್ಯೆ ಕಡಿಮೆ ಇಲ್ಲ. ತಲೆಹೊಟ್ಟು ಕಿರಿಕಿರಿಯೂ ಹೌದು. ಇದು ಹಲವು ರೀತಿಯ ಚರ್ಮದ ಸಮಸ್ಯೆಗೂ ಕಾರಣವಾಗುತ್ತದೆ. ಇದರ ನಿವಾರಣೆಗೆ ತಾಜಾ ನಿಂಬೆರಸ ಒಂದು ಲೋಟ ನೀರಿಗೆ ಹಾಕಿ ಮಿಶ್ರ ಮಾಡಿ. ಇದರಿಂದ ಕೂದಲ ಬುಡವನ್ನು ತೊಳೆಯಿರಿ. ಇದನ್ನು ಸ್ನಾನಕ್ಕೆ ಮುಂಚೆ ಮಾಡುವುದರಿಂದ ಉತ್ತಮ ಫಲಿತಾಂಶ ನಿರೀಕ್ಷಿಸಬಹುದು.

ಶುಷ್ಕ ಹಾಗೂ ಕಳೆಗುಂದಿದ ಕೂದಲು

ಶುಷ್ಕ ಅಥವಾ ಕಳೆಗುಂದಿದ ಕೂದಲಿಗೆ ಪ್ರಮುಖವಾಗಿ ತೇವಾಂಶ ಕಡಿಮೆಯಾಗುವುದೇ ಕಾರಣ. ಇದರಿಂದ ಕೂದಲು ಉದುರುವ ಸಮಸ್ಯೆಯೂ ಕಾಣಿಸಿಕೊಳ್ಳುತ್ತದೆ. ಇದರ ಪರಿಹಾರಕ್ಕೆ ವಾರಕ್ಕೊಮ್ಮೆ ಅಥವಾ ಎರಡು ವಾರಕ್ಕೊಮ್ಮೆ ಡೀಪ್ ಕಂಡಿಷನಿಂಗ್ ಮಾಡಿಸುವುದು ಉತ್ತಮ. ಶುಷ್ಕ ಹಾಗೂ ಕಳೆಗುಂದಿದ ಕೂದಲಿನ ಸಮಸ್ಯೆ ನಿವಾರಣೆಗೆ 2 ಚಮಚ ಆ್ಯಪಲ್ ಸೈಡರ್ ವಿನೆಗರ್ ಅನ್ನು 2 ಕಪ್ ಬಿಸಿ ನೀರಿಗೆ ಹಾಕಿ. ಇದನ್ನು ಕೂದಲ ಬುಡಕ್ಕೆ ಹಚ್ಚಿ ಒಣಗಿದ ಮೇಲೆ ಸ್ನಾನ ಮಾಡಿ. ಕೂದಲ ತೇವಾಂಶ ಹೆಚ್ಚಲು ಬೆಣ್ಣೆಹಣ್ಣಿನ ಮಾಸ್ಕ್ ಅನ್ನು ಕೂಡ ಬಳಸಬಹುದು.

ಆರೋಗ್ಯಕರ ಎಸೆನ್ಶಿಯಲ್ ಎಣ್ಣೆ

ದೇಹಸಿರಿಯನ್ನು ಕಾಪಾಡಿಕೊಳ್ಳುವುದು ಯಾರಿಗೆ ಇಷ್ಟವಿಲ್ಲ ಹೇಳಿ! ಅದಕ್ಕಾಗಿ ಸದಾ ಹುಡುಕಾಟ ನಡೆದೇ ಇರುತ್ತದೆ. ಅಂಗಡಿ ಮಳಿಗೆಗಳಲ್ಲಿ ಸಿಗುವ ಉತ್ಪನ್ನಗಳು, ವನಸ್ಪತಿ ಔಷಧ ಎಂದೆಲ್ಲ ಬಳಸಿ ನೋಡುವುದು ಸಹಜ. ಕೆಲವು ಉತ್ಪನ್ನಗಳು ಸೌಂದರ್ಯವನ್ನು ಹೆಚ್ಚಿಸಿದರೆ ಇನ್ನು ಕೆಲವು ಸೌಂದರ್ಯವನ್ನು ಕೆಡಿಸುತ್ತವೆ.

ಸೌಂದರ್ಯವರ್ಧಕಗಳಲ್ಲಿ ಎಸೆನ್ಶಿಯಲ್ ಎಣ್ಣೆ ಉತ್ತಮ ಎಂದು ಬಳಸಿ ಅನುಭವ ಇರುವವರು ಹೇಳುತ್ತಾರೆ. ಇದಕ್ಕೆ ಕಾರಣವೂ ಇದೆ. ಯಾವುದೇ ರಾಸಾಯನಿಕ ವಸ್ತುಗಳನ್ನು ಸೇರಿಸದೆ ನೈಸರ್ಗಿಕವಾಗಿರುವ ಇದು ತ್ವಚೆಗೆ ಆರೋಗ್ಯಕರ. ಇತ್ತೀಚೆಗೆ ಬಹುತೇಕ ಎಲ್ಲಾ ರೀತಿಯ ಥೆರಪಿ ಹಾಗೂ ಫೇಶಿಯಲ್ ವಿಧಾನಗಳಲ್ಲಿ ಎಸೆನ್ಶಿಯಲ್ ಎಣ್ಣೆಯನ್ನು ಬಳಸುತ್ತಾರೆ. ಇದರಲ್ಲಿ ಸೌಂದರ್ಯಕ್ಕೆ ಪೂರಕವಾದ ಅಂಶಗಳಿವೆ. ಪೆಪ್ಪರ್‌ಮಿಂಟ್, ಲ್ಯಾವೆಂಡರ್, ರೋಸ್‌ಮೆರಿ, ಲೆಮನ್, ಆರೆಂಜ್ ಮುಂತಾದ ಎಸೆನ್ಶಿಯಲ್ ಎಣ್ಣೆಗಳಿವೆ. ಈ ಎಣ್ಣೆಯನ್ನು ಬಳಸುವುದು ಹೇಗೆ ಹಾಗೂ ದೇಹದ ವಿವಿಧ ಭಾಗಗಳಿಗೆ ಇದರ ಮಸಾಜ್‌ನಿಂದಾಗುವ ಉಪಯೋಗಗಳೇನು ಎನ್ನುವ ಬಗ್ಗೆ ಮಾಹಿತಿ ಇಲ್ಲಿದೆ.

ರಕ್ತ ಸಂಚಾರ ವೃದ್ಧಿಗೆ

ವಾರಕ್ಕೊಮ್ಮೆ ಅಥವಾ ದಿನ ಬಿಟ್ಟು ದಿನ ಎಸೆನ್ಶಿಯಲ್ ಎಣ್ಣೆಯಿಂದ ಸಂಪೂರ್ಣ ದೇಹಕ್ಕೆ ಮಸಾಜ್ ಮಾಡಿಕೊಳ್ಳುವುದರಿಂದ ದೇಹದಲ್ಲಿ ರಕ್ತಸಂಚಾರ ಸುಗಮವಾಗುತ್ತದೆ. ಮಸಾಜ್ ಪ್ರಕ್ರಿಯೆಯು ದೇಹವನ್ನು ಬೆಚ್ಚಗಾಗಿಸುತ್ತದೆ. ಆಗ ನರಗಳು ಹಾಗೂ ರಕ್ತನಾಳಗಳಿಗೆ ಆರಾಮ ಎನ್ನಿಸಿ ರಕ್ತಸಂಚಾರ ಸರಾಗವಾಗಲು ಅನುಕೂಲ.

ದೇಹದ ಆರಾಮಕ್ಕೆ

ಈ ಎಣ್ಣೆಯಿಂದ ಮಸಾಜ್ ಮಾಡಿಸಿಕೊಳ್ಳುವುದರಿಂದ ದೈಹಿಕ ಒತ್ತಡವೂ ಕಡಿಮೆಯಾಗುತ್ತದೆ. ದೇಹದ ಕೆಲವು ಪ್ರಮುಖ ಅಂಗಗಳಿಗೆ ಮಸಾಜ್ ಮಾಡುವುದರಿಂದ ದೇಹ ಶಾಂತವಾಗುತ್ತದೆ. ಎಸೆನ್ಶಿಯಲ್ ಎಣ್ಣೆಯ ಮಸಾಜ್ ಮಾಡಿ ನಂತರ ಸ್ನಾನ ಮಾಡುವುದರಿಂದ ದೇಹಕ್ಕೆ ಆರಾಮ ಎನ್ನಿಸುತ್ತದೆ. ಅಲ್ಲದೇ ಒಟ್ಟಾರೆ ದೈಹಿಕ ವ್ಯವಸ್ಥೆ ಸುಧಾರಿಸಲು ಕೂಡ ಇದು ಸಹಕಾರಿ.

ಒತ್ತಡರಹಿತ ಮನಸ್ಸಿಗೆ

ದೇಹದಲ್ಲಿ 30ಕ್ಕೂ ಹೆಚ್ಚು ಒತ್ತಡ ತರುವ ಕೇಂದ್ರ ಅಥವಾ ಬಿಂದುಗಳಿವೆ. ದೇಹದಲ್ಲಿ ಒತ್ತಡ ಕಡಿಮೆಯಾಗಿ ಆರಾಮ ಎನ್ನಿಸಲು ಆ ಬಿಂದುಗಳಿಗೆ ಸರಿಯಾಗಿ ಮಸಾಜ್ ನೀಡಬೇಕು. ಅವುಗಳಿಗೆ ಆರಾಮ ಎನ್ನಿಸಿದಾಗ ಸಹಜವಾಗಿ ದೈಹಿಕ ಒತ್ತಡವೂ ಕಡಿಮೆಯಾಗುತ್ತದೆ. ಈ ಬಿಂದುಗಳು ಮೆದುಳು, ಗ್ರಂಥಿ, ಮೇದೋಜೀರಕ ಗ್ರಂಥಿ ಸೇರಿದಂತೆ ದೇಹದ ಇತರ ಕೆಲವು ಭಾಗಗಳಿಗೆ ಆರಾಮ ಎನಿಸಿ ಸಂಪೂರ್ಣ ದೇಹಕ್ಕೆ ಪುನಶ್ಚೇತನ ಸಿಗುತ್ತದೆ.

ಮೃದುವಾದ ಚರ್ಮಕ್ಕೆ..

ಎಸೆನ್ಶಿಯಲ್ ಎಣ್ಣೆ ಬಳಕೆಯಿಂದ ಚರ್ಮವು ಮೃದುವಾಗುತ್ತದೆ. ವಯಸ್ಸಾದಂತೆ ಚರ್ಮದಲ್ಲಿ ನೆರಿಗೆ ಮೂಡುವುದು, ನೆರಿಗೆ ಬೀಳುವುದು, ಅಲ್ಲಲ್ಲಿ ಗಂಟಾಗುವುದು ಮುಂತಾದುವನ್ನು ತಡೆದು ವಯಸ್ಸಾದ ಲಕ್ಷಣಗಳು ಚರ್ಮದಲ್ಲಿ ಕಾಣಿಸದಂತೆ ನಿಯಂತ್ರಿಸುತ್ತದೆ. ಆಗಾಗ ಎಸೆನ್ಶಿಯಲ್ ಎಣ್ಣೆಯಿಂದ ಚರ್ಮಕ್ಕೆ ಮಸಾಜ್ ಮಾಡಿಕೊಳ್ಳುವುದರಿಂದ ಚರ್ಮವು ಒಣಗುವುದನ್ನು ತಡೆಯಬಹುದು, ಅಲ್ಲದೇ ಸದಾ ಕಾಂತಿಯಿಂದ ಹೊಳೆಯುವಂತೆ ನೋಡಿಕೊಳ್ಳಬಹುದು. ಇದರಿಂದ ಕಣ್ಣಿಗೆ ಒತ್ತಡ ಬೀಳುವುದನ್ನು ತಡೆಯಬಹುದು. ಅಲ್ಲದೇ ಕಣ್ಣಿಗೆ ದೃಷ್ಟಿ ಸುಧಾರಣೆಗೂ ನೆರವಾಗುತ್ತದೆ.

ಅಂಗಾಂಗಗಳ ಆರೋಗ್ಯಕ್ಕೆ..

ಈ ಎಣ್ಣೆಯಿಂದ ಮಸಾಜ್ ಮಾಡಿಸಿಕೊಳ್ಳುವುದರಿಂದ ದೇಹದ ವಿವಿಧ ಅಂಗಾಂಗಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತವೆ. ಇದು ರಕ್ತ ಸಂಚಾರವನ್ನು ಸುಗಮಗೊಳಿಸುತ್ತದೆ. ಹಾರ್ಮೋನ್‌ಗಳನ್ನು ಶಾಂತಗೊಳಿಸಿ ಹೃದಯ ಬಡಿತವನ್ನು ಸುಧಾರಿಸುತ್ತದೆ. ಅಲ್ಲದೇ ದೇಹದ ಅಂಗಾಂಗಗಳ ವ್ಯವಸ್ಥೆ ಸುಧಾರಣೆಗೂ ಇದು ಸಹಕಾರಿ.



ಗ್ರೀನ್ ಟೀ ಎಷ್ಟು ಕಪ್ ಸೇವಿಸಬಹುದು?





ಆರೋಗ್ಯ

ಗ್ರೀನ್ ಟೀ ಸೇವನೆ ದೇಹಾರೋಗ್ಯಕ್ಕೆ ಬಹಳ ಉತ್ತಮ ಎಂದು ಲಾಗಾಯ್ತಿನಿಂದ ತಜ್ಞರು ಹೇಳುತ್ತಲೇ ಬಂದಿದ್ದಾರೆ. ಹಲವರು ಇದನ್ನು ಬಳಸಿ ಒಳ್ಳೆಯ ಪರಿಣಾಮ ಪಡೆದಿದ್ದಾರೆ. ದೇಹದಲ್ಲಿನ ಕೊಬ್ಬು ಕರಗಿಸುವುದು, ಕೆಟ್ಟ ಕೊಲೆಸ್ಟ್ರಾಲ್ ಅಂಶವನ್ನು ಹೊರ ಹಾಕುವುದು.. ಹೀಗೆ ನಾನಾ ಕಾರಣಗಳಿಂದ ಪ್ರತಿದಿನ ಗ್ರೀನ್ ಟೀ ಸೇವಿಸುತ್ತಾರೆ. ಕೇವಲ ನಮ್ಮ ದೇಶದಲ್ಲಿ ಮಾತ್ರವಲ್ಲ, ವಿದೇಶಗಳಲ್ಲೂ ಗ್ರೀನ್ ಟೀಗೆ ಬೇಡಿಕೆ ಹೆಚ್ಚಿದೆ. ಇದರಲ್ಲಿ ಅಪಾರ ಪ್ರಮಾಣದ ಆ್ಯಂಟಿಆಕ್ಸಿಡೆಂಟ್ ಅಂಶವಿರುವ ಕಾರಣ ಇದರ ಸೇವನೆ ಉತ್ತಮ. ಯಾರೋ ಹೇಳಿದರು ಎಂದ ಮಾತ್ರಕ್ಕೆ ಬೆಳಿಗ್ಗೆಯೋ ಸಂಜೆಯೋ ಅಥವಾ ರಾತ್ರಿ ಮಲಗುವ ಮೊದಲೋ ಹೀಗೆ ಗ್ರೀನ್ ಟೀ ಕುಡಿಯುತ್ತೇವೆ. ಆದರೆ ದಿನದಲ್ಲಿ ಎಷ್ಟು ಪ್ರಮಾಣದಲ್ಲಿ ಈ ಪಾನೀಯ ಕುಡಿಯಬೇಕು ಎಂಬುದರ ಅರಿವು ಹಲವರಿಗಿರುವುದಿಲ್ಲ. ಜೊತೆಗೆ ಅದರ ಸೇವನೆಯಿಂದಾಗುವ ಉಪಯೋಗಗಳ ಬಗ್ಗೆಯೂ ಅರಿವಿರುವುದಿಲ್ಲ. ಇಲ್ಲಿದೆ ಈ ಕುರಿತು ಮಾಹಿತಿ...

ಗ್ರೀನ್ ಟೀ ಸೇವನೆಯ ಉಪಯೋಗ

ಗ್ರೀನ್ ಟೀ ಸೇವನೆಯ ಬಗ್ಗೆ ಒಂದೊಂದು ಅಧ್ಯಯನಗಳಲ್ಲಿ ಒಂದೊಂದು ರೀತಿ ವಿವರಿಸಲಾಗಿದೆ. ಅಧ್ಯಯನಗಳ ಪ್ರಕಾರ ಒಂದು ಕಪ್ ಗ್ರೀನ್ ಕುಡಿಯುವವರಿಗೂ ಹಾಗೂ 5 ಕಪ್ ಗ್ರೀನ್ ಟೀ ಕುಡಿಯುವವರಿಗೂ ಭಿನ್ನ ರೀತಿಯ ಆರೋಗ್ಯಕ್ಕೆ ಸಂಬಂಧಿಸಿ ಉಪಯೋಗಗಳಿವೆ.

ಚಯಾಪಚಯ ಕ್ರಿಯೆ

ಗ್ರೀನ್ ಟೀ ಸೇವನೆಯಿಂದ ಮನುಷ್ಯನ ದೇಹದಲ್ಲಿ ಚಯಾಪಚಯ ಕ್ರಿಯೆ ಉತ್ತಮಗೊಳ್ಳುತ್ತದೆ. ಇದರಲ್ಲಿ ಕ್ಯಾಟೆಚಿನ್ ಹಾಗೂ ಕೆಫೀನ್ ಎಂಬ ಎರಡು ಅಂಶಗಳು ಅಧಿಕವಾಗಿದ್ದು ಇವು ಜೀರ್ಣಕ್ರಿಯೆಯನ್ನು ಉತ್ತಮಗೊಳಿಸುತ್ತವೆ. ಜೊತೆಗೆ ದೇಹದಲ್ಲಿನ ಕೊಬ್ಬಿನಾಂಶ ಹೊರ ಹಾಕಲು ಇದು ಸಹಕಾರಿ.

ಉರಿಯೂತ ಕಡಿಮೆ ಮಾಡುತ್ತದೆ


ಗ್ರೀನ್ ಟೀಯಲ್ಲಿ ಉರಿಯೂತವನ್ನು ಕಡಿಮೆ ಮಾಡುವ ಅಂಶವಿದೆ. ಉರಿಯೂತವು ಮಧುಮೇಹ ಹಾಗೂ ಅಧಿಕ ರಕ್ತದೊತ್ತಡದೊಂದಿಗೆ ಸಂಪರ್ಕ ಹೊಂದಿದೆ.

ಹೃದಯಾಘಾತ ಹಾಗೂ ಸ್ಟ್ರೋಕ್ ತಡೆಗೆ

ಗ್ರೀನ್ ಟೀಯಲ್ಲಿನ ಕೆಲವು ಅಂಶಗಳು ಹೃದಯಾಘಾತ, ಸ್ಟ್ರೋಕ್ ಹಾಗೂ ಕೆಲವು ಕ್ಯಾನರ್‌ಗೆ ಸಂಬಂಧಿಸಿದ ರೋಗಗಳನ್ನು ಆರಂಭದಲ್ಲೇ ನಿಯಂತ್ರಿಸುತ್ತವೆ. ಜಪಾನ್ ಮೂಲದ ಅಧ್ಯಯನವೊಂದರ ಪ್ರಕಾರ ದಿನಕ್ಕೆ ಒಂದು ಅಥವಾ ಅದಕ್ಕಿಂತ ಕಡಿಮೆ ಕಪ್ ಗ್ರೀನ್ ಕುಡಿಯುವವರಿಗಿಂತ, ಐದು ಅಥವಾ ಐದಕ್ಕಿಂತ ಹೆಚ್ಚು ಕಪ್ ಗ್ರೀನ್ ಟೀ ಕುಡಿಯುವವರಲ್ಲಿ ಹೃದಯಕ್ಕೆ ಸಂಬಂಧಿಸಿದ ತೊಂದರೆಯಿಂದಾಗಿ ಸಾಯುವವರ ಸಂಖ್ಯೆ ಶೇ 16ಕ್ಕಿಂತಲೂ ಕಡಿಮೆ ಇದೆ ಹಾಗೂ ಬೇರೆ ಯಾವುದೇ ರೀತಿಯಿಂದ ಸಾಯುವವರ ಸಂಖ್ಯೆ ಶೇ 26 ಕ್ಕಿಂತಲೂ ಕಡಿಮೆ ಇದೆಯಂತೆ.

ದಿನದಲ್ಲಿ ಎಷ್ಟು ಪ್ರಮಾಣದಲ್ಲಿ ಗ್ರೀನ್ ಟೀ ಸೇವಿಸಬೇಕು?

- ಅಧ್ಯಯನಗಳ ಪ್ರಕಾರ ದಿನದಲ್ಲಿ ಮೂರರಿಂದ ಆರು ಕಪ್‌ಗಳಷ್ಟು ಗ್ರೀನ್ ಟೀ ಕುಡಿಯುವುದು ಉತ್ತಮ.
- ಟೈಪ್ -2 ಮಧುಮೇಹದ ತೊಂದರೆ ಹೊಂದಿರುವವರು ಮೂರು ಅಥವಾ ಅದಕ್ಕಿಂತ ಹೆಚ್ಚು ಕಪ್ ಟೀ ಸೇವಿಸುವುದು ಸೂಕ್ತ.
- ಹೃದಯದ ಸಮಸ್ಯೆಯಿಂದ ಸಾವನ್ನಪ್ಪುವವರ ಸಂಖ್ಯೆ ಇತ್ತೀಚೆಗೆ ಹೆಚ್ಚುತ್ತಿದೆ. ದಿನಕ್ಕೆ ಐದು ಕಪ್‌ನಷ್ಟು ಗ್ರೀನ್ ಟೀ ಕುಡಿಯುವವರಲ್ಲಿ ಹೃದಯ ಸಮಸ್ಯೆ ಪ್ರಮಾಣ ಕಡಿಮೆ ಇದೆ ಎನ್ನುತ್ತದೆ ಅಧ್ಯಯನ. ಅಷ್ಟೇ ಅಲ್ಲದೇ 65 ವರ್ಷಕ್ಕಿಂತ ಮೇಲಿನವರು ದಿನದಲ್ಲಿ ಮೂರರಿಂದ ಐದು ಕಪ್ ಗ್ರೀನ್ ಟೀ ಕುಡಿಯುವುದರಿಂದ ಅವರಲ್ಲಿ ನರವ್ಯೂಹಕ್ಕೆ ಸಂಬಂಧಿಸಿದ ಚಟುವಟಿಕೆಗಳು ಸುಧಾರಿಸುತ್ತವೆ.
- ಆತಂಕ, ನಿದ್ರಾಹೀನತೆಯಂತಹ ಮಾನಸಿಕ ಸಮಸ್ಯೆಯಿಂದ ಬಳಲುವವರು ಗ್ರೀನ್ ಟೀ ಸೇವನೆಯ ಪ್ರಮಾಣವನ್ನು ಕಡಿಮೆ ಮಾಡುವುದು ಉತ್ತಮ.
- ದಿನಕ್ಕೊಂದು ಕಪ್ ಗ್ರೀನ್ ಟೀ ಕುಡಿಯುವುದರಿಂದ ಹಲವು ರೀತಿಯಲ್ಲಿ ಆರೋಗ್ಯಕ್ಕೆ ಉಪಯೋಗಗಳಿವೆ. ಗ್ರೀನ್ ಟೀಯನ್ನು ಒಮ್ಮೆಲೆ ಐದಾರು ಕಪ್ ಕುಡಿಯುವ ಅಭ್ಯಾಸ ಬೇಡ. ನಿಧಾನಕ್ಕೆ ಒಂದು ಕಪ್‌ನಿಂದ ಆರಂಭಿಸಿ, ನಂತರ ದಿನದಲ್ಲಿ 3-4 ಕಪ್‌ವರೆಗೆ ಅಭ್ಯಾಸ ಮಾಡಿಕೊಳ್ಳಿ.



ಸಂಭವ್ ಈಜಿನ ಪರಿ– ಪ್ರಜಾವಾಣಿ ಚಿತ್ರ/ಬಿ.ಎಚ್.ಶಿವಕುಮಾರ್

ಸಂಭವ್‌ಗೆ ಒಲಿಂಪಿಕ್ಸ್ ಪದಕವೇ ಗುರಿ

ಕ್ರೀಡೆ

ಬಸವರಾಜ ದಳವಾಯಿ

ಒಂಬತ್ತರ ಎಳವೆಯಲ್ಲೇ ಈಜುಕೊಳಕ್ಕಿಳಿದ ಬೆಂಗಳೂರಿನ ಪ್ರತಿಭೆ ಸಂಭವ್ ಆರ್. ಕಡಿಮೆ ಅವಧಿಯಲ್ಲೇ ಸಂಚಲನ ಸೃಷ್ಟಿಸಿರುವ 17ರ ಹರೆಯದ ಈ ಹುಡುಗ, ದೇಶದ ಪ್ರಮುಖ ಈಜುಪಟುವಾಗುವ ಭರವಸೆ ಮೂಡಿಸಿದ್ದಾರೆ. ರಾಜ್ಯ, ರಾಷ್ಟ್ರೀಯ ಚಾಂಪಿಯನ್‌ಶಿಪ್‌ಗಳಲ್ಲಿ ಮಿಂಚುತ್ತಿದ್ದಾರೆ.

ಸಂಭವ್ ತಂದೆ ರಾಮರಾವ್ ಅವರು ಭಾರತೀಯ ಸೇನೆಯಲ್ಲಿ ನಾಯಕ್ ಸುಬೇದಾರ್ ಆಗಿದ್ದು, ಮಗನ ಸಾಧನೆಗೆ ಸದಾ ಬೆಂಬಲವಾಗಿದ್ದಾರೆ. ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದು ದೇಶಕ್ಕೆ ಕೀರ್ತಿ ತರಬೇಕೆಂಬ ಉಮೇದು ಸಂಭವ್ ಅವರದು.

‘ಕ್ರೀಡೆಗಳಲ್ಲಿ ನನಗೆ ಮೊದಲು ಅಷ್ಟೊಂದು ಆಸಕ್ತಿ ಇರಲಿಲ್ಲ. ಅಷ್ಟೊಂದು ಸಶಕ್ತನೂ ಆಗಿರಲಿಲ್ಲ. ಪೋಷಕರ ಪ್ರೋತ್ಸಾಹದಿಂದಾಗಿ ಕ್ರಮೇಣ ಆಸಕ್ತಿ ಚಿಗುರತೊಡಗಿತು. 2016ರಿಂದ ಸ್ಪರ್ಧಾತ್ಮಕ ಈಜುಸ್ಪರ್ಧೆಗಳ ಕಣಕ್ಕಿಳಿಯತೊಡಗಿದೆ. ಅದಕ್ಕೆ ತಕ್ಕಂತೆ ಉತ್ತಮ ತರಬೇತಿಯೂ ದೊರೆಯತೊಡಗಿತು’ ಎನ್ನುತ್ತಾರೆ ಸಂಭವ್.

ಇತ್ತೀಚೆಗೆ ನಡೆದ ರಾಜ್ಯ ಚಾಂಪಿಯನ್‌ಶಿಪ್‌ನಲ್ಲಿ ಐದು ಚಿನ್ನದ ಪದಕಗಳು ಅವರ ಮುಡಿಗೇರಿದ್ದವು. ಇಲ್ಲಿಯವರೆಗೆ ಒಟ್ಟು 23ಕ್ಕಿಂತ ಹೆಚ್ಚು ಪದಕಗಳು ಅವರಿಗೆ ಸಂದಿವೆ. ಸದ್ಯ ಬೆಂಗಳೂರಿನ ಬಸವನಗುಡಿ ಈಜು ಕೇಂದ್ರದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಜೂನಿಯರ್ ಚಾಂಪಿಯನ್‌ಶಿಪ್‌ನ 200 ಮೀಟರ್ ಫ್ರೀಸ್ಟೈಲ್ ವಿಭಾಗದಲ್ಲಿ ಅವರು ದಾಖಲೆಯೊಂದಿಗೆ ಚಿನ್ನ ಗೆದ್ದಿದ್ದಾರೆ. ರಾಜ್ಯದವರೇ ಆದ, ಒಲಿಂಪಿಯನ್ ಶ್ರೀಹರಿ ನಟರಾಜ್ ಅವರು ಮೂರು ವರ್ಷಗಳ ಹಿಂದೆ ಸ್ಥಾಪಿಸಿದ್ದ ದಾಖಲೆಯನ್ನು ಮೀರಿದ್ದರು.

ಸಂಭವ್ ಅವರ ಇನ್ನೊಂದು ನೆಚ್ಚಿನ ವಿಭಾಗ ಬಟರ್‌ಫ್ಲೈ ಆಗಿದೆ.

‘ಕೋವಿಡ್ ನಿಯಂತ್ರಿಸಲು ಹೇರಲಾದ ಲಾಕ್‌ಡೌನ್‌ನಿಂದಾಗಿ ಅಭ್ಯಾಸಕ್ಕೆ ಹೆಚ್ಚು ತೊಂದರೆಯಾಯಿತು. ವರ್ಷಕ್ಕೂ ಹೆಚ್ಚು ಕಾಲ ಈಜುಕೊಳಗಳು ಲಭ್ಯವಿಲ್ಲದ್ದರಿಂದ ತರಬೇತಿ ಸಂಪೂರ್ಣ ನಿಂತುಹೋಗಿತ್ತು. ಜಿಮ್ ಕೇಂದ್ರಗಳೂ ಮುಚ್ಚಿದ್ದರಿಂದ ಫಿಟ್‌ನೆಸ್ ಕಾಯ್ದುಕೊಳ್ಳುವುದು ಸವಾಲಾಗಿತ್ತು. ಆದರೂ ಮನೆಯಲ್ಲೇ ಸಣ್ಣಪುಟ್ಟ ವ್ಯಾಯಾಮಗಳ ಮೂಲಕ ನಿಭಾಯಿಸಿದೆ. ರನ್ನಿಂಗ್‌ಗಳಲ್ಲೇ ಹೆಚ್ಚು ತೊಡಗಿಸಿಕೊಂಡೆ’ ಎಂದರು ಸಂಭವ್.

ಬೆಂಗಳೂರು ಈಜು ಸಂಶೋಧನಾ ಕೇಂದ್ರ (ಬಿಎಆರ್‌ಸಿ) ಕ್ಲಬ್‌ನಲ್ಲಿ ತರಬೇತಿ ಪಡೆಯುತ್ತಿರುವ ಸಂಭವ್ ಅವರಿಗೆ ಮುಖ್ಯ ಕೋಚ್ ಜೈರಾಜ್ ಮಾರ್ಗದರ್ಶನ ನೀಡುತ್ತಿದ್ದಾರೆ.

ಒಲಿಂಪಿಕ್ಸ್ ಪದಕದ ಗುರಿ ಇಟ್ಟುಕೊಂಡಿರುವ ಸಂಭವ್, ಅರ್ಹತೆ ಗಳಿಸುವತ್ತ ನಿರಂತರ ಪ್ರಯತ್ನ ನಡೆಸಿದ್ದೇನೆ ಎನ್ನುತ್ತಾರೆ. ಅಬುಧಾಬಿಯಲ್ಲಿ ಇದೇ ಡಿಸೆಂಬರ್‌ನಲ್ಲಿ ನಡೆಯಲಿರುವ ಫಿನಾ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಶಿಪ್ ಅವರ ಮುಂದಿರುವ ಸದ್ಯದ ಪ್ರಮುಖ ಗುರಿ.



ಸಂಭವ್ ಆರ್. – ಪ್ರಜಾವಾಣಿ ಚಿತ್ರ



ನೂತನ ತಂತ್ರಜ್ಞಾನದೊಂದಿಗೆ ತೆರೆಗೆ ಬರಲಿದೆ ಭಾಗ್ಯವಂತರು

ಸಿನಿಮಾ


ಭಾರ್ಗವ ಅವರ ನಿರ್ದೇಶನದಲ್ಲಿ ವರನಟ ಡಾ. ರಾಜಕುಮಾರ್ ಹಾಗೂ ಬಿ. ಸರೋಜಾದೇವಿ ಅವರು ನಟಿಸಿದ್ದ ಸೂಪರ್ ಹಿಟ್ ಚಿತ್ರ ‘ಭಾಗ್ಯವಂತರು’.

ಈ ಚಿತ್ರವು ನವೆಂಬರ್‌ನಲ್ಲಿ ಡಿ.ಐ, 7.1 ಟ್ರ್ಯಾಕ್ ಸೇರಿದಂತೆ ಹಲವು ನವೀನ ತಂತ್ರಜ್ಞಾನ ಅಳವಡಿಕೆಯೊಂದಿಗೆ ಮರು ಬಿಡುಗಡೆಯಾಗುತ್ತಿದೆ. ಮುನಿರಾಜು ಈ ಚಿತ್ರವನ್ನು ಮತ್ತೆ ತೆರೆ ಮೇಲೆ ತರುತ್ತಿದ್ದಾರೆ.

ನನ್ನ ಮೊದಲ ನಿರ್ದೇಶನದ ಚಿತ್ರ ‘ಭಾಗ್ಯವಂತರು’. ದ್ವಾರಕೀಶ್ ಈ ಚಿತ್ರದ ನಿರ್ಮಾಪಕರು. ‘ನಾನು ಆಗಲೇ ರಾಜಕುಮಾರ್ ಅವರು ನಟಿಸಿದ್ದ ಬಬ್ರುವಾಹನ, ನಾ ನಿನ್ನ ಮರೆಯಲಾರೆ, ಜಗ ಮೆಚ್ಚಿದ ಮಗ ಸೇರಿದಂತೆ ಅನೇಕ ಚಿತ್ರಗಳಿಗೆ ಸಹ ನಿರ್ದೇಶನ ಮಾಡಿದ್ದೆ. ಹಾಗಾಗಿ ರಾಜ್ ಅವರಿಗೆ ನನ್ನ ಮೇಲೆ ವಿಶೇಷ ಪ್ರೀತಿ. ನನಗೂ ಅವರೆಂದರೆ ಅಷ್ಟೇ ಪ್ರೀತಿ. ನಿರ್ಮಾಪಕ ದ್ವಾರಕೀಶ್ ಹಾಗು ರಾಜಕುಮಾರ್ ಇಬ್ಬರೂ ನೀವೇ ಈ ಚಿತ್ರ ನಿರ್ದೇಶನ ಮಾಡಿ ಎಂದರು. ಹಾಗಾಗಿ 44 ವರ್ಷಗಳ ಹಿಂದೆ ‘ಭಾಗ್ಯವಂತರು’ ಚಿತ್ರವನ್ನು ನಿರ್ದೇಶಿಸಿದ್ದೆ. ನನ್ನ ಮೊದಲ ನಿರ್ದೇಶನದ ಚಿತ್ರವೇ ಸೂಪರ್ ಹಿಟ್ ಆಯಿತು. ಈಗ ಮುನಿರಾಜು ನೂತನ ತಂತ್ರಜ್ಞಾನ ಅಳವಡಿಕೆಯೊಂದಿಗೆ ಈ ಚಿತ್ರವನ್ನು ಮರು ಬಿಡುಗಡೆ ಮಾಡುತ್ತಿದ್ದಾರೆ ಅವರಿಗೆ ಒಳ್ಳೆಯದಾಗಲಿ’ ಎಂದರು ಹಿರಿಯ ನಿರ್ದೇಶಕ ಭಾರ್ಗವ.

‘ನಾನು ಅಪ್ಪಟ ಅಣ್ಣಾವ್ರ ಅಭಿಮಾನಿ. ರಾಜಕುಮಾರ್ ಎಂದರೆ ನನ್ನ ಪ್ರಾಣ. 1978 ನೇ ಇಸವಿಯಿಂದ ಕನ್ನಡ ಚಿತ್ರರಂಗದೊಂದಿಗೆ ನಂಟು ಹೊಂದಿದ್ದೇನೆ. ಹದಿನೆಂಟು ವರ್ಷಗಳ ಕಾಲ ವಜ್ರೇಶ್ವರಿ ಸಂಸ್ಥೆಯಲ್ಲಿ ಕೆಲಸ ಮಾಡಿದ್ದೇನೆ. ಪಾರ್ವತಮ್ಮ ರಾಜಕುಮಾರ್ ಅವರೇ ನನ್ನನ್ನು ಮೊದಲು ಚಿತ್ರಮಂದಿರದ ಆರ್‌ಪಿಯಾಗಿ ನೇಮಕ ಮಾಡಿ ಯಳಂದೂರಿಗೆ ಕಳುಹಿಸಿದ್ದರು. ನಾನು ಮೊದಲು ಮರು ಬಿಡುಗಡೆ ಮಾಡಿದ ಚಿತ್ರ ಆಪರೇಷನ್ ಡೈಮಂಡ್ ರಾಕೆಟ್. ನಂತರ ನಾನೊಬ್ಬ ಕಳ್ಳ.. ಹೀಗೆ ರಾಜಕುಮಾರ್ ಅವರ ನಾಲ್ಕೈದು ಚಿತ್ರಗಳನ್ನು ಮರು ಬಿಡುಗಡೆ ಮಾಡಿದ್ದೇನೆ. ಈಗ ‘ಭಾಗ್ಯವಂತರು’ ಚಿತ್ರವನ್ನು ಸುಮಾರು ನೂರೈವತ್ತಕ್ಕೂ ಹೆಚ್ಚಿನ ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡುತ್ತಿದ್ದೇನೆ. ನಿಮ್ಮೆಲ್ಲರ ಪ್ರೋತ್ಸಾಹವಿರಲಿ’ ಎಂದು ವಿವರಣೆ ನೀಡಿದ್ದಾರೆ ಮುನಿರಾಜು.

‘ಸಖತ್ ಬಾಲು’ವಾಗಿ ಬರಲಿದ್ದಾರೆ ಗೋಲ್ಡನ್ ಸ್ಟಾರ್ ಗಣೇಶ್!



ಸಖತ್ ಸಿನಿಮಾದಲ್ಲಿ ನಿಶ್ವಿಕಾ ನಾಯ್ಡು ಹಾಗೂ ಗಣೇಶ್

ಗೋಲ್ಡನ್ ಸ್ಟಾರ್ ಗಣೇಶ್ ಅಭಿನಯದ, ಸಿಂಪಲ್ ಸುನಿ ನಿರ್ದೇಶನದ ಚಿತ್ರ ‘ಸಖತ್’ನ ಟೀಸರ್ ಇದೇ 24ರಂದು ಬಿಡುಗಡೆಯಾಗಲಿದ್ದು, ಟೀಸರ್‌ನಲ್ಲಿ ‘ಸಖತ್ ಬಾಲು’ ಎಂಬ ಪಾತ್ರದಲ್ಲಿ ಗಣೇಶ್ ಕಾಣಿಸಿಕೊಳ್ಳಲಿದ್ದಾರೆ.

ಸಿಂಪಲ್ ಸುನಿ, ಗಣೇಶ್ ಕಾಂಬಿನೇಶನ್‌ನಲ್ಲಿ ಬರುತ್ತಿರುವ ಎರಡನೇ ಸಿನಿಮಾ ಇದಾಗಿದ್ದು, ಟೈಟಲ್‌ನಿಂದಲೇ ಸಾಕಷ್ಟು ನಿರೀಕ್ಷೆಯನ್ನು ಸಿನಿಮಾ ಹುಟ್ಟಿಸಿದೆ. ಚಿತ್ರದಲ್ಲಿ ಕುರುಡನ ಪಾತ್ರದಲ್ಲಿ ಗಣೇಶ್ ನಟಿಸಿದ್ದಾರೆ. ‘ಈ ಪಾತ್ರ ನನಗೆ ಸವಾಲಾಗಿದೆ. ಯಾವತ್ತೂ ತೆರೆಯ ಮೇಲೆ ಕಾಣಿಸದೇ ಇರುವ ಗಣೇಶ್‌ನನ್ನು ತೆರೆಯ ಮೇಲೆ ತೋರಿಸಬೇಕು. ಯಾವತ್ತೂ ಮಾಡದೇ ಇರುವ ಪಾತ್ರವಿದು. ನಮ್ಮ ಮೇಲೆ ನಂಬಿಕೆ ಇಟ್ಟು ಬರುವ ನಿರ್ದೇಶಕರು ಊಹಿಸಿದಕ್ಕಿಂತಲೂ ಚೆನ್ನಾಗಿ ನಾವು ಆ ಪಾತ್ರ ನಿಭಾಯಿಸಬೇಕು. ‘ಸಖತ್’ ಸಿನಿಮಾ ಬಹಳ ಮನರಂಜನೆ ಹಾಗೂ ಥ್ರಿಲ್ ನೀಡಲಿದೆ’ ಎಂದು ಪ್ರಜಾವಾಣಿಗೆ ಇತ್ತೀಚೆಗೆ ನೀಡಿದ ಸಂದರ್ಶನದಲ್ಲಿ ಗಣೇಶ್ ಹೇಳಿದ್ದರು.

ಚಿತ್ರದ ‘ಪ್ರೇಮಕ್ಕೆ ಕಣ್ಣಿಲ್ಲಾ’ ಎಂಬ ಹಾಡು ಇತ್ತೀಚೆಗಷ್ಟೇ ಬಿಡುಗಡೆಯಾಗಿತ್ತು. ಸದ್ಯ ಚಿತ್ರದ ಪ್ರಚಾರ ಕಾರ್ಯವನ್ನು ಚಿತ್ರತಂಡ ಆರಂಭಿಸಿದೆ. ರೊಮ್ಯಾಂಟಿಕ್ ಕಾಮಿಡಿ ಕ್ರೈಂ ಥ್ರಿಲ್ಲರ್ ಕಥಾಹಂದರವನ್ನು ಚಿತ್ರ ಒಳಗೊಂಡಿದೆ. ಟಿವಿ ರಿಯಾಲಿಟಿ ಶೋ ಹಾಗೂ ಕೋರ್ಟ್ ಕೇಸ್ ಸುತ್ತ ಸಿನಿಮಾ ಕಥೆ ಹೆಣೆಯಲಾಗಿದೆ. ಗಣೇಶ್ ರಿಯಾಲಿಟಿ ಶೋ ಸ್ಪರ್ಧಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ನಟಿ ನಿಶ್ವಿಕಾ ನಾಯ್ಡು ಹಾಗೂ ಸುರಭಿ ಚಿತ್ರದಲ್ಲಿ ನಾಯಕಿಯರಾಗಿ ನಟಿಸಿದ್ದಾರೆ.

ಚಿತ್ರಕ್ಕೆ ನಿಶಾ ವೆಂಕಟ್ ಕೋನನ್ಕಿ, ಭರಾಟೆ ಖ್ಯಾತಿಯ ಸುಪ್ರಿತ್ ಬಂಡವಾಳ ಹೂಡಿದ್ದು, ಜ್ಯೂಡಾ ಸ್ಯಾಂಡಿ ಸಂಗೀತ ನಿರ್ದೇಶನವಿದೆ. ಸಂತೋಷ್ ರೈ ಪಾತಾಜೆ ಛಾಯಾಗ್ರಹಣ ಚಿತ್ರಕ್ಕಿದೆ. ಚಿತ್ರೀಕರಣ ಪೂರ್ಣಗೊಳಿಸಿ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಚಿತ್ರತಂಡ ಸದ್ಯ ತಲ್ಲೀನವಾಗಿದೆ. ನವೆಂಬರ್ ಅಂತ್ಯದಲ್ಲಿ ಸಿನಿಮಾ ಬಿಡುಗಡೆಗೆ ಚಿತ್ರತಂಡ ತಯಾರಿ ನಡೆಸುತ್ತಿದೆ.

ಮರಳಿ ಬಂತು ರಂಗಶಂಕರ ನಾಟಕೋತ್ಸವ

ರಂಗಭೂಮಿ



ಕೋವಿಡ್ ಕಾರಣಕ್ಕಾಗಿ ಕೆಲಕಾಲ ಸ್ಥಗಿತವಾಗಿದ್ದ ರಂಗಚಟುವಟಿಕೆಗಳು ನಗರದಲ್ಲಿ ಪುನರಾರಂಭವಾಗಿದ್ದು, ರಂಗಶಂಕರದ ನಾಟಕೋತ್ಸವ ಮತ್ತೆ ಮರಳಿ ಬಂದಿದೆ. ಈ ವರ್ಷ 17ನೇ ವರ್ಷಕ್ಕೆ ಪದಾರ್ಪಣೆ ಮಾಡಿರುವ ರಂಗಶಂಕರದಲ್ಲಿ ಇದೇ ಅ. 27ರಿಂದ 31ರವರೆಗೆ ಐದು ನಾಟಕಗಳು ಪ್ರದರ್ಶನವಾಗಲಿವೆ.

ರಂಗದ ಮೇಲೆ ಭೌತಿಕವಾಗಿ ಅಥವಾ ಡಿಜಿಟಲ್ ಎರಡೂ ರೂಪದಲ್ಲಿ ಈ ಬಾರಿಯ ನಾಟಕೋತ್ಸವ ನಡೆಯುತ್ತಿರುವುದು ವಿಶೇಷ.

‘ಜೀವಂತಿಕೆಯಿಂದಿರುವುದು’ ಅಥವಾ ‘ಜೀವಂತವಾಗಿ ಉಳಿಯುವುದು’ ಈ ಬಾರಿ ನಾಟಕೋತ್ಸವ ಮೂಲ ಉದ್ದೇಶವಾಗಿದೆ. ನಮ್ಮ ಕಲೆಗಳನ್ನು ಹಂಚಿಕೊಳ್ಳುವುದು, ಸಂಭ್ರಮಿಸುವುದು, ಆಚರಿಸುವುದು ಸೇರಿದಂತೆ ಜೀವಂತಿಕೆ ಅನ್ನುವ ಪದಕ್ಕೆ ಹಲವು ಆಯಾಮಗಳಿವೆ. ಈ ಬಾರಿಯ ನಾಟಕೋತ್ಸವದಲ್ಲಿ ನಾವು ಪ್ರೇಕ್ಷಕರೊಂದಿಗೆ ಹಂಚಿಕೊಳ್ಳಲಿರುವ ಕಥೆಗಳು ಸಂತೋಷ, ದುಃಖ, ಚಿಂತನೆ ಮತ್ತು ಸತ್ಯವನ್ನು ಬೆಳಗಿಸುವ ಮೂಲಕ ಪ್ರೇಕ್ಷಕರನ್ನು ಜಗತ್ತಿನೆಡೆಗೆ ಸೆಳೆಯುವಂಥವು’ ಎಂದು ರಂಗಶಂಕರದ ವ್ಯವಸ್ಥಾಪಕ ಟ್ರಸ್ಟಿ ಮತ್ತು ಕಲಾತ್ಮಕ ಸಲಹೆಗಾರರಾದ ಅರುಂಧತಿ ನಾಗ್ ಹೇಳುತ್ತಾರೆ.

ರಂಗಶಂಕರ 17ನೇ ವರ್ಷದ ಸಂಭ್ರಮದಲ್ಲಿರುವುದರಿಂದ ಈ ಬಾರಿ ರಂಗಶಂಕರದ ವಾಸ್ತುಶಿಲ್ಪ ಮತ್ತು ಅದರ ಇತಿಹಾಸ ಕುರಿತು ಕಟ್ಟಡದ ಅಲ್ಲಲ್ಲಿ ಸಣ್ಣಸಣ್ಣ ತುಣುಕುಗಳನ್ನು ಪ್ರದರ್ಶಿಸಲಾಗುತ್ತದೆ. 5 ದಿನಗಳ ಕಾಲ ನಡೆಯುವ ನಾಟಕೋತ್ಸವದಲ್ಲಿ ವಿಭಿನ್ನ ವಿಷಯಗಳ ಕುರಿತು 5 ನಾಟಕಗಳು ಪ್ರೇಕ್ಷಕರನ್ನು ರಂಜಿಸಲಿವೆ ಎನ್ನುತ್ತಾರೆ ಆಯೋಜಕರು.

1 ಕಾಂತ ಮತ್ತು ಕಾಂತ (ರಚನೆ, ನಿರ್ದೇಶನ: ಸುರೇಂದ್ರನಾಥ್ ಎಸ್. ತಂಡ: ಸಂಕೇತ್, ಅವಧಿ: 90 ನಿಮಿಷ)



ರಂಗಭೂಮಿಯ ಹಿರಿಯ ನಟರಿಬ್ಬರ ಕುರಿತ ಕಥೆಯನ್ನೊಳಗೊಂಡಿರುವ ನಾಟಕ ‘ಕಾಂತ ಮತ್ತ ಕಾಂತ’. ಪ್ರತಿಭಾವಂತರಾಗಿರುವ ಈ ಇಬ್ಬರು ನಟರಿಗೆ ಅಹಂಕಾರವೇ ದೊಡ್ಡ ಸಮಸ್ಯೆ. ಒಂದು ಕಾಲದಲ್ಲಿ ರಂಗದ ಮೇಲೆ ಜನಪ್ರಿಯ ಜೋಡಿಯಾಗಿದ್ದ ಈ ಇಬ್ಬರೂ ದೀರ್ಘಕಾಲದಿಂದ ಮಾತು ಬಿಟ್ಟು, ಪರಸ್ಪರ ಭೇಟಿಯೂ ಆಗಿರುವುದಿಲ್ಲ. 16 ವರ್ಷಗಳ ಕಾಲ ಪರಸ್ಪರ ದೂರವಿದ್ದ ಈ ರಂಗಜೋಡಿಗೆ ವೇದಿಕೆಯ ಮೇಲೆ ಒಟ್ಟಿಗೇ ಕಾಣಿಸಿಕೊಳ್ಳಬೇಕೆಂಬ ತುಡಿತ ಒಳಗೊಳಗೇ ಇರುತ್ತದೆ. ಆಕಸ್ಮಿಕವೆಂಬಂತೆ ಇಬ್ಬರೂ ಒಮ್ಮೆ ಒಟ್ಟಿಗೆ ಒಂದೇ ವೇದಿಕೆಯೇರಿದಾಗ ಅವರಿಬ್ಬರ ನಡುವೆ ಮತ್ತು ಜುಗಲ್ ಬಂದಿ ಆಯಿತೇ ಎಂಬುದು ನಾಟಕದ ಕುತೂಹಲದ ಕೇಂದ್ರಬಿಂದು.

2 ಲಾಕ್‌ಡೌನ್ (ರಚನೆ, ನಿರ್ದೇಶನ: ಅಭಿಷೇಕ್ ಅಯ್ಯಂಗಾರ್, ತಂಡ: ವೀಮೂವ್ ಥಿಯೇಟರ್ ಬೆಂಗಳೂರು. ಅವಧಿ: 50–60 ನಿಮಿಷ)

‘ಲಾಕ್‌ಡೌನ್’ ನಾಟಕವು ನಗರ, ಗ್ರಾಮೀಣ ಮತ್ತು ಅಂತರರಾಷ್ಟ್ರೀಯ ಪರಿಸರ ವ್ಯವಸ್ಥೆಯಲ್ಲಿನ ಸವಾಲುಗಳ ಕಥೆಯನ್ನು ಹೊಂದಿದೆ. ನಾಲ್ಕು ಕಥೆಗಳ ಸಂಕಲನದ ಒಟ್ಟು ರೂಪವಾಗಿರುವ ಈ ನಾಟಕವು ಸಂಬಂಧಗಳ ಮಹತ್ವವನ್ನು ಸಾರುತ್ತದೆ. ಅನಿಶ್ಚಿತತೆಯ ಸಮಯದಲ್ಲಿ ಸಂಬಂಧವು ಹೇಗೆ ರೂಪಿತವಾಗುತ್ತದೆ ಎನ್ನುವುದನ್ನು ಮಗಳು–ಮಲತಾಯಿ, ನವವಿವಾಹಿತ ಜೋಡಿ, ದತ್ತು ಮೊಮ್ಮಗ ಮತ್ತು ಒಂಟಿ ಹೆಂಡತಿಯ ಕಥೆಯ ಮೂಲಕ ಅನಾವರಣಗೊಳಿಸುತ್ತದೆ.



3 ಜುಂಡ್ (ಹಿಂದಿನಾಟಕ) (ರಚನೆ, ನಿರ್ದೇಶನ: ಚಾಣಕ್ಯ ವ್ಯಾಸ್, ತಂಡ: ಭಾರತೀಯ ಮೇಳ ಬೆಂಗಳೂರು, ಅವಧಿ: 60–70 ನಿಮಿಷ)

‘ಜುಂಡ್’ ಹಿಂದಿ ನಾಟಕ : ಸ್ಟ್ರಿಪ್‌ಟೀಸ್, ಸ್ಲಾವೊಮಿರ್ ವ್ರೋಜೆಕ್ ಎನ್ನುವ ಎರಡು ಕೃತಿಗಳು ಮತ್ತು ಗುಜರಾತಿ ಲೇಖಕ ಘನಶ್ಯಾಮ್ ದೇಸಾಯಿ ಅವರ ‘ತೋಡು’ ಸಣ್ಣ ಕಥೆಯನ್ನೊಳಗೊಂಡಿರುವ ನಾಟಕ. ಹೊರಗಿನ ಅಪರಿಚಿತ ಮತ್ತು ಅಪಾಯಕಾರಿ ಘಟನೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುವಾಗ, ಮುಚ್ಚಿದ ಕೋಣೆಗೆ ಬಲವಂತವಾಗಿ ಬಂದ ಎರಡು ಪಾತ್ರಗಳ ಸುತ್ತ ನಾಟಕ ಕೇಂದ್ರೀಕೃತವಾಗಿದೆ.



4 ಕಾಮರೂಪಿಗಳು (ರಂಗರೂಪ, ನಿರ್ದೇಶನ: ಗಣೇಶ್ ಮಂದಾರ್ತಿ, ತಂಡ: ಸಂಚಯ ಬೆಂಗಳೂರು, ಅವಧಿ: 75 ನಿಮಿಷ)

‘ಕಾಮರೂಪಿಗಳು’ ನಾಟಕ ರಾಮಾಯಣದ ಅಮೂರ್ತವಾಗಿದ್ದು, ಶೂರ್ಪನಖಿಯ ವಿಘಟನೆಯಿಂದ ಆರಂಭವಾಗಿ ಜಟಾಯುವಿನ ಮರಣದವರೆಗೂ ಘಟನೆಗಳನ್ನು ಹೊಂದಿರುವದ್ದು.

5 ಹುಂಕರೋ (ಮಾರ್ವಾಡಿ, ಹಿಂದಿ, ಹರಿಯಾಣ್ವಿ): ರಚನೆ: ವಿಜಯಧನ್ ದೇಥಾ, ನಿರ್ದೇಶನ: ಮೋಹಿತ್ ಟಾಕಲ್ಕರ್, ಅರವಿಂದ್ ಚರಣ್. ತಂಡ: ಉಜಾಗರ್ ನಾಟಕೀಯ ಸಂಘ, ಜೈಪುರ, ಅವಧಿ: 85ನಿಮಿಷ)



‘ಹುಂಕರೋ’ ನಾಟಕ ಸ್ಲಾವೊಮಿರ್ ಮ್ರೋಜೆಕ್ ಅವರ ಕಿರು ನಾಟಕ. ಮೂರು ಕಥೆಗಳನ್ನೊಳಗೊಂಡಿರುವ ಈ ನಾಟಕವು ಭರವಸೆಯನ್ನು ಹುಟ್ಟು ಹಾಕುತ್ತದೆ ಮತ್ತು ಭರವಸೆಯಿಲ್ಲದ ಜೀವನವನ್ನು ಹೇಗೆ ಉಳಿಸಿಕೊಳ್ಳುವುದು ಅಸಾಧ್ಯ ಎಂಬ ಕುರಿತು ಹೇಳುತ್ತದೆ.

ಎಲ್ಲಾ ನಾಟಕಗಳು ರಂಗಶಂಕರದ ಮುಖ್ಯ ವೇದಿಕೆಯಲ್ಲಿ ಪ್ರತಿದಿನ ಸಂಜೆ 7 ಗಂಟೆಗೆ ಪ್ರದರ್ಶನವಾಗಲಿವೆ. ಟಿಕೆಟ್ ದರ ₹ 200

ಈ ನಾಟಕಗಳ ಜೊತೆಗೆ ರಂಗಶಂಕರದ ವಿವಿಧ ಸ್ಥಳಗಳಲ್ಲಿ ಪ್ರತಿದಿನ ಸಂಜೆ ಸಣ್ಣ ಗುಂಪಿನ ಪ್ರೇಕ್ಷಕರಿಗೆ ಕಿರು ಪ್ರದರ್ಶನಗಳು ನಡೆಯುತ್ತವೆ ಮತ್ತು ಅಂಜು ಕೆಫೆಯಲ್ಲಿ ಆಹಾರ ಮತ್ತು ಇನ್ನೂ ಅನೇಕ ಸಂವಾದಾತ್ಮಕ ಕಾರ್ಯಕ್ರಮಗಳು ನಡೆಯುತ್ತವೆ. ಈ ಕಾರ್ಯಕ್ರಮಗಳಿಗೆ ಪ್ರವೇಶ ದರ ₹ 100. ಒಂದು ಪ್ರದರ್ಶನವು 10ರಿಂದ 20 ಪ್ರೇಕ್ಷಕರಿಗೆ ಮಾತ್ರ ಸೀಮಿತವಾಗಿರುತ್ತದೆ.

ಸ್ಥಳ: ರಂಗ ಶಂಕರ 36/2, 8ನೇ ಅಡ್ಡ ರಸ್ತೆ, ಆರ್.ಕೆ. ಕಾಲೋನಿ, 2ನೇ ಹಂತ, ಜೆ.ಪಿ. ನಗರ, ಬೆಂಗಳೂರು. ದೂರವಾಣಿ : 080 2659 2777. ಟಿಕೆಟ್‌ಗಳು http://www.bookmyshow.com/ನಲ್ಲಿ ದೊರೆಯುತ್ತವೆ.